BHIMAPPA SOMAPPA NAVI
Digitally signed by BHIMAPPA SOMAPPA NAVI
DN: c=IN, o=KARNATAKA STATE AKKAMAHADEVI WOMENS UNIVERSITY VIJAYAPURA, ou=NA, 2.5.4.20=db7789db39afe1f3d852b09ea3497499328f50a9eb82c5e3eb9b8da79cde486e, postalCode=586108, st=KARNATAKA, serialNumber=a2019af0af54b531e19e9c7b6fbd664dec1569beb802de3505e28213b85e6333, cn=BHIMAPPA SOMAPPA NAVI
Date: 2023.08.08 12:20:36 +05'30'

**ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ**

**Karnataka State Akkamahadevi Women's University, Vijayapura**

**(Formerly Karnataka State Women's University, Bijapur)**

**ಕುಲಸಚಿವರು** **REGISTRAR**

eÁ£À±ÀQ PÁåA¥À¸ï, vÉÆgÀ« Jnanashakti Campus, Torvi

«dAiÀÄ¥ÀÄgÀ-586 105 (PÀ£ÁðlPÀ gÁdå) Vijayapura-586 105(Karnataka State)

zÀÆgÀªÁt ¸ÀASÉå: 08352-229051 Email:registrar.kswub@gmail.com Fax No: 08352-229057

---

## EXTRACT OF DOCUMENTS IN KANNADA (6.2.1.6)

Following documents in Kannada language are the convocation speeches by Hon Vice Chancellors published by Prasaranga during 2017-18 to 2021-22;

# ಘಟಿಕೋತ್ಸವ ಭಾಷಣಗಳು



ಪ್ರಸಾರಾಂಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

# ಘಟಿಕೋತ್ಸವ ಭಾಷಣಗಳು

(2009 ರಿಂದ 2019)

ಪ್ರಸಾರಾಂಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ಜ್ಞಾನಶಕ್ತಿ ಆವರಣ, ತೊರವಿ, ವಿಜಯಪುರ-586108

**GHATIKOTSAVA BHASHANAGALU-** (Convocation Speeches)
A Book on Collection of Convocation Speeches of Karnataka State Akkamahadevi Women's University, Vijayapura from 2009 to 2019.
Published by: Prasaranga, Karnataka State Akkamahadevi Women's Univeristy, Vijayapura -586108

| | | |
|---|---|---|
| ಸಂಪಾದಕರು ಮಂಡಳಿ | : | ಪ್ರೊ. ಆರ್. ಸುನಂದಮ್ಮ<br>ಪ್ರೊ. ಓಂಕಾರ ಕಾಕಡೆ<br>ಪ್ರೊ. ಪಿ.ಜಿ ತಡಸದ<br>ಪ್ರೊ. ಅಜೀಜ್ ಮಕಾನದಾರ<br>ಡಾ. ಯು.ಕೆ ಕುಲಕರ್ಣಿ<br>ಡಾ. ವಿಷ್ಣು. ಎಂ ಶಿಂದೆ |
| ಪ್ರಥಮ ಮುದ್ರಣ | : | 2019 |
| ಬಳಸಿದ ಕಾಗದ | : | 80 ಜಿಎಸ್ಎಂ, ಎನ್.ಎಸ್.ಮ್ಯಾಪ್ಲಿತೋ |
| ಪುಟಗಳು | : | 144 |
| **ISBN** | : | 978-93-83090-66-2 |
| Paper | : | Demi 1/8, 80 GSM Maplitho |
| Cover Page | : | Artboard 210 GSM |
| Copies | : | 500 |
| Cover Page Design | : | M Ramu |
| ಹಕ್ಕುಗಳು | : | ಕುಲಸಚಿವರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ |
| ಪ್ರಕಾಶಕರು | : | ಡಾ. ವಿಷ್ಣು. ಎಂ ಶಿಂದೆ<br>ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ |
| ಮುದ್ರಣ | : | **ಕ್ರಿಯಾ ಪ್ರಕಾಶನ**<br># 40/5, 2ನೇ ಬಿ ಮುಖ್ಯರಸ್ತೆ, 16 ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560 027 |


# ಕುಲಪತಿಗಳ ನುಡಿ

ಯಾವುದೇ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳಲ್ಲಿ ಘಟಿಕೋತ್ಸವಕ್ಕೆ ಮಹತ್ವದ ಸ್ಥಾನವಿದೆ. ವಿವಿಧ ಪದವಿಗಳಿಗೆ ಅರ್ಹರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡುವ ಈ ಕಾರ್ಯಕ್ರಮದಲ್ಲಿ ಮುಂದಿನ ದಿನಗಳಲ್ಲಿ ಅವರು ಸಾಮಾಜಿಕ ಋಣಸಂದಾಯ ಮಾಡುವ ಹಾಗೂ ವೃತ್ತಿ ಗೌರವ/ಘನತೆಯನ್ನು ಕಾಪಾಡಿಕೊಂಡು ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಪ್ರಮಾಣವಚನವನ್ನು ಕೈಗೊಳ್ಳುವುದು ಒಂದು ಭಾಗ. ವಿಶ್ವವಿದ್ಯಾನಿಲಯದ ರಾಯಭಾರಿಗಳಾಗಿ ಸಮಾಜದ ವಿವಿಧ ಭಾಗಗಳಿಗೆ ತೆರಳುತ್ತಿರುವ ವಿದ್ಯಾರ್ಥಿನಿಯರಿಗೆ ಆದರ್ಶ ಮಾದರಿಯಾದ ಸಾಧಕರನ್ನು ಕರೆಯಿಸಿ, ಅವರ ಸಾಧನೆಗಳನ್ನು ಪರಿಚಯಿಸುವುದು ಮತ್ತು ಅವರಿಂದ ಪ್ರೇರಣಾತ್ಮಕ ಮಾತುಗಳನ್ನು ಕೇಳಿಸುವುದು ಇನ್ನೊಂದು ಭಾಗ. ಹೀಗಾಗಿ ಪ್ರತಿ ವರ್ಷವೂ ಈ ಚಟುವಟಿಕೆಯನ್ನು ಎಲ್ಲ ವಿಶ್ವವಿದ್ಯಾನಿಲಯಗಳು ತುಂಬ ಗಂಭೀರವಾಗಿ ನಡೆಸಿಕೊಂಡು ಬರುತ್ತವೆ.

ಒಂದು ಕಾಲದ ಅಂತರದಲ್ಲಿ ಸಿಂಹಾವಲೋಕನ ಮಾಡಿದಾಗ ವಿಶ್ವವಿದ್ಯಾನಿಲಯಕ್ಕೆ ಆಗಮಿಸಿದ ವಿಶೇಷ ಅತಿಥಿಗಳು ಮತ್ತು ಅವರ ಘಟಿಕೋತ್ಸವ ಭಾಷಣಗಳನ್ನು ಅವಲೋಕನ ಮಾಡುವುದರಿಂದ ಹಲವು ಪ್ರಯೋಜನಗಳಿವೆ. ಅತಿಥಿಗಳು ಕಾರ್ಯಕ್ರಮದಲ್ಲಿ ಆಡಿದ ಮಾತುಗಳನ್ನು ಮನನ ಮಾಡಿಕೊಳ್ಳಲು, ಬದುಕಲ್ಲಿ ಅಳವಡಿಸಿಕೊಳ್ಳಲು, ಅವರು ಸಾಗಿದ ಹೆಜ್ಜೆಗುರುತು ಹಿಡಿದು ಸಾಧನೆಯ ಜಗತ್ತಿಗೆ ಅನುವಾಗಲು ಇದು ಪ್ರೇರಣೆಯಾಗುತ್ತದೆ. ವಿಶ್ವವಿದ್ಯಾನಿಲಯವೊಂದು ವಿವಿಧ ಕಾಲಘಟ್ಟಗಳಲ್ಲಿ ಎಂತಹ ಆದರ್ಶ ಮಾದರಿಗಳನ್ನು ವಿದ್ಯಾರ್ಥಿಗಳ ಮುಂದಿಟ್ಟಿದೆ ಎಂಬ ಅವಲೋಕನಕ್ಕೂ ಇದು ನೆರವಾಗುತ್ತದೆ. ಸಹಶಿಕ್ಷಣದ ವಿಶ್ವವಿದ್ಯಾನಿಲಯಗಳಲ್ಲಿ ಮತ್ತೆ ಮತ್ತೆ ಪುರುಷ ಸಾಧಕರ ಮಾದರಿಗಳೇ

ಮರುಕಳಿಸುವ ಸಂದರ್ಭ ಸಾಮಾನ್ಯವಾಗಿರುವ ಹೊತ್ತಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರತಿ ವರ್ಷ ಸಾಧಕಿಯರನ್ನೇ ಮುಖ್ಯ ಅತಿಥಿಯಾಗಿ ಕರೆಯುವ ಸತ್‌ಪರಂಪರೆ ಹಾಕಿಕೊಂಡು ತನ್ನ ಅನನ್ಯತೆಯನ್ನು ಕಾಪಾಡಿಕೊಂಡಿರುವುದು ಗಮನಾರ್ಹ. ಮಹಿಳಾ ವಿಶ್ವವಿದ್ಯಾನಿಲಯದ ಚರಿತ್ರೆಯನ್ನು ಕಟ್ಟುವ ಸಂದರ್ಭದಲ್ಲಿ ಈ ದಾಖಲೀಕರಣ ನೆರವಾದೀತು ಎಂಬ ಸದಾಶಯವೂ ಇಲ್ಲಿದೆ.

ಮಹಿಳಾ ಸಂಕುಲದ ಜ್ಞಾನ, ಲೋಕದೃಷ್ಟಿ, ಸಾಧನೆ ಮತ್ತು ಅಸ್ಮಿತೆಗಳನ್ನು ಪ್ರಜ್ಞಾಪೂರ್ವಕವಾಗಿ ತೆರೆಮರೆಗೆ ಸರಿಸಿದ ನೂರಾರು ನಿದರ್ಶನಗಳು ಮಹಿಳಾ ಚರಿತ್ರೆಯ ದಾಖಲೀಕರಣದಲ್ಲಿ ದೊಡ್ಡ ಸವಾಲಾಗಿ ನಿಂತಿವೆ. ಇಂಥ ಚರ್ಚೆಯ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣಗಳನ್ನು ಪುಸ್ತಕ ರೂಪದಲ್ಲಿ ತರುವ ಆಲೋಚನೆ ಹುಟ್ಟಿಕೊಂಡಿತು. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಹೆಸರಲ್ಲಿ ಗುರುತಿಸಿಕೊಂಡಿರುವ ಈ ವಿಶ್ವವಿದ್ಯಾನಿಲಯದ ಮೊದಲ ಘಟಿಕೋತ್ಸವ ಜರುಗಿದ್ದು 30 ಸಪ್ಟೆಂಬರ್ 2009ರಲ್ಲಿ. 2019ರ ಫೆಬ್ರುವರಿ 13 ರಂದು ಜರುಗಿದ್ದು 10ನೇ ಘಟಿಕೋತ್ಸವ. ಹೀಗಾಗಿ ದಶಕದ ಘಟಿಕೋತ್ಸವದ ಸವಿನೆನಪು ಮತ್ತು ಘಟಿಕೋತ್ಸವ ಭಾಷಣಕಾರರ ಕಾಳಜಿ ಹಾಗೂ ಆಶಯಗಳನ್ನು ದಾಖಲಿಸುವ ಅಗತ್ಯವಿದೆ ಎಂಬ ನಿಲುವಿಗೆ ಬರಲಾಯಿತು. ಅದಕ್ಕಾಗಿ ಒಂದು ಸಂಪಾದಕ ಮಂಡಳಿಯನ್ನು ರಚಿಸಲಾಯಿತು. ಅವರ ಸಂಘಟಿತ ಪ್ರಯತ್ನದಿಂದ ಈ ಹೊತ್ತಗೆ ಪೂರ್ಣಗೊಂಡಿದೆ.

ಪ್ರಸಾರಾಂಗದ ನಿರ್ದೇಶಕರಾದ ಡಾ.ವಿಷ್ಣು ಶಿಂದೆ ಅವರು ಈ ಕಾರ್ಯದಲ್ಲಿ ವಿಶೇಷ ಮುತುವರ್ಜಿ ವಹಿಸಿ ದುಡಿದಿದ್ದಾರೆ. ಪುಸ್ತಕದ ಸಂಪಾದಕ ಮಂಡಳಿಯ ಸದಸ್ಯರಾದ ಪ್ರೊ.ಆರ್.ಸುನಂದಮ್ಮ, ಪ್ರೊ.ಪಿ.ಜಿ.ತಡಸದ, ಪ್ರೊ.ಅಜೀಜ್ ಮಕಾನದಾರ, ಪ್ರೊ. ಓಂಕಾರ ಕಾಕಡೆ, ಡಾ.ಯು.ಕೆ.ಕುಲಕರ್ಣಿ ಮತ್ತು ಆಯಾ ಕಾಲದ ಘಟಿಕೋತ್ಸವದ ವರ್ಣಚಿತ್ರಗಳ ಸಂಪಾದನೆ ಮತ್ತು ಆಯ್ಕೆಯಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಾಪಕರ ಪರಿಶ್ರಮ ಅಪಾರವಾಗಿದೆ. ಕನಿಷ್ಠ ಅವಧಿಯಲ್ಲಿ ಪುಸ್ತಕದ ಮುದ್ರಣ ಕಾರ್ಯವನ್ನು ಮಾಡಿಕೊಟ್ಟ ಕ್ರಿಯಾ ಪ್ರಕಾಶನ ಪ್ರೈ.ಲಿ.ಬೆಂಗಳೂರು ಅವರನ್ನೂ ಇಲ್ಲಿ ಸ್ಮರಿಸಿಕೊಳ್ಳುತ್ತೇನೆ.

ನಮ್ಮ ವಿಶ್ವವಿದ್ಯಾನಿಲಯಕ್ಕೆ ವಿಜಯಪುರದ ಜನತೆ, ರಾಜಕೀಯ ಮುಖಂಡರು, ವಿವಿಧ ಸಂಘ ಸಂಸ್ಥೆಗಳು ಮತ್ತು ಸರ್ಕಾರ ನೀಡಿದ ಬೆಂಬಲ, ಪ್ರೀತಿ–ವಿಶ್ವಾಸಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅದೇ ರೀತಿಯಲ್ಲಿ ಈ ವಿಶ್ವವಿದ್ಯಾನಿಲಯವನ್ನು ಈ ನೆಲೆಗೆ ತರುವಲ್ಲಿ ಪರಿಶ್ರಮಪಟ್ಟ ಹಿಂದಿನ ಕುಲಪತಿಗಳಾದ ಪ್ರೊ.ಸಯೀದಾ ಅಖ್ತರ್, ಪ್ರೊ.ಗೀತಾ ಬಾಲಿ, ಪ್ರೊ.ಮೀನಾ ಆರ್.ಚಂದಾವರಕರ ಮತ್ತು ವಿವಿಯ ಆರಂಭದಲ್ಲಿ ವಿಶೇಷಾಧಿಕಾರಿಗಳಾಗಿದ್ದ ಡಾ.ಎಸ್.ಎಂ.ಜಾಮದಾರ ಅವರನ್ನೂ ಸ್ಮರಿಸುತ್ತೇನೆ. ಪುಸ್ತಕಕ್ಕಾಗಿ ದುಡಿದ ಸಮಿತಿಯ ಎಲ್ಲರಿಗೂ, ಪ್ರಸಾರಾಂಗದ ನಿರ್ದೇಶಕರಿಗೂ ಅಭಿವಂದನೆಗಳು.

ವಿಜಯಪುರ
ದಿ:15–06–2019

**ಪ್ರೊ. ಸಬಿಹಾ ಭೂಮಿಗೌಡ**
ಕುಲಪತಿಗಳು



# ಪ್ರಕಾಶಕರ ನುಡಿ

ಇಂದಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಆರಂಭದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವೆಂದು ನಾಮಕರಣಗೊಂಡು 2003 ರಲ್ಲಿ ಆರಂಭವಾಯಿತು. ಹಂತ ಹಂತವಾಗಿ ಬೆಳೆಯುತ್ತಾ, ಇವತ್ತು 16 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ನಮ್ಮ ವಿಶ್ವವಿದ್ಯಾನಿಲಯದ ಇಂದಿನ ಕುಲಪತಿಯವರಾದ ಮಾನ್ಯ ಪ್ರೊ. ಸಬಿಹಾ ಭೂಮಿಗೌಡ ಮೇಡಂ ಅವರು ಸಂಶೋಧನಾ ದೃಷ್ಟಿಕೋನದವರು. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಅನುಭವವಿರುವ ಅವರು ಅನೇಕ ಮೌಲ್ಯಯುತ ಪ್ರಕಟಣೆಗಳನ್ನು ಪ್ರಸಾರಾಂಗದ ಮೂಲಕ ತರಲು ಯೋಜನೆ ಮಾಡಿಸಿದರು. ಸಂಶೋಧನಾ ಪ್ರಬಂಧಗಳು, ಕನ್ನಡ, ಇಂಗ್ಲೀಷ್, ಹಿಂದಿ ಭಾಷಾ ಪಠ್ಯಪುಸ್ತಕಗಳು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಕಟಿಸುವ ಕಾರ್ಯ ಮಾಡಿಸಿದರು. ಅದರ ಜೊತೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ 10 ಘಟಿಕೋತ್ಸವಗಳಲ್ಲಿ ಮೇಧಾವಿಗಳು, ವಿವಿಧ ಕ್ಷೇತ್ರದ ತಜ್ಞರು ಘಟಿಕೋತ್ಸವದ ಅತಿಥಿಗಳಾಗಿ ಆಗಮಿಸಿ ಭಾಷಣ ಮಾಡಿದ್ದಾರೆ. ಇವುಗಳನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಯೋಜನೆಯು ಅವರ ಕಲ್ಪನೆಯ ಕೂಸು ಎಂದು ವಿನಮ್ರವಾಗಿ ಹೇಳಬಯಸುತ್ತೇನೆ. ಈ ಮೂಲಕ ದಶಕಗಳ ಮಹತ್ವಪೂರ್ಣ ಮಾಹಿತಿ ಒಂದೆಡೆ ದೊರೆಯುವಂತಾಗಿದೆ. 2009 ರಿಂದ 2019 ರವರೆಗಿನ 10 ಭಾಷಣಗಳನ್ನು ಸಂಗ್ರಹಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಪರಿಕಲ್ಪನೆಯನ್ನು ಸಾಕಾರಗೊಳಿಸಿರುವ ಮಾನ್ಯ ಕುಲಪತಿಗಳಾದ ಪ್ರೊ. ಸಬಿಹಾ ಭೂಮಿಗೌಡ ಮೇಡಂ ಅವರಿಗೆ

ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದಕ್ಕೆ ಪ್ರೋತ್ಸಾಹ ನೀಡಿದ ಮಾನ್ಯ ಕುಲಸಚಿವರಾದ ಪ್ರೊ.ಆರ್. ಸುನಂದಮ್ಮ ಅವರಿಗೆ ಪ್ರಾಸಾಂರಾಗದ ಪರವಾಗಿ ಧನ್ಯವಾದಗಳು.

ಈ ಕಾರ್ಯಕ್ಕಾಗಿ ಸಂಪಾದಕ ಮಂಡಳಿಯನ್ನು ರಚಿಸಲಾಯಿತು. ಅದರಲ್ಲಿ ಕಾರ್ಯ ಮಾಡಿದ ಪ್ರೊ. ಆರ್. ಸುನಂದಮ್ಮ, ಪ್ರೊ. ಓಂಕಾರ್ ಕಾಕಡೆ, ಪ್ರೊ. ಪಿ. ಜಿ. ತಡಸದ್, ಪ್ರೊ. ಅಜೀಜ್ ಮಕಾನದಾರ, ಡಾ. ಯು.ಕೆ ಕುಲಕರ್ಣಿ ಇವರಿಗೂ ಪ್ರಸಾರಾಂಗ ಋಣಿಯಾಗಿದೆ.

ಈ ಪುಸ್ತಕದ ರಚನೆಯಲ್ಲಿ ಅಪಾರ ಶ್ರಮವಹಿಸಿ ಭಾವಚಿತ್ರಗಳನ್ನು ಸಂಗ್ರಹಿಸಿಕೊಟ್ಟ ಡಾ. ಓಂಕಾರ್ ಕಾಕಡೆ ಅವರಿಗೆ ವಿಶೇಷ ಧನ್ಯವಾದಗಳು. ಇವುಗಳನ್ನು ಜೋಡಿಸಿ ಸರಪಡಿಸುವಲ್ಲಿ, ಅನುವಾದ ಪ್ರಕ್ರಿಯೆಯಲ್ಲಿ, ಅಕ್ಷರ ಸಂಪಾದನೆಯಲ್ಲಿ ಸಹಕರಿಸಿದ ಪ್ರಸಾರಾಂಗದ ಸಿಬ್ಬಂದಿಯಾದ ಸಂಗನಗೌಡ ಬಿರಾದಾರ ಇವರಿಗೆ, ಅಂದವಾಗಿ ಮುದ್ರಿಸಿದ ಕ್ರಿಯಾ ಪ್ರಕಾಶನ ಪ್ರೈ.ಲೀ, ಬೆಂಗಳೂರು ಇವರಿಗೆ ಧನ್ಯವಾದಗಳು.

ದಿನಾಂಕ: 14–06–201
ಸ್ಥಳ–ವಿಜಯಪುರ

**ಡಾ. ವಿಷ್ಣು ಎಂ. ಶಿಂದೆ**
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ



# ಪರಿವಿಡಿ


| | | |
|---|---|---|
| 1. | **ಸಾಧನೆಯ ರಂಗಕ್ಕೆ ಆಹ್ವಾನ**<br>– ನೇಮಿಚಂದ್ರ | 9 - 19 |
| 2. | **ಲಿಂಗ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸುಸ್ಥಿರ ಅಭಿವೃದ್ಧಿಯ ಉನ್ನತೀಕರಣದಲ್ಲಿ ಮಹಿಳಾ ವಿಶ್ವವಿದ್ಯಾಲಯಗಳ ಪಾತ್ರದ ಮರುಚಿಂತನೆ**<br>- ಡಾ. ಶಶಿಕಲಾ ಗುರುಪುರ | 20 - 35 |
| 3. | **ಮಹಿಳೆಯು ಸಮಾಜವನ್ನು ರೂಪಿಸುವ ಶಿಲ್ಪಿ**<br>– ಪ್ರೊ.ಇಂದ್ರಾಣಿ ಕರುಣಾಸಾಗರ | 36 - 42 |
| 4. | **ಮಾನವ ಅಭಿವೃದ್ಧಿಯ ಸವಾಲುಗಳು**<br>– ಡಾ. ನಂದಿತಾ ಕೃಷ್ಣ | 43 - 54 |
| 5. | **ವಿಜ್ಞಾನದಲ್ಲಿ ಮಹಿಳೆ : ವೃತ್ತಿ ಸಾಧನೆಯತ್ತ ಮತ್ತು ರಾಷ್ಟ್ರೀಯ ಪ್ರಗತಿಗಾಗಿ**<br>– ಡಾ. ಮಂಜು ಶರ್ಮಾ | 55 - 61 |
| 6. | **ವೈಜ್ಞಾನಿಕ ದೃಷ್ಟಿಕೋನ ಮತ್ತು ಮಹಿಳೆ**<br>– ಡಾ. ವಿಲ್ಲೂ ಮೊರಾವಾಲ ಪಟೇಲ್ | 62 - 68 |
| 7. | **ಭಾರತೀಯ ಶಿಕ್ಷಣ ಹಾಗೂ ಮೌಲ್ಯಗಳು**<br>– ಶ್ರೀಮತಿ ಮಂಜುಳಾ ಚೆಲ್ಲೂರ, ನ್ಯಾಯಮೂರ್ತಿಗಳು | 69 - 72 |
| 8. | **ಮುನ್ನಡೆಯತ್ತ ಮಹಿಳೆ**<br>– ಶ್ರೀಮತಿ ವಿ.ಎಸ್.ರಮಾದೇವಿ | 73 - 78 |
| 9. | **ರಾಷ್ಟ್ರ ನಿರ್ಮಾಣದಲ್ಲ ಮಹಿಳೆ**<br>– ಶ್ರೀಮತಿ ಪುರಂದೇಶ್ವರಿ | 79 - 84 |
| 10. | **ಸಾಹಿತ್ಯ ಮತ್ತು ಮಹಿಳೆಯರು**<br>– ಶ್ರೀಮತಿ ಸರೋಜಿನಿ ಮಹಿಷಿ | 85 - 94 |


## ಅನುಬಂಧ


| | |
|---|---|
| **1. ಘಟಿಕೋತ್ಸವಗಳ ವಿವರ** | 95 |
| **2. ಘಟಿಕೋತ್ಸವದ ಅತಿಥಿಗಳ ಪರಿಚಯ** | 96 - 112 |
| **3. ಘಟಿಕೋತ್ಸವದ ಚಿತ್ರಸಂಪುಟ** | 113 - 144 |

# ಸಾಧನೆಯ ರಂಗಕ್ಕೆ ಆಹ್ವಾನ

❑ ನೇಮಿಚಂದ್ರ
ಡೀನ್ & ಜನರಲ್ ಮ್ಯಾನೇಜರ್
ಎಚ್.ಎ.ಎಲ್. ಮ್ಯಾನೇಜ್‌ಮೆಂಟ್ ಅಕಾಡೆಮಿ
ಫೆಬ್ರುವರಿ 13, 2019

ಘನತೆವೆತ್ತ ಕುಲಾಧಿಪತಿಯವರೆ, ಮಾನ್ಯ ಸಮಕುಲಾಧಿಪತಿಯವರೆ, ಕುಲಪತಿಯವರೆ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೆ, ವಿದ್ಯಾವಿಷಯಕ ಪರಿಷತ್ ಸದಸ್ಯರೆ, ಆಮಂತ್ರಿತ ಗಣ್ಯರೆ, ಮಾಧ್ಯಮ ಪ್ರತಿನಿಧಿಗಳೆ ಹಾಗೂ ನನ್ನ ಪ್ರೀತಿಯ ವಿದ್ಯಾರ್ಥಿನಿಯರೇ, ಹೆಣ್ಣು ಮಕ್ಕಳು ಶಾಲೆ, ಕಾಲೇಜಿಗೆ ಬರುವ ಅವಕಾಶವನ್ನು ನಾನು ಸಾಧಾರಣವಾಗಿ ತಪ್ಪಿಸಿಕೊಳ್ಳೋದಿಲ್ಲ. ಕಾರಣ ನಿಮ್ಮಲ್ಲಿ ನನಗೆ ನನ್ನ ನಿನ್ನೆಗಳ ಪ್ರತಿಬಿಂಬ ಕಾಣುತ್ತದೆ. ನನ್ನ ಬಾಲ್ಯ, ಕಿಶೋರ ನೆನಪಾಗುತ್ತದೆ. ನಿಮ್ಮೊಡನೆ ಒಂದಿಷ್ಟು ಕತೆಗಳನ್ನು, ಕನಸುಗಳನ್ನು, ಅನುಭವಗಳನ್ನು ಹಂಚಿಕೊಳ್ಳುವ ಅವಕಾಶ ಖುಷಿ ಕೊಡುತ್ತದೆ.

ಈ ದಿನ ಇಲ್ಲಿ ನಿಮ್ಮೊಂದಿಗೆ, ಭವಿಷ್ಯದ ಹೊಸಿಲಲ್ಲಿ ನಿಂತ ಎಳೆಯ ಹೆಣ್ಣು ಮಕ್ಕಳೊಂದಿಗೆ ಕೆಲವು ಕ್ಷಣಗಳನ್ನು ಕಳೆಯುವ ಈ ಅವಕಾಶ ನನಗೆ ಎಲ್ಲಿಲ್ಲದ ಸಂತಸವನ್ನು ನೀಡಿದೆ. ಈ ಹೆಣ್ಣು ಮಕ್ಕಳು, ಪದವೀಧರರು, ಸ್ನಾತಕೋತ್ತರ ಪದವಿ ಪಡೆದವರು, ಹಲವರು ಡಾಕ್ಟರಲ್ ಪದವಿಯನ್ನೂ ಪಡೆಯುತ್ತಿರುವವರು ಎನ್ನುವುದು ಸ್ತ್ರೀ ಸಬಲೀಕರಣದ ಉದಾಹರಣೆಯಾಗಿದೆ. ನೀವು ಹಲವು ಹತ್ತು ರಂಗಗಳಿಗೆ ಪ್ರವೇಶ ಪಡೆದು ಪದವಿಯನ್ನು ಗಳಿಸಿದ್ದೀರಿ. ಕಲಾ ವಿಷಯಗಳು, ವಾಣಿಜ್ಯ ವಿಷಯಗಳು, ಬಿಸಿನೆಸ್ ಅಡ್ಮಿನಿಸ್ಟ್ರೇಷನ್, ಕಂಪ್ಯೂಟರ್ ಅಪ್ಲಿಕೇಷನ್ಸ್, ಗೃಹ ವಿಜ್ಞಾನ, ಫಿಸಿಕಲ್ ಎಜುಕೇಶನ್, ವಿಜ್ಞಾನ ಮತ್ತು ಸಾಮಾಜಿಕ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಶಿಕ್ಷಣ – ಪಟ್ಟಿ ದೀರ್ಘವಿದೆ.

ಈ ಘನತೆವೆತ್ತ ವಿಶ್ವವಿದ್ಯಾಲಯ ನಿಮಗೆ ನೂರೊಂದು ಅವಕಾಶಗಳನ್ನು ನೀಡಿದೆ ಮತ್ತು ನಿಮ್ಮ ಇಚ್ಛೆಯ ರಂಗವನ್ನು ನೀವು ಆಯ್ದುಕೊಂಡಿದ್ದೀರ. ಆಯ್ಕೆ ಇದೆ ನಮ್ಮ ಕೈಯಲ್ಲಿ ಎಂಬುದು ಸದಾ ನಿಮಗೆ ತಿಳಿದಿರಲಿ. ಇದು ಸೆಲ್ಫ್ ಎಂಪವರ್‌ಮೆಂಟ್ – ಸ್ವಯಂ ಸಬಲೀಕರಣದ ಮೊದಲ ಮೆಟ್ಟಿಲು. ನಮ್ಮ ಎದುರು ಸದಾಕಾಲವು ಆಯ್ಕೆಗಳಿರುತ್ತವೆ. ಬದುಕಿನ ಅತ್ಯಂತ ಕಷ್ಟದ ಸನ್ನಿವೇಶದಲ್ಲಿಯೂ ನಮ್ಮೆದುರು ಆಯ್ಕೆಗಳಿರುತ್ತವೆ. ವಿ ನೀಡ್ ಟು ಚೂಸ್ ವೈಸ್ಲೀ. ಬುದ್ಧಿವಂತ ಆಯ್ಕೆ ನಮ್ಮದಾಗಬೇಕು.

ವಿವೇಕದ, ವಿವೇಚನೆಯ ಆಯ್ಕೆ ನಮ್ಮದಾಗಬೇಕು. ಆ ನಮ್ಮ ಆಯ್ಕೆ ನಮ್ಮನ್ನು ಕತ್ತಲೆಯಿಂದ ಬೆಳಕಿಗೆ ಕರೆದೊಯ್ಯಲಿ. ಅಸತ್ಯದಿಂದ ಸತ್ಯದೆಡೆಗೆ ಕರೆದೊಯ್ಯಲಿ. ಒಡೆದು ಛಿದ್ರವಾಗುವ ಮನಸ್ಥಿತಿಯಿಂದ ವಿಶ್ವಮಾನವತ್ವದೆಡೆಗೆ 'ನಾವೆಲ್ಲರೂ ಒಂದು' ಎಂಬ 'ಯೂನಿವರ್ಸಲ್ ಒನ್‌ನೆಸ್'ನತ್ತ ನಮ್ಮನ್ನು ಕರೆದೊಯ್ಯಲಿ.

ನಮ್ಮ ಬದುಕಿನ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿಯೂ ನಮ್ಮೆದುರು ಆಯ್ಕೆಗಳಿರುತ್ತವೆ. ತನ್ನ ಪ್ರೀತಿಯ ಅಪ್ಪ ಮತ್ತು ಅಮ್ಮ ಗ್ಯಾಸ್ ಚೇಂಬರ್‌ನಲ್ಲಿ ಹೊಗೆಯಾದ ಹೊತ್ತು. ಅತ್ಯಂತ ಘೋರವಾದ ನಾಜಿ ಎಕ್ಸ್‌ಟರ್ಮಿನೇಷನ್ ಕ್ಯಾಂಪ್ ಆಶ್‌ವಿಟ್ಸ್‌ನಲ್ಲಿ, ಹಸಿವಿನಿಂದ ಚರ್ಮ ಮೂಳೆಗೆ ಅಂಟಿದ ಹೊತ್ತು. ಅತಿ ಕ್ರೂರಿ ನಾಜಿ ಡಾ. ಮೆಂಗೆಲೆ ಎದುರು ನೃತ್ಯ ಮಾಡಬೇಕಾದ ಆ ಕ್ಷಣದಲ್ಲೂ, ಈ ಪುಟ್ಟ ಕಿಶೋರಿ ಎಡಿತ್ ಈಗರ್ ಬಲವಾಗಿ ನಂಬಿದ್ದಳು – ಐ ಹ್ಯಾವ್ ಎ ಚಾಯ್ಸ್, ನನ್ನೆದುರು ಆಯ್ಕೆ ಇದೆ. ಸುತ್ತಲಿನ ಸಾವಿನ ತಾಂಡವದ ನಡುವೆಯೂ ಈ ಎಳೆಯ ಹುಡುಗಿ, ಬದುಕನ್ನು ಆಯ್ದುಕೊಳ್ಳುತ್ತಾ ಹೊರಟಳು. ಎದುರಿದ್ದ ವಿದ್ಯುತ್ ಹರಿವ ಬೇಲಿಗೆ ಹಾಯ್ದು ಪ್ರಾಣ ಕಳೆದುಕೊಳ್ಳುವುದು ಅತಿ ಸುಲಭವಿತ್ತು. ಆದರೆ ಆಕೆ ಬದುಕನ್ನು ಆಯ್ದುಕೊಂಡಳು. ಈ ಪುಟ್ಟ ಹುಡುಗಿ ಡಾ. ಎಡಿತ್ ಆಗಿ, ಸುಪ್ರಸಿದ್ಧ ಮನೋವಿಜ್ಞಾನಿಯಾಗಿ, ಲೇಖಕಿಯಾಗಿ ಮತ್ತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕಳಾಗಿ ಬೆಳೆದಳು. ಇಂದು ಆಕೆಗೆ 92 ವರ್ಷ ವಯಸ್ಸು. ಇಂದು ಕೂಡಾ ತನ್ನ ಬದುಕಿನ ಧ್ಯೇಯ, ಲೈಫ್ಸ್ ಮಿಷಿನ್ – 'ಜನರಿಗೆ ಗುಣವಾಗುವ, ಬದುಕಿ ಸಂಭ್ರಮಿಸುವ ಆಯ್ಕೆಯನ್ನು ತೆಗೆದುಕೊಳ್ಳಲು ಸಹಾಯಕಿಯಾಗುವುದು' ಎನ್ನುತ್ತಾಳೆ. ದೇಶ ವಿದೇಶಗಳಿಗೆ ಈ ವಯಸ್ಸಿನಲ್ಲಿಯೂ ಆಕೆ ಪ್ರಯಾಣ ಮಾಡಿ, 'ಬದುಕನ್ನು ಆಯ್ದುಕೊಳ್ಳಿ' ಎಂದು ಸಂದೇಶ ನೀಡುತ್ತಿದ್ದಾಳೆ.

ಬದುಕು ನಮ್ಮೆದುರು ಇಡುವ ಆಯ್ಕೆಗಳು ಕಷ್ಟದ್ದಿರಬಹುದು. ಆದರೆ ನೀವು ಆಯ್ದ ಹಾದಿಯಲ್ಲಿ ದೃಢ ಹೆಜ್ಜೆಗಳನ್ನು ಇಟ್ಟಂತೆ, ಇಡೀ ವಿಶ್ವವೇ ನಿಮ್ಮ ಸಹಾಯಕ್ಕೆ ಧಾವಿಸುತ್ತದೆ, ನಿಮ್ಮನ್ನು ಗುರಿಯತ್ತ ತಲುಪಿಸುತ್ತದೆ.

ಹೀಗಿದ್ದೂ, ಇಂದು ಅನೇಕ ಎಳೆಯರು, ಬುದ್ಧಿವಂತರು, ಜಾಣರು, ತಪ್ಪು ಆಯ್ಕೆಗಳನ್ನು ಮಾಡುತ್ತಿದ್ದಾರೆ. ಪ್ರತಿ ದಿನ ದಿನಪತ್ರಿಕೆಯನ್ನು ಓದುವಾಗ ನನ್ನ ಮನಸ್ಸಿಗೆ ತುಂಬಾ ಕಷ್ಟವಾಗುತ್ತದೆ.

ಕೆಲವು ವರ್ಷಗಳ ಹಿಂದೆ, ಬೆಂಗಳೂರಿನ ಹುಡುಗಿ, ಎಂ.ಬಿ.ಬಿ.ಎಸ್ ಪಾಸು ಮಾಡಿದಾಕೆ, ಎಂ.ಡಿ.ಗೆ ಸೀಟು ಸಿಗಲಿಲ್ಲ ಎಂದು ಆತ್ಮಹತ್ಯೆ ಮಾಡಿಕೊಂಡಳು. ದಿಲ್ಲಿಯ ಹುಡುಗಿ, ಶೇಕಡಾ 90ರಷ್ಟು ಅಂಕಗಳನ್ನು ಪಡೆದವಳು, ಪ್ರತಿಷ್ಠಿತ ಲೇಡಿ ಶ್ರೀರಾಮ್ ಕಾಲೇಜಿಗೆ ಪ್ರವೇಶ ಸಿಗಲಿಲ್ಲ ಎಂದು ಆತ್ಮಹತ್ಯೆ ಮಾಡಿಕೊಂಡಳು. ನನ್ನ ಆಪ್ತ ಗೆಳತಿಯನ್ನು ಆತ್ಮಹತ್ಯೆಗೆ ಕಳೆದುಕೊಂಡೆ. ಆಗವಳಿಗೆ 26 ವರ್ಷ ವಯಸ್ಸು. ರಸಾಯನಶಾಸ್ತ್ರದಲ್ಲಿ ಪಿಎಚ್.ಡಿ ಪದವಿ ಪಡೆದ ಪ್ರಖರ ಬುದ್ಧಿವಂತೆ.

ಮತ್ತಷ್ಟು ಮನಸ್ಸನ್ನು ಖಿನ್ನವಾಗಿಸುವ ವಿಷಯವೆಂದರೆ, ಎಳೆಯರು ತಪ್ಪು ಹಾದಿ ಹಿಡಿದು ಅಪರಾಧಗಳ ಸರಮಾಲೆಗೆ ಕಾರಣರಾಗುತ್ತಿರುವುದು. ಬದುಕಿನಲ್ಲಿ, ಕೇವಲ ಐ.ಕ್ಯು (ಇಂಟೆಲಿಜೆಂಟ್ ಕೋಷೆಂಟ್) ಹಾಗೂ ಇ.ಕ್ಯು (ಎಮೋಷನಲ್ ಕೋಷೆಂಟ್) ಇದ್ದರೆ ಸಾಲದು. 'ಮಾರಲ್ ಕೋಶಂಟ್', 'ಎಥಿಕಲ್ ಕೋಶಂಟ್'ಗಳೂ ಬಲು



ಮುಖ್ಯವಾದುವು. ಇಂದು ವಿದ್ಯಾವಂತ ಬುದ್ಧಿವಂತ ಎಳೆಯರಿಂದ ಎಷ್ಟೆಲ್ಲ ಅಪರಾಧಗಳು ಜರುಗುತ್ತಿವೆ ಎಂದು ನೋಡಿದಾಗ ಆಘಾತವಾಗುತ್ತದೆ. ಕಳೆದ ತಿಂಗಳು ಒಂದು ಶೈಕ್ಷಣಿಕ ಸಂಸ್ಥೆಯಿಂದ ಯುವ ಮ್ಯಾನೇಜರ್ ಒಬ್ಬಾತ 62 ಕೋಟಿ ರೂಪಾಯಿಗಳನ್ನು ಲಪಟಾಯಿಸಿದ್ದು ಓದಿದೆವು. ಬೆಂಗಳೂರಿನ ವಿದ್ಯಾವಂತ, ಗೌರವಾನ್ವಿತ ಬಡಾವಣೆಯಲ್ಲಿ, ಓರ್ವ ಮೊಮ್ಮಗಳು ಅಜ್ಜಿಯನ್ನು ಕೊಂದ ಸುದ್ದಿ ಎದೆ ನಡುಗಿಸಿತ್ತು. ಮತ್ತೊಂದು ಬಡಾವಣೆಯಲ್ಲಿ, ಮೊಮ್ಮಗ ತನ್ನ ಗೆಳೆಯರೊಡನೆ, ತನ್ನ ಅಜ್ಜ ಅಜ್ಜಿ ಇಬ್ಬರನ್ನೂ ಮುಗಿಸಿದ್ದ. ಮೊನ್ನೆ ತಾನೆ ಓದಿದ್ದೀರಿ, ಹುಡುಗ ಹುಡುಗಿಯನ್ನು ಫೇಸ್‌ಬುಕ್‌ನಲ್ಲಿ ಭೇಟಿಯಾದ, ಮದುವೆಯಾದರು, ಮುದ್ದಾದ ಮಗು. ಆತ ಹೆಂಡತಿ ಮಗು ಇಬ್ಬರನ್ನೂ ಸುಟ್ಟು ಭಸ್ಮ ಮಾಡಿದ. ಮಡದಿ ತನ್ನೆಲ್ಲ ಸಮಯವನ್ನು ಸೋಷಿಯಲ್ ಮೀಡಿಯಾದಲ್ಲಿ ಚಾಟ್ ಮಾಡುತ್ತಾ ಕಳೆಯುತ್ತಿದ್ದಳೆಂಬ ಕಾರಣ ಕೊಟ್ಟ.

ಇದಲ್ಲ ನಾವು ಬಯಸಿದ ಸಮಾಜ. ಇದು ನಾವು ಇಚ್ಛಿಸಿದ ವಿಶ್ವವಲ್ಲ. ಇದು ನಾವು ಹೆಮ್ಮೆ ಪಡುತ್ತಿದ್ದ ಭಾರತೀಯ ಸಂಸ್ಕೃತಿಯಲ್ಲ. ಆದರೂ ಈ ವಿಶ್ವವನ್ನು ನಾವು ಸೃಷ್ಟಿಸಿದ್ದೇವೆ. ಇದನ್ನು ಬದಲಿಸುವುದು ಹೇಗೆ? ಹೊಸ ಪ್ರಪಂಚವನ್ನು ಸೃಷ್ಟಿಸುವುದು ಹೇಗೆ? ಅದು ನಮ್ಮಿಂದ ಆರಂಭವಾಗಬೇಕು. ಇಲ್ಲಿರುವ ನಾವು ಒಬ್ಬೊಬ್ಬರಿಂದಲೂ ಅದು ಸಾಧ್ಯವಿದೆ. 'ಬಿ ದಿ ಚೇಂಜ್ ಯು ವಾಂಟ್ ಟು ಸೀ ಇನ್ ದಿ ವರ್ಲ್ಡ್'. 'ಜಗತ್ತಿನಲ್ಲಿ ನೀವು ಇಚ್ಛಿಸುವ ಬದಲಾವಣೆಯನ್ನು ಮೊದಲು ನಿಮ್ಮಿಂದ ಆರಂಭವಾಗಲಿ. ಪರಿವರ್ತನೆಯ ಹರಿಕಾರರು ನೀವಾಗಿ', ಮಹಾತ್ಮ ಗಾಂಧೀಜಿ ಅವರು ಹೇಳಿದ ಮಾತಿದು. ಈ ಮಾತುಗಳನ್ನು ಬಲವಾಗಿ ನಂಬಿದವರಿದ್ದಾರೆ. ಮುಂಬಯಿಯ ಅಫ್ರೋಸ್ ಶಾ ಅವರಲ್ಲೊಬ್ಬರು.

ಪ್ರತಿ ದಿನ ತಮ್ಮ ಮನೆಯ ಬಾಲ್ಕನಿಯಿಂದ ಅಫ್ರೋಸ್ ಶಾ ಎದುರಿಗಿನ ವರ್ಸೋವಾ ರಾಕ್ ಬೀಚ್ ನೋಡುತ್ತಿದ್ದರು. ಕೊಳಚೆಯಿಂದ, ಟಾಕ್ಸಿಕ್ ತ್ಯಾಜ್ಯ ತುಂಬಿ ತುಳುಕಿ ನಾತ ಹೊಡೆಯುತ್ತಿದ್ದ ಸಮುದ್ರ ತಟವದು. ಸಂಬಂಧಿತ ಅಧಿಕಾರಿಗಳಿಗೆ ಎಷ್ಟೇ ದೂರು ಕೊಟ್ಟರೂ, ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯೂ ಆಗಿರಲಿಲ್ಲ. ಒಂದು ವಾರಾಂತ್ಯ, ಅಫ್ರೋಸ್ ಸಮುದ್ರ ತಟಕ್ಕೆ ನಡೆದರು. ಮರಳಿನಲ್ಲಿ ಹುಗಿದು ನಿಂತ ಕೊಳಕನ್ನು ಕಿತ್ತು ತೆಗೆಯುತ್ತಾ, ಸಮುದ್ರತಟವನ್ನು ಸ್ವಚ್ಛಗೊಳಿಸ ತೊಡಗಿದರು. ಅಗಾಧ ಕೊಳಚೆಯ ರಾಶಿ. ಅದರೆದುರು ಎರಡು ಕೈಗಳು ನಿರ್ಮೂಲನೆಗೆ ತೊಡಗಿದ್ದವು. ಹಾದು ಹೋದ ಜನರ ಅಪಹಾಸ್ಯವನ್ನು ವ್ಯಂಗ್ಯವನ್ನು ಅರಗಿಸಿಕೊಳ್ಳುವುದು ಸುಲಭವಿರಲಿಲ್ಲ. ಆದರೆ ಅವರಿಗೆ ನಂಬಿಕೆ ಇತ್ತು, ಪರಿವರ್ತನೆಯನ್ನು ನಾನು ಬಯಸುವುದಾದರೆ, ಅದು ನನ್ನಿಂದಲೇ ಆರಂಭವಾಗಬೇಕು. ಮೆಲ್ಲನೆ ಜನರು ಬರತೊಡಗಿದರು, ಕೈಗೂಡಿಸಿದರು. ಅಫ್ರೋಸ್ 85 ವಾರಗಳ ಪ್ರಯತ್ನದಲ್ಲಿ, 2.7 ಕಿಲೋಮೀಟರ್ ಉದ್ದದ ವರ್ಸೋವಾ ಬೀಚ್‌ನಲ್ಲಿಯ 50 ಲಕ್ಷ ಕೆಜಿ ಅಪಾಯಕಾರಿ ತ್ಯಾಜ್ಯವನ್ನು, ಪ್ಲಾಸ್ಟಿಕ್ ಕೊಳಚೆಯನ್ನು ಸಂಪೂರ್ಣವಾಗಿ ಸ್ವಚ್ಛ ಮಾಡಿ, ಸಮುದ್ರದ ದಂಡೆ ಮತ್ತೊಮ್ಮೆ ಬೆಳ್ಳಿ ಮರಳಿನಿಂದ ಹೊಳೆಯುವಂತೆ ಮಾಡಿದರು.

ನಾವು ಒಬ್ಬೊಬ್ಬರೂ ಪರಿವರ್ತನೆಯ ಹರಿಕಾರರಾಗೋಣ. ಸರಿಯಾದ ಆಯ್ಕೆಯನ್ನು ಮಾಡೋಣ. ಮತ್ತೊಬ್ಬ ಹೆಣ್ಣು ಮಗಳೂ ಗಾಂಧೀಜಿಯ ಅದೇ

ಮಾತುಗಳಲ್ಲಿ ವಿಶ್ವಾಸವಿಟ್ಟಳು.

ಇಸವಿ 1997ರ ಒಂದು ರಾತ್ರಿ, ನೋವಿನ ಇತಿಹಾಸವನ್ನು ಹಿಂದೆ ಬಿಟ್ಟು, ರೈಲು ಹತ್ತಿ ಜ್ಯೋತಿ ಎಂಬ ಹುಡುಗಿ ನಮ್ಮ ಮನೆಗೆ ಬಂದು ನಿಂತಾಗ, ಆಕೆಯನ್ನು 'ಸುಮಂಗಲಿ ಸೇವಾಶ್ರಮ'ದ ಆಶ್ರಯಕ್ಕೆ ತಲುಪಿಸಿದ್ದೆ. ಮತ್ತೆರಡೇ ವರ್ಷಕ್ಕೆ ಜ್ಯೋತಿ ಪದವೀಧರಳಾಗಿ, 'ಭಾರತೀಯ ಗ್ರಾಮೀಣ ಮಹಿಳಾ ಸಂಘ'ದಲ್ಲಿ ತಿಂಗಳಿಗೆ 600 ರೂಪಾಯಿಯ ಸಂಬಳದ ಕೆಲಸಕ್ಕೆ ಸೇರಿಕೊಂಡಳು. ಹಲವು ವರ್ಷಗಳು ಕಳೆಯಿತು. ಒಂದು ದಿನ ಜ್ಯೋತಿ ಫೋನ್ ಮಾಡಿದ್ದಳು. 'ಆಂಟಿ, ಏನೊಂದೂ ಇಲ್ಲದೆ ಬೆಂಗಳೂರಿಗೆ ಬಂದಿಳಿದ ಆ ದಿನ ಸುಮಂಗಲಿ ಸೇವಾಶ್ರಮ ಇಲ್ಲದಿದ್ದರೆ, ನಾನು ಬೀದಿಗೆ ಬೀಳುವಂತಾಗುತ್ತಿತ್ತು. ನಿರ್ಗತಿಕ ಮಕ್ಕಳಿಗೆ ನಾನೂ ಕೂಡಾ ಏನಾದರೂ ಮಾಡಬೇಕಲ್ಲವೆ?'

ಅನೇಕ ಮಹನೀಯರ ಸಹಾಯದಲ್ಲಿ 'ತಾಯಿಮನೆ' ತೆರೆದಳು. ಹಗದೂರು ಮುಖ್ಯರಸ್ತೆಯ ಜಂಕ್ ಶೀಟ್ ಹೊದಿಸಿದ ಸಣ್ಣ ಮನೆಯಲ್ಲಿ 12 ಮಕ್ಕಳಿಂದ ಆರಂಭವಾದದ್ದು, ನೋಡ ನೋಡುತ್ತಿದ್ದಂತೆ ಬೆಳೆದಿತ್ತು. ಬದುಕು ತನಗೆ ಕೊಟ್ಟ ಸಣ್ಣ ಅವಕಾಶಕ್ಕೆ ಈ ಹುಡುಗಿ ಅದೆಷ್ಟು ಋಣಿಯಾಗಿ, ಇಷ್ಟೆಲ್ಲ ಮಕ್ಕಳಿಗೆ ಬದುಕುವ, ಕಲಿಯುವ, ಓದಿ ಬೆಳೆಯುವ ದೊಡ್ಡ ಅವಕಾಶವನ್ನು ನೀಡುತ್ತಿದ್ದಾಳೆ! ಇಂದು ತಾಯಾಗಿದ್ದಾಳೆ ಈ ಹುಡುಗಿ, 120 ಮಕ್ಕಳಿಗೆ!

ನನ್ನ ಅಭಿಪ್ರಾಯದಲ್ಲಿ ಇದು ನಿಜವಾದ ಸ್ವಯಂ ಸಬಲೀಕರಣ – ಸೆಲ್ಫ್ ಎಂಪವರ್‌ಮೆಂಟು. ಈ ನಿಮ್ಮ ವಿಶ್ವವಿದ್ಯಾಲಯದ ವಿಷನ್ 'ಎಂಪವರ್‌ಮೆಂಟ್ ಆಫ್ ವಿಮೆನ್ ಥ್ರೂ ಎಜುಕೇಶನ್' – ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ ಎಂದು ಓದಿ ಖುಷಿಯಾಯಿತು.

ನಿಜವಾದ ಯಶಸ್ಸು ಎಂದರೆ ಇದೆ. ದಿಸ್ ಈಸ್ ಟ್ರೂ ಸಕ್ಸಸ್. ನಾವು ಎಷ್ಟು ಹಣ ಮಾಡಿದೆವು, ವೃತ್ತಿಯ ಏಣಿಯಲ್ಲಿ, ಸಾಮಾಜಿಕ ಪ್ರತಿಷ್ಠೆಯಲ್ಲಿ ಎಷ್ಟು ಮೇಲೆ ಏರಿದೆವು ಎಂಬುದು ನಮ್ಮ ಯಶಸ್ಸನ್ನು ನಿರ್ವಚಿಸುವುದಿಲ್ಲ. ನಾವು ಸಮಾಜಕ್ಕೆ ಏನನ್ನು ಕೊಟ್ಟೆವು, ಎಷ್ಟು ಕೊಟ್ಟೆವು ಎಂಬುದು ನಾವು ಎಷ್ಟು ಯಶಸ್ವಿಯಾದೆವೆಂಬುದನ್ನು ನಿರ್ಧರಿಸುತ್ತದೆ. ಹಾಗೆಯೇ ಭೂಮಿ ತಾಯಿಯ ಎದೆಯ ಮೇಲೆ ನಮ್ಮ ಕಾರ್ಬನ್ ಹೆಜ್ಜೆಗಳು ಎಷ್ಟು ಹಗುರವಿದ್ದವು ಎಂಬುದು ಕೂಡಾ, ನಮ್ಮ ಯಶಸ್ಸಿನ ಮಾನದಂಡವಾಗಬೇಕು.

ಭಾರತದ ಪುನರುತ್ಥಾನವನ್ನು ನಾನು ಜ್ಯೋತಿಯಂತಹ ಎಳೆಯರ ಪ್ರಯತ್ನದಲ್ಲಿ, ಬದುಕಿನತ್ತ ಅವರು ತೋರುವ ಅನಂತ ಪ್ರೀತಿ, ಮತ್ತು ಕೃತಜ್ಞತೆಯಲ್ಲಿ, ತಾವು ತೆಗೆದುಕೊಂಡದ್ದಕ್ಕಿಂತ ಹೆಚ್ಚು ಸಮಾಜಕ್ಕೆ ನೀಡುವ ಧ್ಯೇಯದಲ್ಲಿ ಕಾಣುತ್ತೇನೆ. ಹೊಸ ಜಗತ್ತಿನ ಹರಿಕಾರರಾಗುವ ಅಫ್ರೋಸ್ ಶಾ ಅಂತಹ ಎಳೆಯರಲ್ಲಿ ಕಾಣುತ್ತೇನೆ. ಇವರು ತಾವು ಹೊರ ಜಗತ್ತಿನಲ್ಲಿ ಬಯಸುತ್ತಿದ್ದ ಪರಿವರ್ತನೆಯನ್ನು ತಮ್ಮಿಂದ ಆರಂಭಿಸಿದರು. ಕತ್ತಲೆಯಿಂದ ಬೆಳಕಿನೆಡೆಗೆ ಹೆಜ್ಜೆ ಇಟ್ಟು ದಾರಿ ತೋರಿಸಿದರು. ಗಾಂಧಿ ಇಂದಿಗೂ ಪ್ರಸ್ತುತ ಎಂಬುದಕ್ಕೆ ಉದಾಹರಣೆಯಾದರು.

ಲೆಟ್ ಅಸ್ ಚೂಸ್ ವೈಸ್ಲಿ. ಬದುಕಿನ ನಮ್ಮ ಆಯ್ಕೆಗಳು ಜೀವನ ಪ್ರೀತಿಯದಾಗಿರಲಿ. ಸರ್ವರ ಒಳಿತಿನತ್ತ ಇರಲಿ. ಪರಿಸರದ ರಕ್ಷಣೆಯತ್ತ ಇರಲಿ.



ಇಲ್ಲಿನ ಅನೇಕ ಮಕ್ಕಳು ಬಹಳಷ್ಟು ಕಷ್ಟದ ಕುಟುಂಬಗಳಿಂದ ಬಂದವರು. ವಿವಿಧ ರಂಗಗಳಿಗೆ ಪ್ರವೇಶಿಸಿ, ಕಲಿಯುವ, ಪದವೀಧರರಾಗುವ ಆಯ್ಕೆಯನ್ನು ನೀವಾಗಲೇ ಮಾಡಿದ್ದೀರಿ.

ಆದರೆ ಒಂದು ಕಾಲಕ್ಕೆ ಹೆಣ್ಣು ಮಕ್ಕಳಿಗೆ ತಾವು ಬಯಸಿದ ರಂಗಕ್ಕೆ ಪ್ರವೇಶಿಸುವುದು ಸುಲಭವಿರಲಿಲ್ಲ. ನನ್ನ ಅನುಭವವನ್ನು ಒಂದಿಷ್ಟು ಹಂಚಿಕೊಳ್ಳುತ್ತೇನೆ.

ನಾನು ಶಾಲೆ ಓದಿದ ಕಾಲದಲ್ಲಿ ನನ್ನೆದುರು ಸ್ಫೂರ್ತಿ ನೀಡುವಂತಹ ಮಹಿಳಾ ಮಾದರಿಗಳಿರಲಿಲ್ಲ. ಶಾಲೆಯಲ್ಲಿ ನಾನು ಓದಿದ ಯಾವ ಪುಸ್ತಕದಲ್ಲೂ ಮಹಿಳಾ ಸಾಧಕಿಯರ ಉಲ್ಲೇಖವಿರಲಿಲ್ಲ. ನಾಲ್ಕು ದಶಕಗಳಿಗೂ ಹಿಂದೆ, ಪಿ.ಯು.ಸಿ. ಮುಗಿಸಿ ಇಂಜಿನಿಯರಿಂಗ್ ರಂಗವನ್ನು ಪ್ರವೇಶಿಸುವಾಗ ನನ್ನಲ್ಲಿ ಸಾಕಷ್ಟು ಅಳುಕು ಆತಂಕವಿತ್ತು. ನನ್ನೆದುರು ಉದಾರಣೆಗಳಿರಲಿಲ್ಲ. 'ಇವೆಲ್ಲ ಹೆಂಗಸರ ರಂಗವಲ್ಲ. ಕಾರ್ಪೆಂಟ್ರಿ ಇರುತ್ತೆ, ಮಷೀನ್ ಶಾಪ್ ಇರುತ್ತೆ' ಎಂದೆಲ್ಲ ಹೆದರಿಸಿದವರಿದ್ದರು. ಅಳುಕುತ್ತಾ ಒಳಹೊಕ್ಕ ನಾನು ಮತ್ತು ನನ್ನ ಗೆಳತಿ ವಿಶ್ವವಿದ್ಯಾಲಯಕ್ಕೆ ರ್‍ಯಾಂಕ್ ಪಡೆದು ಹೊರಬಂದಾಗಲೇ, ಅಲ್ಲಿ ಹೆಣ್ಣು ಮಕ್ಕಳಿಗೆ ಅಸಾಧ್ಯವಾದದ್ದು ಏನೂ ಇರಲಿಲ್ಲವೆಂದು ಅರಿವಾದದ್ದು.

ಇಪ್ಪತ್ತನೇ ಶತಮಾನದ ಆದಿಭಾಗ, ಮೇರಿಕ್ಯೂರಿ ತನ್ನ ಜೀವಿತ ಕಾಲದಲ್ಲಿಯೇ ಕತೆಯಾಗಿದ್ದಳು. ಯಾವ ಸುವ್ಯವಸ್ಥಿತ ಪ್ರಯೋಗಶಾಲೆಯೂ ಇಲ್ಲದೆ, ಕನಿಷ್ಠ ಸೌಕರ್ಯಗಳಿಲ್ಲದ ಮುರುಕಲು ಮರದ ಕೊಟ್ಟಿಗೆಯಲ್ಲಿ ಆಕೆ ರೇಡಿಯಂ ಕಂಡು ಹಿಡಿದದ್ದು ಸಾಹಸಗಾಥೆಯಾಗಿತ್ತು. 'ರೇಡಿಯೋ ಆಕ್ಟಿವಿಟಿ' ಎಂಬ ಹೊಚ್ಚ ಹೊಸ ರಂಗಕ್ಕೆ ಜನ್ಮ ಕೊಟ್ಟಿದ್ದಳು. ವಿಜ್ಞಾನದ ಎರಡು ವಿಭಾಗಗಳಲ್ಲಿ ನೊಬೆಲ್ ಪಾರಿತೋಷಿಕ ಪಡೆದ ಮೊದಲ ವಿಜ್ಞಾನಿಯಾಗಿದ್ದಳು. ಮೇರಿಯ ಪ್ರಸಿದ್ಧಿ ದೇಶ-ವಿದೇಶಗಳಲ್ಲಿ ಹಬ್ಬಿತ್ತು. ಗೌರವ ಸೂಚಕ ಡಿಗ್ರಿಗಳು, ಪ್ರಶಸ್ತಿಗಳು ಎಣಿಕೆ ತಪ್ಪುವಂತಿದ್ದವು. ಆದರೆ 'ಫ್ರಾನ್ಸ್ ವಿಜ್ಞಾನದ ಅಕಾಡೆಮಿ' ಮೇರಿಯನ್ನು ಹೆಣ್ಣೆಂಬ ಒಂದೇ ಕಾರಣಕ್ಕೆ ಪ್ರವೇಶ ನಿರಾಕರಿಸಿತು. 'ಫ್ರಾನ್ಸಿನ ವಿಜ್ಞಾನದ ಅಕಾಡೆಮಿಯೊಳಗೆ ಹೆಂಗಸರಿಗೆ ಸ್ಥಳವಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ನಿರ್ಲಜ್ಜೆಯಿಂದ ಘೋಷಿಸಿತ್ತು. ವಿಜ್ಞಾನ ಮತ್ತು ಮಾನವತಾವಾದದ ಶ್ರೇಷ್ಠ ಉದಾಹರಣೆಯಂತಿರುವ ಮೇರಿ ಕ್ಯೂರಿಗೆ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಗಳು ಬಾಗಿಲು ಮುಚ್ಚಿದರೆ, ಮಹಿಳೆ ಮತ್ತು ವಿಜ್ಞಾನವನ್ನು ಕುರಿತು ನಮ್ಮ ಸಮಾಜದ ಅವೈಜ್ಞಾನಿಕ ಮನೋಭಾವ ಎಷ್ಟಿದೆ ಎಂಬುದನ್ನು ಊಹಿಸಬಹುದು.

ದಶಕಗಳ ಹಿಂದೆ ತುಮಕೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಾನು ಓದುತ್ತಿದ್ದೆ. ನಮಗೆ, ಹುಡುಗಿಯರಿಗೆ 'ಗೃಹ ವಿಜ್ಞಾನ' ಪಠ್ಯವಾಗಿದ್ದರೆ, ಅದೇ ತರಗತಿಯ ಹುಡುಗರಿಗೆ 'ಸಾಮಾನ್ಯ ವಿಜ್ಞಾನ' ಅಧ್ಯಯನದ ವಿಷಯವಾಗಿತ್ತು. ಹೆಣ್ಣಿಗೆ ಅಡಿಗೆ, ಕುಟುಂಬದ ಆರೋಗ್ಯ, ಮನೆಯ ಓರಣ ಇಷ್ಟು ತಿಳಿದರೆ ಸಾಕು ಎಂದು ಭಾವಿಸಿದ್ದ ಕಾಲ. ಹುಡುಗರಿಗೆ ಇವುಗಳನ್ನು ಕಲಿಸುವ ಅವಶ್ಯಕತೆ ಇರಲಿಲ್ಲ. ಇದು ನಮ್ಮ ಪ್ರಾಥಮಿಕ ವಿದ್ಯಾಭ್ಯಾಸವಾಗಿತ್ತು. ನನಗೆ ಆಸಕ್ತಿ ಇದ್ದು, ಆಯ್ಕೆ ಇದ್ದು ನಾನು ಗೃಹ ವಿಜ್ಞಾನವನ್ನು ತೆಗೆದುಕೊಂಡಿದ್ದರೆ, ತೊಂದರೆ ಇರಲಿಲ್ಲ. ಆದರೆ ಹೆಣ್ಣು ಮಕ್ಕಳಿಗೆ ಆಯ್ಕೆಯನ್ನೇ ನೀಡದೆ, ಹೇರುವುದು ಸಾಧುವಲ್ಲ.

ನಂತರ ಮೈಸೂರಿನಲ್ಲಿ ಹೈಸ್ಕೂಲಿಗೆ ಬಂದು ಸೇರಿದೆ. ಪೂರಾ ಹೆಣ್ಣುಮಕ್ಕಳ ಕಾನ್ವೆಂಟ್ ಆದ ಕಾರಣ ಲಿಂಗಭೇದಗಳು ಕಂಡು ಬರುವ ಸಾಧ್ಯತೆ ಇರಲಿಲ್ಲ. ಈ ಸಂದರ್ಭದಲ್ಲಿ ಮೈಸೂರಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆ, ಒಂದು ವೈಜ್ಞಾನಿಕ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿತ್ತು. ಬಹುಮಾನ ವಿಜೇತ ಹಲವಾರು ಹುಡುಗ-ಹುಡುಗಿಯರಲ್ಲಿ ನಾನೂ ಒಬ್ಬಳಾಗಿದ್ದೆ. ನನಗಿತ್ತ ಬಹುಮಾನದ ಪುಸ್ತಕಗಳು - 'ಅಡಿಗೆ' ಮತ್ತು 'ತಾಯಿ-ಮಗು'! ಹುಡುಗರಿಗೆ ವಿಜ್ಞಾನ, ಖಗೋಳಶಾಸ್ತ್ರದ ಪುಸ್ತಕಗಳನ್ನು ನೀಡಿದ್ದರು. ಎಂಟನೆಯ ತರಗತಿಯ ಹದಿಮೂರು ವರ್ಷದ ಹುಡುಗಿಗೆ ಇಂಥಾ ಪುಸ್ತಕಗಳ ವಿತರಣೆಯೇ, ಹೆಣ್ಣಿನಿಂದ ಸಮಾಜ ಏನನ್ನು ನಿರೀಕ್ಷಿಸಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇವೆಲ್ಲ ನನ್ನ ಬಾಲ್ಯಕ್ಕೆ ಸೀಮಿತವಾದ ಕತೆಗಳು ಎಂದುಕೊಂಡಿದ್ದೆ. ಆದರೆ ಒಂದು ದಿನ ನನ್ನ ಹಿರಿಯ ಸಹೋದ್ಯೋಗಿ ಮಾಲತಿ ಅವರು, ಶೇಷಾದ್ರಿಪುರಂನಲ್ಲಿಯ ತಮ್ಮ ಮಗನ ಶಾಲೆಯಲ್ಲಿ ಹುಡುಗರಿಗೆ ಕಂಪ್ಯೂಟರ್ಸ್ ಹೇಳಿಕೊಡುತ್ತಾರೆ. ಆದರೆ ಅದೇ ತರಗತಿಯ ಹುಡುಗಿಯರಿಗೆ ಅದೇ ಸಮಯದಲ್ಲಿ 'ನಿಟ್ಟಿಂಗ್' ಕಲಿಸುತ್ತಿದ್ದಾರೆಂದು ತಿಳಿಸಿದಾಗ, ಎಲ್ಲಿಲ್ಲದ ಕೋಪ ಬಂದಿತ್ತು. ಮಹಿಳಾ ಅಧ್ಯಯನಕ್ಕೆ ಮೀಸಲಾದ ನಮ್ಮ 'ಅಚಲ' ಪತ್ರಿಕೆಯಲ್ಲಿ ಅದನ್ನು ಖಂಡಿಸಿ ಬರೆದು, ಪ್ರತಿಯನ್ನು ಶಾಲೆಗೆ ಕಳುಹಿಸಿದ್ದೆವು. ಹೆಣ್ಣು ಮಕ್ಕಳ ಪಾಲಕರೂ ಮಾತನಾಡಿರಬೇಕು. ಅಂತೂ ಈ ಲಿಂಗತಾರತಮ್ಯ ಕೊನೆಯಾಗಿ, ಗಂಡು ಮಕ್ಕಳಿಗೆ ನಿಟ್ಟಿಂಗ್ ಹೇಳಿಕೊಡದಿದ್ದರೂ, ಹೆಣ್ಣು ಮಕ್ಕಳಿಗೂ ಕಂಪ್ಯೂಟರ್ ಕಲಿಸತೊಡಗಿದರು.

ಮಹಿಳೆ ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ವೈದ್ಯರಂಗ, ವಾಣಿಜ್ಯ - ಯಾವುದೇ ರಂಗಕ್ಕೂ ಹೊಸಬಳಲ್ಲ.

ಕ್ರಿಸ್ತ ಪೂರ್ವ 2700ರಲ್ಲಿಯೇ 'ಪ್ರಧಾನ ವೈದ್ಯ'ಳಾಗಿ ದಾಖಲಾದ ಈಜಿಪ್ಟಿನ ಮೆರಿಟ್ ತಾ ಎಂಬಾಕೆಯ ಹೆಸರು ಕಂಡು ಬರುತ್ತದೆ. ಕ್ರಿಸ್ತ ಶಕ 370ರಲ್ಲಿ ಗ್ರೀಕ್ ಗಣಿತಜ್ಞೆ ಹಿಪಾಟಿಯಾ ಗ್ರಹೋನ್ನತಿ ಮಾಪಕ (ಆಸ್ಟ್ರೋಲೋಬ್) ಕಂಡುಹಿಡಿದಿದ್ದಳು. ಹದಿನೆಂಟನೇ ಶತಮಾನದಲ್ಲಿ ಕ್ಯಾರೊಲಿನ್ ಹರ್ಷಲ್ ಅನೇಕ ನಕ್ಷತ್ರ ನಿಹಾರಿಕೆಗಳನ್ನು, ಎಂಟು ಧೂಮಕೇತುಗಳನ್ನು ಕಂಡುಹಿಡಿದಿದ್ದಳು. 1903ರಲ್ಲಿ ರೈಟ್ ಸಹೋದರರು ವಿಮಾನ ಹಾರಿಸಿದ ಮತ್ತೈದೇ ವರ್ಷಕ್ಕೆ ವಿಮಾನ ಹಾರಿಸಿದ ಮಹಿಳೆ ಇದ್ದಳು. 1911 ಬ್ರಿಟನ್ನಿನಲ್ಲಿ 21 ಸ್ತ್ರೀವಾದಿ ಪತ್ರಿಕೆಗಳಿದ್ದವು. ಸ್ತ್ರೀವಾದೀ ಪುಸ್ತಕದಂಗಡಿ ಅಲ್ಲದೆ, ಮಹಿಳಾ ಮುದ್ರಣಾಲಯವೂ ಇತ್ತು. ಬೆಂಗಳೂರಿನಲ್ಲಿ ಬಾಲ ವಿಧವೆ ಕಲ್ಯಾಣಮ್ಮ 44 ವರ್ಷಗಳ ಕಾಲ ಏಕಾಂಗಿಯಾಗಿ 'ಸರಸ್ವತಿ' ಎಂಬ ಪತ್ರಿಕೆಯನ್ನು ಮಹಿಳೆಯರಿಗಾಗಿಯೇ ಹೊರತಂದಿದ್ದರು.

ಆದರೆ ಈ ಅದ್ಭುತ ಸ್ತ್ರೀ ಪರಂಪರೆ ನಮ್ಮಲ್ಲಿಗೆ ತಲುಪಲೇ ಇಲ್ಲ. ಚರಿತ್ರೆಯಲ್ಲಿ ಮಹಿಳೆ ಅದೃಶ್ಯವಾಗಿದ್ದಳು. ಮಹಿಳೆಯರ ಸಾಧನೆಗಳು ಇತಿಹಾಸದ ಆಳದಲ್ಲೆಲ್ಲೋ ಕಳೆದು ಹೋದವು. ಇತಿಹಾಸ ಕೇವಲ ಪುರುಷರ ಪೌರುಷದ ಏಕಮುಖೀ ಕಥನವಾಗಿತ್ತು.

ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಹೆಣ್ಣುಮಕ್ಕಳನ್ನು ಉದ್ದೇಶಿಸಿ ಮಾತನಾಡುವ ಅವಕಾಶ ದೊರೆತಾಗ, ನಾನವರತ್ತ ಕೆಲವು ಪ್ರಶ್ನೆಗಳನ್ನು ಎಸೆಯುವುದುಂಟು. ಕೆಲವು ವಾರಗಳ ಹಿಂದೆ, ತುಮಕೂರು ರಸ್ತೆಯಲ್ಲಿಯ ಒಂದು ಫಸ್ಟ್ ಗ್ರೇಡ್ ಮಹಿಳಾ



ಕಾಲೇಜಿನಲ್ಲಿ ಇದ್ದೆ.

ಮಕ್ಕಳನ್ನು ನಾನು ಕೇಳಿದೆ,

'ವಿಜ್ಞಾನ ರಂಗದಲ್ಲಿ ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಯಾರು?'

ಉತ್ತರ ತಟ್ಟನೆ ಬಂದಿತು, 'ಮೇರಿ ಕ್ಯೂರಿ'.

ಮೇರಿ ಕ್ಯೂರಿ ಭೌತಶಾಸ್ತ್ರದ ವಿಷಯದಲ್ಲಿ 1903ರಲ್ಲಿ ನೊಬೆಲ್ ಪಾರಿತೋಷಿಕ ಪಡೆದರೆ, ಇಸವಿ 1911ರಲ್ಲಿ ರಸಾಯನಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಿಕ ಪಡೆದರು. ವಿಜ್ಞಾನದಲ್ಲಿ ಎರಡು ನೊಬೆಲ್ ಪಾರಿತೋಷಿಕ, ಅದರಲ್ಲೂ ವಿಜ್ಞಾನದ ಎರಡು ಪ್ರಭೇದಗಳಲ್ಲಿ ನೊಬೆಲ್ ಪಡೆದ ವಿಜ್ಞಾನಿ, ನೊಬೆಲ್ ಪಾರಿತೋಷಿಕದ ನೂರು ವರ್ಷಗಳಿಗೂ ಮೀರಿದ ಇತಿಹಾಸದಲ್ಲಿ ಮತ್ತೊಬ್ಬರಿಲ್ಲ.

ಮತ್ತೆ ನಾನು ಕೇಳಿದೆ 'ವಿಶ್ವದ ಮೊಟ್ಟ ಮೊದಲ ಕಂಪ್ಯೂಟರ್ ಪ್ರೋಗ್ರಾಮರ್ ಯಾರು?' ಉತ್ತರ ಬರಲಿಲ್ಲ. ಜಗತ್ತಿನ ಮೊಟ್ಟಮೊದಲ ಕಂಪ್ಯೂಟರ್ ಪ್ರೋಗ್ರಾಮರ್ 19ನೇ ಶತಮಾನದ ಆಡಾ ಅಗುಸ್ಟಾ ಲವ್ಲೇಸ್. ಈಕೆ ಮೇಧಾವಿ ಗಣಿತಜ್ಞೆ. ಚಾರ್ಲ್ಸ್ ಬ್ಯಾಬೇಜ್ 'ಅನಲಿಟಿಕಲ್ ಮೆಷಿನ್' ಎನ್ನುವ ಜಗತ್ತಿನ ಮೊಟ್ಟ ಮೊದಲ ಗಣಕಯಂತ್ರ-ಕಂಪ್ಯೂಟರ್ ಅನ್ನು ಕಂಡು ಹಿಡಿದಿದ್ದ. ಈ ಅನಲಿಟಿಕಲ್ ಯಂತ್ರಗಳನ್ನು ನಿರ್ದೇಶಿಸಿದ ಕೆಲಸವನ್ನು ಮಾಡುವಂತೆ ಪ್ರೋಗ್ರಾಮ್ ಮಾಡಬಹುದೆಂದು ಕಂಡುಹಿಡಿಯುತ್ತಾಳೆ. ಮತ್ತು ಇಂದಿನ ಭಾಷೆಯಲ್ಲಿ ಹೇಳುವುದಾದರೆ ಕಂಪ್ಯೂಟರ್‌ನ ಮೊಟ್ಟ ಮೊದಲ ಸಾಫ್ಟ್‌ವೇರ್ ಪ್ರೋಗ್ರಾಮ್ ಆಕೆ ಬರೆದಿದ್ದಳು.

ಮತ್ತೆ ಕೇಳಿದೆ. 'ಆಟೋಮ್ಯಾಟಿಕ್ ಪಿಸ್ತೂಲನ್ನು ಯಾರು ಕಂಡುಹಿಡಿದರು?' ಇದು ನಿಜಕ್ಕೂ ಕಷ್ಟದ ಪ್ರಶ್ನೆಯಾಗಿತ್ತು. ಮೊದಲ ಮಹಾಯುದ್ಧದ ಸಮಯದಲ್ಲಿ ಸ್ತ್ರೀಯರಿಗೆ ದೊರೆತ ಪೇಟೆಂಟ್‌ಗಳ ಪಟ್ಟಿಯಲ್ಲಿ 'ಆಟೋಮ್ಯಾಟಿಕ್ ಪಿಸ್ತಲ್'. ಬಾಂಬ್ ಲಾಂಚಿಂಗ್ ವೆಹಿಕಲ್, ರೇಲ್ವೆ ಟಾರ್ಪಿಡೋ, ಸಬ್‌ಮೆರಿನ್ ಮೈನ್ಸ್‌ಗಳಿದ್ದವು.

ಕಡೆಯಲ್ಲಿ ಕೇಳಿದೆ 'ಆಂಗ್ಲ ಭಾಷೆಯಲ್ಲಿ ಮೊಟ್ಟ ಮೊದಲ ಕಾದಂಬರಿಯನ್ನು ಬರೆದವರು ಯಾರೆಂದು ಹೇಳಬಲ್ಲಿರಾ?'

ನನ್ನ ಶಾಲಾ ಅವಧಿಯಲ್ಲಿ, ಆಂಗ್ಲ ಭಾಷೆಯ ಮೊಟ್ಟ ಮೊದಲ ಕಾದಂಬರಿ ಡೇನಿಯಲ್ ಡೀಫೋ 1719ರಲ್ಲಿ ಬರೆದ 'ರಾಬಿನ್ಸನ್ ಕ್ರೂಸೋ' ಎಂದು ತಿಳಿಸಲಾಗಿತ್ತು. ಆದರೆ ರಾಬಿನ್ಸನ್ ಕ್ರೂಸೋಗೂ ಮೊದಲೇ, 1640ರಲ್ಲಿ ಹುಟ್ಟಿದ್ದ ಅಫ್ರಾ ಬೆನ್ 13 ಕಾದಂಬರಿಗಳನ್ನು ಬರೆದಿದ್ದಳು. ಅವುಗಳಲ್ಲಿ 1688ರಲ್ಲಿ ಬರೆದ 'ಒರೋಂಕೋ' ಕೂಡಾ ಒಂದು. ಒರೋಂಕೋ ಆಫ್ರಿಕಾದಿಂದ ಗುಲಾಮನನ್ನಾಗಿ ಎಳೆದೊಯ್ದ ಓರ್ವ ಕಪ್ಪು ರಾಜಕುಮಾರನ ದುರಂತದ ಕತೆಯನ್ನು ಹೇಳುತ್ತದೆ. ಅಂತಹ ವ್ಯಕ್ತಿಯನ್ನು ಆಕೆ ದಕ್ಷಿಣ ಅಮೆರಿಕದ ದೂರದೇಶಗಳ ತನ್ನ ಪಯಣದ ಸಂದರ್ಭದಲ್ಲಿ ಭೆಟ್ಟಿಯಾಗಿದ್ದಳು. ಅಫ್ರಾಳ ಈ ಕಾದಂಬರಿ ಗುಲಾಮಗಿರಿಯ ಭಯಂಕರ ಚಿತ್ರಣವನ್ನು ಮೊತ್ತ ಮೊದಲ ಬಾರಿಗೆ ಜನಸಾಮಾನ್ಯರಿಗೆ ತಲುಪಿಸಿತ್ತು. ಜಗತ್ತಿನ್ನೂ ಗುಲಾಮ ಪದ್ಧತಿಯ ವಿರುದ್ಧ ಬಂಡೇಳುವ ಮೊದಲೇ ಬರೆದ ಕೃತಿ ಇದು.

ಆದರೆ ಅಫ್ರಾ ಇತಿಹಾಸದ ಪುಟಗಳಿಂದ ಕಾಣೆಯಾಗಿದ್ದಳು. ಆಕೆಯ ಸಾಧನೆಯನ್ನು

ಇಲ್ಲವಾಗಿಸುವ ಚರಿತ್ರೆಯ ಪುಟಗಳಿಂದ ಅಳಿಸಿ ಹಾಕುವ ಪ್ರಯತ್ನ ಸಂಪೂರ್ಣ ಯಶಸ್ವಿಯಾಗಿತ್ತು. ಇಪ್ಪತ್ತನೇ ಶತಮಾನದ ಕೊನೆಯಲ್ಲಿ, ಮಹಿಳಾ ಪರಂಪರೆಯನ್ನು ಹುಡುಕಿ ಹೊರಟ ಚಿಂತಕಿಯರು ಆಫ್ರಾಳ ಅದ್ಭುತ ಕತೆಯನ್ನು ಶತಮಾನಗಳ ಧೂಳು ಕೊಡವಿ ಮತ್ತೊಮ್ಮೆ ಬೆಳಕಿಗೆ ಹಿಡಿದರು. ಕಾಲು ಶತಮಾನದ ಹಿಂದೆ, ಬಹಳಷ್ಟು ಅಧ್ಯಯನದ ಕೊನೆಯಲ್ಲಿ, ಆಫ್ರಾ ಹುಟ್ಟಿದ ಜಾಗವನ್ನು ಹುಡುಕಿ ಹಾರ್ಬಲ್‌ಡೌನ್‌ಗೆ ನಾನು ತಲುಪಿದ್ದೆ. ಕ್ಯಾಂಟರ್‌ಬರಿಯ ಹತ್ತಿರ ಇರುವ ಪುಟ್ಟ ಊರು ಹಾರ್ಬಲ್‌ಡೌನ್. ಅಲ್ಲಿದ್ದ 'ಜೋಸೆಫೀನ್ ಬಟ್ಲರ್' ಹೆಸರಿನ ಮಹಿಳಾ ಸಂಸ್ಥೆಯ ಸದಸ್ಯರನ್ನು ಭೇಟಿಯಾಗಿ ವಿಚಾರಿಸಿದಾಗ, ಅವರಿನ್ನೂ ಆಫ್ರಾಳ ಹೆಸರನ್ನು ಕೇಳಿರಲಿಲ್ಲ. ಪ್ರಥಮ ಸ್ತ್ರೀವಾದಿ ಲೇಖಕಿ, ಇಂಗ್ಲಿಷ್ ಭಾಷೆಯ ಮೊದಲ ಕಾದಂಬರಿಕಾರ್ತಿ ತಮ್ಮ ಊರಿನವಳು ಎಂದು ತಿಳಿದು ಅವರಿಗೆ ಅತ್ಯಂತ ಆನಂದವಾಗಿತ್ತು.

ದಶಕಗಳ ಅಧ್ಯಯನ ಮತ್ತು ದೇಶವಿದೇಶಗಳ ಅಲೆದಾಟದ ಮೂಲಕ, ಬಹಳಷ್ಟು ಮಾಹಿತಿ ಸಂಗ್ರಹಿಸಿ ಪುಸ್ತಕಗಳನ್ನು ಬರೆಯುತ್ತಾ ಹೊರಟಂತೆ, 'ಅಂದು ನನಗೆ ಮೇರಿಕ್ಯೂರಿ ಒಂದು ಹೆಸರು ಬಿಟ್ಟರೆ ಮತ್ಯಾರೂ ಏಕೆ ಗೊತ್ತಿರಲಿಲ್ಲ?' ಎಂಬ ಪ್ರಶ್ನೆ ಕಾಡಿತ್ತು. ಇತಿಹಾಸದಾಳದಲ್ಲಿಯ ಅದ್ಭುತ ಮಹಿಳಾ ವಿಜ್ಞಾನಿಗಳ, ತಂತ್ರಜ್ಞರ, ವೈಮಾನಿಕರ, ಲೇಖಕಿಯರ, ಸಾಧಕಿಯರ ಕತೆಗಳೇಕೆ ನಮ್ಮ ಹೆಣ್ಣುಮಕ್ಕಳಿಗಿನ್ನೂ ದಕ್ಕಿಲ್ಲ? ಅನಿಸಿತ್ತು. ಯಾವುದೇ ವಲಯದಲ್ಲೂ ಮಹಿಳೆಯರು ಚರಿತ್ರೆಯಲ್ಲಿ ಬಿಟ್ಟು ಹೋಗಿರುವುದು ಆಕಸ್ಮಿಕವಲ್ಲ ಎನಿಸುತ್ತದೆ. ಇತಿಹಾಸದಲ್ಲಿ ಕಳೆದು ಹೋದ ಮಹಿಳಾ ಸಾಧಕಿಯರನ್ನು ಹೊರತೆಗೆದು ನಮ್ಮ ಸ್ತ್ರೀ ಪರಂಪರೆಯನ್ನು ಪುನರ್–ಪರಿಚಯಿಸುವ ಯತ್ನ ನನ್ನ ಅಧ್ಯಯನ ಮತ್ತು ಬರಹದ ವಸ್ತುವಾಯಿತು.

ಒಂದು ಸಂತಸದ ವಿಷಯವೆಂದರೆ, ಇಂದುಹೆಣ್ಣು ಮಕ್ಕಳ ಎದುರು ಅನೇಕ ಬಾಗಿಲುಗಳು ತೆರೆದಿವೆ. 19ನೇ ಶತಮಾನಗಳ ಉತ್ತರಾರ್ಧದ ವರೆಗೆ ಹೆಣ್ಣು ಮಕ್ಕಳಿಗೆ ವೈದ್ಯರಂಗಕ್ಕೆ ಪ್ರವೇಶವಿರಲಿಲ್ಲ. 1940ರವರೆಗೆ ಹೆಣ್ಣುಮಕ್ಕಳಿಗೆ ಇಂಜಿನಿರಿಂಗ್ ರಂಗಕ್ಕೆ ಪ್ರವೇಶವಿರಲಿಲ್ಲ. 1992ರವರೆಗೆ ಹೆಣ್ಣು ಮಕ್ಕಳಿಗೆ ಸೇನೆಯ ಬಾಗಿಲು ಮುಚ್ಚಿತ್ತು. ದಶಕಗಳ ಹಿಂದೆ ಹೆಣ್ಣು ಮಕ್ಕಳಿಗೆ ವಾಣಿಜ್ಯ ಕ್ಷೇತ್ರಗಳಲ್ಲಿ ಅದ್ಭುತದ ಸ್ವಾಗತವೇನೂ ಇರಲಿಲ್ಲ. ವೈಮಾನಿಕ ರಂಗ, ಅಂತರಿಕ್ಷಯಾನ ಹೆಣ್ಣು ಮಕ್ಕಳಿಗೆ ದೂರದ ಕನಸಾಗಿತ್ತು. ಇಂದು ನಮ್ಮ ಹೆಣ್ಣು ಮಕ್ಕಳ ಎದುರು ಬಹಳಷ್ಟು ಬಾಗಿಲುಗಳು ತೆರೆದಿವೆ. ಸಾಧನೆಯ ರಂಗ ಕೈ ಬೀಸಿ ಕರೆದಿದೆ. ಈ ಎಲ್ಲ ಅವಕಾಶಗಳನ್ನು ನಮ್ಮ ಹೆಣ್ಣು ಮಕ್ಕಳು ಬಳಸಿಕೊಳ್ಳಲಿ ಎಂಬುದೇ ನನ್ನ ಮನದ ಹಾರೈಕೆ.

ಇಂದು ನಮ್ಮೆದುರು ಸವಾಲುಗಳು ಇಲ್ಲ ಎಂದಲ್ಲ. ಕಾನೂನು ಅವಕಾಶ ಕೊಟ್ಟರೂ, ಇಂದಿಗೂ ಮಹಿಳೆ ತಾನು ಬಯಸಿದ ಉದ್ಯೋಗವನ್ನು ಮಾಡಲು ಹೋರಾಡಬೇಕಿದೆ.

ಕಳೆದ ತಿಂಗಳು, 22 ಜನವರಿ 2019, ದಿನಪತ್ರಿಕೆ ತೆರೆದೆ. ಮೊದಲ ಪುಟದಲ್ಲಿಯೇ ಈ ಸುದ್ದಿಯಿತ್ತು. ಉತ್ತರ ಪ್ರದೇಶದ, ಕುಶಿನಗರ್ ಡಿಸ್ಟ್ರಿಕ್ಟ್‌ನಲ್ಲಿ ಬಾವರಿ ತೋಲಾ ಎಂಬ ಹಳ್ಳಿಯಲ್ಲಿ ಧ್ರುವ ನಾರಾಯನ್ ಎಂಬ ಕ್ಷೌರಿಕ ಇದ್ದಾನೆ. ಐದು ವರ್ಷಗಳ ಹಿಂದೆ, ಆತನಿಗೆ ಲಕ್ವ ಹೊಡೆದು ಹಾಸಿಗೆ ಹಿಡಿದಾಗ, ಇಡೀ ಕುಟುಂಬ ಹಸಿವಿನಿಂದ ಕಂಗಾಲಾಗಿತ್ತು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಆತನ ಇಬ್ಬರು ಹೆಣ್ಣು ಮಕ್ಕಳು, 12



ವರ್ಷದ ಜ್ಯೋತಿ ಮತ್ತು 10 ವರ್ಷದ ನೇಹಾ, ಗಂಡು ಮಕ್ಕಳಂತೆ ಉಡುಗೆ ತೊಟ್ಟು, ಅಪ್ಪನ ಕ್ಷೌರದ ಅಂಗಡಿಯ ಬಾಗಿಲು ತೆರೆದರು. ಬಂದ ಗಿರಾಕಿಗಳಿಗೆ ಮುಖದ ಕ್ಷೌರ ಮಾಡಿ, 'ಹೇರ್ ಕಟ್' ನೀಡಿದರು. ಇಡೀ ಕುಟುಂಬವನ್ನು ಬದುಕುಳಿಸಿದರು. ಆದರೆ ಹೆಣ್ಣು ಮಕ್ಕಳು ಬೆಳೆದು ಇಂದು ತಮ್ಮ ಹೆಣ್ತನವನ್ನು ಅವಿತಿಡಲು ಸಾಧ್ಯವಿಲ್ಲದಾಗ, ಅವರ ಸುತ್ತಲ ಸಮಾಜ ಅವರಿಗೆ ಛೀಮಾರಿ ಹಾಕುತ್ತಿದೆ. ಹೆಣ್ಣುಮಕ್ಕಳಾಗಿ ಕ್ಷೌರದ ಕೆಲಸ ಮಾಡುತ್ತಿದ್ದೀರ ಎಂದು ಟೀಕಿಸುತ್ತಿದೆ. ಆದರೆ ಈ ದಿಟ್ಟ ಹೆಣ್ಣು ಮಕ್ಕಳು, ತಮ್ಮ ಕೆಲಸವನ್ನು ನಿಲ್ಲಿಸಿಲ್ಲ. ಛಲದಿಂದ ತಮ್ಮ ಉದ್ಯೋಗವನ್ನು ಮುಂದುವರೆಸಿದ್ದಾರೆ.

ನಮ್ಮ ಹೆಣ್ಣು ಮಕ್ಕಳನ್ನು ಸುತ್ತಲಿನ ಸಮಾಜ ನೀವು ಅಸಹಾಯಕರು, ಅಬಲೆಯರು, ಯಾರೋ ಬಿಳಿಯ ಕುದುರೆಯೇರಿ ಬರುವ ರಾಜಕುಮಾರ ನಿಮ್ಮನ್ನು ರಕ್ಷಿಸುತ್ತಾನೆ ಎಂದು ಅರೆದು ಕುಡಿಸಿ ಬೆಳೆಸುತ್ತಿತ್ತು. ಹಾಗೆಂದೇ ಹೆಣ್ಣು ಮಕ್ಕಳು 'ಸಿಂಡ್ರೆಲಾ ಕಾಂಪ್ಲೆಕ್ಸ್'ನಿಂದ ಬಳಲುತ್ತಿದ್ದರು.

ಆದರೆ, ಮಹಿಳೆಯರಿಗಾಗಿಯೇ ಮೀಸಲಿರುವ ಕರ್ನಾಟಕದ ಏಕೈಕ ಮಹಿಳಾ ವಿಶ್ವವಿದ್ಯಾಲಯದಿಂದ ಹೊರ ಬರುತ್ತಿರುವ ನೀವು, ಸಬಲೀಕೃತ ಸಶಕ್ತ ಮಹಿಳೆಯರು. ನೀವು, ಗಾಜಿನ ಚಪ್ಪಲಿಯನ್ನು ತೊಡಲು ಕಾತುರವಾಗಿರುವುದಿಲ್ಲ, ನೀವು ಗಾಜಿನ ತಾರಸಿಯನ್ನು ಒಡೆಯಲು ಹೊರಟವರು. ಯು ಡು ನಾಟ್ ವೇಟ್ ಟು ವೇರ್ ಗ್ಲಾಸ್ ಸ್ಲಿಪರ್ಸ್. ಯು ವಿಲ್ ಬ್ರೇಕ್ ದಿ ಗ್ಲಾಸ್ ಸೀಲಿಂಗ್.

**ನಿಮಗೆ ತಿಳಿದಿದೆ:**

ಹೆಣ್ಣು ಮಕ್ಕಳಾದ ನಾವು ದಿಟ್ಟರಿದ್ದೇವೆ. ಗಟ್ಟಿಯಿದ್ದೇವೆ, ಸೂಕ್ಷ್ಮರಿದ್ದೇವೆ. ಹಿಡಿದದ್ದನ್ನು ಮಾಡಿ ಮುಗಿಸುತ್ತೇವೆ. ಸತತ ಪ್ರಯತ್ನದಲ್ಲಿ ಪಟ್ಟುಹಿಡಿದು ಸಾಧಿಸಬಲ್ಲೆವು. ಬದುಕಿನಲ್ಲಾಗಲಿ, ಉದ್ಯೋಗದಲ್ಲಾಗಲಿ ಎದುರಾಗುವ ಬೆಟ್ಟದಂತಹ ಕಷ್ಟಗಳನ್ನು ಎದುರಿಸಿ ನಿಲ್ಲಬಲ್ಲೆವು. ನೀವು ಸ್ವಯಂ ಶಕ್ತರು, ನಿಮ್ಮ ಕನಸುಗಳ ಬೆನ್ನತ್ತಿ ಹೋಗಬಲ್ಲಿರಿ.

ಎಳೆಯ ಹುಡುಗಿ ಶಿವ್ಯಾ ನಾಥ್, 23ನೇ ವಯಸ್ಸಿನಲ್ಲಿ ಜಗತ್ತು ನೋಡಬೇಕೆಂದು ಪ್ರಪಂಚ ಪರ್ಯಟನೆಯ ಕನಸು ಕಂಡಳು. ಇಂದು ಆಕೆ, ಹಿಮಾಲಯದ ಅತಿ ಮೂಲೆಯ ಹಳ್ಳಿಯಿಂದ ಹಿಡಿದು, ದಕ್ಷಿಣ ಅಮೆರಿಕದ ಈಕ್ವೇಡರ್ ದೇಶದ ಅಮೆಜಾನ್ ಮಳೆಕಾಡಿನವರೆಗೂ ಏಳು ವರ್ಷಗಳ ಕಾಲ ಅಲೆದಾಡಿ ಬಂದಿದ್ದಾಳೆ. ತನ್ನ ಪಯಣದ ಅನುಭವಗಳನ್ನು ಅತಿ ಸುಂದರವಾಗಿ ಸರಳವಾಗಿ 'ದಿ ಶೂಟಿಂಗ್ ಸ್ಟಾರ್' – ಎ ಗರ್ಲ್, ಹರ್ ಬ್ಯಾಕ್‌ಪ್ಯಾಕ್ ಅಂಡ್ ದಿ ವರ್ಲ್ಡ್ ಎಂಬ ಪುಸ್ತಕದಲ್ಲಿ ಹಿಡಿದಿಟ್ಟಿದ್ದಾಳೆ.

ಮತ್ತೊಬ್ಬ ಹುಡುಗಿ, ದಿನಾಂಕ 11 ಏಪ್ರಿಲ್ 2011ರಂದು ರೈಲಿನಲ್ಲಿ ಲಕ್ನೋನಿಂದ ದಿಲ್ಲಿಗೆ ಪ್ರಯಾಣ ಮಾಡುತ್ತಿದ್ದಳು. ಮಧ್ಯರಾತ್ರಿ ಬಂದೆರಗಿದ ಕಳ್ಳಕೊರಮರೊಂದಿಗೆ ಹೋರಾಡಿದಾಗ, ಅವರು ಆಕೆಯನ್ನು ಎತ್ತಿ ರೈಲಿನಿಂದ ಆಚೆಗೆ ಎಸೆದಿದ್ದರು. ಎಡಗಾಲನ್ನು ಕಳೆದುಕೊಂಡು, ಬಲಗಾಲು, ಬೆನ್ನು ಜಜ್ಜಿ ಹೋಗಿ ಏಮ್ಸ್ ಆಸ್ಪತ್ರೆಯಲ್ಲಿ ಅತಿ ನೋವಿನಲ್ಲಿ ನರಳುತ್ತಿದ್ದ ಆ ಹೊತ್ತು ಆಕೆ ನಿರ್ಧರಿಸಿದ್ದಳು – 'ನಾನು ಏರುವೆ ಹಿಮಾಲಯದ ಎತ್ತರವನ್ನು'. ದಿನಾಂಕ 22 ಮೇ 2013, ಎವರೆಸ್ಟ್‌ನ ತುತ್ತತುದಿಯಲ್ಲಿ ನಿಂತು ಅರುಣಿಮಾ ಸಿನ್ಹಾ ಭಾರತದ ಬಾವುಟವನ್ನು ಹೆಮ್ಮೆಯಿಂದ ಹಾರಿಸಿದರು.

ಇದು ನನ್ನ ಅರ್ಥದಲ್ಲಿ ನಿಜವಾದ ಸ್ವಯಂ ಸಬಲೀಕರಣ. ಸದಾ ಶಕ್ತರಾಗಿರಿ, ನಿಮ್ಮ ಎದೆಯಲ್ಲಿ ಸಂತಸದ ಹಕ್ಕಿ ಹಾಡಲಿ. ಸ್ಫೂರ್ತಿಯಿಂದ ತೇಜಸ್ವಿಗಳಾಗಿ ಬೆಳಗಿರಿ.

**ನೀವು ಸಬಲರಾದಾಗ:**

- ನೀವು ಇತರರನ್ನು ದೂರುವುದಿಲ್ಲ
- ಪರಿಸ್ಥಿತಿಗಳನ್ನು ದೂಷಿಸುವುದಿಲ್ಲ
- ನಿಮ್ಮ ಕಾರ್ಯಗಳಿಗೆ ಜವಾಬ್ದಾರಿಯನ್ನು ನೀವು ಹೊರುತ್ತೀರಿ
- ನಿಮ್ಮ ಭವಿಷ್ಯವನ್ನು ನೀವು ಸೃಷ್ಟಿಸುತ್ತೀರಿ
- ನಿಮ್ಮ ಹಾದಿಯ ಯಾವುದೇ ಅಡೆತಡೆ ನಿಮ್ಮನ್ನು ಗುರಿ ಮುಟ್ಟುವುದರಿಂದ ತಡೆಯಲಾರದು

ನಾನು ನಿಮಗೆ ಹೇಳುತ್ತಿರುವುದೇನೂ ಹೊಸದಲ್ಲ. ನಾನು ಹೇಳುವುದೆಲ್ಲವೂ ನಿಮ್ಮ ವಿಶ್ವವಿದ್ಯಾಲಯದ ವಿಷನ್, ಮಿಷನ್ ಮತ್ತು ಧ್ಯೇಯಗಳಲ್ಲಿ ಒಳಗೂಡಿದೆ.

ಸಶಕ್ತ ಸಬಲೀಕೃತ ಮಹಿಳೆಯರಾಗಿ ನೀವು ಉದ್ಯೋಗ ರಂಗಕ್ಕೆ ಹೊಕ್ಕಾಗ, ನಿಮ್ಮೆಲ್ಲ ಪದವಿ, ರ್‍ಯಾಂಕ್ ನಂತರವೂ ನಿಮ್ಮೆದುರು ಅನೇಕ ಸವಾಲುಗಳು ಎದ್ದು ನಿಲ್ಲುತ್ತವೆ.

ಹಾಗೆಂದೇ, ನನ್ನ ಮೂರೂವರೆ ದಶಕಗಳ ಔದ್ಯೋಗಿಕ ಅನುಭವದ ಹಿನ್ನೆಲೆಯಲ್ಲಿ, ಬದುಕು ಮತ್ತು ಕೆಲಸ ನನಗೆ ಕಲಿಸಿದ ಕೆಲವು ಮುಖ್ಯ ಪಾಠಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ದೆ ಆರ್ ಲೈಫ್ಸ್ ಲೆಸನ್ಸ್ ಫಾರ್ ಮಿ.

ನೀವು ಉದ್ಯೋಗದಲ್ಲಿ ಮುಂದುವರೆದಂತೆ, ಕಾರ್ಯದ ನಟ್ಟನಡುವೆ ನಿಲ್ಲಿ. ಅಲ್ಲೆಲ್ಲೋ ಮೂಲೆಯಲ್ಲಿ ಹಿಂಜರೆಯುತ್ತಾ ಹಿಂದುಳಿಯಬೇಡಿ. ಬಿ ದೇರ್ ಇನ್ ದಿ ಮಿಡ್ಸ್ಟ್ ಆಫ್ ಆಕ್ಷನ್. ಒದಗಿ ಬರುವ ಯಾವುದೇ ಅವಕಾಶವನ್ನು ಕಳೆದುಕೊಳ್ಳಬೇಡಿ. ನಿಮ್ಮ ಆದ್ಯತೆಗಳ ಬಗ್ಗೆ ಗಮನವಿರಲಿ. ವೈಯಕ್ತಿಕ ಬದುಕು ಮತ್ತು ಉದ್ಯೋಗದ ನಡುವೆ ಸಮತೋಲನವನ್ನು ಸಾಧಿಸಿರಿ. ಎದುರಾಗುವ ಪ್ರತಿಯೊಂದು ಸವಾಲೂ, ಅವಕಾಶದ ಹಾದಿ ಎಂದು ನೆನಪಿಟ್ಟುಕೊಳ್ಳಿ.

ನನ್ನ ಉದ್ಯೋಗ ನನಗೆ ಅತ್ಯಂತ ರೋಚಕವಾದ ಅನುಭವವಾಗಿದೆ, ಕಾರಣ ನನ್ನ ವೃತ್ತಿಯ ಬಗ್ಗೆ ನನಗೆ ಅಗಾಧ ಪ್ರೀತಿ ಮತ್ತು ಗೌರವ ಇದೆ. ಭಾರತದ ಮೊತ್ತ ಮೊದಲ ದೇಶೀಯ ವಿನ್ಯಾಸದ ಅತ್ಯಾಧುನಿಕ ಹಗುರ ಹೆಲಿಕಾಪ್ಟರ್ – ಅಡ್ವಾನ್ಸ್ಡ್ ಲೈಟ್ ಹೆಲಿಕಾಪ್ಟರ್‌ನ ಅಸ್ತೀಕರಣದಿಂದ ಹಿಡಿದು, ಐದನೇ ಪೀಳಿಗೆಯ ಯುದ್ಧ ವಿಮಾನದ ವಿಭಾಗೀಯ ಮುಖ್ಯಸ್ಥಳಾಗಿ, ಮಾನವ ರಹಿತ ವಿಮಾನಗಳ ಚೀಫ್ ಡಿಸೈನರ್ ಆಗಿ, ಇಂದು ಎಚ್.ಎ.ಎಲ್. ಮ್ಯಾನೇಜ್‌ಮೆಂಟ್ ಅಕಾಡೆಮಿಯ ಡೀನ್ ಮತ್ತು ಜನರಲ್ ಮ್ಯಾನೇಜರ್ ಆಗಿ, ನಾನು ಗಳಿಸಿದ ಅನುಭವಗಳು ನನಗೆ ಬಹು ಅಮೂಲ್ಯ.

ಧ್ರುವ ಹೆಲಿಕಾಪ್ಟರ್ ಸಂಶೋಧನೆ ಮತ್ತು ವಿನ್ಯಾಸ ಕೆಲಸದಲ್ಲಿ ತೊಡಗಿರುವ ಹೊತ್ತು, ಒಮ್ಮೆ ನಾನು ಮಧ್ಯರಾತ್ರಿಯ ಪ್ಯಾಸೆಂಜರ್ ರೈಲಿನಲ್ಲಿ, ಆಲುಗೆಡ್ಡೆಯ ಮೂಟೆಯ ಮೇಲೆ ಕುಳಿತು ಕೊಚಿನ್‌ಗೆ ಪ್ರಯಾಣ ಮಾಡಿದ್ದೆ. ದೇಶೀಯ ವಿನ್ಯಾಸದ ಸೋನಾರ್ ಸಿಸ್ಟಮ್‌ನ ಪ್ರಥಮ ಪರೀಕ್ಷಣೆಯಲ್ಲಿ ಭಾಗಿಯಾಗುವುದು ತಪ್ಪಿಹೋಗಬಾರದು ಎಂಬ



ಕಾರಣಕ್ಕೆ. ಸೋನಾರ್ ಸಮುದ್ರದಾಳದಲ್ಲಿರುವ ಸಬ್‌ಮೆರಿನ್‌ಗಳನ್ನು ಪತ್ತೆ ಹಚ್ಚಲು ಬಳಸುವ ವ್ಯವಸ್ಥೆ.

ನಂತರ ನಾನು ಸಿಸ್ಟಮ್ ಇಂಜಿನಿಯರ್ ಆಗಿ ವಿಕಾಸಗೊಂಡಂತೆ, ನನ್ನ ಕೆಲಸ ನನ್ನನ್ನು ಇಸ್ರೇಲಿನ ಬಿರು ಬಿಸಿಲ ಮರುಭೂಮಿಗೂ ಕರೆದೊಯ್ಯಿತು, ಸ್ವೀಡನ್ನಿನಲ್ಲಿ ಆರ್ಕ್ಟಿಕ್ ವೃತ್ತದ ಬಳಿಯ ಕೊರೆವ ಚಳಿಯ ಫೈರಿಂಗ್ ರೇಂಜ್‌ಗೂ ಕರೆದೊಯ್ಯಿತು. ಬದುಕಿನ ಸವಾಲುಗಳನ್ನು ಸಂತಸದಿಂದ, ಆತ್ಮವಿಶ್ವಾಸದಿಂದ ಎದುರುಗೊಂಡಂತೆ, ನಮ್ಮೆದುರು ಅನಂತ ಅವಕಾಶಗಳು ತೆರೆಯುತ್ತಾ ಹೋಗುತ್ತವೆ.

ಬದುಕಿನ ಯಾವುದೇ ಕ್ಷಣದಲ್ಲಿ, 'ನಾನು ಹೆಣ್ಣು, ನನ್ನಿಂದ ಈ ಕೆಲಸ ಆಗಲಾರದೇನೋ' ಎಂಬ ಸಂದೇಹದಲ್ಲಿ ಬೀಳಬೇಡಿ. ಮಹಿಳೆಯಿಂದ ಅಸಾಧ್ಯವಾದ ಕೆಲಸ ಯಾವುದೂ ಇಲ್ಲ. ಅದು ಜ್ಯೋತಿ ಮತ್ತು ನೇಹಾರಂತೆ ಕ್ಷೌರಿಕ ಕೆಲಸವಾದರೂ ಆಗಬಹುದು, ಕಲ್ಪನಾ ಮತ್ತು ಸುನೀತಾ ವಿಲಿಯಮ್ಸ್‌ರಂತೆ ಅಂತರಿಕ್ಷಕ್ಕೆ ಹಾರುವುದಾಗಿರಬಹುದು.

ಮಹಿಳೆಗೆ ಮುಗಿಲು ಕೂಡಾ ಮಿತಿಯಲ್ಲ, ಮುಗಿಲು ಮುಟ್ಟುವ ದಿಟ್ಟೆಯರು ನೀವು. ಯಾವುದೇ ಕಾರಣಕ್ಕೆ ನಿಮಗೆ ನೀವು ಬಯಸಿದ ಕೆಲಸ ಸಿಗಲಿಲ್ಲ, ಮತ್ತೊಂದು ಉದ್ಯೋಗದಲ್ಲಿ ನೀವು ನೆಲೆಸಿದರೆ, ದಯವಿಟ್ಟು ನೆನಪಿಟ್ಟುಕೊಳ್ಳಿ; ನೀವು ಕೆಲಸವನ್ನು ಆಯ್ದುಕೊಂಡಿರದೆ ಇರಬಹುದು, ಕೆಲಸ ನಿಮ್ಮನ್ನು ಆಯ್ದುಕೊಂಡಿದೆ. ನಿಮ್ಮ ಉದ್ಯೋಗಕ್ಕೆ ಪೂರ್ಣ ನ್ಯಾಯವನ್ನು ಒದಗಿಸಿ, ನಿಮ್ಮೆಲ್ಲ ಶಕ್ತಿ, ಸಾಮರ್ಥ್ಯ, ಉತ್ಸಾಹದಿಂದ ಕೆಲಸದಲ್ಲಿ ತೊಡಗಿ.

ನಮ್ಮ ಯಶಸ್ಸು ಮತ್ತು ಸೋಲುಗಳಿಗೆ ನಾವು ಜವಾಬ್ದಾರರಾಗೋಣ. ದಿಟವಾಗಿ ನೋಡಿದರೆ, ಸೋಲೆಂಬುದಿಲ್ಲ. ಎಲ್ಲವೂ ಬದುಕು ಕಲಿಸುವ ಪಾಠಗಳಷ್ಟೆ.

ಪದವೀಧರರಾಗಿ ಕಾಲೇಜಿನ ಹೊರಗೆ ಕಾಲಿಡುತ್ತಿದ್ದೀರಿ. ಹೊರಗಲ್ಲಿ ಸಾಧ್ಯತೆಯ ಜಗತ್ತು ನಿಮಗಾಗಿ ಕಾದಿದೆ. ಸಾಧನೆಯ ರಂಗಕ್ಕೆ ನಿಮ್ಮನ್ನು ಆಹ್ವಾನಿಸುತ್ತಿದೆ. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ. 'ಅವರ್ ಥಾಟ್ಸ್ ಕ್ರಿಯೇಟ್ ಅವರ್ ಡೆಸ್ಟಿನಿ' ಎಂಬ ಮಾತು ಸತ್ಯ.

ಬದುಕು ಇಂದು ನಿಮ್ಮೆದುರು ತೆರೆದಿರುವ ನೂರು ಅವಕಾಶಗಳನ್ನು ಬಳಸಿಕೊಳ್ಳಿ, ಮಹಿಳಾ ಹೋರಾಟದ ಫಲವಾಗಿ ನಿಮ್ಮೆದುರು ತೆರೆದು ನಿಂತ ನೂರೊಂದು ರಂಗಗಳಿಗೆ ಪ್ರವೇಶಿಸಿ ನಿಮ್ಮ ಸಾಮರ್ಥ್ಯವನ್ನು ಮೆರೆಯಿರಿ. ಇದರೊಡನೆ, ಜಾತಿಯಿಲ್ಲದ, ಭೀತಿಯಿಲ್ಲದ, ಲಿಂಗ ತಾರತಮ್ಯವಿಲ್ಲದ ಸಮಾನತೆಯ ಬುನಾದಿಯ ಮೇಲೆ ನಿಂತ ಸಮಾಜದ ಕನಸು ಮತ್ತು ನನಸು ನಮ್ಮದಾಗಲಿ, ನಿಮ್ಮದಾಗಲಿ.

ನಿಮ್ಮ ಅಂತ:ಶಕ್ತಿಯನ್ನು ಅರಿಯಿರಿ, ನಿಮ್ಮ ಸಾಮರ್ಥ್ಯವನ್ನು ಬಳಸಿರಿ. ನೀವು ಕನಸು ಕಂಡರೆ ಸಾಕು, ಹಾರಲಿಕ್ಕೆ ರೆಕ್ಕೆಗಳು ಮೊಳೆಯುತ್ತವೆ. ಯು ಜಸ್ಟ್ ನೀಡ್ ಟು ಡ್ರೀಮ್, ಯು ಗ್ರೋ ದಿ ವಿಂಗ್ಸ್ ಟು ಫ್ಲೈ.

ನಮಸ್ಕಾರ.

10ನೆಯ ಘಟಿಕೋತ್ಸವ ಭಾಷಣ ದಿನಾಂಕ:13 ಫೆಬ್ರುವರಿ 2019

******

# ಲಿಂಗ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸುಸ್ಥಿರ ಅಭಿವೃದ್ಧಿಯ ಉನ್ನತೀಕರಣದಲ್ಲಿ ಮಹಿಳಾ ವಿಶ್ವವಿದ್ಯಾಲಯಗಳ ಪಾತ್ರದ ಮರುಚಿಂತನೆ

□ ಡಾ. ಶಶಿಕಲಾ ಗುರುಪುರ
ನಿರ್ದೇಶಕಿ,
ಸಿಂಬೊಸಿಸ್ ಲಾ ಸ್ಕೂಲ್ ಪುಣೆ, ಡೀನ್, ಕಾನೂನು ವಿಭಾಗ,
ಎಸ್‌ಐಯು ಹಾಗೂ ಭಾರತೀಯ ಕಾನೂನು ಆಯೋಗದ
ನಿಕಟಪೂರ್ವ ಸದಸ್ಯೆ
ಜನವರಿ 22, 2018

ತಾಯಿ ಇಲ್ಲದ ತವರಿಗೆ ಎಂದೂ ಹೋಗಬಾರದವ್ವ; ನಾಯಿಗಿಂತ ಕಡೆಯಾಗಿ ಹೋಯಿತು ನನ್ನ ಬಾಳು ಕೇಳವ್ವ

– ಕನ್ನಡ ಜನಪದ ಕವಯತ್ರಿ

ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು, ಗೌರವಾನ್ವಿತ ಸಮಕುಲಾಧಿಪತಿಗಳು, ಕುಲಪತಿಗಳು, ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿ, ಪಾಲಕರು ಹಾಗೂ ಇತರೆ ಗಣ್ಯರೆ,

ನಮಸ್ಕಾರಗಳು

ಜನಪದ ಕವಯತ್ರಿಯ ಈ ಸಾಲಿನಲ್ಲಿ ಅಡಗಿರುವ ದುಃಖದಲ್ಲಿ ನನ್ನ ಪಾಲೂ ಇದೆ. ಕರ್ನಾಟಕದ ಬಹುದೂರದ ಮಗಳಾಗಿ, ನನ್ನದೇ ಜನರ, ತವರಿನ ಸಂತಸ, ಪ್ರೀತಿ ಹಾಗೂ ಬೆಚ್ಚಗಿನ ಅನುಭವದಿಂದ ವಂಚಿತಳಾಗಿದ್ದೇನೆ. ಆದರೆ ಜಾಗತಿಕ ಹಾಗೂ ರಾಷ್ಟ್ರೀಯ ಅಂತಃಸ್ಫೂರ್ತಿ ಹಿನ್ನೆಲೆಯಲ್ಲಿ ನೆರೆಮನೆಯ ಮಗಳಾಗಿದ್ದೇನೆ. ಮಾತೃ ಹೃದಯವು ಆರ್ದ್ರತೆ, ಪ್ರೀತಿ, ಸಹನೆ, ಕಾಳಜಿ, ಧೈರ್ಯ, ದೃಢತೆಯ ಸಂಕೇತ. ಒಮ್ಮೆ ಕರುಳುಬಳ್ಳಿಯ ಕತ್ತರಿಸಿದ ನೋವು; ಮತ್ತೊಮ್ಮೆ ಜೈವಿಕ ಬ್ಯಾಂಕಿನಲ್ಲಿ ಸಂಗ್ರಹವಾದ ನೆನಪುಗಳ ಸಾಂತ್ವನ; ಇಡೀ ಜೀವನದ ಅವಧಿಯಲ್ಲಿ ಅಪರೂಪವಾಗಿ ದೊರೆಯಬಹುದಾದ ಶುಭ ಗಳಿಗೆಯಲ್ಲಿ ನಿಂತು ಈ ಭಾಷಣ ಮಾಡುತ್ತಿದ್ದೇನೆ. ನನಗೆ ಹಾಗೂ ನನ್ನಂಥವರಿಗೆ ಹೀಗೆ ತವರು ಮನೆಯ ಕ್ಷಣಗಳು, ಪರಕೀಯ ಭಾವ, ಏಕಾಂತದ ಕ್ಷಣಗಳಲ್ಲಿ ಸಂಸ್ಕೃತಿ, ಭಾಷೆ, ಸಹೋದರಿತ್ವದ ಮೂಲಕೋಶಗಳೊಂದಿಗೆ ಪುಷ್ಟಿ ನೀಡುತ್ತವೆ. ಅದೇ ವಿಶ್ವವಿದ್ಯಾಲಯಗಳ ಶಕ್ತಿ. ಅದರಲ್ಲೂ ವಿಶೇಷವಾಗಿ ಮಹಿಳಾ ವಿಶ್ವವಿದ್ಯಾಲಯಗಳ ಮೇರೆಯಿಲ್ಲದ ಶಕ್ತಿಯೂ ಹೌದು.

ಮುಗ್ಧತೆಯ ಅತ್ಯುತ್ಸಾಹ ಹಾಗೂ ಗಾಂಭೀರ್ಯಭರಿತ ಸಂತಸದಿಂದ ಇರುವ



ಯುವ ಹಾಗೂ ಶಕ್ತಿಶಾಲಿ ಸಮೂಹದ ಮಧ್ಯೆ ನನಗೆ ಗೌರವ ದೊರೆತಿದೆ. ಶೈವ ಹಾಗೂ ಸೂಫಿ ತತ್ವದ ಪವಿತ್ರ ಅಲೆಗಳ ನಡುವೆ, ಪಂಡಿತ-ವಿದ್ವಾಂಸರ ಹಾಗೂ ಗಣ್ಯ ವ್ಯಕ್ತಿಗಳ ಮಧ್ಯೆ ವಿನಮ್ರಳಾಗಿದ್ದೇನೆ. ಈ ರೀತಿಯ ವಿಚಾರ-ಚಿಂತನೆಗಳನ್ನು ನಡೆಸಲು ನನಗೆ ಅವಕಾಶ ಕಲ್ಪಿಸಿದ ಘನತೆವೆತ್ತ ಕುಲಾಧಿಪತಿಗಳಾದ ಗೌರವಾನ್ವಿತ ವಜುಭಾಯಿ ವಾಲಾ ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಮಹಿಳಾ ಶಿಕ್ಷಣ ವಂಚಿತ ಬದುಕು ಹಾಗೂ ತಾರತಮ್ಯ ನೀತಿ ಸಹಿಸಿಕೊಂಡ ಇತಿಹಾಸದ ಹಿನ್ನೋಟದ ಯಾತ್ರೆ ನಡೆಸುತ್ತಿದ್ದೇನೆ. ಮಾನ್ಯರೆ, ನಾನು ಈ ಭಾಷಣ ಸಿದ್ಧಪಡಿಸುವಾಗ, ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಸ್ಥಾನದ ಬಗ್ಗೆ ಯುನೆಸ್ಕೊದ ಇತ್ತೀಚಿನ ವರದಿಯಲ್ಲಿನ ಮಹಿಳಾ ವಿಶ್ವವಿದ್ಯಾಲಯಗಳ ಶಕ್ತಿ-ಸಾಮರ್ಥ್ಯ ಹಾಗೂ ಅವುಗಳ ಕೊಡುಗೆಗಳ ಬಗೆಗಿನ ವಿವಿಧ ಅಂಕಿ-ಅಂಶಗಳನ್ನು ಪರಿಶೀಲಿಸಿದೆ. ಭಾರತದ ಅಸಂಖ್ಯಾತ ಸಾಧಕರ ಪೈಕಿ ಸಾವಿತ್ರಿಬಾಯಿ ಫುಲೆ, ಮಹಾತ್ಮ ಜ್ಯೋತಿರಾವ್ ಫುಲೆ, ಮಹರ್ಷಿ ಕರ್ವೆ, ರಾಜಾರಾಮ ಮೋಹನರಾಯ, ಭಗತ್ ಫೂಲ್ ಸಿಂಗ್ ಹಾಗೂ ದಯಾನಂದ ಸರಸ್ವತಿ ಅವರ ತ್ಯಾಗ ಮತ್ತು ಸಮರ್ಪಣಾ ಭಾವಗಳನ್ನು ಕಂಡು ಆಶ್ಚರ್ಯಚಕಿತಗಳಾದೆ. ನನ್ನ ತಾಯಿಯ ಸಮಕಾಲೀನರು ಹಾಗೂ ಅದಕ್ಕೂ ಮೊದಲಿನ ಪೀಳಿಗೆಯವರ ದುರದೃಷ್ಟಕರ ಬದುಕನ್ನು ಗಮನಿಸಿದಾಗ ದುಃಖದಿಂದ ಹನಿಗಣ್ಣಾಗುತ್ತೇನೆ. ಈ ಹಿನ್ನೆಲೆಯಲ್ಲಿ ನನಗೆ ದೊರೆತ ಕಾಲ ಹಾಗೂ ದೇಶದ ಅದೃಷ್ಟಕ್ಕಾಗಿ ಕೃತಜ್ಞಳಾಗಿದ್ದೇನೆ. ಆಗಿನ ಮಹಿಳೆಯರ ಅನೌಪಚಾರಿಕ ಶಿಕ್ಷಣ ಹಾಗೂ ವಿವೇಕ ನಮ್ಮ ಕಣಕಣದಲ್ಲಿಯೂ ತನ್ನಷ್ಟಕ್ಕೆ ತಾನೇ ತುಂಬಿಕೊಂಡಿದೆ. ಅದರ ಬಗ್ಗೆ ಅಚ್ಚರಿ ಮತ್ತು ಕುತೂಹಲ ಇದೆ. ಅವರ ಉಪಕಾರದ ಮುಂದೆ ನಾನು ವಿನಮ್ರಳಾಗಿರುವೆ. ಅವರ ಅಂದಿನ ಸಾಮೂಹಿಕ ವಿವೇಕವು ಇಂದು ನಮಗೆ ಅಪಾರ ಸಾಧ್ಯತೆಗಳನ್ನು ಒದಗಿಸಿದೆ. ಅದು ನಾವು ಏನಾಗಬೇಕು ಎಂಬ ಬಗ್ಗೆ ಈ ಕಾಲದ ಮಹಿಳೆಯರು ಹಾಗೂ ಯುವತಿಯರಿಗೆ ಸ್ಫೂರ್ತಿಯಾಗಿದೆ.

ನನ್ನ ಅತ್ಯಂತ ಆತ್ಮೀಯ ಗೆಳತಿ ಪ್ರೊ. ಸುನಂದಮ್ಮ ಅವರು ಹಿಂದೆ ಈ ಘನ ವಿಶ್ವವಿದ್ಯಾಲಯದ ಮಡಿಲಿಗೆ ಬರುವಂತೆ ಆಹ್ವಾನಿಸಿದ್ದರು. ವಿಶ್ವವಿದ್ಯಾನಿಲಯ ಪಠ್ಯೇತರ ಚಟುವಟಿಕೆಗಳ ವಿಭಾಗ ಹಾಗೂ ವಿಕಾಸ ಅಧ್ಯಯನ ವಿಭಾಗ ಆರಂಭಿಸುವ ಮೂಲಕ ತಮ್ಮ ವೃತ್ತಿ ಜೀವನ ಆರಂಭಿಸಿದ್ದ ಅವರು, ಸಹಜವಾಗಿಯೇ ಅದರೊಂದಿಗೇ ಬೆಳೆದರು. ಅವರ ಮನೆಯನ್ನು ಕಚೇರಿಯಿಂದ ಬೇರ್ಪಡಿಸುವುದು ಸಾಧ್ಯವಿರಲಿಲ್ಲ. ಇದು ಅವರ ಬದ್ಧತೆಯನ್ನು ಪ್ರತಿಫಲಿಸುತ್ತದೆ. 2003ರಲ್ಲಿಯೇ ಪಠ್ಯಪುಸ್ತಕ ಹಾಗೂ ಆಯ್ಕೆ ಆಧಾರಿತ ಪದ್ಧತಿ ಕುರಿತು ಚಿಂತನ ಮಂಥನ ನಡೆಸಲಾಗಿತ್ತು. ವಿದೇಶಗಳಲ್ಲಿನ ಹಾಗೂ ಭಾರತದಲ್ಲಿನ ವಿಶ್ವವಿದ್ಯಾಲಯಗಳಲ್ಲಿ ನಾನು ಮಾಡಿದ ಪ್ರಯೋಗಾತ್ಮಕ ಚಟುವಟಿಕೆಗಳಿಂದ ಪಡೆದ ಅನುಭವಗಳನ್ನು ಆಗ ಹಂಚಿಕೊಂಡಿದ್ದೆ. ಹಲವು ಅಡೆತಡೆಗಳ ಮಧ್ಯದಲ್ಲಿಯೂ ಕರ್ನಾಟಕ ಸರಕಾರದ ಸಹಕಾರದೊಂದಿಗೆ ಅತ್ಯುತ್ತಮ ಗುಣಮಟ್ಟದ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸುವ ಕನಸು ಸಾಕಾರಗೊಂಡಿದೆ.

ನನ್ನ ಬದುಕಿನ ಪಯಣವೂ ಹಲವು ಅಡೆತಡೆಗಳೊಂದಿಗೆ ಮುನ್ನಡೆದಿದೆ. ಪುರುಷ

ಪ್ರಾಬಲ್ಯದ ಕಾನೂನು ಪ್ರಧಾನವಾಗಿರುವ ಪರಿಸರದಲ್ಲಿ ಸ್ತ್ರೀ ಆಗಿರುವುದಕ್ಕಿಂತ ದೊಡ್ಡ ಅಡ್ಡಿ ಮತ್ತಾವುದಿದೆ? 1980ರಲ್ಲಿ 11ನೇ ತರಗತಿಯಲ್ಲಿ ಓದುವುದಕ್ಕಾಗಿ ಕರಾವಳಿಯ ಗುರುಪುರ ಗ್ರಾಮದಿಂದ ಮಂಗಳೂರಿನ ಪ್ರತಿಷ್ಠಿತ ಸೇಂಟ್ ಆಗ್ನೇಸ್ ಕಾಲೇಜಿಗೆ ಮೊದಲ ಬಾರಿಗೆ ಬಸ್‌ನಲ್ಲಿ ಪ್ರಯಾಣಿಸಿದ್ದೆ. ಮನೆಗೆ ಹಿಂತಿರುಗಿ ಬರುವವರೆಗೂ ನನ್ನ ಪಾಲಕರು ಆತಂಕದಲ್ಲಿದ್ದರು. ರಾತ್ರಿಯ ವೇಳೆಯ ಬಸ್ ಪಯಣದ ಬಗ್ಗೆ ಆಗ ಊಹೆ ಮಾಡುವುದೂ ಸಾಧ್ಯವಿರಲಿಲ್ಲ. ಸ್ವತಂತ್ರವಾಗಿ ನಾವು ಓಡಾಡುವಂತಿರಲಿಲ್ಲ. ಹೀಗಾಗಿ, ಸಮಾಜೋ-ಆರ್ಥಿಕ ಚಲನೆ ಅಥವಾ ವಿಮೋಚನೆ ಸಾಧ್ಯವಿರಲಿಲ್ಲ.

2003ರಲ್ಲಿಯೂ ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅದೇ ರೀತಿಯ ಅಡೆತಡೆ ಎದುರಿಸುತ್ತಿರುವುದನ್ನು ಗಮನಿಸಿದ್ದೆ. ಇಂದು, 'ಜ್ಞಾನಶಕ್ತಿ' ಆವರಣವು ಶಕ್ತಿಯೇ ಜ್ಞಾನವಾಗುವುದರ ಜೊತೆಗೆ ಜ್ಞಾನ ಮತ್ತು ಶಕ್ತಿಯ ಸಂಕೇತವಾಗಿದೆ. ಲೋಕ ಕಲ್ಯಾಣ ಹಾಗೂ ಸ್ವತಂತ್ರ ತತ್ವಕ್ಕಾಗಿ ಶಿವನಿಗೆ ಸಮರ್ಪಿಸಿಕೊಂಡ ಸಂತ ಕವಿಯತ್ರಿ ಅಕ್ಕ ಮಹಾದೇವಿಯ ಚೈತನ್ಯವೇ ಮೈವೆತ್ತಂತೆ ವಿಶ್ವವಿದ್ಯಾಲಯ ರೂಪುಗೊಂಡಿದೆ. ಶಿವನ ಹೊರತಾಗಿ ಅವಳು ಬೇರಾರಿಗೂ ಶರಣಾಗಲಿಲ್ಲ. ಅದು ಮಾನವನ ಚೈತನ್ಯದ ಆಂತರಿಕ ಶಕ್ತಿ ಹಾಗೂ ಸಮರ್ಪಣಾಭಾವದ ಸಂಕೇತ. ಅವಳು ಇದೇ ಪ್ರದೇಶದಲ್ಲಿದ್ದ ಬಸವಣ್ಣನ ಮಾರ್ಗದಲ್ಲಿ ನಡೆದವಳು. ಬಾಲಕನಿರುವಾಗಲೇ ಬಸವಣ್ಣ ಧಾರ್ಮಿಕ ಆಚರಣೆಯಲ್ಲಿ ತನ್ನ ಸಹೋದರಿಗೆ ಸಮಾನ ಅವಕಾಶ ನೀಡದ ಕಾರಣಕ್ಕಾಗಿ ಪಾಲಕರನ್ನೇ ಎದುರು ಹಾಕಿಕೊಂಡಿದ್ದ. ಆದುದರಿಂದಲೇ ಅನುಭಾವಿಗಳ ಪ್ರದೇಶವಾಗಿರುವ ವಿಜಯಪುರ ಹಾಗೂ ವಿಶ್ವವಿದ್ಯಾಲಯದ ಕಡೆಗೆ ವಿಶೇಷ ಗಮನ ಹರಿಸುವಂತೆ ಆಗಿದೆ.

ಶಿಕ್ಷಣದ ಮೂಲಕ ಸ್ತ್ರೀ ಸಬಲೀಕರಣದ ಧ್ಯೇಯದೊಂದಿಗೆ ಡಾ. ಸಬಿಹಾ ಅವರ ನೇತೃತ್ವದಲ್ಲಿ ವಿಶ್ವವಿದ್ಯಾಲಯವು ಮುನ್ನಡೆಯುತ್ತಿದೆ. 2016ರಲ್ಲಿ ಸಬಿಹಾ ಅವರ ನೇತೃತ್ವದಲ್ಲಿನ ದೂರದೃಷ್ಟಿ ಸಮಿತಿಯು ಉತ್ಕೃಷ್ಟತೆಯನ್ನೇ ಪ್ರಮುಖವಾಗಿ ಪರಿಗಣಿಸಿದೆ. ಅವರ ಕಲ್ಪನೆಯಂತೆ ವಿಸ್ತರಣೆ, ಪ್ರಭಾವ, ಪ್ರಕ್ರಿಯೆ ಮತ್ತು ವಸ್ತುವಿಷಯಗಳಲ್ಲಿ ಮಹಿಳಾ ಕೇಂದ್ರಿತ ವಿಶ್ವವಿದ್ಯಾಲಯಕ್ಕಿಂತಲೂ ಮುಂದೆ ಸಾಗಿ ಮಹಿಳಾಸ್ನೇಹಿ ವಿಶ್ವವಿದ್ಯಾಲಯ ರೂಪಿಸುವ ಯೋಜನೆ ರೂಪಿಸಿದೆ. ಸಬಿಹಾ ಅವರ ಜೊತೆಗಿನ ಒಡನಾಟದ ಪೈಕಿ, 1987ರಲ್ಲಿ ಖಾಸಗಿ ಕಾಲೇಜಿನ ಆವರಣದಲ್ಲಿ ಕರಾವಳಿ ಲೇಖಕಿಯರ ವೇದಿಕೆಯ ಕಲ್ಪನೆಯನ್ನು ಹುಟ್ಟು ಹಾಕಿದ ಮೊದಲ ರ್‍ಯಾಡಿಕಲ್ ಐವರಲ್ಲಿ ನಾನು ಮತ್ತು ಸಬಿಹಾ ಇಬ್ಬರೂ ಇದ್ದೆವು ಎಂಬುದು ಚೆನ್ನಾಗಿ ನೆನಪಿದೆ. ನಾನಾಗ ವಿದ್ಯಾರ್ಥಿಯಾಗಿದ್ದೆ. ನಂತರದ ದಿನಗಳಲ್ಲಿ ವೃತ್ತಿಜೀವನದಲ್ಲಿ ಎದುರಿಸಿದ ತಾಯ್ತನಕ್ಕೆ ಸಂಬಂಧಿಸಿದ ಜಡತ್ವದ ಸಂದರ್ಭದಲ್ಲಿ ಸುನಂದಮ್ಮ ಮತ್ತು ಸಬಿಹಾ ಅವರುಗಳು ಉಳಿದ ಸ್ತ್ರೀವಾದಿ ಸಹೋದರಿಯರಂತೆ ಸಹಾಯಹಸ್ತ ಚಾಚಿದ್ದರು. ಈ ನಡವಳಿಕೆಯನ್ನು ನಾನು ವಿಚಾರಗಳ ಹೊಂದಾಣಿಕೆಯ ಸಾಮ್ಯ, ಕ್ರಿಯೆ ಮತ್ತು ಮಾದರಿ ಎಂದು ನೋಡಲು ಬಯಸುತ್ತೇನೆ. ಅದು ಯಾವುದೆಂದರೆ 'ನುಡಿದಂತೆ ನಡೆಯುವುದು'. ಶೈಕ್ಷಣಿಕ ವ್ಯವಸ್ಥೆಯಲ್ಲಿ ಅದು ಅತ್ಯಗತ್ಯ ಸಾಧನ.

ಕಳೆದ ವರ್ಷ, ಹೆಸರಾಂತ ಚಿತ್ರನಟಿ ಶಾಸಕಿ ಜಯಮಾಲಾ ಅವರು 'ಕರ್ನಾಟಕದಲ್ಲಿ



ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ' ಕುರಿತು ವರದಿ ಸಿದ್ಧಪಡಿಸುವಾಗ ಸಂಶೋಧಕಿ–ಕಾರ್ಯಕರ್ತೆ ಸರಸ್ವತಿ ಅವರೊಂದಿಗೆ ಸೇರಿ ಮಹಿಳಾ ವಿಶ್ವವಿದ್ಯಾಲಯವು ಸೂಕ್ತ ಮಾಹಿತಿಯನ್ನು ಒದಗಿಸುವ ಮೂಲಕ ಸಹಕರಿಸಿದಾಗ, ಇದೇ ಸಹೋದರಿತ್ವ ಮತ್ತೆ ಅಂಕುರಿಸಿ ಹಬ್ಬಿತ್ತು. ಜಯಮಾಲಾ ಅವರ ಚಾಕಚಕ್ಯತೆ, ಕಾಳಜಿ ಮತ್ತು ಸೂಕ್ಷ್ಮ ನೋಟಗಳು ಇಲ್ಲಿಂದಲೇ ಸೂಕ್ಷ್ಮ ತಂಡವನ್ನು ರಚಿಸಿ ಆಯ್ಕೆ ಮಾಡಿತ್ತು. ವಿಶ್ವವಿದ್ಯಾನಿಲಯವು ರಾಜ್ಯಕ್ಕೆ ಇದಕ್ಕಿಂತ ಬೇರಾವ ರೀತಿಯ ಕೊಡುಗೆ ನೀಡಲು ಸಾಧ್ಯ?

ದುರ್ಬಲರಿಗೆ ಧ್ವನಿ ಒದಗಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಇಂತಹ ಮಾದರಿಯಾದ ಪಾತ್ರ ನಿರ್ವಹಿಸಿದೆ. ಉನ್ನತ ಶಿಕ್ಷಣವನ್ನು ಬಳಸಿಕೊಂಡು ಹಿಂದುಳಿದ ಸಮುದಾಯಗಳ ಹಕ್ಕುಗಳನ್ನು ಪ್ರತಿಪಾದಿಸಿದೆ. ನಿರ್ಣಾಯಕ ಅಂಕಿ ಅಂಶಗಳನ್ನು ಒದಗಿಸುವ ಮೂಲಕ ಹಿಂದುಳಿದ ಸಮುದಾಯಗಳ ಸಾಮಾಜಿಕ ಜೀವನ ಮಟ್ಟದ ಸುಧಾರಣೆಗೆ ಅನುವು ಮಾಡಿಕೊಡಲಾಗಿದೆ. ಮಹಿಳಾ ವಿಶ್ವವಿದ್ಯಾಲಯದ ಬೃಹತ್ ಯೋಜನೆಯಲ್ಲಿ ಇಂತಹ ಸಣ್ಣಮಟ್ಟ ಸಂಗತಿಗಳೂ ಒಟ್ಟಾಗಿ ಪೂರ್ಣ ಚಿತ್ರವನ್ನು ಕಲೆಹಾಕಿ ಗಮನಾರ್ಹ ಪಾತ್ರ ನಿರ್ವಹಿಸುತ್ತಿವೆ. ಯಾವುದು ವ್ಯಕ್ತಿಗತವೋ ಅದು ರಾಜಕೀಯ. ಹಾಗೆಯೇ ಅದಕ್ಕೆ ಪ್ರತಿಯಾಗಿ ಯಾವುದು ರಾಜಕೀಯವೋ ಅದು ವ್ಯಕ್ತಿಗತ ಕೂಡ. ಸಾಹಿತ್ಯ, ಭಾವತೀವ್ರತೆ ಹಾಗೂ ಸಾಮಾಜಿಕ ಸುಧಾರಣೆಗಳದು ನೇರ ಸಂಬಂಧ. ಸಾಹಿತ್ಯ, ಭಾವತೀವ್ರತೆ ಹಾಗೂ ಪೂರ್ಣ ವಿಕಾಸದ ಆದರ್ಶ ಜಗತ್ತನ್ನು ರೂಪಿಸುವುದಕ್ಕಾಗಿ ಯುಜಿಸಿಯಿಂದ ಬಂದ ಡಾ. ಪಂಕಜ್ ಮಿತ್ತಲ್ ಮತ್ತು ಅವರಂತಹ ಸಮಾನ ದೂರದೃಷ್ಟಿ ಮನಸ್ಕರು ಸಮಿತಿಯಲ್ಲಿದ್ದರು. ಸ್ತ್ರೀವಾದವು ಮಾನವೀಯತೆಯ ಮತ್ತೊಂದು ಮುಖ. ಅಲ್ಲಿನ ಮಾಯಾಕನ್ನಡಿಯಲ್ಲಿ ಕೃತಕ ಬೇಧಭಾವಗಳು ಮತ್ತು ಪಕ್ಷಪಾತಗಳು ಕಣ್ಮರೆಯಾಗಿರುತ್ತವೆ.

ಇಂದು ಪದವಿ ಪಡೆಯುತ್ತಿರುವ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಸಮ ಕುಲಾಧಿಪತಿಗಳು ನಿಮಗೆ ಪದವಿಯ ಪ್ರತಿಜ್ಞೆ ಬೋಧನೆ ಮಾಡಲಿದ್ದಾರೆ. ಆ ಮೂಲಕ ಅಧಿಕೃತವಾಗಿ ನಿಮ್ಮೊಳಗಿನ ಭೂಮಿಯಲ್ಲಿ ಮೌಲ್ಯಗಳ, ಸಾಮಾಜಿಕ ಬದ್ಧತೆಯ, ಜವಾಬ್ದಾರಿಯುತ ನಾಗರಿಕತ್ವದ ಬೀಜ ಮೊಳಕೆ ಒಡೆಯಲಿದೆ. ನೀವೆಲ್ಲರೂ ಎಲ್ಲಾ ಮಹಿಳೆಯರೂ ಹೆಮ್ಮೆ ಪಡುವಂತಹವರು. ಹಲವು ಸವಾಲುಗಳನ್ನು ಎದುರಿಸುತ್ತಲೇ ಮೊದಲ ಹೆಜ್ಜೆಗಳನ್ನಿಟ್ಟ ಮೊದಲ ತಲೆಮಾರಿನ ಪದವೀಧರರು. ನಿಮ್ಮೊಳಗಿನ ನಿರೀಕ್ಷೆಗಳನ್ನು ಪೋಷಿಸುತ್ತಲೇ ಕುಟುಂಬದವರ ಮತ್ತು ಹಿತೈಷಿಗಳ, ನಿಮ್ಮ ಗ್ರಾಮದ, ರಾಜ್ಯದ, ಭಾರತ ದೇಶದೊಳಗಿನ ನಿರೀಕ್ಷೆಗಳನ್ನು ಈಡೇರಿಸಬೇಕಿದೆ. ಆದರೆ, ನೀವು ಮಹತ್ವದ ಪಾತ್ರ ನಿರ್ವಹಿಸಬೇಕಾದ ಅಗತ್ಯವಿದೆ. ನೀವು ಏನೇ ಮಾಡಿ, ಎಲ್ಲಿಯೇ ಹೋದರೂ ಈ ಮಹಾ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ ಎಂಬುದು ನಿಮ್ಮ ಮೊದಲ ಅಸ್ಮಿತೆ ಆಗಿರುತ್ತದೆ.

ಇಂದು ಪದಕ ಹಾಗೂ ಪ್ರಶಸ್ತಿ ಪದವಿಗಳೊಂದಿಗೆ ವಿಶ್ವವಿದ್ಯಾಲಯದಿಂದ ಬೀಳ್ಕೊಳ್ಳುತ್ತಿರುವ ಸಾಧಕ ವಿದ್ಯಾರ್ಥಿಗಳ ಮೇಲೆ ಗುರುತರವಾದ ಕರ್ತವ್ಯ ನಿರ್ವಹಿಸಬೇಕಾದ ಹೊಣೆಗಾರಿಕೆಯಿದೆ. ನಿಮ್ಮ ಸುದೀರ್ಘ ಪಯಣದಲ್ಲಿ ಇದು ಕೇವಲ

ಆರಂಭ ಮಾತ್ರ ಎಂದು ನಿಮಗೆ ಹೇಳಬಯಸುತ್ತೇನೆ. ನಿಮ್ಮ ಬೆಳವಣಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೀರಿ ಎಂದು ನಾನು ನಂಬುತ್ತೇನೆ ಮತ್ತು ಅದಕ್ಕೆ ಪ್ರತಿಯಾಗಿ ದೇಶ ಮತ್ತು ವಿಶ್ವವಿದ್ಯಾನಿಲಯಕ್ಕೆ ಮಹತ್ವದ ಕೊಡುಗೆ ನೀಡುತ್ತೀರಿ ಎಂದೂ ಭಾವಿಸುತ್ತೇನೆ. ನೀವು ಅಧ್ಯಯನ ನಡೆಸಿದ ವಿಭಾಗಗಳು, ಅಲ್ಲಿನ ಸೇವಕ, ಭದ್ರತಾ ಕಾವಲುಗಾರ, ಶೇಂಗಾ ಮಾರುವ ಮಹಿಳೆ, ಭಿಕ್ಷುಕ ಹೀಗೆ ಇವರೆಲ್ಲರೂ ನಿಮ್ಮ ಪದವೀ ಅಧ್ಯಯನದ ಯಶಸ್ಸಿನ ಭಾಗವೇ ಆಗಿದ್ದರು.

ಬೇರೆ ದೇಶಕ್ಕೆ ಸೇರಿದ ವ್ಯಕ್ತಿಯೊಂದಿಗೆ ವಿವಾಹ ಆಗುವ ಸಂದರ್ಭದಲ್ಲಿ ನಾನೆಷ್ಟು ಆತಂಕ, ಅನಿಶ್ಚಿತತೆಗೆ ಒಳಗಾಗಿದ್ದೆ ಎಂಬುದು ಇನ್ನೂ ನೆನಪಿದೆ. ನನ್ನ ಶಿಕ್ಷಣಕ್ಕಾಗಿ ದೇಶವು ಮಾಡಿದ ಹಣದ ಬಾಕಿಯನ್ನು ನಾನು ತೀರಿಸಿದ್ದೇನೆಯೇ? ನಾನು ಕಲಿತ ಮಾತೃಶಿಕ್ಷಣ ಸಂಸ್ಥೆಯ, ನನ್ನ ಶಾಲೆಯ, ನನ್ನ ಒಡಹುಟ್ಟಿದವರ ಹಾಗೂ ಪಾಲಕರ ಬಗೆಗಿನ ನನ್ನ ಹೊಣೆಗಾರಿಕೆ ನಿರ್ವಹಿಸಿದ್ದೇನೆಯೇ? ನನ್ನ ಜೀವನದ ಸ್ವಲ್ಪ ಭಾಗ ಮಾತ್ರ ಭಾರತದಾಚೆ ಕಳೆಯಲು ಸಾಧ್ಯ ಎಂಬ ಬಗ್ಗೆ ನನಗೆ ಸ್ಪಷ್ಟವಾದ ಅರಿವಿತ್ತು. ನಾನು ಅಲ್ಲಿ ವಾಸಿಸುತ್ತಿರುವಾಗಲೂ ನಿರಂತರವಾಗಿ ಚಿಂತನೆ- ವಿಚಾರ ಮಾಡುತ್ತಿದ್ದೆ: ಇಲ್ಲಿಯ ಎಲ್ಲ ರಸ್ತೆಗಳು ಚೆನ್ನಾಗಿರುವುದಾದರೆ, ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಉತ್ತಮ ಗುಣಮಟ್ಟದ್ದವುಗಳಾಗಿರಬಹುದಾದರೆ, ಇಲ್ಲಿನ ಮಹಿಳೆಯರು ಸೂಕ್ಷ್ಮ ಬುದ್ಧಿಯುಳ್ಳವರು ಆಗಿರಬಹುದಾದರೆ, ನಮ್ಮ ದೇಶದೊಳಗಿನ ರಸ್ತೆಗಳು, ನಮ್ಮ ವಿಶ್ವವಿದ್ಯಾಲಯಗಳು, ನಮ್ಮ ಮಹಿಳೆಯರು ಯಾಕೆ ಹಾಗಿಲ್ಲ? ಎಂಬ ಪ್ರಶ್ನೆಗಳು–ಯೋಚನೆಗಳು ಬರುತ್ತಿದ್ದವು. ಆದುದರಿಂದ ವಿನೂತನ ಯೋಜನೆಗಳನ್ನು ಕೊಡುಗೆಯಾಗಿ ನೀಡಲು ನಿರ್ಧರಿಸಿದೆ. ನೀವು ಕೂಡ ಆಯ್ಕೆಯ ಪ್ರಶ್ನೆ ಎದುರಾದಾಗ ಆತ್ಮಶೋಧನೆಯ ಹಾದಿಯನ್ನು ಆಯ್ಕೆ ಮಾಡಿಕೊಳ್ಳುತ್ತೀರಿ ಎಂಬ ಭರವಸೆ ನನಗಿದೆ.

**ವಿಶ್ವವಿದ್ಯಾಲಯದ ವೈಶಿಷ್ಟ್ಯ ಏನು?**

'ವಿಶ್ವವಿದ್ಯಾಲಯವು ಒಂದು ಸಮಾಜ; ಅಲ್ಲಿ, ವಿದ್ಯಾರ್ಥಿ ಜೀವನದ ಅತ್ಯುನ್ನತ ಮಾದರಿಯ ಘನತೆ ಹಾಗೂ ಪೂರ್ಣತೆಗಳನ್ನು ಗ್ರಹಿಸುತ್ತಾರೆ. ಚರ್ಚಾ ಸಂಸ್ಕೃತಿಯ ಮೂಲಕ ಸಮಗ್ರ ಸತ್ಯದ ಅರಸುವಿಕೆ ನಡೆಸುತ್ತಾನೆ" ಎಂದು 1854ರಲ್ಲಿ ಜಾನ್ ಹೆನ್ರಿ ನ್ಯೂಮನ್ ಅವರು ತಮ್ಮ ಶಾಸ್ತ್ರೀಯ ಕೃತಿ 'ದಿ ಐಡಿಯಾ ಆಫ್ ಯುನಿವರ್ಸಿಟಿ'ದಲ್ಲಿ ಹೇಳುತ್ತಾರೆ.'ವಿಶ್ವವಿದ್ಯಾಲಯ ಎಂಬ ಸ್ಥಳದಲ್ಲಿ. ಎಲ್ಲ ದಿಕ್ಕಿನಿಂದಲೂ ವಿದ್ಯಾರ್ಥಿಗಳು ಪ್ರತಿಯೊಂದು ಬಗೆಯ ಜ್ಞಾನ ಪಡೆಯುವುದಕ್ಕಾಗಿ ಆಗಮಿಸಿರುತ್ತಾರೆ. ಆ ಸ್ಥಳವು ವಿಚಾರಗಳ ಸಂವಹನ ಮತ್ತು ಪ್ರಸಾರ ಮಾಡುವ ತಾಣ; ಅಲ್ಲಿಯೇ ಪ್ರಶ್ನೆ ಕೇಳುವ, ಚಿಂತನೆ ನಡೆಸುವ ಮತ್ತು ವಿಚಾರಿಸುವ ಶಕ್ತಿಯು ಮುನ್ನೆಲೆಗೆ ಬರುತ್ತದೆ. ಶೋಧಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಅವುಗಳನ್ನು ಖಚಿತ ಪಡಿಸಲಾಗುತ್ತದೆ. ಲೋಪದೋಷಗಳನ್ನು ಜಾಹೀರು ಮಾಡಲಾಗುತ್ತದೆ. ಬೌದ್ಧಿಕ ಮುಖಾಮುಖಿಯಿಂದ, ಜ್ಞಾನದ ಜೊತೆಗಿನ ಜ್ಞಾನದ ತಾಕಲಾಟವು ಏರ್ಪಡುತ್ತದೆ. ಆದ್ದರಿಂದ ವೈಚಾರಿಕ ಚಿಂತನೆ ನಡೆಸುವುದಕ್ಕಾಗಿ ಪರಿಶುದ್ಧ ಮತ್ತು ಸ್ಪಷ್ಟ ವಾತಾವರಣ ನಿರ್ಮಿಸಲಾಗಿರುತ್ತದೆ. ಅದನ್ನೇ ವಿದ್ಯಾರ್ಥಿಗಳು ಕೂಡ ಉಸಿರಾಡುತ್ತಿರುತ್ತಾರೆ'.ಜ್ಞಾನ ಹಾಗೂ ಆದರ್ಶಗಳ



ಸರಿಯಾದ ಹಾಗೂ ಸಂಪೂರ್ಣ ಸಮತೋಲನ ಇರಬೇಕು ಎನ್ನುವ ನ್ಯೂಮನ್ ಪ್ರಕಾರ ಕಲಿಕೆಯು ಕಲೆ ಮತ್ತು ವಿಜ್ಞಾನ.

ಭಾರತದ ಅಂದಿನ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ಪಂಜಾಬ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ 2017ರ ಮಾರ್ಚ 25 ರಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ "ಸಂಧಿಕಾಲ, ಸಂಕ್ರಮಣ ಕಾಲಘಟ್ಟದ ಸಮಾಜದ ರಾಜಕೀಯ ಸ್ಥಿರತೆ ಹಾಗೂ ಸಮಾಜೋ-ಆರ್ಥಿಕ ಅಭಿವೃದ್ಧಿ, ಅದರಲ್ಲೂ ವಿಶೇಷವಾಗಿ, ಅಂತರ್ ಜನಾಂಗೀಯ ಸಂಬಂಧಗಳು, ಅಲ್ಪ ಸಂಖ್ಯಾತರ ರಕ್ಷಣೆ, ರಾಷ್ಟ್ರ ನಿರ್ಮಾಣ, ಉತ್ತಮ ಆಡಳಿತದಂತಹ ಕ್ಷೇತ್ರಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಸವಾಲುಗಳನ್ನು ಎದುರಿಸಲು ವಿಶ್ವವಿದ್ಯಾಲಯಗಳು ನೆರವಾಗಬೇಕು" ಎಂದು ಹೇಳಿದ್ದರು. ನ್ಯೂಮನ್ ನ 'ಐಡಿಯಾ ಆಫ್ ಯೂನಿವರ್ಸಿಟಿ' ಕೃತಿಯನ್ನು ಉಲ್ಲೇಖಿಸುತ್ತಾ "19ನೇ ಶತಮಾನದ ವಿಶ್ವವಿದ್ಯಾಲಯಗಳು ಕೇವಲ ತಮ್ಮಷ್ಟಕ್ಕೆ ತಾವೇ ರೂಪಾಂತರಗೊಂಡವುಗಳಲ್ಲ. ಕೇವಲ ಬದಲಾವಣೆಯ ವೇಗವರ್ಧಕಗಳು ಮಾತ್ರವಾಗಿರದೆ ಸಮಾಜದ ಎಲ್ಲ ವರ್ಗಗಳು ಸಮಾನ ಅವಕಾಶಗಳೊಂದಿಗೆ ಬೆಳೆಯುವುದಕ್ಕಾಗಿ ಸಾಧ್ಯತೆಗಳ ಸಮಾನತೆ ಹಾಗೂ ಪ್ರಜಾಪ್ರಭುತ್ವೀಕರಣದ ವಾಹಕಗಳಾಗಿದ್ದವು" ಎಂದು ಪ್ರತಿಪಾದಿಸಿದ್ದರು.

ಅಂದಿನ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು, 'ಉನ್ನತ ಶಿಕ್ಷಣದ ಆವರಣಗಳಲ್ಲಿ ಮುಕ್ತ ಮಾತುಕತೆ ಮತ್ತು ಉದಾರವಾದಿ ವಿಚಾರಗಳ ಚರ್ಚೆಗೆ ಅವಕಾಶ ಇರಬೇಕು' ಎಂಬ ಮಾತನ್ನು 2017ರ ಏಪ್ರಿಲ್ 1 ರಂದು ಕೋಲ್ಕತ್ತಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಘಟಿಕೋತ್ಸವದ ಭಾಷಣದಲ್ಲಿ ಪುನರುಚ್ಚರಿಸಿದ್ದರು. "ಭಾರತದ ವಿಶ್ವವಿದ್ಯಾಲಯಗಳನ್ನು ರಾಜಕೀಯ ತಿಕ್ಕಾಟ ಹಾಗೂ ಗೊಂದಲಗಳ ತಾಣವಾಗಿಸುವ ಬದಲು ಅಲ್ಲಿ ಸಮಾಜೋ–ರಾಜಕೀಯ ಮಟ್ಟದಲ್ಲಿ ಮುಕ್ತ ಮಾತುಕತೆ, ಚರ್ಚೆ ಹಾಗೂ ಸಂವಾದಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಬೇಕು. ಸ್ಥಾಪಿತ ಆದರ್ಶಗಳ ಕುರಿತಾದ ವಿರೋಧಗಳನ್ನು ಹತ್ತಿಕ್ಕುವ ಬದಲು ಉದಾರತ್ವ ಮತ್ತು ವೈವಿಧ್ಯಮಯ ಚಿಂತನೆ ವಿಚಾರಗಳಿಗಾಗಿ ವಿಶ್ವವಿದ್ಯಾಲಯಗಳು ಹೆಸರಾಗಬೇಕು" ಎಂದು ಅವರು ಒತ್ತಿ ಹೇಳಿದ್ದರು.

ಭಾರತದ ವಿಶ್ವವಿದ್ಯಾನಿಲಯಗಳ ಆಶಯಗಳಲ್ಲಿ ಬದಲಾವಣೆಯ ಅಗತ್ಯವಿದೆ ಎಂಬ ವಿಷಯಕ್ಕೆ ಆದ್ಯತೆ ನೀಡುವ ಶರ್ಮಾ ಎಸ್ ಹಾಗೂ ನಾಯರ್ ಪಿ (2017) ಅವರ ವಾದ ಹೀಗಿದೆ:

"ಭಾರತದ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳ ಬೌದ್ಧಿಕ ಸ್ವಾತಂತ್ರ್ಯಕ್ಕೆ ಅವಕಾಶ ಕಲ್ಪಿಸುವುದರ ಆದ್ಯತೆಯನ್ನು ಪುನರುಚ್ಚರಿಸಬೇಕು. ಕಲಿಯುವಾತನ ಬದುಕು ಶಿಷ್ಯವೇತನ ಆಧರಿಸಿರುತ್ತದೆ ಮತ್ತು ಪಡೆದ ಶಿಷ್ಯವೇತನ ಬಯಸುವ ತ್ಯಾಗಕೆಯ ಸಮರ್ಪಣೆಗೆ ಅವನು/ ಅವಳು ಬದ್ಧರಾಗಿರಬೇಕು ಎಂಬುದು ವಿಶ್ವವಿದ್ಯಾನಿಲಯದ ವ್ಯಾಖ್ಯಾನ ಹಾಗೂ ವಿವರಣೆ. ವಿಶ್ವವಿದ್ಯಾಲಯಗಳು ಜ್ಞಾನದ ಮಳಿಗೆಗಳಲ್ಲ. ಬದಲಿಗೆ ಅವು, ಕೆಲಸ ಹಾಗೂ ವಿರಾಮಗಳು ಜೊತೆ ಜೊತೆಯಲ್ಲಿಯೇ ಸಾಗುವ, ಉತ್ತಮ ಗುಣಮಟ್ಟದ ಮನುಷ್ಯರನ್ನು ರೂಪಿಸುವ ಮತ್ತು ನಿರ್ಮಿಸುವ ತಾಣಗಳು. ಭಾರತೀಯ

ವಿದ್ಯಾರ್ಥಿಗಳು ಕಲಿಕೆಯ ಕಾರಣಕ್ಕಾಗಿ ಆದರ್ಶಗಳ ಹೊಂದಾಣಿಕೆಗಳ ಬದಲಾಗಿ ಸಮರ್ಪಣೆಯ ಸುತ್ತ ರೂಪುಗೊಂಡ ಬೌದ್ಧಿಕ ಜೀವನ ರೂಪಿಸಿಕೊಳ್ಳಬೇಕು".

ವಿಶ್ವವಿದ್ಯಾಲಯಗಳಲ್ಲಿ ಏನಿರಬೇಕು ಅಥವಾ ಏನಿರಬಾರದು ಎಂಬುದರ ಕುರಿತಂತೆ ಚರ್ಚಿಸಿದ ನ್ಯೂಮನ್‌ನ 'ಐಡಿಯಾ ಆಫ್ ಯುನಿವರ್ಸಿಟಿ'ಯನ್ನು ಪುನರ್ ಪರಿಶೀಲಿಸಲು ಇಂದು ಸಕಾಲ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅದರಲ್ಲೂ ವಿಶೇಷವಾಗಿ ನ್ಯೂಮನ್ ಪರಿಕಲ್ಪನೆಯ ಪ್ರಕಾರ ವಿಶ್ವವಿದ್ಯಾಲಯಗಳು ಕವಿಗಳ, ಅಮರ ಲೇಖಕರ, ಶಾಲೆಗಳ ಸಂಸ್ಥಾಪಕರ, ವಸಾಹತು ನಾಯಕರು, ರಾಷ್ಟ್ರಗಳನ್ನು ಜಯಿಸುವವರನ್ನು ಸೃಷ್ಟಿಸುವ ಸ್ಥಳವಲ್ಲ. ಅಥವಾ ಅರಿಸ್ಟಾಟಲ್, ನ್ಯೂಟನ್, ನೆಪೋಲಿಯನ್, ವಾಷಿಂಗ್ಟನ್, ರಾಫೆಲ್ಸ್ ಅಥವಾ ಷೇಕ್ಸ್‌ಪಿಯರ್ ಅವರಂತಹವರನ್ನು ಸೃಷ್ಟಿಸುವ ಭರವಸೆ ನೀಡುವ ತಾಣಗಳಲ್ಲ ಎಂಬುದು ಆತನ ಅಭಿಪ್ರಾಯವಾಗಿತ್ತು. ಬದಲಿಗೆ ಅದು ಸಮಾಜದ ಬೌದ್ಧಿಕ ಮನೋಭಾವ ಬೆಳೆಸುವ ತಾಣ ಎಂದು ಗ್ರಹಿಸಲಾಗಿತ್ತು. ಸಾರ್ವತ್ರಿಕ ಮನಸ್ಸುಗಳ ವಿಕಾಸ, ರಾಷ್ಟ್ರೀಯ ಸದಭಿರುಚಿಯ ಶುದ್ಧೀಕರಣ, ಜನಪ್ರಿಯ ಉತ್ಸಾಹ-ಸಂಭ್ರಮಗಳಿಗೆ ನಿಜವಾದ ನೀತಿಗಳನ್ನು ಒದಗಿಸುವುದು, ಜನಪ್ರಿಯ ಬಯಕೆಗಳಿಗೆ ಗುರಿಯನ್ನು ನಿಗದಿಗೊಳಿಸುವುದು, ಕಾಲದ ವಿಚಾರಗಳ ಉನ್ನತೀಕರಣ. ವಿದ್ಯಾರ್ಥಿಗಳು ತಮ್ಮ ಜನಾಂಗೀಯ, ಧಾರ್ಮಿಕ, ಸೈದ್ಧಾಂತಿಕ ಅಥವಾ ಭಾಷಿಕ ಅನನ್ಯತೆಗಳೇನೇ ಇದ್ದರೂ ಸ್ಪಷ್ಟ ಮತ್ತು ಪರಿಶುದ್ಧ ಗಾಳಿಯನ್ನು ಉಸಿರಾಡುವಂತೆ ಮಾಡುವ ತಾಣ.

ನ್ಯೂಮನ್ ಮಾದರಿಯು ಬೌದ್ಧಿಕ ಮತ್ತು ನೈತಿಕತೆಯ ಆಧಾರದ ಮೇಲೆ ಸಭ್ಯ ಮನುಷ್ಯರನ್ನು ರೂಪಿಸುವ ಮತ್ತು ಯಾವುದೇ ರೀತಿಯ ನೋವನ್ನು ಉಂಟು ಮಾಡದವರನ್ನು ರೂಪಿಸುವದಾಗಿದೆ ಎಂದು ಉಳಿದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಇದು ಉನ್ನತ ಶಿಕ್ಷಣದಿಂದ ಪ್ರತಿಫಲಾಪೇಕ್ಷೆ ಬಯಸುವವರಿಂದ ಟೀಕೆಗೂ ಒಳಗಾಯಿತು.

ಜರ್ಮನಿಯಲ್ಲಿ ಹಮ್‌ಬೋಲ್ಡ್ ಅವರು ಅಭಿವೃದ್ಧಿಪಡಿಸಿದ ಜ್ಞಾನೋದಯ ಮಾದರಿಯಲ್ಲಿ ಪ್ರಾಧ್ಯಾಪಕರಿಗೆ ಮತ್ತು ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆ. ಶ್ರೇಷ್ಠತೆಯ ಗುರಿಯೊಂದಿಗೆ ಎಲ್ಲ ಪಾಲುದಾರರ ನಿರೀಕ್ಷೆಗಳನ್ನು ಪೂರೈಸುವುದೇ ಆಧುನಿಕ ವಿಶ್ವವಿದ್ಯಾಲಯಗಳ ಕೆಲಸ. ಅವು ಸಹಿಷ್ಣುತೆ ಅಭಿಪ್ರಾಯ ಹಾಗೂ ದೃಷ್ಟಿಕೋನಗಳನ್ನು ಗೌರವಿಸುವುದಕ್ಕೆ ಆದ್ಯತೆ ನೀಡುತ್ತವೆ. ಆದಾಗ್ಯೂ, ನ್ಯೂಮನ್‌ನ ಆದರ್ಶಗಳಾದ ಸತ್ಯ, ಕಲಿಕೆ ಮತ್ತು ನಂಬಿಕೆಗಳು ಪ್ರಧಾನವಾಗಿಯೇ ಉಳಿಯುತ್ತವೆ.

**ಈ ಸಂಕಥನದಲ್ಲಿ ಮಹಿಳೆ ಎಲ್ಲಿದ್ದಾಳೆ?**

ಆಗ ವಿಶ್ವವಿದ್ಯಾಲಯದ ಕಕ್ಷೆಗೆ ಮಹಿಳೆಯು ಅಪರಿಚಿತಳಾಗಿದ್ದರಿಂದ ನ್ಯೂಮನ್‌ನು ಸಂಭಾವಿತ ಪುರುಷ ಬುದ್ಧಿಜೀವಿ ಬಗ್ಗೆ ಮಾತನಾಡುತ್ತಾನೆ. 1608ರಲ್ಲಿ ಮೊದಲ ಬಾರಿಗೆ ಸ್ಪೇನ್‌ನಲ್ಲಿ ಮಹಿಳೆಯು ಉನ್ನತ ಶಿಕ್ಷಣ ಕ್ಷೇತ್ರ ಪ್ರವೇಶಿಸಿದಳು. 18ನೇ ಶತಮಾನದಲ್ಲಿ ಯುಎಸ್‌ಎ, ಮೊದಲ ಬಾರಿಗೆ ಮಹಿಳೆಯರ ಉನ್ನತ ಶಿಕ್ಷಣದ



ವಿಭಾಗ ತೆರೆಯಿತು. ಭಾರತದಲ್ಲಿ ಪಾಶ್ಚಾತ್ಯ ಕ್ರಿಶ್ಚಿಯನ್ ಮಿಷನರಿಗಳು 1818ರಲ್ಲಿ ಮೊದಲ ಬಾರಿಗೆ ಬಾಲಕಿಯರಿಗಾಗಿ ಶಾಲೆ ಆರಂಭಿಸಿದರು. 1882ರಲ್ಲಿ ಬಾಂಬೆ ವಿಶ್ವವಿದ್ಯಾಲಯವು ಮಹಿಳೆಯರ ಉನ್ನತ ಶಿಕ್ಷಣಕ್ಕೆ ಅನುಮತಿ ನೀಡಿತು. 1875ರ ವೇಳೆಗೆ ಮದ್ರಾಸ್ ಮೆಡಿಕಲ್ ಕಾಲೇಜ್ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿತು. 1870ರಲ್ಲಿ ಕೊಲ್ಕತ್ತಾದಲ್ಲಿ ಸ್ಥಾಪಿತವಾದ ಬೆಥುನೆ ಬಾಲಕಿಯರಿಗಾಗಿ ಶಾಲೆ ತೆರೆಯಿತು. 1883ರಲ್ಲಿ ಭಾರತವು ತನ್ನ ಮೊದಲ ಮಹಿಳಾ ಪದವೀಧರೆಯನ್ನು ಕಂಡಿತು. 1871ರಲ್ಲಿ ಮಹಿಳಾ ಶಿಕ್ಷಕರ ತರಬೇತಿ ಸಂಸ್ಥೆ ಸ್ಥಾಪಿಸಲಾಯಿತು. ಪ್ರಪ್ರಥಮ ಮಹಿಳಾ ವಿಶ್ವವಿದ್ಯಾಲಯವು ಟೋಕಿಯೋದಲ್ಲಿ ಆರಂಭಗೊಂಡಿತು. ಅದರಿಂದ ಸ್ಫೂರ್ತಿ ಪಡೆದ ಮಹರ್ಷಿ ಕರ್ವೆ ಅವರು ಭಾರತದಲ್ಲಿಯೂ ಮೊದಲ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಿದರು. ಕಳೆದ ಒಂದು ವರ್ಷದ ಹಿಂದೆ ಎಸ್‌ಎನ್‌ಡಿಟಿ ಮಹಿಳಾ ವಿಶ್ವವಿದ್ಯಾಲಯವು ತನ್ನ ಶತಮಾನೋತ್ಸವ ಆಚರಿಸಿತು. ಹಿಂದೂ ವಿಧವೆಯ ದುಸ್ಥಿತಿಯಿಂದ ತಲ್ಲಣಗೊಂಡಿದ್ದ ಗಣಿತದ ಪ್ರಾಧ್ಯಾಪಕ ಕರ್ವೆ ಅವರು ವಿಧವೆಯರು ಶಿಕ್ಷಣ ಕ್ಷೇತ್ರಕ್ಕೆ ಮರಳಿ ಬರುವಂತೆ ಮನ ಒಲಿಸಿದರು. ಈ ಕಾಳಜಿಯ ಬಗ್ಗೆ ಆಗ ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿ ಮೆಚ್ಚಿ ಪತ್ರಿಕಾ ಲೇಖನ ಪ್ರಕಟಿಸಿದ್ದರು. ಮೊದಲು ಕೇವಲ ಐವರು ಮಹಿಳಾ ಪದವೀಧರರು ಇದ್ದರೆ ಈಗಿನ ಘಟಿಕೋತ್ಸವವು 15000 ಮಹಿಳಾ ಪದವೀಧರರಿಗೆ ಸಾಕ್ಷಿಯಾಗಿದೆ. ಇಂದು ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಕೇವಲ 6000 ವಿದ್ಯಾರ್ಥಿನಿಯರಿದ್ದರೆ, ಎಸ್‌ಎನ್‌ಡಿಟಿಯಲ್ಲಿ 70000 ವಿದ್ಯಾರ್ಥಿನಿಯರಿದ್ದಾರೆ. ಇಂದು ಭಾರತದಲ್ಲಿ 14 ಮಹಿಳಾ ವಿಶ್ವವಿದ್ಯಾಲಯಗಳು ಹಾಗೂ ಅಸಂಖ್ಯಾತ ಮಹಿಳಾ ಕಾಲೇಜುಗಳಿವೆ. ಅವು ಶಾಲೆಗಳಾಗಿ ಇಲ್ಲವೇ ಕಾಲೇಜುಗಳಾಗಿ ವೈವಿಧ್ಯಮಯ ರೀತಿಯಲ್ಲಿ ವಿಕಾಸವನ್ನು ಹೊಂದಿವೆ.

'ಕತ್ತಲನ್ನು ದೂಷಿಸುವುದಕ್ಕಿಂತ ದೀಪವನ್ನು ಬೆಳಗಿಸುವುದು ಲೇಸು' ಎಂಬ ಮಹರ್ಷಿ ಕರ್ವೆ ಅವರ ತತ್ವವೇ ಮೈವೆತ್ತಂತೆ ಇರುವ ಅಕ್ಕಮಹಾದೇವಿ ವಿಶ್ವವಿದ್ಯಾಲಯವೇ ಒಂದು ವಿಶೇಷ. ಈ ವಿಶ್ವವಿದ್ಯಾಲಯ ಉಂಟು ಮಾಡಿದ ಪರಿಣಾಮವು ಹಲವು ಪದವೀಧರರ ಮೂಲಕ ಸ್ಪಷ್ಟವಾಗಿ ಕಾಣಿಸುತ್ತಿದೆ. ಮಹಿಳೆಯರಿಗೆ ಶಿಕ್ಷಣ ಒದಗಿಸುವುದರ ಮಹತ್ವವನ್ನು ಎತ್ತಿ ಹಿಡಿದಿದೆ. ಕಲಿತ ಮಹಿಳೆಯು ಬದುಕಿನ ದಾರಿಗೆ ವೈವಿಧ್ಯತೆಯನ್ನು ತುಂಬುತ್ತಾಳೆ. ಲೋಹಿಯಾ ಅವರು ಹೇಳಿದಂತೆ, ಸುಶಿಕ್ಷಿತ ಮಹಿಳೆಯು ಸಾರ್ವತ್ರಿಕ ಬದುಕಿನಿಂದ ಮನೆಗೆ ಹೊಸ ಆಯಾಮ ನೀಡುತ್ತಾಳೆ. ಅವಳ ಆಯ್ಕೆಯಲ್ಲಿ ದೃಢತೆ, ಸ್ಪಷ್ಟತೆ, ಸ್ವತಂತ್ರ ನಿಲುವು ಹಾಗೂ ಖಚಿತ ವಿಶ್ವಾಸಾರ್ಹತೆ ಇರುವುದನ್ನು ನಾವೆಲ್ಲ ಒಪ್ಪುತ್ತೇವೆ. ಅವಳು ಸರಿ ಸಮಾನವಾಗಿ ನಿಲ್ಲುತ್ತಾಳೆ, ಮನಸ್ಸಿನಲ್ಲಿ ಇರುವುದನ್ನೇ ದಾಖಲಿಸುತ್ತಾಳೆ, ನೀತಿ-ನಿಯಮಗಳ ಮೇಲೂ ಪ್ರಭಾವ ಬೀರಬಲ್ಲಳು. ಸಾರ್ವತ್ರಿಕ ಜೀವನದಲ್ಲಿ ಪಾಲ್ಗೊಳ್ಳುತ್ತಾಳೆ, ಸಾಮಾಜಿಕ ಜೀವನದ ಜೊತೆಗೆ ಇಡೀ ತಲೆಮಾರಿನ ಮೇಲೂ ಪರಿಣಾಮ ಬೀರುತ್ತಾಳೆ.

**ಅಸಂಖ್ಯಾತ ಉನ್ನತ ಶಿಕ್ಷಣ ವಂಚಿತ ಮಹಿಳೆಯರು**

ಸತತ ಪ್ರಯತ್ನಗಳ ಹೊರತಾಗಿಯೂ ಸಮಾನ ಉನ್ನತ ಶಿಕ್ಷಣದಿಂದ ಮಹಿಳೆಯರು ದೂರವೇ ಉಳಿದಿದ್ದಾರೆ. ವಿಶ್ವಸಂಸ್ಥೆಯ ಪ್ರಮುಖ ಭಾಗವೇ ಆದ ಯುನೆಸ್ಕೋ, ಕೆಲವು

ಆಸಕ್ತಿದಾಯಕ ಸಂಗತಿಗಳನ್ನು ದಾಖಲಿಸಿದೆ. ಸಮಾಜದ ಸಮಗ್ರ ಅಭಿವೃದ್ಧಿ ಆದಾಗ ಮಾತ್ರ ಮಹಿಳೆಗೆ ಸಾಮಾಜಿಕ ನ್ಯಾಯದ ವಿಶ್ವಾಸ ಬರುತ್ತದೆ. ಆದರೂ, ಸಾಮಾಜಿಕ ಅಭಿವೃದ್ಧಿಯ ಎಲ್ಲ ದಾರಿಗಳಲ್ಲಿಯೂ ಅವಳು ಭಾಗಿ ಆಗುವುದಕ್ಕಾಗಿ ಕಾನೂನು ಹಾಗೂ ನೀತಿ ನಿಯಮಗಳ ಬೆಂಬಲ ಅಗತ್ಯ. ಉನ್ನತ ಶಿಕ್ಷಣ ದೊರೆಯುವಂತೆ ಮಾಡುವುದು ಮತ್ತು ಆ ನಂತರವೂ ನಾಯಕತ್ವ ವಹಿಸುವ ಅವಕಾಶ ದೊರೆಯುವುದು ಮತ್ತು ನಿರ್ಧಾರ ಮಾಡುವ ಹಂತ ತಲುಪುವುದು ಒಂದು ಬಹಳ ದೂರದ ವಾಸ್ತವವಾಗಿ ಕಾಣುತ್ತದೆ.

ಲಿಂಗಾಧರಿತ ಒಳಗೊಳ್ಳುವ ಸಂಸ್ಕೃತಿ, ಸಬಲೀಕರಣದ ಉದ್ದೇಶದ ಅರಿವು, ಸಮಾನತೆ, ಸಹಕಾರ, ಸ್ಥಿರತೆ ಹಾಗೂ ಭದ್ರತೆಗಳು ಮಾತ್ರ ಮಹಿಳೆಯರಿಗೆ ಶಾಂತಿ–ನೆಮ್ಮದಿ ಹಾಗೂ ವಿಕಾಸವನ್ನು ತಂದು ಕೊಡುತ್ತವೆ. ಆದುದರಿಂದ, ಎಲ್ಲ ರೀತಿಯ ತಾರತಮ್ಯವನ್ನು ಹೋಗಲಾಡಿಸುವುದರ ಪರವಾಗಿ ಒಪ್ಪಂದ ಮಾಡಲಾಗಿತ್ತು. 1995ರಲ್ಲಿ ಬೀಜಿಂಗ್‌ನಲ್ಲಿ ಗುರುತಿಸಿದ ಸಮಸ್ಯೆಗಳು ಇಂದಿಗೂ ವಿಶ್ವದ ವಿವಿಧ ಕಡೆಗಳಲ್ಲಿ ಮಾಯದ ಗಾಯಗಳಾಗಿಯೇ ಉಳಿದಿವೆ. ಬಡತನ, ಹಿಂಸೆ, ಸಮಾಜಕ್ಕೆ ಮಹಿಳೆಯರ ಕೊಡುಗೆಯನ್ನು ಗುರುತಿಸದೇ ಇರುವುದು, ಕೊಡುಗೆಯ ಅಸಮರ್ಪಕ ಪರಿಗಣನೆ, ಶಸ್ತ್ರಾಸ್ತ್ರ, ಸಂಘರ್ಷ ಹಾಗೂ ಸಮಾಜದ ಶಕ್ತಿಕೇಂದ್ರಗಳಲ್ಲಿನ ಅಸಮಾನತೆ ಈ ಅಂಶಗಳೂ ಮಹಿಳೆಯರ ಪ್ರಗತಿಗೆ ಅಡ್ಡಿಯಾಗಿವೆ ಹಾಗೂ ಅದು ಕ್ರೂರ ಅನ್ಯಾಯದಲ್ಲಿ ಪರ್ಯವಸಾನಗೊಳ್ಳುತ್ತಿದೆ. ಜಾಗತಿಕ ಮಾನವ ಅಭಿವೃದ್ಧಿ ವರದಿಯಲ್ಲಿ ಅದಕ್ಕೆ ಹಲವು ಆಧಾರಗಳನ್ನು ಪ್ರಸ್ತಾಪಿಸಲಾಗಿದೆ.

- ಜಗತ್ತಿನಲ್ಲಿ ಶೇ. 66ರಷ್ಟು ಮಹಿಳೆಯರು ಅನಕ್ಷರಸ್ಥರು.
- ಆಫ್ರಿಕಾದ ಸಬ್ ಸಹರಾದಲ್ಲಿ ಪುರುಷ ಪದವೀಧರರಿಗೆ ಹೋಲಿಸಿದರೆ ಕೇವಲ ಶೇ.33ರಷ್ಟು ಮಹಿಳೆಯರು ಉನ್ನತ ಶಿಕ್ಷಣದಲ್ಲಿ ನೋಂದಣಿ ಮಾಡಿಸುತ್ತಾರೆ. ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಈ ಸಂಖ್ಯೆ ಇನ್ನೂ ಕಡಿಮೆ.
- ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಪುರುಷರಿಗೆ ಹೋಲಿಸಿದರೆ ಶೇ. 50 ರಷ್ಟು ಮಹಿಳೆಯರು ಉದ್ಯೋಗದಲ್ಲಿದ್ದಾರೆ.
- ಕೆಲವೊಂದು ದೇಶಗಳಲ್ಲಿ ಮಹಿಳೆಯರು ಮತ ಚಲಾಯಿಸುವುದಿಲ್ಲ ಹಾಗೂ ಸ್ವಂತ ಆಸ್ತಿಯನ್ನೂ ಹೊಂದುವಂತಿಲ್ಲ.
- ರಾಜಕಾರಣದಲ್ಲಿ ಜಗತ್ತಿನ ಜನಪ್ರತಿನಿಧಿಗಳ ಪೈಕಿ ಕೇವಲ ಶೇ. 10 ರಷ್ಟು ಮಹಿಳೆಯರಿಗೆ ಮಾತ್ರ ಪ್ರಾತಿನಿಧ್ಯ.
- ಹಣ ನಿಗದಿ ಮಾಡದ ಮಹಿಳೆಯರ ಕೆಲಸವನ್ನು ಪರಿಗಣನೆಗೆ ತೆಗೆದುಕೊಂಡರೆ ಉತ್ಪಾದನಾ ವಲಯದಲ್ಲಿ ಗಣನೀಯ ಅಂಶದ ಹೆಚ್ಚಳ ಕಂಡುಬರುತ್ತದೆ. ರಾಷ್ಟ್ರೀಯ ಜಿಡಿಪಿಯಲ್ಲಿ ಗುರುತರ ಹೆಚ್ಚಳ ದಾಖಲಾಗುತ್ತದೆ.
- ಪುರುಷರ ಜೊತೆ ಹೋಲಿಸಿದರೆ ಮಹಿಳೆಯರು ವೃತ್ತಿಪರ ಜೀವನದಲ್ಲಿ (ಸರಾಸರಿ ಶೇ 25ಕ್ಕಿಂತ ಕಡಿಮೆ) ವೇತನ ತಾರತಮ್ಯ ನೀತಿಯಿಂದ ಇಂದಿಗೂ ಬಳಲುತ್ತಿದ್ದಾರೆ.



ಈ ಹಿನ್ನೆಲೆಯಲ್ಲಿ, ಅಸಮಾನತೆಗಳ ವಿರುದ್ಧದ ಮುಖಾಮುಖಿಯಲ್ಲಿ ಶಿಕ್ಷಣವನ್ನು ಪ್ರೇರಣೆ ಹಾಗೂ ತಿಳುವಳಿಕೆ ಹೆಚ್ಚಿಸುವ ಸಾಧನವಾಗಿ ನೋಡಲಾಗುತ್ತದೆ. ಶಿಕ್ಷಣವು ಮಾನವ ಬಂಡವಾಳ ಕ್ರೋಢೀಕರಣಕ್ಕೆ ಕಾರಣವಾಗಿ ಅಸಮಾನತೆ ಕಡಿಮೆ ಮಾಡುವ ನಿಟ್ಟಿನಲ್ಲಿ ಭರವಸೆ ಮೂಡಿಸಿದೆ.

ನಾನು ಒಂದು ಘಟನೆ ನೆನಪಿಸಿಕೊಳ್ಳಲು ಬಯಸುತ್ತೇನೆ. ನಾನು ಒಮ್ಮೆ ಮೈಸೂರಿನಿಂದ ಬೆಂಗಳೂರಿಗೆ ಕೆಂಪು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದೆ. ಚಹಾ ಕುಡಿಯಲೆಂದು ಎಲ್ಲ ಬಸ್‌ಗಳನ್ನು ಚೆನ್ನಪಟ್ಟಣ ಬಳಿ ನಿಲ್ಲಿಸಲಾಗಿತ್ತು. ಚಹಾ ಕುಡಿಯುವಾಗ ಬಸ್ ಸಂಖ್ಯೆ ನೆನಪಿಸಿಕೊಳ್ಳುತ್ತಿದ್ದೆ. ನಾನು ಟಿ ಸ್ಟಾಲ್‌ನಿಂದ ಹೊರಗೆ ಬಂದಾಗ ಮಧ್ಯ ವಯಸ್ಕ ಮಹಿಳೆಯೊಬ್ಬಳು ನನ್ನೆಡೆಗೆ ಜೋರಾಗಿ ಏನಮ್ಮ... ಎಂದು ಕೂಗಿದಳು. ಅವಳು ನನಗೆ ಪರಿಚಿತಳೇನೂ ಆಗಿರಲಿಲ್ಲ. ಸ್ವಲ್ಪ ತಡೆದೆ. ಅವಳು ನನ್ನ ಬಸ್‌ನಲ್ಲಿ ಇದ್ದೇನೆ ಎಂದು ಹೇಳಿದಳು. ನೀನು ಹತ್ತಿರುವ ಬಸ್ ಸರಿಯಾಗಿದೆಯೇ? ಬಸ್ ಸಂಖ್ಯೆಯನ್ನು ನೋಡಿದ್ದೀಯಾ? ಎಂದು ಕೇಳಿದೆ. ಅದಕ್ಕೆ ಅವಳು ಓದಲು–ಬರೆಯಲು ಬರುವುದಿಲ್ಲ ಎಂದು ಹೇಳಿದಳು. ನಾವಿಬ್ಬರೂ ಒಂದೇ ಬಸ್‌ನಲ್ಲಿ ಇದ್ದದ್ದರಿಂದ ಆಕೆ ನನ್ನನ್ನು ನೆನಪಿನಲ್ಲಿಟ್ಟುಕೊಂಡಿದ್ದಳು. ಬಸ್ ತಲುಪಿದಾಗ, ಆಕೆಯನ್ನು ಕರೆದುಕೊಂಡು ಹೋಗಲು ಪತಿ ಬರುವವನಿದ್ದ. ಅವಳ ಮಗ ಬಸ್ ಹತ್ತಿಸಿ ಹೋಗಿದ್ದ. ಆ ದಿನ ನನಗೆ ಶಿಕ್ಷಣದ ಮಹತ್ವದ ಅರಿವಾಯಿತು. ಶಿಕ್ಷಣ ಇಲ್ಲದಿದ್ದರೆ ಆಗುವ ಅನಾಹುತವೂ ಅರಿವಿಗೆ ಬಂತು.

ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಪರಿಶೀಲಿಸಿದರೆ, ದೇಶದಾದ್ಯಂತ ಮಹಿಳೆಯರು ಉನ್ನತ ಶಿಕ್ಷಣ ಪಡೆಯದೇ ಇರುವುದರ ಅಂತರ ಸ್ಪಷ್ಟವಾಗಿ ಕಾಣಿಸುತ್ತದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ನಾಯಕತ್ವಕ್ಕೆ ಸಂಬಂಧಿಸಿದಂತೆ ಪ್ರದೇಶವಾರು ಭಿನ್ನತೆಗಳಿವೆ. ಉನ್ನತ ಶಿಕ್ಷಣದಲ್ಲಿನ ಮಹಿಳೆಯರ ನಾಯಕತ್ವವು ಶೇ 5ರಷ್ಟು ಮಾತ್ರ ಇದ್ದರೆ, ಅರಬ್ ಪ್ರದೇಶದಲ್ಲಿ ಅದು ಕೇವಲ ಶೇ.2ರಷ್ಟು ಮಾತ್ರ.

ಲಿಂಗಸಮಾನತೆಗೆ ಯುನೆಸ್ಕೊ ವಿಶೇಷ ಆದ್ಯತೆ ನೀಡಿದೆ. ಅದನ್ನು ಸಾಧಿಸುವುದಕ್ಕಾಗಿ ಶಿಕ್ಷಣದ ಹಕ್ಕು ಮತ್ತು ಸುಸ್ಥಿರವಾದ ಅಭಿವೃದ್ಧಿಗಳನ್ನು ಮುಖ್ಯ ಆಧಾರಗಳಾಗಿ ಪರಿಗಣಿಸಿದೆ. ಈ ಗುರಿಗಳ ಸಾಕಾರಕ್ಕಾಗಿ ಯುನೆಸ್ಕೊ ಶಿಕ್ಷಣವನ್ನು ಬಾಲಕ–ಬಾಲಕಿಯರು ಹಾಗೂ ಮಹಿಳೆ–ಪುರುಷರು ಪಡೆಯುವುದಕ್ಕಷ್ಟೇ ಸೀಮಿತ ಮಾಡುವ ಬದಲಿಗೆ ಶೈಕ್ಷಣಿಕ ವೃತ್ತ ಪೂರ್ಣಗೊಳಿಸುವಂತೆ ಸೂಚಿಸಿದೆ. ಶಿಕ್ಷಣದಲ್ಲಿ ಮತ್ತು ಶಿಕ್ಷಣದ ಮೂಲಕ ಸಬಲೀಕರಣ ಹಾಗೂ ಸಮಾನತೆ ಸಾಧಿಸಲು ಯತ್ನಿಸುವುದು ಅದರ ಗುರಿಯಾಗಿದೆ.

ಶೈಕ್ಷಣಿಕ ಸೌಲಭ್ಯ ತಲುಪುವ ಮತ್ತು ಕಲಿಕೆಯ ಸಾಧನೆಯಲ್ಲಿ ಲಿಂಗ ಆಧಾರಿತ ಅಂತರ ವ್ಯಾಪಕವಾಗಿದೆ. ಬಹುತೇಕ ಸಂದರ್ಭದಲ್ಲಿ ಶಿಕ್ಷಣದ ವೆಚ್ಚವೂ ಬಾಲಕಿಯರಿಗೆ ದೊಡ್ಡ ಹೊರೆಯಾಗಿದೆ. ಕೆಲವು ಪ್ರದೇಶದಲ್ಲಿ ಬಾಲಕರೂ ಅನನುಕೂಲತೆ ಎದುರಿಸುತ್ತಿದ್ದಾರೆ. ಪ್ರಗತಿ ಸಾಧಿಸುತ್ತಿದ್ದರೂ 16 ದಶಲಕ್ಷ ಬಾಲಕಿಯರು ಇದುವರೆಗೆ ಶಾಲೆಯ ಹೊಸ್ತಿಲನ್ನೇ ಮುಟ್ಟಿಲ್ಲ. ಭಾರತದಲ್ಲಿನ ಮಹಿಳಾ ವಿಶ್ವವಿದ್ಯಾಲಯಗಳ ಪಠ್ಯ ಹಾಗೂ ಕ್ರಮವಿಧಿಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದಾಗ, ಬಹುತೇಕ ಸಂಗತಿಗಳು

ಸ್ತ್ರೀತ್ವ ಅಥವಾ ಸ್ತ್ರೀಸಹಜ ಸಾಂಕೇತಿಕತೆಯ ಧೋರಣೆ ಕಂಡು ಬರುತ್ತದೆ. ನಾನು ಅಭ್ಯಸಿಸಿದ ಬಾಲಕಿಯರ ಶಾಲೆಯನ್ನು ನೆನಪಿಸಿಕೊಳ್ಳಬಯಸುತ್ತೇನೆ. ವೇದಿಕೆಯ ಕಾರ್ಯಕ್ರಮಗಳಲ್ಲಿ ಸಿಳ್ಳೆ ಹೊಡೆಯುವುದನ್ನು ಪ್ರಾಚಾರ್ಯರು ನಿಷೇಧಿಸಿದ್ದರು. ಇತ್ತೀಚಿಗೆ ನನಗೆ ಟರ್ಕಿಯ ರೈತ ಮಹಿಳೆಯನ್ನು ಕುರಿತ ಒಂದು ವ್ಯಾಟ್ಸಪ್ ಸಂದೇಶ ಬಂದಿತ್ತು. ಅದರಲ್ಲಿ ರೈತ ಮಹಿಳೆಯೊಬ್ಬಳು ಹಕ್ಕಿಯ ಕೂಗನ್ನು ಅನುಕರಿಸಿ ಸಂವಹನ ಮಾಡಲು ಸಿಳ್ಳೆ ಹಾಕುತ್ತಿದ್ದಳು. ಮಾರ್ಜಿನ್‌ಗಾಗಿ ಮಡಿಚಿದ ಹಾಳೆಯನ್ನು ಕೈಯಲ್ಲಿ ಇಟ್ಟುಕೊಂಡು ನಮ್ಮ ಪ್ರಾಚಾರ್ಯರು ಇದನ್ನು 'ಬಾಲಕರು ಮಾತ್ರ ಮಾಡಬಹುದು' ಎಂದು ಹೇಳಿ, ಖಂಡಿಸುತ್ತಿದ್ದರು. ಅವರು ತರಬೇತಿ ಪಡೆದ ಮನೋವಿಜ್ಞಾನಿಯಾಗಿದ್ದರು. ಬಾಲಕಿಯರು ಉತ್ತಮ ಪತ್ನಿಯರಾಗಬೇಕು ಹಾಗೂ ಉತ್ತಮ ತಾಯಂದಿರಾಗಬೇಕು ಎಂಬ ಏಕರೂಪಿ ಮಾತುಗಳನ್ನು ಆಡುತ್ತಿದ್ದರು. ಅವರೇಕೆ ಬಾಲಕಿಯರೂ ಸಮರ್ಥರೂ, ಉತ್ತಮರೂ ಆಗಬೇಕು ಎಂದು ಯಾಕೆ ಹೇಳಲಿಲ್ಲ ಎಂಬ ಪ್ರಶ್ನೆ ಆಗಾಗ ಕಾಡುತ್ತದೆ! ಯುನೆಸ್ಕೊ- ಇನ್‌ಸ್ಟಿಟ್ಯೂಟ್ ಫಾರ್ ಸ್ಟಾಟಿಸ್ಟಿಕ್ಸ್ ಪ್ರಕಾರ 750 ದಶಲಕ್ಷ ವಯಸ್ಕರ ಪೈಕಿ ಮೂರನೇ ಎರಡಷ್ಟು ಮಹಿಳೆಯರಿಗೆ ಸಾಕ್ಷರತೆಯ ಮೂಲ ಪಾಠಗಳೂ ದೊರೆತಿಲ್ಲ.

ಯುನೆಸ್ಕೊ ವರದಿಯ ಪ್ರಕಾರ ಎಸ್‌ಟಿಇಎಂ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತ) ವಿಷಯಗಳಲ್ಲಿ ವಿದ್ಯಾರ್ಥಿನಿಯರು ಹಾಗೂ ಮಹಿಳೆಯರ ಸಾಧನೆ ಅತ್ಯಂತ ನಿರಾಶಾದಾಯಕವಾಗಿದೆ. ಜಗತ್ತಿನಾದ್ಯಂತ ಉನ್ನತ ಶಿಕ್ಷಣದಲ್ಲಿ ಮಹಿಳೆಯರ ನೋಂದಣಿಯಲ್ಲಿ ಹೆಚ್ಚಳ ಕಂಡುಬಂದಿದೆ. ಕೆಲವು ಪ್ರದೇಶಗಳಲ್ಲಿಯಂತೂ ಪುರುಷರಿಗಿಂತ ಮಹಿಳೆಯರ ನೋಂದಣಿ ಸಂಖ್ಯೆ ಹೆಚ್ಚಿದೆ. ಉನ್ನತ ಮಟ್ಟದ ಸಂಶೋಧನೆಗಳಾದ ಡಾಕ್ಟರೇಟ್ ಮತ್ತು ಡಾಕ್ಟರೇಟ್ ನಂತರದ ಸಂಶೋಧನೆಗಳಲ್ಲಿ ಮಹಿಳೆಯರ ಸಂಖ್ಯೆಯು ಕ್ಷೀಣಿಸಿದೆ. ಭಾರತದ ಎಐಎಸ್‌ಎಚ್‌ಇ ವೆಬ್‌ಸೈಟ್‌ನ ದತ್ತಾಂಶಗಳ ಒಂದು ವಿಶ್ಲೇಷಣೆಯ ಪ್ರಕಾರ ಭಾರತದಲ್ಲಿಯೂ ಅದೇ ಧೋರಣೆಯಿದೆ. ಬಹುತೇಕ ವಿದ್ಯಾರ್ಥಿನಿಯರು ಕಲಾವಿಭಾಗದಲ್ಲಿದ್ದರೆ ಸಣ್ಣ ಪ್ರಮಾಣದಲ್ಲಿ ಎಸ್‌ಟಿಇಎಂ ಕೋರ್ಸ್ ಸೇರುತ್ತಿದ್ದಾರೆ.

ಮಹಿಳೆ ಮತ್ತು ಪುರುಷರಲ್ಲಿ ಮಾನವ ಮಿದುಳಿನ ನರವ್ಯೂಹಗಳು ಒಂದೇ ತೆರನಾಗಿವೆ ಹಾಗೂ ಸಾಮರ್ಥ್ಯ ಕೂಡ ಸಮಾನ ಎಂಬುದನ್ನು ನ್ಯೂರೋಪ್ಲಾಸ್ಟಿಸಿಟಿ ಅಧ್ಯಯನ ತಿಳಿಸುತ್ತದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳು ಹಾಗೂ ವ್ಯವಸ್ಥಿತ ಪೂರ್ವಗ್ರಹಗಳು ಲಿಂಗ ಅಂತರಕ್ಕೆ ಕಾರಣವಾಗಿವೆ. ಸೂಕ್ತ ಹಾಗೂ ಸಕಾಲಿಕ ಮಧ್ಯಸ್ಥಿಕೆಯಿಂದ ನರವ್ಯೂಹದ ಕಾರ್ಯಜಾಲವನ್ನು ಧನಾತ್ಮಕವಾಗಿ ಬದಲಿಸಬಹುದು ಎಂಬುದನ್ನು ಸಂಶೋಧನೆಗಳು ಖಚಿತ ಪಡಿಸಿವೆ. ನಾವು ಯಾವುದೇ ಸಮಯದಲ್ಲಾದರೂ ಕಲಿಯಬಹುದು. ಯಾವಾಗ ಬೇಕಾದರೂ ಬದಲಾಗಬಹುದು. ಸೂಕ್ತ ಮಾರ್ಗದರ್ಶನ, ಕೆಲಸ-ಬದುಕಿನ ಸಮತೋಲನ, ಧನಾತ್ಮಕ ಪ್ರವೃತ್ತಿ ಮತ್ತು ಸತತ ಬೆಂಬಲದಿಂದ ವಿದ್ಯಾರ್ಥಿನಿಯರು ಅತ್ಯುತ್ತಮ ಸಾಧನೆ ಮಾಡಬಲ್ಲರು ಮತ್ತು ರೂಢಿಗತ ನಂಬಿಕೆಗಳನ್ನು ಹುಸಿಗೊಳಿಸಬಲ್ಲರು. ಲಿಂಗತಾರತಮ್ಯವೆಂಬ ತಳಿವಿಜ್ಞಾನದ ಸಂಕೇತಗಳನ್ನು ಒಡೆಯಬೇಕಿದೆ. ರೂಪಾಂತರಿಗಳನ್ನು ಸೃಷ್ಟಿಸಬೇಕಿದೆ. ಈ ರೂಪಾಂತರಿಗಳು ರೂಪಾಂತರಕ್ಕೆ ಕಾರಣವಾಗಲಿವೆ.



ಇನ್ನು ಬಹಳಷ್ಟು ಸಂಖ್ಯೆಯ ಮಹಿಳೆಯರು ಪದವಿ ಪಡೆದರೂ ಬಹುತೇಕ ಜನರು ಗೋಪುರಾಕೃತಿಯ (ಪಿರಾಮಿಡ್) ತಳಭಾಗದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಲಾಗುತ್ತದೆ. ಆದ್ದರಿಂದ ಮುಖ್ಯವಾಹಿನಿಯಲ್ಲಿನ ತಾರತಮ್ಯ ಹೋಗಲಾಡಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಸಾಧಿಸುವುದಕ್ಕಾಗಿ ನಾವು ಸೂಕ್ಷ್ಮ ರೀತಿಯ ತಾರ್ಕಿಕ ಯೋಜನೆ ರೂಪಿಸಬೇಕಿದೆ.

ಯಶಸ್ಸಿನ ಭ್ರಮೆಯನ್ನು ಸೃಷ್ಟಿಸಿರುವ ನಯನಾಜೂಕಿನ ಅಂಕಿ-ಅಂಶಗಳ ಮೇಲೆ ಮಾತ್ರ ಅವಲಂಬಿತ ಆಗುವುದು ಬೇಡ. ಮಹಿಳೆಯರ ಒಟ್ಟು ನೋಂದಣಿ ಪ್ರಮಾಣದಲ್ಲಿನ ಹೆಚ್ಚಳ ಅಥವಾ ಉತ್ತಮ ಫಲಿತಾಂಶ ಅಥವಾ ವಿದ್ಯಾರ್ಥಿನಿಯರು ಗಳಿಸುವ ಪ್ರಶಸ್ತಿ-ಪದಕಗಳ ಸಂಖ್ಯೆಗಳಿಗೇ ಅಂಟಿಕೊಳ್ಳುವುದು ಬೇಡ. ಪದವೀಧರ ಮಹಿಳೆಯರು ಹೇಗೆ ಕಾರ್ಯ ನಿರ್ವಹಿಸಿದ್ದಾರೆ ಹಾಗೂ ಸಾಮುದಾಯಿಕ ಬದುಕನ್ನು ಹೇಗೆ ಪ್ರಭಾವಿಸಿದ್ದಾರೆ ಎಂಬುದರ ಗುಣಾತ್ಮಕ ವಿಶ್ಲೇಷಣೆಯತ್ತ ಗಮನ ಹರಿಸಬೇಕಿದೆ. ದಶಲಕ್ಷದಷ್ಟು ಸಂಖ್ಯೆಯ ಮಹಿಳೆಯರು ರಾಷ್ಟ್ರೀಯ ಬದುಕಿನಿಂದ ಮಾಯವಾಗಿರುವ ಕುರಿತು ಅಮರ್ತ್ಯ ಸೇನ್ ಹೇಳಿರುವ ಮಾತುಗಳೇ ಉನ್ನತ ಶಿಕ್ಷಣದಿಂದ ಮಹಿಳೆಯರು ಮಾಯವಾಗಿರುವ ಸ್ಥಿತಿಗತಿಗೂ ಅನ್ವಯವಾಗುತ್ತದೆ.

**ಪದವೀಧರರ ಯಶಸ್ಸಿಗೆ ಸಲಹೆ ಮತ್ತು ಸಂದೇಶ**

ಆತ್ಮೀಯ ಪದವೀಧರರೆ, ಇದು ನಿಮಗೆ ಸಂಭ್ರಮಾಚರಣೆಯ ದಿನ. ಯುಗಯುಗಗಳಿಂದಲೂ ಈ ಪ್ರದೇಶದ ಜನ ಕನಸಿನಲ್ಲಿಯೂ ಕಾಣುವುದು ಅಸಾಧ್ಯವಾದದ್ದನ್ನು ನೀವು ಸಾಧಿಸಿದ್ದೀರಿ. ಈ ವಿಶ್ವವಿದ್ಯಾನಿಲಯವನ್ನು ಮುನ್ನಡೆಸುವ ಗುರಿ ನಿಮ್ಮದಾಗಲಿ. ಕಲಿತಿದ್ದರ ಪ್ರಯೋಜನ ಬದುಕಿಗೆ ದೊರಕಲಿ. ನೀವು ಜ್ಞಾನವಾಗಿ ಪಡೆದಿರುವುದು ನಿಮ್ಮ ಬದುಕಿನ ಯಶಸ್ಸಿಗೆ ಶೇ. 15ರಷ್ಟು ಮಾತ್ರ ಕಾರಣವಾಗಿದ್ದರೆ, ಉಳಿದಂತೆ ನಿಮ್ಮ ಯಶಸ್ಸು, ಸಂವಹನ ಸಾಮರ್ಥ್ಯ, ತಂಡದಲ್ಲಿ ಕಾರ್ಯ ನಿರ್ವಹಿಸುವ ಪ್ರವೃತ್ತಿ, ನಾಯಕತ್ವದ ಗುಣ, ನಿರ್ವಹಣೆಯ ಕೌಶಲ್ಯಗಳು ಕಾರಣವಾಗುತ್ತವೆ.

ಆತ್ಮವಿಶ್ವಾಸದಿಂದ ವರ್ತಿಸಿ, ದೃಢತೆಯಿಂದ ಮುನ್ನುಗ್ಗಿ, ಸೂಕ್ತ ಗುರಿ ಇಟ್ಟುಕೊಳ್ಳಿ, ಉದ್ದೇಶಿತ ಗುರಿಗಳನ್ನು ಸಾಧಿಸಿ, ಯೋಜನಾ ಬದ್ಧವಾಗಿರಿ, ನಿಮ್ಮ ನಂತರ ಅಧ್ಯಯನ ನಡೆಸುವವರನ್ನು ಬೆಂಬಲಿಸಿ, ಪ್ರೋತ್ಸಾಹಿಸಿ. ಅಧ್ಯಯನ ಮಾಡಬಯಸುವ ಇತರರನ್ನೂ ಪ್ರೋತ್ಸಾಹಿಸಿ. ಯಾವ ಗಳಿಗೆಯಲ್ಲಿಯೂ ಕಾರ್ಯಾರಂಭ ಮಾಡಬಹುದು. 5ನೇ ತರಗತಿಯಲ್ಲಿದ್ದಾಗ ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದ ವಿನ್‌ಸ್ಟನ್ ಚರ್ಚಿಲ್ ತನ್ನ 62ನೇ ವಯಸ್ಸಿನಲ್ಲಿ ಪ್ರಧಾನಿಯಾದ ಮತ್ತು ಜಾಗತಿಕ ರಾಜಕಾರಣದಲ್ಲಿ ಪ್ರಾಮುಖ್ಯತೆ ಪಡೆದಿದ್ದ. ಸ್ಟೀವ್ ಜಾಬ್ಸ್ ಅವರು ಥಾಮಸ್ ಅಲ್ವಾ ಎಡಿಸನ್‌ನ ಹಾಗೆ ಸೋಲುಗಳಿಂದ ಪಾಠ ಕಲಿತೆ ಎಂದು ಹೇಳಿದ್ದರು. ಕಲಿಯಲು ಬಯಸುವ ಮಹಿಳೆಯರನ್ನು ಪ್ರೋತ್ಸಾಹಿಸಿ, ಅವರಿಗೆ ಮಾರ್ಗದರ್ಶನ ಮಾಡಿ.

ನಮ್ಮ ಸಂಶೋಧನಾ ವಿದ್ಯಾರ್ಥಿಗಳ ತಂಡವು, ಸಮೂಹ ಆಧಾರಿತ ಸಂಶೋಧನೆ ನಡೆಸಿದ್ದನ್ನು ನಾನಿಲ್ಲಿ ಸ್ಮರಿಸುತ್ತೇನೆ. ವಿದ್ಯಾರ್ಥಿಗಳು ಕೃಷಿಕಾರ್ಮಿಕ ಮಹಿಳೆಗೆ ಮನೆಯಲ್ಲಿ ತನ್ನ ಮಗಳನ್ನು ಕಾಲೇಜಿಗೆ ಕಳುಹಿಸುವಂತೆ ಮನವೊಲಿಸಿ ಅದಕ್ಕೆ ಸೂಕ್ತ

ವ್ಯವಸ್ಥೆ ಮಾಡಿದ್ದರು. ಇಂದು ಆ ಮಹಿಳೆಯು ಯಶಸ್ವಿ ಉದ್ಯಮಿಯಾಗಿದ್ದಾರೆ. ಕಷ್ಟದ ಕೌಟುಂಬಿಕ ಹಿನ್ನೆಲೆಯಲ್ಲಿ ಬಂದಿದ್ದರೂ, ವಿವಾಹದ ನಂತರ ಕೌಟುಂಬಿಕ ಅಡೆತಡೆಗಳಿದ್ದರೂ ತಡವಾಗಿ ವೃತ್ತಿ ಆರಂಭಿಸಿದ ನನ್ನ ಸಹೋದ್ಯೋಗಿಗಳಿದ್ದಾರೆ. ಅವರು ಡೀನ್ ಹಾಗೂ ನಿರ್ದೇಶಕರಂತಹ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಪೆಪ್ಸಿ ಸಂಸ್ಥೆಯ ಜಾಗತಿಕ ಮುಖ್ಯಸ್ಥೆ ಇಂದ್ರಾ ನೂಯಿ 'ಮಹಿಳೆಯರಾದ ನಮ್ಮ ಬಳಿ ಎಲ್ಲವೂ ಇರುವುದಿಲ್ಲ. ಬದಲಾಗುತ್ತಲೇ ಇರುವ ಜವಾಬ್ದಾರಿಗಳು, ಸಮತೋಲನ ಕಾಪಾಡುವುದರಲ್ಲಿ ಆದ್ಯತೆಗಳನ್ನು ನಾವು ನಿರ್ಧರಿಸಬೇಕು.ನಿರಂತರ ಪ್ರಕ್ರಿಯೆಯಲ್ಲಿ ನಾವು ಬೇರೆಯವರನ್ನೂ ಬದಲಾಯಿಸಬಹುದು'. ಪತಿಗೆ ತಾನು ಹೇಗೆ ಮಗುವಿನ ಕಾಳಜಿ ಮಾಡಬೇಕು ಎನ್ನುವ ಅಂಶ ಕಲಿಸಿದ್ದನ್ನು ಅವರು ಹೇಳಿದ್ದರು.

ಯಾವಾಗಲೂ ಸಂಶೋಧನೆ, ಹುಡುಕಾಟ, ಅಧ್ಯಯನ ನಿಲ್ಲಿಸಬೇಡಿ. ಜೀವನವಿಡೀ ಕಲಿಯುತ್ತಲೇ ಇರಿ. ತಂತ್ರಜ್ಞಾನದ ಮೇಲೆ ಹಿಡಿತ ಸಾಧಿಸಿ, ಹೊಸ ಆನ್ ಲೈನ್ ಕೋರ್ಸ್‌ಗಳನ್ನು ಮಾಡಿ, ಅಲ್ಪಕಾಲೀನ ಮತ್ತು ದೀರ್ಘಕಾಲೀನ ಗುರಿಗಳನ್ನು ನಿಗದಿಪಡಿಸಿಕೊಳ್ಳಿ. ನಿಮ್ಮ ಎಲ್ಲ ಸಾಮರ್ಥ್ಯವನ್ನು ಸದುಪಯೋಗ ಪಡಿಸಿಕೊಳ್ಳಿ. ಆಶಾವಾದಿಗಳಾಗಿ ಇರುವುದರಿಂದ ಯಶಸ್ಸು ಸಾಧಿಸಲು ಸಾಧ್ಯ. ದೊರೆಯುವ ಅವಕಾಶಗಳನ್ನು ಬಳಸಿಕೊಳ್ಳಿ, ನೀವು ಸಾಧಿಸಬಲ್ಲಿರಿ ಎಂಬುದನ್ನು ಮನವರಿಕೆ ಮಾಡಿಕೊಳ್ಳಿ. ಹೆಚ್ಚು ಕ್ರಿಯಾಶೀಲವಾಗಿರಿ. ನಿರ್ಧಾರದಲ್ಲಿ ದೃಢತೆ ಇರಲಿ. ಪರಿಚಿತ ವಲಯದಿಂದ ಹೊರಗೆ ಹೋಗಿ ಅಪಾಯ ಎದುರಿಸಲು ಸನ್ನದ್ಧರಾಗಿರಿ. ಸಂವಹನ ಸಾಮರ್ಥ್ಯ ಬಲಪಡಿಸಿಕೊಳ್ಳಿ. ಆಕರ್ಷಕ ಉಪಸ್ಥಿತಿ ನಿಮ್ಮದಾಗಿರಲಿ. ಅದು ಅತ್ಯಾಕರ್ಷಕ ಯಶಸ್ಸನ್ನು ಒದಗಿಸಲಿದೆ.

ನಿಮ್ಮ ಬದುಕು ಮತ್ತು ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವವರು ಮತ್ತು ಮುನ್ನಡೆಸುವವರೊಂದಿಗೆ ಕೃತಜ್ಞತೆಯೊಂದಿಗೆ ವರ್ತಿಸಿ. ಮರಳಿ ಕೊಡುವುದನ್ನು ಮರೆಯಬೇಡಿ. ಪ್ರಾಚೀನ ಭಾರತದ ಪಾರಂಪರಿಕ ನುಡಿಯಂತೆ ಜ್ಞಾನ, ವಿವೇಕ, ಧೈರ್ಯ ಕೆಲವೇ ಕೆಲವರ ಬಳಿ ಇತ್ತು. ಕೊಡುವುದು, ನೀಡುವುದು ದೊಡ್ಡ ಗುಣ.ಕೊಡುವ ಗುಣ ರೂಢಿಸಿಕೊಳ್ಳಿ. ಅದಕ್ಕೆ ಸಂವಿಧಾನಿಕ ಮನ್ನಣೆಯಿದೆ. ನ್ಯಾಯ ವಿತರಣೆಯ ವಿಧಾನದಲ್ಲಿ ಅದನ್ನು ವಿವರಿಸಲಾಗಿದೆ.

ಈ ದಿನದ ಉತ್ತಮ ಗುಣಮಟ್ಟದ ಛಾಯಾಚಿತ್ರವನ್ನು ನಿಮ್ಮೊಂದಿಗೆ ಇಟ್ಟುಕೊಳ್ಳಿ. ಅದು ಭಾಗವಹಿಸಿದ್ದ ಗಣ್ಯರ ಕಾರಣಕ್ಕೆ ಮಾತ್ರವಲ್ಲ. ಅದು ನಿಮ್ಮ ಅನನ್ಯ ಜವಾಬ್ದಾರಿಯನ್ನು ನೆನಪಿಸುವ ಮಹತ್ವದ ಸಾಕ್ಷಿಯಾಗಿ ನಿಮ್ಮೊಂದಿಗಿರುತ್ತದೆ. ನೀವು ಸ್ತ್ರೀತ್ವ, ಸಹೋದರಿಯತ್ವಕ್ಕೆ ಸೇರಿದವರು. ಅಡೆತಡೆಗಳನ್ನು ಎದುರಿಸಲಾಗದ ಅಸಹಾಯಕರ ಬೆಂಬಲಕ್ಕೆ ನಿಲ್ಲಿ. ಸ್ತ್ರೀಶಿಶುವಾಗಿರುವ ಕಾರಣಕ್ಕೆ ನೀವು ಹಿಂದೆ ಹೊರೆ ಅನ್ನಿಸಿಕೊಂಡಿದ್ದಿರಿ. ಇಂದು ನಿಮ್ಮ ವ್ಯಕ್ತಿತ್ವ ಪ್ರಚ್ಛನ್ನವಾಗಿ ಬೆಳಗುತ್ತಿದೆ. ಹಿಂಸೆಗೆ, ಗೊಂದಲಕ್ಕೆ ಒಳಗಾಗಿರುವ, ಬರೀ ಹೊಟ್ಟೆಪಾಡಿಗಾಗಿ ದೇಹ ಮಾರಾಟ ಮಾಡುವ, ಬಡತನದಿಂದ ಬಳಲುತ್ತಿರುವ, ಅಮಾನವೀಯ ಅನ್ಯಾಯಕ್ಕೆ ಒಳಗಾದ ಮಹಿಳೆಯರಿಗೆ ಸಹಾಯಹಸ್ತ ಚಾಚಿ. ಮಾದರಿ, ಸಂತಸದ, ಉದಾರ ವ್ಯಕ್ತಿತ್ವ, ಚರ್ಚೆಯಲ್ಲಿ ಮುಕ್ತತೆ, ಪ್ರಶ್ನೆಗಳಿಗೆ ತೆರೆದುಕೊಳ್ಳುವ ಬದುಕನ್ನು ನಡೆಸುವ ಮೂಲಕ ನೀವು ಲಿಂಗ ಸಮಾನತೆಯ



ಸಾಮಾಜಿಕ ಕ್ರಾಂತಿಯನ್ನು ಮುನ್ನಡೆಸಬಲ್ಲಿರಿ. ನೀವು ಈ ಮಹಾನ್ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಎಂಬುದನ್ನು ಎಂದೂ ಮರೆಯಬೇಡಿ.

ಮಹಿಳಾ ಸಬಲೀಕರಣ ಹಾಗೂ ಲಿಂಗ ಸಮಾನತೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಸೌದಿ ಅರೇಬಿಯಾದಲ್ಲಿ ವಿಶ್ವದ ಅತಿ ದೊಡ್ಡ ಮಹಿಳಾ ವಿಶ್ವವಿದ್ಯಾಲಯ-ಪಿಎನ್‌ಯು ಇರುವುದು ವಿಪರ್ಯಾಸವೇ ಸರಿ. ಸೌದಿಯ ರಾಜಮನೆತನದ ಮಹಿಳೆಯರು ಇಂತಹ ಅಡೆತಡೆಗಳ ನಿವಾರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಈ ವಿಶ್ವವಿದ್ಯಾಲಯದ ಕೊಡುಗೆಗಳಾದ ವಿದ್ಯಾರ್ಥಿಗಳು ಹೊಸ ಅಲೆಗಳನ್ನೇ ಸೃಷ್ಟಿಸಿದ್ದಾರೆ. ಭಾರತೀಯ ಮಹಿಳಾ ವಿಶ್ವವಿದ್ಯಾಲಯಗಳನ್ನು ಗಮನಿಸಿದಾಗ ಕೂಡ ಅದೇ ರೀತಿ ಭಾಸವಾಗುತ್ತದೆ. ಹರಿಯಾಣ ಹಾಗೂ ರಾಜಸ್ತಾನದಲ್ಲಿ ಪುರುಷರಿಗೆ ಹೋಲಿಸಿದಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆ. ಕೆಲವು ರಾಜ್ಯಗಳ ಹಿಂದುಳಿದ ಪ್ರದೇಶಗಳಲ್ಲಿಯೂ ಮಹಿಳಾ ವಿಶ್ವವಿದ್ಯಾಲಯಗಳಿವೆ. ಈ ಮಹಿಳಾ ವಿಶ್ವವಿದ್ಯಾಲಯಗಳನ್ನು ನೋಡಿದರೆ ಅಚ್ಚರಿ ಉಂಟಾಗದೇ ಇರದು. ಅವು ವ್ಯವಸ್ಥೆಯ ವ್ಯಂಗ್ಯವನ್ನು ಸೂಚಿಸುತ್ತವೆಯೋ ಅಥವಾ ಭವಿಷ್ಯದ ಬೆಳಕಿನ ಕಿಂಡಿಗಳೋ? ನನಗೆ ಎರಡನೆಯದ್ದೇ ಸರಿ ಅನ್ನಿಸುತ್ತಿದೆ. ಇದು ವಿಶ್ವವಿದ್ಯಾಲಯಗಳ ಮತ್ತು ಬಹುತೇಕ ಮಹಿಳಾ ವಿಶ್ವವಿದ್ಯಾಲಯಗಳ ವಿಷಯದಲ್ಲಿ ನಿಜ. ಸರ್ಕಾರ, ಸಮುದಾಯ, ಪಾಲಕರು ಬೆಂಬಲವಾಗಿ ನಿಂತು ಪೂರಕವಾಗಿ ವರ್ತಿಸಿದರೆ ಅಲ್ಲಿನ ವಿದ್ಯಾರ್ಥಿಗಳು ಅದ್ಭುತವನ್ನೇ ಸಾಧಿಸಬಲ್ಲರು.

**2017ರಲ್ಲಿ ನೀಡಿದ ವರದಿಯಲ್ಲಿ ಯುನೆಸ್ಕೊ ತನ್ನ ನೋವು ವ್ಯಕ್ತಪಡಿಸಿದೆ;**

ಬಡತನ, ಭೌಗೋಳಿಕ ಬೇರ್ಪಡುವಿಕೆ, ನಿರ್ವಸಿತ ಸ್ಥಿತಿ,ವಲಸೆ,ಅಲ್ಪಸಂಖ್ಯಾತರ ಸ್ಥಿತಿಗತಿ, ವೈಕಲ್ಯ, ಬಾಲ್ಯ ವಿವಾಹ ಮತ್ತು ತಾಯ್ತನ, ಲಿಂಗ ಆಧಾರಿತ ಹಿಂಸೆ, ಮಹಿಳೆಯರ ಸ್ಥಿತಿ ಹಾಗೂ ಪಾತ್ರದ ಬಗ್ಗೆ ಸಾಂಪ್ರದಾಯಿಕ ಅಭಿಪ್ರಾಯ- ಈ ಎಲ್ಲವೂ ಮಹಿಳೆಯರ ಅಭಿವೃದ್ಧಿಗೆ ಅಡ್ಡಿಗಳಾಗಿವೆ. ಆದರೆ, ಬಾಲಕಿಯರು ಮಾತ್ರ ಶಿಕ್ಷಣದ ತಮ್ಮ ಹಕ್ಕು ಹಾಗೂ ಅದರ ಸಂಪೂರ್ಣ ಪ್ರಯೋಜನ ಪಡೆಯಲು ಹೋರಾಡುತ್ತಿದ್ದಾರೆ.

ಭಾರತದ ಈ ಪ್ರದೇಶದ ಬಾಲಕಿಯರಿಗಿಂತ ಭಿನ್ನವಾದ ಹೆಚ್ಚು ಸೂಕ್ತ ವಿವರಣೆ ಎಲ್ಲಿಯೂ ಇಲ್ಲ. ವಿಕಾಸದಿಂದ ತಪ್ಪಿಸಿಕೊಂಡ ಬಾಲಕಿಯರು ಇಲ್ಲಿ ನಿಂತಿದ್ದಾರೆ. ಅವರನ್ನು ಒಪ್ಪಿಕೊಳ್ಳಲೂ ಆಗದ, ಬಿಡಲೂ ಆಗದ ಸ್ಥಿತಿಯಲ್ಲಿ ವಿಶ್ವವಿದ್ಯಾಲಯ ಇದೆ. ಡಾ. ಜಯಮಾಲಾ ವರದಿಯು ಈ ಬಗ್ಗೆ ಗಂಭೀರ ಗಮನ ಹರಿಸುವಂತೆ ಮಾಡಿದೆ. ಅದರ ಜಾರಿಗೆ ನಾವೆಲ್ಲ ಮುಂದಾಗಬೇಕಿದೆ. ಅದು ಕೆಲವು ಪ್ರಾದೇಶಿಕ ಮತ್ತು ಸ್ಥಳೀಯ ಮಧ್ಯಸ್ಥಿಕೆಗೆ ಸಲಹೆಗಳನ್ನು ನೀಡಿದೆ. ಮಧ್ಯಸ್ಥಿಕೆಯಿಂದ ಪರಿಸರ ವ್ಯವಸ್ಥೆಯಲ್ಲಿ ಧನಾತ್ಮಕ ಪರಿಣಾಮ ಉಂಟಾಗಲಿದೆ ಮತ್ತು ಹೆಚ್ಚಿನ ಜ್ಞಾನವು ಲೈಂಗಿಕ ಕಾರ್ಯಕರ್ತರ ಜಾಲದಿಂದ ಯುವತಿಯರನ್ನು ತಪ್ಪಿಸಲು ಅನುವು ಮಾಡಿಕೊಡಲಿದೆ. ರಾಜ್ಯದ ಗಡಿಭಾಗದ ಪ್ರದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರು ಲೈಂಗಿಕ ಕಾರ್ಯಕರ್ತೆಯರಿದ್ದಾರೆ. ಬಡತನ ಹಾಗೂ ಬಹುವಿಧದ ಅನಾನುಕೂಲತೆಗಳು ಹಾಗೂ ಈ ಪ್ರದೇಶಕ್ಕೆ ವಿಶೇಷ ಆದ್ಯತೆ ನೀಡುವುದಕ್ಕಾಗಿ ಸರಕಾರವು ಸೂಕ್ತ ಲಿಂಗನೀತಿ ಅಳವಡಿಸಿಕೊಂಡರೆ ಅವರಿಗೆ ಹೊಸದಾರಿಗಳು ತೆರೆದುಕೊಳ್ಳುತ್ತವೆ.

ಸ್ಥಳೀಯ ವಿಮಾನ ನಿಲ್ದಾಣವು ದೊಡ್ಡ ಪ್ರಮಾಣದಲ್ಲಿ ಭೌಗೋಳಿಕ ಸಂಪರ್ಕಕ್ಕೆ ಅನುವು ಮಾಡಿಕೊಡುತ್ತದೆ. ಅದರಿಂದ ಕೈಗಾರಿಕೆಗಳ ಕೇಂದ್ರವಾಗಿ ಪರಿವರ್ತನೆ ಆಗುತ್ತದೆ. ರಾಜ್ಯ ಮಟ್ಟದ ಪ್ರಾದೇಶಿಕ ಸಂಶೋಧನಾ ಸಂಸ್ಥೆಗಳು ವಿದ್ಯಾರ್ಥಿಗಳ ತರಬೇತಿ ಮತ್ತು ನೋಂದಣಿ ಮಾಡಿಕೊಂಡು ತರಬೇತಿ ನೀಡುವ ಮೂಲಕ ಮಾನವ ಸಂಪನ್ಮೂಲವನ್ನು ಉತ್ಕೃಷ್ಟಗೊಳಿಸಬಹುದು. ಅದಕ್ಕಾಗಿ ವಿಶೇಷ ಅನುದಾನ ನೀಡಿಕೆ, ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಉದ್ಯೋಗಾವಕಾಶ ದೊರೆಯುವಂತೆ ಮಾಡುವುದು, ಬೋಧನಾ ಸಿಬ್ಬಂದಿಯನ್ನು ಒಳಗೊಂಡ ಸಂಶೋಧನೆ ಸರ್ಕಾರದ ವಿಶೇಷ ಸಮಿತಿ, ಯೋಜನೆಗಳಿಗೆ ಆದ್ಯತೆ ನೀಡಿ ವಿಶ್ವವಿದ್ಯಾಲಯವನ್ನು ಬಲಪಡಿಸಬೇಕು. ಪದವೀಧರರಿಗೆ ಶಕ್ತಿ ತುಂಬುವುದರ ಜೊತೆಗೆ ಅವರ ಜೀವನಮಟ್ಟ ಸುಧಾರಿಸಿ ವ್ಯಕ್ತಿತ್ವ ವಿಕಸನಕ್ಕೆ ಆರಂಭ ಹಾಡಬೇಕು. ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ಈ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯ ಪಾತ್ರ ಪ್ರಮುಖವಾದದ್ದು. ಜೊತೆಗೆ ಅವರನ್ನು ಬೆಂಬಲಿಸಿದ ಅಸಂಖ್ಯ ಜನರೂ ಮೆಚ್ಚುಗೆ, ಪ್ರಶಂಸೆಗೆ ಪಾತ್ರರಾಗುತ್ತಾರೆ.

ಅಸ್ಥಿರತೆ ದೂರ ಮಾಡಲು ಕಲಿಕಾ ಸಂಸ್ಥೆಗಳ ಆರಂಭಿಸುವುದು ಅತ್ಯಂತ ಪ್ರಮುಖ ಕೊಡುಗೆ ಎಂದು ಭಾವಿಸಲಾಗುತ್ತದೆ. ಜರ್ಮನಿಯಲ್ಲಿ ನಾಜಿಗಳು ಸಿದ್ಧಾಂತಗಳನ್ನು ಒಪ್ಪದ ವಿದ್ವಾಂಸರನ್ನು ಸಂಸ್ಥೆಗಳಿಂದ ಹೊರಗೆ ಕಳುಹಿಸಿದ್ದರು. ಆಫ್ರಿಕಾದಲ್ಲಿ ಆಗ ಬಹಳಷ್ಟು ಸಂಸ್ಥೆಗಳನ್ನು ಮುಚ್ಚಲಾಯಿತು. ಉಚ್ಚಾಟನೆಗೊಂಡ ವಿದ್ವಾಂಸರು ಹಾಗೂ ವಿಜ್ಞಾನಿಗಳು ನೆಲೆ ಅರಸಿ ಅಮೇರಿಕಾ ಹಾಗೂ ಬ್ರಿಟನ್‌ಗಳಿಗೆ ಹೋಗಿ ಅಲ್ಲಿ ಆಶ್ರಯ ಪಡೆದರು. ಅಲ್ಲಿಯವರಿಗಾಗಿ ತಮ್ಮ ವಿದ್ವತ್ತು, ಸಂಪತ್ತು ವ್ಯಯಿಸಿ, ಆಸ್ತಿ ಅವರಲ್ಲಿ ಹೆಚ್ಚಿಸಿದರು. ಆದ್ದರಿಂದ, ನಾನು ರಾಜ್ಯ ಮತ್ತು ಸಮುದಾಯಗಳಿಗೆ ನಿಮ್ಮ ವಿಶ್ವವಿದ್ಯಾಲಯ ಮತ್ತು ವಿದ್ವಾಂಸರನ್ನು ಮತ್ತು ಅವರ ಸಿದ್ಧಾಂತಗಳನ್ನು ಗೌರವಿಸಿ ಎಂದು ಮನವಿ ಮಾಡುತ್ತೇನೆ. ಅವರನ್ನು ಉಳಿಸಿಕೊಳ್ಳುವುದಕ್ಕಾಗಿ ಸೂಕ್ತ ವಾತಾವರಣ ಕಲ್ಪಿಸಿ. ಹಸ್ತಕ್ಷೇಪಗಳಿಲ್ಲದೆ ಕಲಿಕಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡುವುದಕ್ಕೆ ಅನುವು ಮಾಡಿಕೊಡಿ. ವಿಚಾರಗಳ ಬೀಜದಲ್ಲಿ ಮಹಾನ್ ಶಕ್ತಿ ಅಡಗಿರುತ್ತದೆ, ಅಪಾರ ಸಾಧ್ಯತೆಗಳು ಒಳಗೊಂಡಿರುತ್ತವೆ. ನೀವು ಅವರನ್ನು ನಾಶ ಮಾಡಬಹುದು. ಆದರೆ, ಆಗ ನಿಮ್ಮನ್ನು ಕೊನೆಗೊಳಿಸಲು ಆತ್ಮಹತ್ಯಾತ್ಮಕ ಬಾಂಬರ್‌ಗಳ ಅಗತ್ಯವಿರುವುದಿಲ್ಲ. ಆದ್ದರಿಂದ ನಿಮ್ಮ ವಿಶ್ವವಿದ್ಯಾಲಯಗಳನ್ನು ಸಂರಕ್ಷಿಸಿ. ಅವು ಸತ್ಯ ಮತ್ತು ಅದರ ಅನ್ವೇಷಣೆಗೆ ಇರುವಂತಹವು. ವಿಶ್ವವಿದ್ಯಾನಿಲಯದ ಕುರಿತು ಜಾಗತಿಕ ಮತ್ತು ಸಾರ್ವತ್ರಿಕ ಬದ್ಧತೆ ತೋರಿಸುವ ಅಗತ್ಯವಿದೆ.

ಈ ವಿಶ್ವವಿದ್ಯಾನಿಲಯವು ಇತರೆ ಮಹಿಳಾ ವಿಶ್ವವಿದ್ಯಾಲಯಗಳಿಗೆ ಅಕ್ಷಯ ಪಾತ್ರೆಯಂತೆ ಕಾರ್ಯ ನಿರ್ವಹಿಸಲಿ. ಭಾರತದ ಮತ್ತು ಜಗತ್ತಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಮೇಲ್ಭಾಗದಲ್ಲಿ ಇರುವಂತಾಗಲಿ. ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣದ ತಾಯ್ನೆಲವಾಗಲಿ. ಈ ಪ್ರದೇಶದ ಬಡತನ ಮತ್ತು ಹಿಂದುಳಿದಿರುವಿಕೆ, ಮಾನವ ಹಕ್ಕುಗಳಿಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುವುದಕ್ಕಾಗಿ ಉತ್ತಮ ಗುಣಮಟ್ಟದ ಸಂಶೋಧನೆಗಳನ್ನು ನಡೆಸುವಂತಾಗಲಿ.



ಎಸ್‌ಟಿಇಎಂ ಶಿಸ್ತುಗಳಲ್ಲಿಯೂ ಗಣನೀಯ ಸಾಧನೆ ಮಾಡುವಂತಾಗಲಿ. ಹೊಸ ಆವಿಷ್ಕಾರ ಮಾಡುವವರನ್ನು ಸೃಷ್ಟಿಸುವಂತಾಗಲಿ. ಇಲ್ಲದಿದ್ದರೆ ಮಹಿಳೆಯರ ಕೊಡುಗೆ ಇಲ್ಲದೆಯೇ ವಿಕಾಸದ ಅಭಿವೃದ್ಧಿಯ ಹಳಿ ತಪ್ಪಬಹುದು. ಅತ್ಯುತ್ತಮ ಸ್ತ್ರೀವಾದಿ ಮತ್ತು ಮಾನವೀಯ ಅನನ್ಯತೆಯ ಪರ್ಯಾಯಗಳನ್ನು ರೂಪಿಸುವಂತಾಗಲಿ. ಕರ್ನಾಟಕದ ಮತ್ತು ಭಾರತದ ನಾಳಿನ ಮಹಾನ್ ನಾಯಕರನ್ನು ಸೃಷ್ಟಿಸುವಂತಾಗಲಿ. ಅನುಭಾವಿ ನೆಲೆಯ ಅಕ್ಕನ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇರಿಸಲಾಗಿದೆ. ಆಡಳಿತ ಮತ್ತು ಸಾರ್ವಜನಿಕ ಬದುಕಿನಲ್ಲಿ ಮುಕ್ತವಾಗಿ ತೊಡಗಿಸಿಕೊಳ್ಳುವ ಕಾರಣಕ್ಕಾಗಿ ಸ್ಫೂರ್ತಿ ಒದಗಿಸುವ ಚಾಂದಬೀಬಿಯು ಇಲ್ಲಿ ಆದರ್ಶವಾಗಿದ್ದಾಳೆ. ಅವಳಿಂದಾಗಿ ಈ ಮಹಿಳಾ ಚಿತ್ರವು ಪೂರ್ಣಗೊಂಡಿದೆ.

ನಾನು ನಿಮ್ಮೆಲ್ಲರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರಬುದ್ಧ ಮನುಷ್ಯನನ್ನು ರೂಪಿಸುವ ವಿನ್ಯಾಸವನ್ನು ಸ್ತ್ರೀ ಪ್ರಜ್ಞೆಯು ಒಳಗೊಂಡಿದೆ. 'ಈ ಭೂಮಿಯಲ್ಲಿ ಮಹಿಳೆಯು ಪಳಗಿಸಿದ ಕೊನೆಯ ಪ್ರಾಣಿ ಪುರುಷ' ಎಂದು ಮಾನವಶಾಸ್ತ್ರ ಉಲ್ಲೇಖಿಸಿದೆ. ಅದರಂತೆ, ವಿಶ್ವವಿದ್ಯಾಲಯದ ಪ್ರಕಾಶ ಹೆಚ್ಚಿಸುವ ಪ್ರಕ್ರಿಯೆಯು ಎಷ್ಟು ಕಷ್ಟ ಎಂಬುದರ ಪುನರ್ ಮನನ ಮಾಡುವುದಕ್ಕಾಗಿ ಒಂದು ಸುಭಾಷಿತದ ಭಾವಾರ್ಥವನ್ನು ಹೇಳುತ್ತೇನೆ.

'ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸಲು ಹೇಗೆ ಅದನ್ನು ತಿಕ್ಕಿ, ಕತ್ತರಿಸಿ, ಕಾಯಿಸಿ ಹಾಗೂ ಬಡಿಯುವ ಮೂಲಕ ಶುದ್ಧತೆಯನ್ನು ನಿರ್ಧರಿಸಲಾಗುತ್ತದೆಯೋ ಅದೇ ರೀತಿ, ವ್ಯಕ್ತಿಯ ಗುಣವನ್ನು ಸೌಜನ್ಯ, ಸ್ವಭಾವ, ನಡವಳಿಕೆ ಮತ್ತು ಚಟುವಟಿಕೆಗಳ ಮೂಲಕ ನಿರ್ಧರಿಸಲಾಗುತ್ತದೆ'.

ಲಿಂಗ ತಾರತಮ್ಯದ ಹಿಂಸೆಯ ಪಶುತ್ವವನ್ನು ನಾಶಪಡಿಸುವ ವಿಜಯಯಾತ್ರೆ ವಿಜಯಪುರದಿಂದಲೂ ಆರಂಭವಾಗಲಿ.

ಜೈ ಹಿಂದ್

9ನೆಯ ಘಟಿಕೋತ್ಸವ ಭಾಷಣ ದಿನಾಂಕ: 22 ಜನೆವರಿ 2018

*******

# ಮಹಿಳೆಯು ಸಮಾಜವನ್ನು ರೂಪಿಸುವ ಶಿಲ್ಪಿ

❑ ಪ್ರೊ.ಇಂದ್ರಾಣಿ ಕರುಣಾಸಾಗರ
ನಿರ್ದೇಶಕರು(ಆರ್ & ಡಿ), ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು
ನಿರ್ದೇಶಕರು, ಯುನೇಸ್ಕೊದ ವೈದ್ಯಕೀಯ ಮತ್ತು ಸಾಗರ ಜೈವಿಕ ತಂತ್ರಜ್ಞಾನ ಕೇಂದ್ರ

ಕರ್ನಾಟಕ ಸರ್ಕಾರದ ಗೌರವಾನ್ವಿತ ಉನ್ನತ ಶಿಕ್ಷಣ ಸಚಿವರು ಹಾಗೂ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ ಅವರೆ, ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರೆ, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸಬಿಹಾ ಅವರೆ, ಕುಲಸಚಿವರಾದ ಪ್ರೊ. ಕೆ.ಪಿ. ಶ್ರೀನಾಥ ಹಾಗೂ ಮೌಲ್ಯಮಾಪನ ಕುಲಸಚಿವರಾದ ಪ್ರೊ. ವಿ.ವಿ ಮಳಗಿ ಅವರೆ, ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರೆ, ಸಂಲಗ್ನತೆಗೊಂಡ ಕಾಲೇಜುಗಳ ಪ್ರಾಂಶುಪಾಲರೆ, ಮಾಧ್ಯಮ ಮಿತ್ರರೇ ಚಿನ್ನದ ಪದಕ ವಿಜೇತರೆ, ಪಧವೀಧರರೆ, ಆಹ್ವಾನಿತರೆ,

ಕರ್ನಾಟಕದ ಏಕಮಾತ್ರ ಮಹಿಳಾ ವಿಶ್ವವಿದ್ಯಾನಿಲಯದ ಎಂಟನೇ ಘಟಿಕೋತ್ಸವ ಭಾಷಣ ಮಾಡುವ ಗೌರವ ನೀಡಿದ್ದಕ್ಕಾಗಿ ನಾನು ಕೃತಜ್ಞತಳಾಗಿದ್ದೇನೆ. ಈ ವಿಶ್ವವಿದ್ಯಾನಿಲಯಕ್ಕೆ ಮಹಾನ್ ಮಹಿಳೆ, ವಚನಕಾರ್ತಿ ಅಕ್ಕಮಹಾದೇವಿಯ ಹೆಸರಿಟ್ಟು 'ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ' ಎಂದು ನಾಮಕರಣ ಮಾಡಿರುವುದು ಸೂಕ್ತ ಹಾಗೂ ಸಮಂಜಸ. ಅತ್ಯಂತ ಕಡಿಮೆ ಅವಧಿಯಲ್ಲಿ ಕುಲಪತಿಗಳು ಹಾಗೂ ಅವರ ಸಿಬ್ಬಂದಿಗಳ ಅವಿರತ ಶ್ರಮದಿಂದ ವಿಶ್ವವಿದ್ಯಾಲಯವು ಯಶಸ್ಸು ಪಡೆದಿದೆ ಹಾಗೂ ಪ್ರಶಂಸೆಗೆ ಪಾತ್ರವಾಗಿದೆ. ಕುಲಪತಿಗಳ ದೂರದೃಷ್ಟಿ ಹಾಗೂ ಆ ನಿಟ್ಟಿನಲ್ಲಿ ನಡೆಯುತ್ತಿರುವ ಕ್ರಿಯಾಶೀಲ ಚಟುವಟಿಕೆಗಳು ಮೆಚ್ಚುಗೆಗೆ ಪಾತ್ರವಾಗುವಂತಹವು.

ಪದವಿ ಪಡೆಯುವ ಶೈಕ್ಷಣಿಕ ಸಾಧನೆ ಮಾಡಿದ ಹಾಗೂ ಆ ನಿಟ್ಟಿನಲ್ಲಿ ಯುವ ಮನಸ್ಸುಗಳನ್ನು ರೂಪಿಸಿದ ಸಿಬ್ಬಂದಿಯವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಿಮ್ಮ ಬದುಕಿನ ಅನನ್ಯ ಸಾಹಸದ ಕ್ಷಣಗಳನ್ನು ಸೃಷ್ಟಿಸುವ, ಆತ್ಮವಿಶ್ವಾಸದ ಹೊಸ ಪಯಣ ಆರಂಭಿಸುವ ಭರವಸೆಯ ಹೊಸ್ತಿಲಲ್ಲಿ ನಿಂತಿದ್ದೀರಿ. ಇಲ್ಲಿಂದ ನಿಮ್ಮ ಬದುಕಿನ ನೂತನ ಅಧ್ಯಯನ ಆರಂಭವಾಗಲಿದೆ. ಈ ದಿನವು ನಿಮ್ಮ ಬದುಕಿನ ಪಯಣದಲ್ಲಿ ಮೈಲುಗಲ್ಲಾಗಿ ಉಳಿಯಲಿದೆ ಹಾಗೂ ನಿಮ್ಮ ಬದುಕಿನುದ್ದಕ್ಕೂ ಈ ಅವಿಸ್ಮರಣೀಯ ಕ್ಷಣಗಳನ್ನು ಸಂಭ್ರಮದಿಂದ ಮೆಲುಕು ಹಾಕಲಿದ್ದೀರಿ.

ಮಹಿಳೆಯು ಸಮಾಜವನ್ನು ರೂಪಿಸುವ ಶಿಲ್ಪಿ. ಕುಟುಂಬ, ಸಂಸ್ಥೆ ಹಾಗೂ ದೇಶದ ಭವಿಷ್ಯ ರೂಪಿಸುವಲ್ಲಿ ಮಹಿಳೆಯದ್ದು ಮಹತ್ವದ ಪಾತ್ರವಿದೆ. ಮಹಿಳೆಯ ಸಮಗ್ರವಾದ ಶಕ್ತಿ ಸಾಮರ್ಥ್ಯವು ಮಾದರಿ ಕುಟುಂಬ, ಸಮಾಜ ಹಾಗೂ ಅಂತಿಮವಾಗಿ ಆದರ್ಶ ದೇಶವನ್ನು ಕೊಡುಗೆಯಾಗಿ ನೀಡಲಿದೆ.

ಈ ವಿಶ್ವವಿದ್ಯಾನಿಲಯವು ದೇಶದ ಜನಸಂಖ್ಯೆಯ ಶೇ. 48.5 ರಷ್ಟು ಮಹಿಳೆಯರಿಗೆ ಅರ್ಪಿತವಾಗಿರುವುದರಿಂದ ವಿಶೇಷ ಮಹತ್ವ ಹೊಂದಿದೆ. ಪ್ರಾಚೀನ ಕಾಲದಿಂದಲೂ ಮಹಿಳೆಯರು ಸಮಾಜದಲ್ಲಿ ಗೌರವದ ಸ್ಥಾನ ಪಡೆದಿರುವುದನ್ನು ಗಮನಿಸಬಹುದು. ಆಡಳಿತಕ್ಕೆ ಸಂಬಂಧಿಸಿದ ಪ್ರಾಚೀನ ಹಸ್ತಪ್ರತಿ ಮನುಸ್ಮೃತಿಯ 3.56 ನೇ ಶ್ಲೋಕವನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

ಯತ್ರ ನಾರ್ಯಸ್ತು ಪೂಜ್ಯತೆ ರಮಂತೆ ತತ್ರ ದೇವತಾಃ
ಯತ್ರೇತಾಸ್ತು ನಾ ಪೂಜ್ಯಂತೆ ಸರ್ವಾಸ್ತತ್ರಫಲಾಃ ಕ್ರಿಯಾಃ

ಎಲ್ಲಿ ಮಹಿಳೆಯರನ್ನು ಗೌರವದಿಂದ ಕಾಣಲಾಗುತ್ತದೆಯೋ ಅಲ್ಲಿ ದೇವರು ವಾಸಿಸುತ್ತಾನೆ. ಮಹಿಳೆಯರ ಘನತೆಯನ್ನು ಗೌರವಿಸದ/ರಕ್ಷಿಸದ ಪ್ರತಿಯೊಂದು ಸಾಧನೆಗೆ ಯಾವುದೇ ಅರ್ಥವಿಲ್ಲ ಹಾಗೂ ಅದು ವ್ಯರ್ಥ. (ಮನುಸ್ಮೃತಿ, ಶ್ಲೋಕ 3.56)

ಈ ಸ್ಥಾನಮಾನದಿಂದ ನಾವು ಸಂತೃಪ್ತರಾಗಬಹುದೇ? ನಾವು ಪೂಜೆಗೊಳ್ಳಲು ಬಯಸುತ್ತೇವೆಯೇ? ಅಥವಾ ಮನುಷ್ಯತ್ವಕ್ಕೆ ಅಗತ್ಯವಾಗಿರುವ ಘನತೆಯಿಂದ ನಡೆಸಿಕೊಳ್ಳಲು ಇಚ್ಛಿಸುತ್ತೇವೆಯೇ? ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ವ್ಯಾಪಕವಾಗಿ ವರದಿಯಾಗುವ ಅತ್ಯಾಚಾರದಂತಹ ದೌರ್ಜನ್ಯ, ಮಕ್ಕಳ ದುರ್ಬಳಕೆ, ವರದಕ್ಷಿಣೆ ಸಾವು, ಕಾರ್ಯನಿರ್ವಹಿಸುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ಇತ್ಯಾದಿಗಳು ನಮ್ಮನ್ನು ಅಸ್ವಸ್ಥರನ್ನಾಗಿ ಮಾಡುತ್ತಿವೆ. ನಿರಾಸೆಯ ಇಂಥ ಹೊತ್ತಿನಲ್ಲಿಯೂ ಋಣಾತ್ಮಕ ಸಂಗತಿಗಳನ್ನು ವಿರೋಧಿಸುತ್ತಿರುವ ಭಾರತದ ಅನೇಕ ಸಂಸ್ಥೆಗಳು ಹಾಗೂ ಅವು ಮಹಿಳೆಯರಿಗೆ ಅವಶ್ಯವಿರುವ ಆತ್ಮವಿಶ್ವಾಸವನ್ನು ಮೂಡಿಸುವ ಉದ್ದೇಶದಿಂದ ರೂಪಿಸಲಾಗುತ್ತಿರುವ ಯೋಜನೆಗಳು, ಕಾರ್ಯಕ್ರಮಗಳು ನಮ್ಮಲ್ಲಿ ಭರವಸೆಯ ಬೆಳ್ಳಿರೇಖೆಯನ್ನು ಗುರುತಿಸುವಂತೆ ಮಾಡಿವೆ. ಪ್ರಭಾವಶಾಲಿ ಮಹಿಳೆಯರಿಗೆ ದೇಶದಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊರೆಯುತ್ತಿರುವ ಉನ್ನತ ಹುದ್ದೆಗಳು ಸಮಾಜದಲ್ಲಿ ಮಹಿಳೆಗೆ ಉತ್ತಮ ಭವಿಷ್ಯವಿದೆ ಎಂದು ಸೂಚಿಸುವಂತಿದೆ. ಈ ಬದಲಾವಣೆ ಆಗುತ್ತಿರುವುದು ಶಿಕ್ಷಣದ ಮೂಲಕ. ಮಹಿಳಾ ವಿಶ್ವವಿದ್ಯಾನಿಲಯವು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸುವುದರ ಮೂಲಕ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬೇರೆಲ್ಲರಿಗಿಂತ ಮಹತ್ವದ ಕೆಲಸ ಮಾಡುವುದು ಸಾಧ್ಯವಿದೆ.

ಅತ್ಯಂತ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಹಾಗೂ ಜಾಗತೀಕರಣಗೊಳ್ಳುತ್ತಿರುವ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳ ಕುರಿತು ಕೆಲ ಚಿಂತನೆ ನಡೆಸಬಯಸುತ್ತೇನೆ. 'ನವಭಾರತ ನಿರ್ಮಾಣ'ದಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವ ಸಂದರ್ಭದಲ್ಲಿಯೇ ಭಾರತದಲ್ಲಿ ಮಹಿಳೆಯರಿಗೆ ಸವಾಲಾಗಿರುವ ಹಲವು ಪ್ರಶ್ನೆಗಳಲ್ಲಿ

ಕೆಲವಕ್ಕಾದರೂ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ನೂತನ ಪದವೀಧರರು ಚಿಂತನ ನಡೆಸಬೇಕು ಎಂದು ಕೋರುತ್ತೇನೆ.

ಇಂದು, ಈ ಘಟಿಕೋತ್ಸವದಲ್ಲಿ ಹಲವಾರು ಹೊಸ ಪದವೀಧರ ಮಹಿಳೆಯರನ್ನು ಸಮಾಜಕ್ಕೆ ನೀಡುವ ಮೂಲಕ ಮಾನವ ಸಂಪನ್ಮೂಲವನ್ನು ಶ್ರೀಮಂತಗೊಳಿಸುತ್ತಿದ್ದೇವೆ. ಬದಲಾವಣೆಗೆ ಮಹಿಳೆಯರು ಪರಿಣಾಮಕಾರಿ ಸಾಧನವಾಗಬಲ್ಲರು. ಇಂದಿನಿಂದ ತಮ್ಮ ಹೆಸರಿನ ಮುಂದೆ ಪದವಿಗಳನ್ನು ದಾಖಲಿಸಿಕೊಳ್ಳುವ (ಅವರ ಹೆಸರಿನ ಮುಂದೆ ಕೆಲ ಅಕ್ಷರಗಳ ಸೇರ್ಪಡೆಯಾಗಲಿದೆ) ಮಹಿಳೆಯರ ಸಂಖ್ಯೆ ಹೆಚ್ಚಾಗಲಿದೆ. ಆದರೆ ಇದರಿಂದ ಮಹಿಳೆಯರ ಸ್ಥಿತಿಗತಿಗಳಲ್ಲಿ ಬದಲಾವಣೆ ಕಾಣುವುದು ಸಾಧ್ಯವೇ? ನಾವು ಬದಲಾವಣೆಯ ಪರಿಣಾಮಕಾರಿ ರೂವಾರಿಗಳಾಗಬಲ್ಲವೇ? ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ತಮ್ಮ ಲೋಕಜ್ಞಾನ ಬಳಸಿ 'ಜಗತ್ತಿನಲ್ಲಿ ನೀವು ಏನು ಕಾಣಬಯಸುತ್ತೀರಿ, ಅದರಂತೆ ಬದಲಾಗಿರಿ' ಎಂದು ಹೇಳಿದ್ದರು. ನಮ್ಮ ಮೇಲೆ ಅದರಲ್ಲೂ ವಿಶೇಷವಾಗಿ ವಿಶ್ವವಿದ್ಯಾನಿಲಯದ ಪದವಿ ಪಡೆದು ವಿಶಾಲವಾದ ಜಗತ್ತನ್ನು ಪ್ರವೇಶಿಸುತ್ತಿರುವವರ ಮೇಲೆ ಗುರುತರವಾದ ಹೊಣೆಗಾರಿಕೆ ಇದೆ. ವಿಶ್ವವಿದ್ಯಾನಿಲಯದಲ್ಲಿ ಪಡೆದ ಶಿಕ್ಷಣವು ಸಮಾಜದಲ್ಲಿ ಗಣನೀಯ ಸಾಧನೆ ಮಾಡುವುದಕ್ಕೆ ಅಗತ್ಯವಿರುವ ಬದ್ಧತೆಯನ್ನು ಕಲಿಸಿರುತ್ತದೆ.

ಬರಾಕ್ ಒಬಾಮ ಅವರು ಹೇಳುವಂತೆ 'ಕೇವಲ ಉತ್ಸಾಹದಿಂದ ಬದುಕಿಗೆ ಮುಖಾಮುಖಿಯಾಗುವ ಬದಲು, ಅದಕ್ಕಾಗಿ ಒಂದು ಸೂಕ್ತ ಕಾರ್ಯತಂತ್ರ ರೂಪಿಸಿಕೊಳ್ಳಬೇಕು. ಕೇವಲ ತಿಳುವಳಿಕೆ, ಅರಿವು ಇದ್ದರೆ ಸಾಲದು. ಕ್ರಿಯಾಶೀಲತೆಯೂ ಬೇಕು'. ಒಂದು ವಿಷಯದ ಬಗ್ಗೆ ಕೇವಲ ಅರಿವು ಅಥವಾ ತಿಳುವಳಿಕೆ ಮಾತ್ರ ಇದ್ದರೆ ಸಾಲದು ಎಂಬುದು ನನ್ನ ಅಭಿಪ್ರಾಯ ಕೂಡ. ಉದಾಹರಣೆಗೆ, ಭಾರತದಲ್ಲಿ ಲಿಂಗಾನುಪಾತ ಪ್ರಮಾಣದಲ್ಲಿ ಸತತವಾಗಿ ಅಂತರ ಹೆಚ್ಚುತ್ತಿರುವ ಬಗ್ಗೆ ನಮಗೆಲ್ಲ ಅರಿವಿದೆ. ಸ್ತ್ರೀಭ್ರೂಣ ಹತ್ಯೆಯು ಲಿಂಗಾನುಪಾತದ ಏರಿಳಿಕೆಗೆ ಕಾರಣವಾಗಿರುವುದನ್ನು ಅಂಕಿ-ಅಂಶಗಳು ಸಾಬೀತು ಪಡಿಸುತ್ತವೆ. ಅದರ ಪ್ರಕಾರ 100 ಜನ ಬಾಲಕರಿಗೆ ಕೇವಲ 89 ಬಾಲಕಿಯರಿದ್ದಾರೆ. ಇದು ಸೃಷ್ಟಿಕ್ರಿಯೆ ಹಾಗೂ ದುಷ್ಕರ್ಮಿಗಳ ನಡುವಿನ ಮುಖಾಮುಖಿಯಂತಿದೆ. ವ್ಯವಸ್ಥಿತವಾಗಿ ವ್ಯತ್ಯಾಸವಾಗುವಂತೆ ಮಾಡಿದ ಪುರುಷ ಮತ್ತು ಮಹಿಳೆಯರ ನಡುವಿನ ಅನುಪಾತಕ್ಕೆ ಸಂಬಂಧಿಸಿದಂತಹ ಸಂಗತಿಗಳನ್ನು ನಾವು ಏನೆಂದು ಅರ್ಥೈಸಿಕೊಳ್ಳಬೇಕು? ಜೈವಿಕವಾಗಿ ಸೃಷ್ಟಿಕ್ರಿಯೆಯನ್ನು ನಡೆಸುವ ಮಹಿಳೆ ಇರುವಾಗ ಪುರುಷನನ್ನು ಮೇಲು ಎಂಬ ಭಾವನೆ ಮೂಡಿರುವುದು ಕೇವಲ ಸಾಮಾಜಿಕ ಸಮಸ್ಯೆಯೇ? ಅಂಕಿ-ಅಂಶಗಳ ಮೂಲಕ ಅರಿವು ಮೂಡಿಸುವುದರಿಂದ ಪರಿಸ್ಥಿತಿ ಹೆಚ್ಚೇನು ಬದಲಾಗಿಲ್ಲ. ಈ ಸಮಸ್ಯೆಯಿಂದ ಹೊರಬರುವುದಕ್ಕಾಗಿ ನಮ್ಮ ಬಳಿ ಯಾವುದಾದರೂ ಸೂಕ್ತ ಕಾರ್ಯತಂತ್ರ ಇದೆಯೇ? ಈಗ ಎದುರಾಗಿರುವ ಬಿಕ್ಕಟ್ಟಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಯಾವ ರೀತಿಯ ಕ್ರಿಯಾಯೋಜನೆಯನ್ನು ಸೂಚಿಸಬಹುದು ಎಂಬ ಪ್ರಶ್ನೆಯನ್ನೀಗ ನಾವು ಕೇಳಿಕೊಳ್ಳಬೇಕಿದೆ. ಅದರ ಜೊತೆಯಲ್ಲಿಯೇ ತಾಯಿಯಾಗಿ, ಸಹೋದರಿಯಾಗಿ ಅಥವಾ ಪತ್ನಿಯಾಗಿ ಇರುವ ಮಹಿಳೆಯ ಪಾತ್ರವನ್ನು ಗೌರವಿಸಲೇಬೇಕು.

ನಮ್ಮ ದೇಶದ ಶೇ. 65.46 ರಷ್ಟು ಅಕ್ಷರಸ್ಥ ಮಹಿಳೆಯರಲ್ಲಿ ಸೇರಿರುವ ಸೌಭಾಗ್ಯ



ನಿಮ್ಮದಾಗಿದೆ. ಇದಕ್ಕೆ ಪ್ರತಿಯಾಗಿ ಶೇ. 82.14 ರಷ್ಟು ಅಕ್ಷರಸ್ಥ ಪುರುಷರಿದ್ದಾರೆ ಎಂಬುದನ್ನು ಗಮನಿಸಬೇಕು. ಯಾಕೆ ಹೆಣ್ಣು ಮಗುವಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗುತ್ತಿದೆ? ಇದಕ್ಕೆ ಕಾರಣಗಳು ಹಲವು ಇರಬಹುದು. ಸಮೀಪದಲ್ಲಿ ಪ್ರಾಥಮಿಕ ಶಾಲೆ ಇಲ್ಲದೇ ಇರುವುದು, ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳನ್ನು ಪರಿಣಾಮಕಾರಿಯಾಗಿ ಉಳಿಸಿಕೊಳ್ಳಲು ಆಗದೇ ಇರುವುದು. ಕೆಲವು ಸಮುದಾಯಗಳಲ್ಲಿ ಇರುವ ಸಾಂಪ್ರದಾಯಿಕ ನಡವಳಿಕೆ. ಕಡಿಮೆ ಆದಾಯ ಇರುವ ದಿನಗೂಲಿ ಅಥವಾ ತೀವ್ರ ಬಡತನ ಇರುವ ಕುಟುಂಬಗಳಲ್ಲಿ ಹೆಚ್ಚುವರಿ ಆದಾಯಕ್ಕಾಗಿ ಮಕ್ಕಳನ್ನು ಅದರಲ್ಲೂ ಹೆಣ್ಣು ಮಗುವನ್ನು ದುಡಿತಕ್ಕೆ ಹಚ್ಚುವುದು ಅಥವಾ ತನಗಿಂತ ಕಿರಿಯ ಮಗುವಿನ ಪಾಲನೆ ಕೂಡ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದಕ್ಕೆ ಅಡ್ಡಿಯಾಗಿರಬಹುದು. ನಗರ ಪ್ರದೇಶಗಳಲ್ಲಿ ಶೇ. 80ರಷ್ಟು ಸುಶಿಕ್ಷಿತ ಮಹಿಳೆಯರಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಅದರ ಪ್ರಮಾಣ ಕೇವಲ 59ರಷ್ಟು ಎನ್ನುವುದು ವಿಷಾದದ ಸಂಗತಿ.

ಇಂದಿನ ತಲೆಮಾರಿನ ಸುಶಿಕ್ಷಿತ ಮಹಿಳೆಯು ಮತ್ತೊಂದು ಹೆಣ್ಣು ಮಗುವಿಗೆ ಶಿಕ್ಷಣ ನೀಡುವುದಕ್ಕೆ ಮುಂದಾಗಬಲ್ಲಳೇ? ಪ್ರಾಚೀನ ಕಾಲಕ್ಕೆ ಸೇರಿದ ರಬ್ಬಾನಿಯ ಹಿಬ್ರೂ ಸಾಹಿತ್ಯದ 'ಡಿಯಟ್‌ರೋನಮಿಮ ರಬ್ಬಾ'ದ ಸಾಲುಗಳನ್ನಿಲ್ಲಿ ಉಲ್ಲೇಖಿಸುತ್ತೇನೆ. ಅದೇನೆಂದರೆ 'ಬೇರೆಯವರಿಗೆ ಹಂಚದೇ ಹೋದರೆ, ನೀವು ಪಡೆದ ಜ್ಞಾನ ಶುಷ್ಕ ಹಾಗೂ ನಿರುಪಯೋಗಿ'. ಜ್ಞಾನ ಅನ್ನುವುದು ದೊಡ್ಡ ಆಸ್ತಿ. ಅದು ಹಂಚುತ್ತ ಹೋದಂತೆ ಬೆಳೆಯುತ್ತ ಹೋಗುತ್ತದೆ. ಅದು ನಮ್ಮ ಬದುಕನ್ನು ಶ್ರೀಮಂತಗೊಳಿಸುವುದರ ಜೊತೆಗೆ ಬದಲಾವಣೆಯ ಸಾಧನವೂ ಆಗುತ್ತದೆ. ಬದಲಾವಣೆಯನ್ನು ತನ್ನಿ. ಈಗ ನಾವು ಮಹಿಳೆಯನ್ನು ಸಾಕ್ಷರರನ್ನಾಗಿ ಮಾಡುವುದರಿಂದ ಏನು ಉಪಯೋಗ ಎಂಬ ಮೂಲಪ್ರಶ್ನೆಗೆ ಮರಳೋಣ. ತತ್ವಜ್ಞಾನಿ ಹೊಸಿಯಾ ಬಲ್ಲಾವೊ ಹೇಳುವಂತೆ 'ಶಿಕ್ಷಣವು ತಾಯಿಯ ಮಡಿಲಲ್ಲಿ ಆರಂಭವಾಗುತ್ತದೆ. ಮಗು ಅಲ್ಲಿ ಮಾತನಾಡುವ ಪ್ರತಿಯೊಂದು ಪದವೂ ಅದರ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗಿರುತ್ತದೆ'. ಆದ್ದರಿಂದ ಮಹಿಳೆಗೆ ಶಿಕ್ಷಣ ನೀಡಿದರೆ ಸಮಾಜಕ್ಕೆ ನೀಡಿದ ಶಿಕ್ಷಣವಾಗುತ್ತದೆ. ಮಹಿಳೆಯನ್ನು ಶಿಕ್ಷಿತಳನ್ನಾಗಿ ಮಾಡಿದರೆ ಅದು ಸಮಾಜವನ್ನು ಶಿಕ್ಷಿತಗೊಳಿಸಿದಂತೆ ಮತ್ತು ಮುಂದುವರಿದು ವಿಸ್ತೃತವಾಗಿ ಮಾನವತ್ವ ಮತ್ತು ನಿರ್ದಿಷ್ಟವಾಗಿ ದೇಶವನ್ನು ಸಶಕ್ತಗೊಳಿಸಿದಂತೆ. ಆವಳು ತನ್ನ ಮಗುವಿಗೂ ಅದನ್ನೇ ಆದ್ಯತೆಯಾಗಿಸುತ್ತಾಳೆ ಮತ್ತು ಹೀಗೆ ಶಿಕ್ಷಣದಿಂದ ಆಗುವ ಬದಲಾವಣೆಯ ಅಲೆಗಳು ಸಮುದಾಯದ ಧನಾತ್ಮಕ ಬದಲಾವಣೆಗೆ ನಿಮಿತ್ತವಾಗುತ್ತವೆ. ಅದರಿಂದಾಗಿ ನೇರವಾಗಿ ದೇಶವನ್ನು ಸಶಕ್ತಗೊಳಿಸುವುದರ ಜೊತೆಗೆ ಪರೋಕ್ಷವಾಗಿ ಮಾನವ ಕುಲದ ಏಳಿಗೆಗೆ ಕಾರಣವಾಗುತ್ತದೆ.

ಬಾಲಕಿಯಾಗಿದ್ದಾಗ ಶಿಕ್ಷಣ ಪಡೆದ ಮಹಿಳೆಯು ಮುಂದೆ ತನ್ನ ಮಗುವಿಗೆ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾಳೆ ಎಂಬುದು ಸಾಬೀತಾಗಿರುವ ಹೆಣ್ಣುಮಗು ಹಾಗೂ ಶಿಕ್ಷಣದ ಮೇಲೆ ಹೂಡಿಕೆ ಮಾಡುವುದರಿಂದ ಉಂಟಾಗುವ ಬದಲಾವಣೆಯ ಬಗ್ಗೆ ದೇಶಕ್ಕೆ ಮನವರಿಕೆಯಾಗಿದೆ. ಶಿಕ್ಷಣವು ಬದುಕಿನ ಸ್ವರೂಪ ಹಾಗೂ ಜಗತ್ತನ್ನು ಬದಲಾಯಿಸುತ್ತದೆ. ಈ ಹಿನ್ನೆಲೆಯಲ್ಲಿ ಹೆಣ್ಣುಮಗುವಿಗೆ ಶಿಕ್ಷಣ ನೀಡುವ ಮತ್ತು ಕಲಿಕೆಗೆ ಅವಕಾಶ ಕಲ್ಪಿಸುವುದಕ್ಕಾಗಿ ರೂಪಿಸಲಾಗಿರುವ ವಿವಿಧ ಯೋಜನೆಗಳು ಪ್ರಗತಿಯಲ್ಲಿವೆ.

ಸುಶಿಕ್ಷಿತ ಮಹಿಳೆಯರಾದ ನೀವು ವೃತ್ತಿ ಜೀವನ ಆರಂಭಿಸುವುದಕ್ಕಾಗಿ ಉದ್ಯೋಗಾವಕಾಶಗಳ ಕಡೆಗೆ ನೋಡುತ್ತಿದ್ದೀರಿ. ನಾನು ನಿಮಗೆ ಎಲ್ಲ ರೀತಿಯ ಶುಭ ಕೋರುತ್ತೇನೆ. ನೀವು 'ಮಹಿಳಾ ಜೀವದ್ರವ್ಯ' ವಾಗಿ ಬೆಳೆಯುವ ಉತ್ತಮ ಅವಕಾಶಗಳು ನಿಮ್ಮದಾಗಲಿ. ಮಹಿಳಾ ಜೀವದ್ರವ್ಯ ಎನ್ನುವುದು ದೋಷರಹಿತವಾದದ್ದು. ಯಾಕೆಂದರೆ, ಅವಳು ತನ್ನ ತಪ್ಪುಗಳಿಂದಲೇ ಪಾಠ ಕಲಿಯುತ್ತಾಳೆ ಮತ್ತು ಆಗುವ ಅವಮಾನಗಳನ್ನು ಅರಗಿಸಿಕೊಳ್ಳುತ್ತಲೇ ಹೊಸ ಸಾಮರ್ಥ್ಯ ಪಡೆದುಕೊಳ್ಳುತ್ತಾಳೆ. ಚೈತನ್ಯ ಕಳೆದುಕೊಂಡು ಹತಾಶಳಾದ ಸಂದರ್ಭದಲ್ಲಿ ಬೂದಿಯಿಂದೇಳುವ ಫಿನಿಕ್ಸ್ ಹಕ್ಕಿಯಂತೆ ಮರುಜೀವ ಪಡೆಯುತ್ತಾಳೆ. ತನ್ನ ಸಹೋದ್ಯೋಗಿ ಪುರುಷ ಸಿಬ್ಬಂದಿಯಷ್ಟೇ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿದರೂ ಮಹಿಳೆಯೂ ಕೇವಲ ಶೇ. 56 ರಷ್ಟು ಮಾತ್ರ ವೇತನ ಪಡೆಯುತ್ತಾಳೆ ಎಂಬುದು ಇತ್ತೀಚಿನ ಅಧ್ಯಯನಗಳಿಂದ ದೃಢಪಟ್ಟಿದೆ. ಇಬ್ಬರ ನಡುವಿನ ವೇತನ ತಾರತಮ್ಯ ಮತ್ತು ವ್ಯತ್ಯಾಸಗಳು ಆಘಾತಕಾರಿಯಾದರೂ ಸತ್ಯ ಸಂಗತಿ. ಈ ತಾರತಮ್ಯವು ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಮುಂದುವರೆದ ದೇಶಗಳಲ್ಲಿಯೂ ಈ ತಾರತಮ್ಯ ಆಶ್ಚರ್ಯಕರವಾಗಿ ಮುಂದುವರೆದಿದೆ. ಹಿರಿಯ ಮಹಿಳೆಯರು ತಮಗಿಂತ ಕಿರಿಯರಾದ ಸಹದ್ಯೋಗಿಗಳಿಂದ ಕಡಿಮೆ ವೇತನ ಪಡೆಯುತ್ತಾರೆ ಎಂಬುದು ಕೂಡಾ ಮತ್ತೊಂದು ಆಘಾತಕಾರಿ ಸಂಗತಿ. ಸಮಾನವಾದ ಕ್ಷಮತೆಯನ್ನು ತೋರಿಸಿದ ಫಲಿತಾಂಶದ ನಂತರವೂ ಯಾಕೆ ಈ ಅಸಮಾನತೆ? ಉದ್ಯೋಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯೂ ಕೇವಲ ಶೇ. 7.7 ರಷ್ಟು, ಮುಖ್ಯಸ್ಥರಾಗಿರುವುದು ತೀರಾ ಸಾಮಾನ್ಯವಾದ ಶೇ.2.7 ರಷ್ಟು, ತಂತ್ರಜ್ಞಾನ, ಮಾಧ್ಯಮ ಮತ್ತು ದೂರಸಂಪರ್ಕ ಉದ್ಯಮಗಳಲ್ಲಿ ಅತೀ ಹೆಚ್ಚು ಪ್ರಮಾಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆದರೆ, ಶೇರುಮಾರುಕಟ್ಟೆಯಲ್ಲಿ ಅದರಲ್ಲೂ ಮುಂಬಯಿ ಶೇರು ವಿನಿಮಯ ಕೇಂದ್ರದಲ್ಲಿ ಮಹಿಳೆಯರ ಪಾಲು ಶೇ. 2.5 ರಷ್ಟು ಮಾತ್ರ. ಮಹಿಳೆಯರ ಇಂತಹ ಸ್ಥಿತಿಯೂ ನಿಧಾನವಾಗಿಯಾದರೂ ಬದಲಾಗುತ್ತಿರುವುದು ಹೆಮ್ಮೆ ಪಡುವ ಸಂಗತಿಯಾಗಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಮುಖ ಹುದ್ದೆಗಳನ್ನು ಅಲಂಕರಿಸುತ್ತಿದ್ದಾರೆ. ವೈದ್ಯಕೀಯ, ಇಂಜಿನಿಯರಿಂಗ್, ಬಾಹ್ಯಾಕಾಶ ತಂತ್ರಜ್ಞಾನ, ಮೂಲವಿಜ್ಞಾನ, ಕಲೆ, ಸಾಹಿತ್ಯ, ಸಾಮಾಜಿಕ ವಿಜ್ಞಾನ, ಶಿಕ್ಷಣ, ಮಾಧ್ಯಮ, ಆಡಳಿತ ನಿರ್ವಹಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಬೆಳವಣಿಗೆಯಾಗುತ್ತಿರುವುದು ಕಂಡುಬರುತ್ತಿದೆ.

ಮಹಿಳಾ ವಿಜ್ಞಾನಿಗಳ ನೇತೃತ್ವದಲ್ಲಿ ಏಕಕಾಲಕ್ಕೆ 104 ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಉಡ್ಡಯನ ಮಾಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಮಹಿಳಾ ವಿಜ್ಞಾನಿಗಳ ಸಾಧನೆಯು ಭಾರತವು ಸೇರಿದಂತೆ ಜಗತ್ತನ್ನು ಅಚ್ಚರಿಗೊಳಿಸಿದೆ. ಇದರಿಂದ ಮಹಿಳೆಯರ ಶಕ್ತಿ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಸಾಬೀತು ಪಡಿಸಿದಂತಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್.ಬಿ.ಐ) ಅಥವಾ ಐ.ಸಿ.ಐ.ಸಿ.ಐ ಬ್ಯಾಂಕುಗಳಲ್ಲಿ ಮಹಿಳಾ ಮುಖ್ಯಸ್ಥರು ಇರುವುದು ಮಹಿಳಾ ಸಬಲೀಕರಣವು ಸರಿಯಾದ ದಿಕ್ಕಿನಲ್ಲಿ ಚಲಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇಂದು ಮಹಿಳೆಯರು ಅತ್ಯಂತ ಜವಾಬ್ದಾರಿಯುತವಾದ ಪ್ರಮುಖ ಸ್ಥಾನಗಳಾದ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ ಪ್ರಧಾನ ನಿರ್ದೇಶಕರ ಹುದ್ದೆ ಹಾಗೂ ಬಹು ರಾಷ್ಟ್ರೀಯ ಕಂಪನಿಗಳಾದ ಪೆಪ್ಸಿಕೋ ಅಥವಾ ಬಯೋಕಾನ್‌ನಂತಹ ಸಂಸ್ಥೆಗಳು ಹಾಗೂ ಸಾಮಾಜಿಕ ಮಾಧ್ಯಮ ಫೇಸ್‌ಬುಕ್‌ನಂತಹ ಸಂಸ್ಥೆಗಳ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. 'ಮಹಿಳಾ ಜೀವದ್ರವ್ಯ'ಆಗಿರುವ ಈ ಸಾಧಕಿಯರು ನೂತನ ಪದವೀಧರ ವಿದ್ಯಾರ್ಥಿನಿಯರಿಗೆ ಮಾದರಿಯಾಗಿ ಹೆಚ್ಚುವರಿ ಸಾಧನೆ ಮಾಡುವುದಕ್ಕೆ ಕಾರಣವಾಗಲಿ ಎಂಬ ಆಶಾವಾದ ನನ್ನದು. ನೂತನ ಪದವೀಧರರು ಉದ್ಯಮಿಗಳಾಗಿ, ಶಿಕ್ಷಣ ತಜ್ಞರಾಗಿ, ವಿಜ್ಞಾನಿಗಳಾಗಿ, ಸಾಹಿತಿಗಳಾಗಿ, ಕಲಾವಿದರಾಗಿ, ತಂತ್ರಜ್ಞರಾಗಿ ವಿವಿಧ ಕಂಪನಿಗಳ ಆಡಳಿತಾಧಿಕಾರಿಗಳಾಗಿ ವಿಶ್ವವಿದ್ಯಾಲಯಗಳಂತಹ ಸಂಸ್ಥೆಗಳ ಮುಖ್ಯಸ್ಥರಾಗಿ, ದೇಶದ ಎಲ್ಲ ಪ್ರಮುಖ ಸಂಸ್ಥೆಗಳ ಮುಖ್ಯಸ್ಥರಾಗುವಂತಾಗಲಿ ಎಂದು ಆಶಿಸುತ್ತೇನೆ.

ಮುಂಬರುವ ದಿನಗಳಲ್ಲಿ ಶೀಘ್ರದಲ್ಲಿಯೇ ನೀವು ಎದುರಿಸಬಹುದಾದ ಸವಾಲುಗಳ ಪೈಕಿ ಸಮಸ್ಯೆಯೂ ಒಂದಾಗುವ ಸಾಧ್ಯತೆಗಳಿವೆ. ಭಾವನಾತ್ಮಕ ಮಾನವೀಯ ಸಂಬಂಧಗಳನ್ನು ಬೆಸೆಯುವ ಮದುವೆಯನ್ನು ಕೇವಲ ವ್ಯಾವಹಾರಿಕ ಕೊಡುಕೊಳ್ಳುವಿಕೆಯ ವ್ಯಾಪಾರಿ ದೃಷ್ಟಿಕೋನಕ್ಕೆ ಸೀಮಿತಗೊಳಿಸುವ ವಿಷವರ್ತುಲದ ಭಾಗವಾಗಬೇಡಿ.

ಈ ಕೆಟ್ಟ ವ್ಯವಹಾರದಲ್ಲಿ ಆಗುವ ಮೊದಲ ಬಲಿ ಮಹಿಳೆಯ ಆತ್ಮಗೌರವ. ಪ್ರತಿ ಮೂರು ನಿಮಿಷಕ್ಕೆ ಒಮ್ಮೆ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತವೆ ಎಂದು ದೇಶದ ಅಪರಾಧ ದಾಖಲೆಗಳ ಘಟಕದ ಕಡತಗಳು ಹೇಳುತ್ತವೆ. ಅದೇ ದಾಖಲೆಗಳ ಪ್ರಕಾರ ಪ್ರತಿ 29 ನಿಮಿಷಕ್ಕೆ ಒಮ್ಮೆ ಅತ್ಯಾಚಾರ ನಡೆದರೆ, ವರದಕ್ಷಿಣೆ ಸಾವು ಪ್ರತಿ 77 ನಿಮಿಷಕ್ಕೆ ಒಮ್ಮೆ ಸಂಭವಿಸುತ್ತಿವೆ. ಇದಲ್ಲದೇ ಮಹಿಳೆಯು ಪತಿಯಿಂದ ಅಥವಾ ಕುಟುಂಬದ ಸದಸ್ಯರಿಂದ ನಡೆಯುವ ಕ್ರೌರ್ಯಕ್ಕೆ ಈಡಾಗಬೇಕಾಗುತ್ತಿದೆ. ಬಹುತೇಕ ಅಪರಾಧಗಳಲ್ಲಿ ಮಹಿಳೆಯೇ ಮತ್ತೊಬ್ಬ ಮಹಿಳೆಯ ವೈರಿಯಾಗಿ ನಡೆದುಕೊಳ್ಳುವ ಸಂಗತಿಗಳು ಮೇಲಿಂದ ಮೇಲೆ ನಡೆಯುತ್ತಿವೆ. ಈ ವಿಶ್ವವಿದ್ಯಾಲಯದಲ್ಲಿ ನೀವು ಪಡೆದಿರಬಹುದಾದ ಶಿಕ್ಷಣವು ಈ ಸಮಸ್ಯೆಗೆ ಮುಖಾಮುಖಿ ಆಗುವ ತಂತ್ರ ರೂಪಿಸುವ ಶಕ್ತಿ ಒದಗಿಸುವಂತಾಗಲಿದೆ. ನೀವೇ ಬದಲಾವಣೆಗೆ ಕಾರಣರಾಗಿ ಆತ್ಮಾವಲೋಕನ ಮಾಡಿಕೊಳ್ಳಿ. ಹಾಗೆಯೇ ಕಾಲದ ಅಗತ್ಯಕ್ಕೆ ತಕ್ಕಂತೆ ಎಚ್ಚೆತ್ತುಕೊಳ್ಳಿ.

ಲಿಂಗ ಸಮಾನತೆ ಅಂದರೆ ಪುರುಷ ಸ್ತ್ರೀಗೆ ಅಥವಾ ಸ್ತ್ರೀ ಪುರುಷನಿಗೆ ಸಮಾನ ಎಂದು ಅರ್ಥವಲ್ಲ. ಮಹಿಳೆ ಮತ್ತು ಪುರುಷರಿಬ್ಬರೂ ಭೌತಿಕವಾಗಿ ಹಾಗೂ ಮಾನಸಿಕವಾಗಿ ವಿಭಿನ್ನವಾಗಿರುವುದರಿಂದ ಇದೊಂದು ತಪ್ಪು ಕಲ್ಪನೆ. ಅನನ್ಯ ಸಾಮರ್ಥ್ಯ ಮತ್ತು ಜವಾಬ್ದಾರಿಗಳನ್ನು ಪರಸ್ಪರ ಗುರುತಿಸುವ ಮತ್ತು ಗೌರವಿಸುವುದಕ್ಕಾಗಿ ಒಬ್ಬರು ಮತ್ತೊಬ್ಬರಿಗೆ ಪೂರಕವಾಗಿರಬೇಕು. ಹಾಗೆಯೇ ಪರಸ್ಪರರು ತಮ್ಮ ಹೊಣೆಯನ್ನು ನಿರ್ವಹಿಸುವುದಕ್ಕೆ ಅಗತ್ಯವಿರುವ ಕ್ರಿಯಾಶೀಲ ಸ್ವಾತಂತ್ರ್ಯದ ಅವಕಾಶವನ್ನು ಸಮಾನ ನೆಲೆಯಲ್ಲಿ ಕಲ್ಪಿಸುವಂತಾಗಬೇಕು. ಸಮಾನ ಅವಕಾಶ ಕಲ್ಪಿಸುವ ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಈ ಹಕ್ಕುಗಳು ಭಾರತದ ಸಂವಿಧಾನದಿಂದ ರಕ್ಷಿಸಲ್ಪಟ್ಟಿವೆ. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಲಿಂಗಸಮಾನತೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಶಿಕ್ಷಣ ನೀಡಬೇಕಾಗಿರುವುದು ತಕ್ಷಣದ ಅಗತ್ಯವಾಗಿದೆ. ಸುಶಿಕ್ಷಿತ ಭಾರತದ ಭಾಗವಾಗಿರುವ ನಾವು ಸಮಾಜದಲ್ಲಿ

ಲಿಂಗಸಮಾನತೆಯ ಮಾತುಗಳನ್ನು ಕೇವಲ ವಾದಕ್ಕೆ ಸೀಮಿತಗೊಳಿಸುವ ಬದಲು ಪ್ರಜ್ಞಾಪೂರ್ವಕ ಸತತ ಪ್ರಯತ್ನದ ಮೂಲಕ ಜಾರಿಗೆ ತರಬೇಕಿದೆ. ಪ್ರಗತಿಪರ ಸಮಾಜ ರೂಪಿಸುವುದಕ್ಕಾಗಿ ಇರುವುದು ಇದೊಂದೇ ದಾರಿ.

ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್ ಪಾತ್ರತ್ವಧ್ದಾನಮ್ ಅಪ್ನೋತಿ, ಧನಾದ್ಧರ್ಮ ತತಃ ಸುಖಮ್

ನಿಜವಾದ ಜ್ಞಾನವು ನಮ್ರತೆಯನ್ನು ಬೆಳೆಸುತ್ತದೆ. ನಮ್ರತೆಯು ಸಾಮರ್ಥ್ಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಸಾಮರ್ಥ್ಯದಿಂದ ಧನವು ಪ್ರಾಪ್ತಿಯಾಗುತ್ತದೆ. ಧನದಿಂದ ನೆಮ್ಮದಿ ಮತ್ತು ತೃಪ್ತಿ ನೀಡುವ ಉತ್ತಮ ಕೆಲಸಗಳನ್ನು ಮಾಡಬಹುದು.

ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕಾಗಿ ಘಟಿಕೋತ್ಸವ ಭಾಷಣದ ಅವಕಾಶ ನೀಡಿರುವ ನಿಮ್ಮ ಸಂಸ್ಥೆಯ ಸ್ಪಂದನಾಗುಣ ನನ್ನನ್ನು ವಿನಮ್ರಳನ್ನಾಗಿಸಿದೆ. ನಿಮ್ಮ ವಿಶ್ವವಿದ್ಯಾನಿಲಯವು ನೀಡಿರುವ ಮಹತ್ವದ ಕೊಡುಗೆ ಹಾಗೂ ಮಾಡಿರುವ ಸಾಧನೆಯನ್ನು ಕುರಿತಾಗಿ ಕುಲಪತಿಯವರ ಪ್ರಸ್ತುತಿಯನ್ನು ಕೇಳುವ ಅವಕಾಶ ನನಗೆ ಒದಗಿಬಂದಿದೆ.

ಈ ವಿಶ್ವವಿದ್ಯಾನಿಲಯವು ಮಹಿಳಾ ಸಮುದಾಯವನ್ನು 'ಜ್ಞಾನ ಸಮಾಜ' ವಾಗಿ ಪರಿವರ್ತಿಸಿದೆ. ವಿದ್ಯಾರ್ಥಿನಿಯರಿಗೆ ಉತ್ತಮ ಗುಣಮಟ್ಟದ ಪ್ರಯೋಗಶಾಲೆ, ಗ್ರಂಥಾಲಯ ಹಾಗೂ ತರಗತಿಗಳಲ್ಲಿ ದೊರೆತ ಸೈದ್ಧಾಂತಿಕ ಮಾಹಿತಿಯನ್ನು ಪರಿಶೀಲಿಸುವ ಮೂಲಸೌಕರ್ಯಗಳು ಮಾತ್ರ ದೊರಕಿದರೆ ಸಾಲದು. ಬದಲಿಗೆ ಅವರು ಸಮಾಜಕ್ಕೆ ತಮ್ಮ ಅತ್ಯುತ್ತಮ ಕೊಡುಗೆಯನ್ನು ನೀಡಲು ಉತ್ತಮ ಮನೆ, ಸಂಸ್ಥೆಗಳು ಮತ್ತು ಕೆಲಸಕ್ಕೆ ಪೂರಕವಾದ ವಾತಾವರಣವನ್ನು ಸಮಾಜವು ಕಲ್ಪಿಸಿಕೊಡುವ ಅಗತ್ಯವಿದೆ.

ಸಹಾನುಭೂತಿ, ಜ್ಞಾನ, ಪ್ರಜ್ಞೆ ಮತ್ತು ಸೂಕ್ತ ಗ್ರಹಿಕೆಗಳಿಲ್ಲದ ಸಮಾಜವು ದುರ್ಬಲವಾಗಿರುತ್ತದೆ. ಆದ್ದರಿಂದ ಮಹಿಳೆಯರಿಗೆ ಶಿಕ್ಷಣ ನೀಡುವ ಅವಶ್ಯಕತೆಯಿದೆ. ಈ ವಿಶ್ವವಿದ್ಯಾಲಯದಿಂದ ಪಡೆದ ಶಿಕ್ಷಣವು ಜಾಗತಿಕ ಗುಣಮಟ್ಟಕ್ಕೆ ಸಮಾನವಾದುದು ಹಾಗೂ ಸಾರ್ವಜನಿಕ ಬದುಕಿನಲ್ಲಿ ಗೌರವದ ಸ್ಥಾನ ತಂದುಕೊಡಬಲ್ಲದು. ಈ ಶಿಕ್ಷಣದಿಂದ ಪಡೆದ ಜ್ಞಾನವನ್ನು ನೀವು ಪ್ರಾಯೋಗಿಕವಾಗಿ ಯಾವ ರೀತಿಯಿಂದ ಉಪಯೋಗಿಸಿಕೊಳ್ಳಲು ಸಾಧ್ಯ ಎಂಬ ಆಯ್ಕೆಯು ನಿಮ್ಮದಾಗಿದೆ.

ಶಿಕ್ಷಣದಿಂದ ಜಗತ್ತಿನಲ್ಲಿ ವ್ಯಾಪಕವಾಗಿರುವ ಮೌಢ್ಯಗಳು ದೂರವಾಗುತ್ತವೆ ಮತ್ತು ವಿಚಾರ ಮಾಡುವ ಶಕ್ತಿಯು ನಮ್ಮನ್ನು ಒಗ್ಗೂಡಿಸುತ್ತದೆ. ಮತ್ತು ಶಾಂತಿಯನ್ನು ಜಗತ್ತಿನೆಲ್ಲೆಡೆ ಪಸರಿಸಲು ನೆರವಾಗುತ್ತದೆ. ನೀವು ನಿಮಗೆ ದೊರೆತ ಶಿಕ್ಷಣವನ್ನು ಸಮಾಜದ ಪ್ರಜ್ಞಾವಂತ ನಾಗರಿಕರಾಗುವುದಕ್ಕೆ ಬಳಸುತ್ತೀರಿ ಮತ್ತು ಅದು ನಮ್ಮನ್ನು ಶಾಂತಿಯುತ ಹಾಗೂ ಸಮೃದ್ಧ ಭಾರತದ ಹೊಸ್ತಿಲಲ್ಲಿ ನಿಲ್ಲಿಸಲಿದೆ ಎಂದು ನಾನು ಖಚಿತವಾಗಿ ನಂಬಿದ್ದೇನೆ.

ಗಮನವಿಟ್ಟು ನನ್ನ ಮಾತುಗಳನ್ನು ಕೇಳಿದ್ದಕ್ಕೆ ಕೃತಜ್ಞಳಾಗಿದ್ದೇನೆ

8 ನೆಯ ಘಟಿಕೋತ್ಸವ ಭಾಷಣ ದಿನಾಂಕ: 17 ಏಪ್ರಿಲ್ 2017

*******



# ಮಾನವ ಅಭಿವೃದ್ಧಿಯ ಸವಾಲುಗಳು

❑ ಡಾ.ನಂದಿತಾ ಕೃಷ್ಣ
ಅಧ್ಯಕ್ಷರು, ಸಿ.ಪಿ. ರಾಮಸ್ವಾಮಿ ಅಯ್ಯರ್ ಪ್ರತಿಷ್ಠಾನ,
1, ಎಲ್ಡಾಮ್ಸ್ ರಸ್ತೆ, ಚೆನ್ನೈ–600018

ಘನತೆವೆತ್ತ ಕುಲಾಧಿಪತಿಗಳೇ, ಕುಲಪತಿಗಳೇ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಗೂ ಅಕ್ಯಾಡೆಮಿಕ್ ಕೌನ್ಸಿಲ್ ಸದಸ್ಯರೇ, ಪ್ರಾಧ್ಯಾಪಕರೇ, ಪದವೀಧರರೇ, ಮಹಿಳೆಯರೇ ಹಾಗೂ ಮಹನೀಯರೇ,

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ಇತರ ಅಧಿಕಾರಿ ವರ್ಗದವರು ನಾನು ಏಳನೆಯ ಘಟಿಕೋತ್ಸವದಲ್ಲಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡಬೇಕೆಂದು ಕೇಳುವುದರ ಮೂಲಕ ನನಗೆ ತೋರಿದ ಅಪಾರ ಗೌರವಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ ನಾನು ನನ್ನ ಘಟಿಕೋತ್ಸವ ಭಾಷಣ ಪ್ರಾರಂಭಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಮಹಿಳೆಯರಿಗಾಗಿಯೇ ಸ್ಥಾಪನೆಯಾದ ಪ್ರಥಮ ವಿಶ್ವವಿದ್ಯಾಲಯ ಇದಾಗಿದ್ದು, ಅದು ನಮ್ಮ ಶೈಕ್ಷಣಿಕ ಪ್ರಗತಿಯಲ್ಲಿ ಇದುವರೆಗಿನ ನಿರ್ಲಕ್ಷಿತ ಕ್ಷೇತ್ರದಲ್ಲಿ ತನ್ನದೇ ಆದ ರೀತಿಯಲ್ಲಿ ಮಹತ್ವದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಪ್ರಾಚೀನ ಕಲ್ಯಾಣ ಚಾಲುಕ್ಯರ ಹಾಗೂ ಅವರ ನಂತರ ಬಂದ ರಾಷ್ಟ್ರಕೂಟರು, ಹೊಯ್ಸಳರು ಹಾಗೂ ಯಾದವರ ರಾಜಧಾನಿ ಕೇಂದ್ರವಾಗಿದ್ದ ಈ ವಿಜಯಪುರ ನಗರಕ್ಕೆ ಭೇಟಿ ನೀಡುವುದಕ್ಕೆ ನನಗೆ ಬಹಳ ಸಂತೋಷವಾಗಿದೆ. ಮುಂದೆ ಸುಲ್ತಾನರ ಆಳ್ವಿಕೆಯಲ್ಲಿ ಯೂಸೂಫ್ ಆದಿಲ್‌ಶಾಹಿ ಅವರ ಕಾಲದಲ್ಲಿ ಒಂದು ಸ್ವತಂತ್ರ ರಾಜ್ಯವಾಗಿ ಮೆರೆದ ಈ ವಿಜಯಪುರದ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ. ಆದಿಲ್‌ಶಾಹಿಗಳು ಕಟ್ಟಿಸಿದ ಇಲ್ಲಿಯ ಗೋಳಗುಮ್ಮಟ ಜಗತ್‌ಪ್ರಸಿದ್ಧವಾಗಿದ್ದು, ಇಬ್ರಾಹಿಂರೋಜಾ ತನ್ನ ಅಪೂರ್ವ ವಾಸ್ತು ಸೌಂದರ್ಯದಿಂದ ಆಗ್ರಾದ ತಾಜಮಹಲ್ ನಿರ್ಮಾಣಕ್ಕೆ ಸ್ಫೂರ್ತಿಯಾಗಿದ್ದುದು ತಮಗೆಲ್ಲ ತಿಳಿದ ವಿಷಯ. ಈ ನಗರದಲ್ಲಿರುವ ಇನ್ನೂ ಹಲವಾರು ಅದ್ಭುತ ಶಿಲ್ಪ ಕಲಾಕೃತಿಗಳ ಬಗ್ಗೆ ಭಾರತೀಯರೆಲ್ಲರೂ ತುಂಬ ಅಭಿಮಾನ ಪಡುತ್ತಾರೆ.

ನನ್ನ ಪ್ರೀತಿಯ ಯುವ ಪದವೀಧರರೇ, ನೀವು ಇದೀಗ ಜೀವನದ ಮುಂದಿನ ಘಟ್ಟದಲ್ಲಿ ಪಾದಾರ್ಪಣೆ ಮಾಡುತ್ತಿದ್ದೀರಿ. ಅದು ಇನ್ನೂ ಹೆಚ್ಚಿನ ವಿದ್ಯಾಭ್ಯಾಸವನ್ನು

ಮುಂದುವರೆಸುವದಾಗಿರಬಹುದು ಅಥವಾ ಉದ್ಯೋಗ ಮಾರುಕಟ್ಟೆಯಲ್ಲಿ ಯಾವುದಾದರೊಂದು ಉದ್ಯೋಗ ಮಾಡುವದಾಗಿರಬಹುದು, ಇಲ್ಲವೇ ನೀವೇ ಸ್ವತಃ ಶಿಕ್ಷಕರಾಗಿಯೂ ಹೊಸ ಜೀವನ ಪ್ರಾರಂಭಿಸಲೂಬಹುದು. ನೀವು ಏನೇ ಮಾಡಿದರೂ ಜೀವನಪರ್ಯಂತ ಕಲಿಯುವಿಕೆ ಇಂದಿನಿಂದಲೇ ಪ್ರಾರಂಭವಾಗುತ್ತದೆ. ತೈತ್ರೇಯ ಉಪನಿಷತ್‌ದಲ್ಲಿ (ಕ್ಷಿಉ. 1:1) ಒಬ್ಬ ಗುರು ಹಲವು ವರ್ಷಗಳ ವಿದ್ಯಾದಾನದ ಕೊನೆಗೆ ತನ್ನ ವಿದ್ಯಾರ್ಥಿಗಳಿಗೆ ಹೇಳುವ ಮಾತನ್ನು ಇಲ್ಲಿ ತಮಗೆ ನೆನಪಿಸಲು ಬಯಸುತ್ತೇನೆ.

ಸತ್ಯಂ ವದ, ಧರ್ಮಂ ಚರ, ಸ್ವಾಧ್ಯಾಯನಮ್ ಪ್ರಮದಃ
ಕುಶಲಾನ್ ಪ್ರಮದಿತವ್ಯಂ, ಭೂತ್ಯಾಯಿ ನ ಪ್ರಮದಿತವ್ಯಂ
ಸ್ವಾಧ್ಯಾಯ ಪ್ರವಚನಾಭ್ಯಂ ನ ಪ್ರಮಾದಿತ್ವ್ಯಂ

ಇದರ ಅರ್ಥ ಸತ್ಯವನ್ನು ನುಡಿ, ಧರ್ಮದಿಂದ ನಡೆ, ಸ್ವಾಧ್ಯಾಯವನ್ನು ಮುಂದುವರೆಸು. ಜಾಣತನದಿಂದ ಖರ್ಚು ಮಾಡುತ್ತಾ ಸಮೃದ್ಧಿಯನ್ನು ಸಂಪಾದಿಸು ಮತ್ತು ಸ್ವಾಧ್ಯಾಯ ಹಾಗೂ ಬೋಧನೆಯನ್ನು ಯಾವಾಗಲೂ ಮುಂದುವರೆಸು. ಯಾವುದೇ ವ್ಯಕ್ತಿ ತನ್ನ ಶಿಕ್ಷಣವನ್ನು ಮುಗಿಸಿದ ಸಂದರ್ಭದಲ್ಲಿ ಎಲ್ಲ ಕಾಲಕ್ಕೂ ಹೇಳಬಹುದಾದ ಅತ್ಯುತ್ತಮ ಉಪದೇಶ ಇದಾಗಿದೆ.

ಶಿಕ್ಷಣ ಒಬ್ಬ ವ್ಯಕ್ತಿಯನ್ನು ಬಹು ಎತ್ತರದ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಅವನು ಕಲಿಯುವುದನ್ನು ಕಲಿಯುತ್ತಾನೆ. ಒಂದು ಪದವಿ ಅಂದರೆ ಜೀವನಪರ್ಯಂತ ಜ್ಞಾನಪಡೆಯುವ ನಿರಂತರ ಪ್ರಕ್ರಿಯೆಯ ಪ್ರಾರಂಭ ಮಾತ್ರವಾಗಿರುತ್ತದೆ. ಉನ್ನತ ಶಿಕ್ಷಣ ವಿದ್ಯಾರ್ಥಿಗಳಿಗೆ ಬೌದ್ಧಿಕ ಜವಾಬ್ದಾರಿಗಳನ್ನು ಹಾಗೂ ಬೌದ್ಧಿಕ ಸಂಶೋಧನೆಗಳನ್ನು ಪರಿಚಯಿಸುತ್ತಾ ಆ ದಿಶೆಯಲ್ಲಿ ಅವರು ತಮ್ಮದೇ ಆದ ಪಾತ್ರವಹಿಸಲು ಪ್ರೇರೇಪಿಸುತ್ತದೆ. ಅಲ್ಲಿ ಅವರಿಗೆ ಅನೇಕ ತಂತ್ರಗಳನ್ನು ಹಾಗೂ ವಿಧಾನಗಳನ್ನು ಕಲಿಸಲಾಗುತ್ತದೆ ಮತ್ತು ಸಮರ್ಪಕ ಜ್ಞಾನಸಂಪಾದನೆಗೆ ಸಹಾಯ ಮಾಡುತ್ತದೆ. ಆದರೆ ಅತೀ ಮುಖ್ಯವಾಗಿ ಅವರಿಗೆ ಕಲಿಯಲು ಮತ್ತು ಕೆಲಸಮಾಡಲು ಸ್ಫೂರ್ತಿಯನ್ನು ತುಂಬಬೇಕಾಗುತ್ತದೆ. ಎಲ್ಲ ಶಿಕ್ಷಣದಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಹಭಾಗಿತ್ವದ ಅಂಶ ಇದ್ದೇ ಇರುತ್ತದೆ.

ನಾವು ಇಂದು ಒಂದು ಸಂಕಷ್ಟದ ಜಗತ್ತಿನಲ್ಲಿದ್ದೇವೆ. ಈ ಜಗತ್ತಿನಲ್ಲಿ ಅಭಿವೃದ್ಧಿಯೋ- ಯಥಾಸ್ಥಿತಿಯೋ-ಅರಣ್ಯಗಳೋ-ಕಾರ್ಖಾನೆಗಳೋ, ಮಹಿಳೆ, ಮಕ್ಕಳು ಹಾಗೂ ಪ್ರಾಣಿಗಳ ಶೋಷಣೆಯೊ ಅಥವಾ ಸಮಾನ ಅವಕಾಶಗಳೋ? ಹೀಗೆ ಹಲವಾರು ವೈರುಧ್ಯಗಳ ಕುರಿತು ಸಾಕಷ್ಟು ಚರ್ಚೆ ನಡೆದಿದೆ. ಜನಜಂಗುಳಿ ಉದ್ಯೋಗ ಅರಸುತ್ತ ನಗರಗಳತ್ತ ಧಾವಿಸಿದಾಗ ಅಲ್ಲಿ ವಾಯುಮಾಲಿನ್ಯ ಹಾಗೂ ಜಲಮಾಲಿನ್ಯ ಉಂಟಾಗುತ್ತದೆ. ಭೂಮಂಡಲದ ಶಾಖ(ಉಷ್ಣತೆ) ಹೆಚ್ಚಾಗುತ್ತಿದೆ. ಹವಾಮಾನದ ಬದಲಾವಣೆಯಿಂದ ಗಿರಿಶಿಖರಗಳ ಹಿಮ ಕರಗಿ ನೀರಾಗುತ್ತಿದೆ. ಇದರಿಂದ ಸಮುದ್ರದ ಮಟ್ಟ ಮೇಲಕ್ಕೇರುತ್ತಿದೆ. ಅನೇಕ ನಡುಗಡ್ಡೆಗಳು ಹಾಗೂ ಕರಾವಳಿ ಪ್ರದೇಶಗಳು ಮುಳುಗಿಹೋಗುತ್ತಿವೆ. ಅದರೊಂದಿಗೆ ಅಲ್ಲಿಯ ಪರಿಸರ ಜೀವಿಗಳು ಹಾಗೂ ಕಾಡುಪ್ರಾಣಿಗಳು ಜಲಸಮಾಧಿಯಾಗುತ್ತಿವೆ. ಆರ್ಕ್‌ಟಿಕ್ ಹಿಮ ಸಮುದ್ರವೂ ದಶಕದಲ್ಲಿ ಶೇಕಡಾ 12ರ ಪ್ರಮಾಣದಲ್ಲಿ ಕರಗುತ್ತಿದ್ದು ಭೂಗ್ರಹವನ್ನು ತಂಪಾಗಿಸುವ ಅದರ ಸಾಮರ್ಥ್ಯವೇ ಇದರಿಂದ ಕಡಿಮೆಯಾಗುತ್ತಿದೆ. ಇದರಿಂದ ಹಿಮಸಮುದ್ರದ ಜೀವರಾಶಿಗಳು ಅಪಾಯದಲ್ಲಿವೆಯಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ತಾಪಮಾನವು ಭಯಾನಕವಾದ ಮಟ್ಟಕ್ಕೆ ಏರುತ್ತಿದೆ. ಮಂಜುಗಡ್ಡೆಗಳು ಕರಗಿದಂತೆ ಸಮುದ್ರಪಾತಳಿ ಮೇಲೇರುತ್ತಿದೆ. ಇದರಿಂದ ಸುಂದರಬನ್‌ದಂತಹ ಅನೇಕ ನಡುಗಡ್ಡೆ ರಾಜ್ಯ, ರಾಷ್ಟ್ರಗಳು ಸಮುದ್ರದಲ್ಲಿ ಮುಳುಗಿಹೋಗುತ್ತಿವೆ. ಹೆಚ್ಚು ಹೆಚ್ಚು ಗ್ರಾಹಕರ ವಸ್ತುಗಳು ಬೇಕೆಂಬ ನಮ್ಮ ದುರಾಸೆಯಿಂದ ಈ ಭೂಗ್ರಹವನ್ನು ಹಾಳುಮಾಡುವ ನೈತಿಕ ಹಕ್ಕು ನಮಗಿದೆಯೇ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಈಗ ಆಗುತ್ತಿರುವುದು ಅದೇ ಆಗಿದೆ.

ಪ್ರಾಚೀನ ಭಾರತೀಯರು ಪರಿಸರದ ಐದು ಮಹತ್ವದ ಘಟಕಗಳನ್ನು ಪಂಚಮಹಾಭೂತಗಳೆಂದು ಕರೆದರು. ಅವು ಯಾವುವೆಂದರೆ ವಾಯು, ಅಗ್ನಿ, ನೀರು, ಭೂಮಿ ಮತ್ತು ಆಕಾಶ (ಬಯಲು). ಈ ಐದು ಪಂಚಮಹಾಭೂತಗಳು ತಮ್ಮ ತಮ್ಮ ಮಿತಿಯಲ್ಲಿದ್ದು ನಿಸರ್ಗದ ಸಮತೋಲತೆಯನ್ನು ಕಾಪಾಡುತ್ತವೆ. ಈ ಐದೂ ಪಂಚಮಹಾಭೂತಗಳನ್ನು ನಾವು ಗೌರವದಿಂದ ನೋಡಿಕೊಳ್ಳಬೇಕು. ಅಷ್ಟೇ ಅಲ್ಲ ಅವು ದಿವ್ಯ ವಸ್ತುಗಳೆಂದು ಭಾವಿಸಬೇಕು. ನಿಸರ್ಗದ ಎಲ್ಲ ಜೀವಿಗಳೂ ಪವಿತ್ರವೆಂದು ಭಾವಿಸುವದರಿಂದ ನಿಸರ್ಗವು ಸಂರಕ್ಷಿಸಲ್ಪಡುತ್ತದೆ. ಭಾರತದಲ್ಲಿ ಪರಿಸರದ ಬಗ್ಗೆ ಇಂತಹ ಹಲವು ಉನ್ನತ ಪರಂಪರೆಗಳಿದ್ದು ಅವು ನಮ್ಮ ನೈಸರ್ಗಿಕ ಪರಿಸರವನ್ನು ರಕ್ಷಿಸಿವೆ. ನದಿಗಳನ್ನೆಲ್ಲಾ ಪವಿತ್ರವೆಂದು ಭಾವಿಸಿದ್ದೇವೆ. ಗಿರಿ-ಪರ್ವತಗಳು ದೇವಾನುದೇವತೆಗಳ ವಾಸಸ್ಥಾನಗಳೆಂದು ನಂಬಿದ್ದೇವೆ. ಅವು ನೈಸರ್ಗಿಕ ಜಲಾನಯನ ಪ್ರದೇಶಗಳಾಗಿವೆ. ಮಹತ್ವದ ಪರಿಸರದ ಸ್ಥಳಗಳನ್ನೆಲ್ಲಾ ಪವಿತ್ರ ಸ್ಥಳಗಳೆಂದು ಭಾವಿಸಲಾಗಿದೆ. ನಿಸರ್ಗದ ತರು-ಮರಗಳ ಬೀಜಗಳನ್ನು ದೈವೀ ಕಾಣಿಕೆ ಎಂದು ಸ್ಥಳೀಯ ಸ್ತ್ರೀಯರು ಅವುಗಳನ್ನು ಸಂರಕ್ಷಿಸಿಡುತ್ತಾರೆ. ನಮ್ಮ ದೇಶದ ಪ್ರತಿಯೊಂದು ರಾಜ್ಯದ ಇತಿಹಾಸ ಮತ್ತು ಪರಂಪರೆಯು ತಮ್ಮದೇ ಆದ ವಿಭಿನ್ನ ನೈಸರ್ಗಿಕ ಸಂಪ್ರದಾಯಗಳನ್ನು ಹೊಂದಿವೆ. ಪವಿತ್ರ ಅರಣ್ಯಗಳನ್ನು, ಹೂಗಿಡಗಳನ್ನು ಪವಿತ್ರವಾದ ನದಿ-ಕೆರೆ ಕಟ್ಟೆಗಳನ್ನು, ಕಾಡುಪ್ರಾಣಿಗಳನ್ನು ಅಷ್ಟೇ ಏಕೆ ಭೂಗ್ರಹವನ್ನೇ ದೇವತೆ ಎಂದು ಎಲ್ಲರೂ ಅತ್ಯಂತ ಗೌರವದಿಂದ ಕಾಣುತ್ತಾರೆ. ಇಂತಹ ನಿಸರ್ಗ ಪ್ರೀತಿಯ ಪರಂಪರೆಗಳನ್ನು ದೇಶದಾದ್ಯಂತ ನಾವು ಕಾಣಬಹುದು.

ಇಂದು ದೇಶದ ಈ ಸತ್‌ಪರಂಪರೆಗಳು ಮರೆಯಾಗುತ್ತಿದ್ದುದರಿಂದ ಭೂಮಿಯ ಭವಿಷ್ಯ ಹಾಗೂ ಈ ಭೂಗ್ರಹದ ಮೇಲಿರುವ ಜನರ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಿದೆ. ವಾಯು, ಉಷ್ಣ, ಜಲ ಮತ್ತು ನೆಲಗಳು ಮಲಿನವಾಗಿವೆ, ದುರ್ಬಳಕೆಯಾಗಿವೆ, ಅಲ್ಲದೆ, ಅತೀ ಬಳಕೆಯಾಗಿವೆ. ನಾವು ನಮ್ಮ ರಾಕೆಟ್ಟುಗಳು, ಅಂತರಿಕ್ಷ ನೌಕೆಗಳನ್ನು ಕಳಿಸುತ್ತಿರುವ ಆಕಾಶವೂ (ಬಯಲು) ಸಹಿತ ಕಸದ ತೊಟ್ಟಿಯಾಗುತ್ತಿದೆ. ಜಗತ್ತಿನಾದ್ಯಂತ ಆಹಾರದ ಕೊರತೆ, ಹಸಿವುಗಳು ರಾರಾಜಿಸುತ್ತಿವೆ. ಪ್ರತಿ ಒಂಬತ್ತರಲ್ಲಿ ಒಬ್ಬ ವ್ಯಕ್ತಿ ತೀವ್ರತರವಾದ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾನೆ.

ಕಳೆದ ನೂರು ವರ್ಷಗಳಿಂದ ಮಾನವ ಚಟುವಟಿಕೆಗಳಿಂದ ಹೊರಹೊಮ್ಮುವ ಹಸಿರುಮನೆ ಅನಿಲಗಳ (ವಿಷಕಾರಕ ಅನಿಲಗಳು) ಹೆಚ್ಚಳವು ಜಾಗತಿಕ ತಾಪಮಾನ

ಹೆಚ್ಚಾಗಲು ಇನ್ನೊಂದು ಮುಖ್ಯಕಾರಣವಾಗಿದೆ. ಹೆಚ್ಚುತ್ತಿರುವ ಹಸಿರುಮನೆ ಅನಿಲಗಳ ಪ್ರಮಾಣದಿಂದ ಶಕ್ತಿ ಸಂಪನ್ಮೂಲಗಳಲ್ಲಿ ಅಸಮತೋಲನವಾಗುತ್ತದೆ. ಇದರಿಂದ ಭೂಗ್ರಹದ ಉಷ್ಣತೆಯು ಹೆಚ್ಚಾಗುತ್ತಿದೆ. ಹಿಂದಿನ ಕಾಲದಲ್ಲಾದ ಹವಾಮಾನ ವೈಪರೀತ್ಯಗಳು ನೈಸರ್ಗಿಕ ಕಾರಣಗಳಿಂದಾಗುತ್ತಿದ್ದವು. ಆದರೆ ಇಂದು ಈ ಬದಲಾವಣೆಗೆ ಮಾನವ ಚಟುವಟಿಕೆಗಳೇ ಮುಖ್ಯ ಕಾರಣವಾಗುತ್ತಿವೆ. ಹಸಿರುಮನೆ ಅನಿಲಗಳಿಂದಾದ ಉಷ್ಣತೆಯಿಂದ ಹವಾಮಾನವು ತೀವ್ರ ಬದಲಾವಣೆಯಾಗುತ್ತಿರುವುದನ್ನು ನಾವು ಈಗ ಕಾಣುತ್ತಿದ್ದೇವೆ. ಇಂದಿನ ಜಾಗತಿಕ ತಾಪಮಾನ ಅಭೂತಪ್ರಮಾಣದಲ್ಲಿ ಏರುತ್ತಿದ್ದು ಇದೆಲ್ಲ ಮಾನವ ಚಟುವಟಿಕೆಗಳಿಂದಾಗುತ್ತಿರುವುದು ವಿಶೇಷವಾಗಿ ಗಮನಿಸಬೇಕಾಗಿದೆ.

19ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯಿಂದ ಕಾರ್ಖಾನೆಗಳಿಗೆ, ಗೃಹಕೃತ್ಯಗಳಿಗೆ ಹಾಗೂ ವಾಹನಗಳಿಗೆ ಬೇಕಾಗುವ ಶಕ್ತಿಯನ್ನು ಉತ್ಪಾದಿಸಲು ಅಧಿಕ ಪ್ರಮಾಣದ ಇಂಧನ ಮೂಲಗಳನ್ನು ಸುಡಲಾಯಿತು. ಇದರಿಂದ ಅಂಗಾರಾಮ್ಲವಾಯು, ಮಿಥೇನ್ ಅನಿಲ ಮುಂತಾದ ಹಸಿರುಮನೆ ಅನಿಲಗಳು ವಾತಾವರಣದಲ್ಲಿ ಸಾಂದ್ರವಾಗಿ ಹೆಚ್ಚಾಗುತ್ತಿವೆ. ನಿಜ ಹೇಳುವದಾದರೆ, ಹಸಿರುಮನೆಯಿಂದ ಹೊರಹೊಮ್ಮುವ ಶೇಕಡಾ 90ರಷ್ಟು ವಿಷಾನಿಲಗಳು ಖನಿಜ ಇಂಧನ ಜ್ವಲನದಿಂದ ಹೊರಹೊಮ್ಮುತ್ತಿವೆ.

ಭೂಮಿ, ನೀರು, ವಾಯು, ಶಕ್ತಿ, ಆಕಾಶ ಹಾಗೂ ಪ್ರಾಣಿ ಜೀವಿಗಳು ಇವೆಲ್ಲ ಪರಸ್ಪರ ಅಂತರ್ ಸಂಬಂಧಿಯಾಗಿವೆ ಹಾಗೂ ಅಂತರ್ ಅವಲಂಬಿತವಾಗಿವೆ. ಭೂಮಿಯ ಮೇಲೆ ಅಸಂಖ್ಯಾತ ಜೀವರಾಶಿಗಳು ಬದುಕುತ್ತಿವೆ. ಅವೆಲ್ಲವುಗಳಲ್ಲಿ ಮಾನವ ಜೀವಿಯೂ ಒಂದು. ಮತ್ತು ಅದು ತನ್ನ ಉಳಿವಿಗಾಗಿ ಉಳಿದವುಗಳೊಂದಿಗೆ ಪೈಪೋಟಿಗಿಳಿದಿದೆ. ಪ್ರಗತಿಯ ಹೆಸರಿನಲ್ಲಿ ಮಾನವಕುಲ ಬೇಟೆಯಾಡಿ ಆಹಾರ ಸಂಗ್ರಹಿಸುವದರಿಂದ ಸ್ವಯಂಕೇಂದ್ರಿತ ಆಧುನಿಕ ಸ್ವಾರ್ಥಿ ಮಾನವಕುಲವಾಗಿ ಪರಿವರ್ತನೆಯಾಗಿದೆ. ಅವರೇ ಈ ನಿಸರ್ಗದ ವಿನಾಶಕಾರರಾಗಿದ್ದಾರೆ. ಇದರಿಂದ ಅಭಿವೃದ್ಧಿಯೆಂದರೆ ಪರಿಸರದ ನಷ್ಟ ಹಾಗೂ ಪ್ರಗತಿಯೆಂದರೆ ಮಾಲಿನ್ಯ ಎಂಬಂತಾಗಿದೆ. ನಿಸರ್ಗ ಸಂಪತ್ತಿನ ವಿವೇಚನಾ ರಹಿತ ಬಳಕೆ ಸಾಕಷ್ಟು ಆರ್ಥಿಕ-ಸಾಮಾಜಿಕ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ ಎಂಬ ಅರಿವೂ ಕೂಡಾ ಹೆಚ್ಚಾಗುತ್ತದೆ.

ಜಗತ್ತಿನಲ್ಲಿ ಕಂಡುಬರುವ ಎಲ್ಲ ಜೀವರಾಶಿಗಳ ಶೇಕಡಾ 33ರಷ್ಟು ಜೀವರಾಶಿಗಳು ಭಾರತದಲ್ಲಿ ನೆಲೆಯೂರಿದ್ದು ಜಗತ್ತಿನ ಅತ್ಯಂತ ಜೀವವೈವಿಧ್ಯವುಳ್ಳ 17 ರಾಷ್ಟ್ರಗಳಲ್ಲಿ ಭಾರತವು ಒಂದಾಗಿದೆ. ನಮ್ಮ ದೇಶದಲ್ಲಿನ ವೈವಿಧ್ಯಮಯ ಭೌಗೋಲಿಕ ಸಂಪನ್ಮೂಲಗಳು, ವೈವಿಧ್ಯಮಯವಾದ ಹವಾಮಾನಗಳಿಂದ ನಮ್ಮ ದೇಶ ಜೀವವೈವಿಧ್ಯದಲ್ಲಿ ಅಷ್ಟೊಂದು ಶ್ರೀಮಂತವಾಗಿದೆ ಎಂದು ಹೇಳಬಹುದು. ಭಾರತದ ಜೀವವೈವಿಧ್ಯತೆಯಲ್ಲಿ 47 ಸಾವಿರ ಸಸ್ಯಜಾತಿಗಳು ಮತ್ತು ಸುಮಾರು 90 ಸಾವಿರ ಪ್ರಾಣಿಜಾತಿಗಳು ಇದ್ದು ಇದರಲ್ಲಿ ಶೇಕಡಾ 60ರಷ್ಟು ಜೈವಿಕ ಸಂಪತ್ತು ಪಶ್ಚಿಮಘಟ್ಟದಲ್ಲಿಯೇ ಕಂಡುಬರುವುದು. ಆದ್ದರಿಂದ ಅದು ಜೀವವೈವಿಧ್ಯಗಳ ಕೇಂದ್ರಸ್ಥಾನ ಹಾಗೂ ಸಮುದ್ರ ಸಂಕುಲದ ನೆಲೆಗಟ್ಟಾಗಿದೆ.

ಭಾರತದ ಅಪಾರವಾದ ಜೀವವೈವಿಧ್ಯತೆಯು ನಷ್ಟವಾಗಲು ಜೀವಿಗಳ ಬದುಕಿನ ನೆಲೆಗಳಲ್ಲಾದ ಬದಲಾವಣೆಯೇ ಮುಖ್ಯ ಕಾರಣವಾಗಿದೆ. ಭೂಮಿಯ ವಿಪರೀತ



ಸಾಗುವಳಿ, ದೊಡ್ಡ ದೊಡ್ಡ ಆಣೆಕಟ್ಟುಗಳ ನಿರ್ಮಾಣ, ಅರಣ್ಯ ಭೂಮಿಯ ಒತ್ತುವರಿ ಮಾಡಿ ಕೃಷಿಭೂಮಿಯನ್ನಾಗಿ ಪರಿವರ್ತಿಸಿರುವುದು, ನೈಸರ್ಗಿಕ ಪ್ರಕೋಪ ಇವೇ ಮುಂತಾದವುಗಳಿಂದ ಜೀವಿಗಳು ನೈಸರ್ಗಿಕ ನೆಲೆಯನ್ನು ಕಳೆದುಕೊಳ್ಳುತ್ತಿವೆ. ಅನಿರ್ಬಂಧಿತ ಜನಸಂಖ್ಯಾ ಬೆಳವಣಿಗೆಯಿಂದ ಅರಣ್ಯಗಳ ಮೇಲಿನ ಒತ್ತಡ ಹೆಚ್ಚಾಗುತ್ತಿದೆ. ಕೃಷಿಗಾಗಿ ಅರಣ್ಯಗಳ ನಾಶದಿಂದ ಅನೇಕ ಕಾಡುಪ್ರಾಣಿಗಳ ನೆಲೆ/ವಾಸಸ್ಥಳ ಹಾಳಾಗಿವೆ. ಹೀಗೆ ಅರಣ್ಯ ಹಾಗೂ ಕಾಡುಪ್ರಾಣಿಗಳ ನಷ್ಟದಿಂದ ಜೀವವೈವಿಧ್ಯ ಹಾಳಾಗಲು ಕಾರಣವಾಗಿದೆ. ಇದಲ್ಲದೇ ರಸ್ತೆಗಳ ನಿರ್ಮಾಣ, ಆಣೆಕಟ್ಟುಗಳ ನಿರ್ಮಾಣ ಮುಂತಾದ ಮಾನವ ಅಭಿವೃದ್ಧಿ ಚಟುವಟಿಕೆಗಳಿಂದಲೂ ಕಾಡುಪ್ರಾಣಿಗಳ ಬದುಕಿನ ನೆಲೆಗಳು ಹಾಳಾಗಿವೆ. ಈ ಕಾಡುಪ್ರಾಣಿಗಳು ಅರಣ್ಯನಾಶದಿಂದ ತಮ್ಮ ಆಹಾರವಷ್ಟೇ ಅಲ್ಲದೆ ತಮ್ಮ ರಕ್ಷಣಾಸ್ಥಳ, ಸಂತಾನೋತ್ಪತ್ತಿಯ ನೆಲೆಗಳನ್ನೂ ಕಳೆದುಕೊಳ್ಳುತ್ತಿವೆ. ಇದರಿಂದ ಅವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ತಮ್ಮ ಆಹಾರಕ್ಕಾಗಿ ಕಾಡುಪ್ರಾಣಿಗಳು ಮಾನವ ನೆಲೆಯತ್ತ ಧಾವಿಸಿ ಬರಹತ್ತಿವೆ. ಅವರ ಬೆಳೆಗಳನ್ನು ಇನ್ನಿತರ ಆಸ್ತಿಗಳನ್ನು ಹಾಳುಗೆಡುವುತ್ತಿವೆ. ಆಗ ಜನರು ಇಂತಹ ಪ್ರಾಣಿಗಳನ್ನೂ ಕೊಲ್ಲುತ್ತಾರೆ. ಇಲ್ಲವೇ ಹಿಂಸೆ ಕೊಡುತ್ತಾರೆ. ಆಹಾರದ ಹುಡುಕಾಟದಲ್ಲಿ ಇದೊಂದು ರೀತಿಯ ಮಾನವಕುಲ ಹಾಗೂ ಪ್ರಾಣಿಕುಲಗಳ ನಡುವಿನ ಸಂಘರ್ಷವಾಗಿದ್ದು ಇದು ಸಾಧುವೇ? ಇದು ನೈತಿಕವಾಗಿ ಸರಿಯೇ?

ಇನ್ನೊಂದು ಸಮಸ್ಯೆಯೆಂದರೆ ಪರಿಸರ ಮಾಲಿನ್ಯ. ಅಭಿವೃದ್ಧಿಯ ಹೆಸರಿನಲ್ಲಿ ಘನತ್ಯಾಜ್ಯ, ಪ್ಲಾಸ್ಟಿಕ್ ಹಾಗೂ ರಾಸಾಯನಿಕಗಳ ಉತ್ಪತ್ತಿಯಿಂದ ಜಲ, ನೆಲ, ವಾಯುಮಲಿನವಾಗುತ್ತಿದೆ. ಅರಣ್ಯದ ಪರಿಸರ ಹಾಳಾಗುತ್ತಿದೆ.

ಉತ್ತಮ ಜೀವನಕ್ಕಾಗಿ ನಮಗೆ ಸ್ವಚ್ಛ ವಾಯು ಬೇಕು. ದುರ್ದೈವದಿಂದ ಉಷ್ಣ ವಿದ್ಯುತ್ ಸ್ಥಾವರಗಳ ಧೂಳು, ವಾಹನಗಳಿಂದ ಹೊರಹೊಮ್ಮುವ ಹೊಗೆ, ಕಾರ್ಖಾನೆಗಳಿಂದ ಹೊರಬರುವ ಮಲಿನ ವಾಯು, ನೀರು ಹಾಗೂ ಇತರ ತ್ಯಾಜ್ಯಗಳು ವಾತಾವರಣದಲ್ಲಿ ಸೇರಿ ನಮ್ಮ ಶ್ವಾಸಕೋಶಗಳು ಮಲಿನವಾಗಿವೆ. ಅಷ್ಟೇ ಅಲ್ಲ, ಅವು ನಿಷ್ಕ್ರಿಯವಾಗಿವೆ. ಇದರಿಂದ ಕ್ಯಾನ್ಸರ್‌ದಂತಹ ಪ್ರಾಣಾಂತಿಕ ರೋಗದ ಪ್ರಮಾಣ ಹೆಚ್ಚಾಗುತ್ತಿದೆ. ಈಗ ಇದು ಅತ್ಯಂತ ನೋವುಕಾರಕ ಸಾವಿನ ಕಾರಣವಾಗಿದೆ. ಜಾಗತಿಕ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ ಇಡೀ ಜಗತ್ತಿನಲ್ಲಿ ನಮ್ಮ ರಾಜಧಾನಿ ದೆಹಲಿ ಅತ್ಯಂತ ಮಲಿನವಾದ ನಗರವೆಂಬ ಕುಖ್ಯಾತಿಗೆ ಹೆಸರಾಗಿದ್ದು ನಿಜವಾಗಿಯೂ ವಿಷಾದದ ಸಂಗತಿಯಾಗಿದೆ.

ಒಳ್ಳೆಯ ಜೀವನಕ್ಕೆ ಶುದ್ಧ ಕುಡಿಯುವ ನೀರು ಬೇಕು. ಆದರೆ ಇಂದು ಶುದ್ಧವಾದ ಕುಡಿಯುವ ನೀರಿನಲ್ಲಿ ಚರಂಡಿ ನೀರು, ರಸಾಯನಿಕಗಳು ಮತ್ತು ಕೈಗಾರಿಕಾ ಮಾಲಿನ್ಯಗಳು ಸೇರುತ್ತಿವೆ. ಭಾರತದಲ್ಲಿ ಶುದ್ಧೀಕರಿಸಲಾಗದ ಚರಂಡಿ ನೀರು ಅಂತರ್ಜಲ ಹಾಗೂ ಭೂಮೇಲ್ಮೈ ನೀರಿನ ಮಾಲಿನ್ಯದ ಒಂದು ಪ್ರಮುಖ ಮೂಲವಾಗಿದೆ. ಭಾರತದಲ್ಲಿ ಜಲಶುದ್ಧೀಕರಣ ಘಟಕಗಳ ಸಾಮರ್ಥ್ಯದ ಕೊರತೆ ಇರುವುದೇ ಸಮಸ್ಯೆಯಾಗಿದೆ. ಈಗ ಸದ್ಯ ಅಸ್ತಿತ್ವದಲ್ಲಿರುವ ಜಲಶುದ್ಧೀಕರಣ ಘಟಕಗಳೂ ಸಹಿತ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ನಮ್ಮ ಸಾಂಪ್ರದಾಯಿಕ ಮಳೆನೀರು

ಸಂಗ್ರಹಗೊಳ್ಳುವ ಸರೋವರ, ಕೆರೆ ಹಾಗೂ ತೆರೆದ ಬಾವಿಗಳಲ್ಲಿನ ನೀರನ್ನು ಬಳಸದೇ ಬಹಳಷ್ಟು ನಗರಗಳಲ್ಲಿ ಹಲವಾರು ಕಿಲೋಮೀಟರ್ ದೂರದಿಂದ ನೀರನ್ನು ಕೊಳವೆಗಳ ಮುಖಾಂತರ ಪಂಪ ಮಾಡಲಾಗುವುದು. ದಖಿನ್ ಪ್ರಸ್ಥಭೂಮಿಯಲ್ಲಿ ಯಾವಾಗಲೂ ಮಳೆಯ ನೀರನ್ನೇ ಬಳಸಲಾಗುತ್ತಿತ್ತು. ಮಳೆಗಾಲದಲ್ಲಿ ಮಹಾಪೂರಗಳಿಂದ ಊರಲ್ಲಿಯ ಘನತ್ಯಾಜ್ಯವು, ನದಿ, ಹಳ್ಳ, ಕೊಳ್ಳಗಳಲ್ಲಿ ಹರಿದು ಹೋಗುತ್ತದೆ. ಭಾರತದಲ್ಲಿ ಪ್ರತಿವರ್ಷ ಸರಾಸರಿ ನಾಲ್ಕು ಸಾವಿರ ಶತಕೋಟಿ ಘನಮೀಟರ್ ನೀರಿನ ಅವಶ್ಯಕತೆ ಇದೆ. ನದಿಗಳಿಂದ ಸುಮಾರು 1900 ಶತಕೋಟಿ ಘನಮೀಟರ್ ನೀರು ಲಭ್ಯವಿದೆ. ಇದರಲ್ಲಿ ಕೇವಲ ಹನ್ನೊಂದು ನೂರು ಶತಕೋಟಿ ಘನ ಮೀಟರ್‌ನಷ್ಟು ನೀರು ಮಾತ್ರ ಬಳಕೆಗೆ ಲಭ್ಯವಾಗುತ್ತಿದೆ. ಆದರೆ ಈ ಎಲ್ಲ ನೀರು ಕುಡಿಯಲು, ಕೃಷಿಗೆ ಹಾಗೂ ಉದ್ದಿಮೆಗಳಿಗೆ ಬಳಕೆಯಾಗುತ್ತಿದ್ದು ಅದರಲ್ಲಿ ಬಹುಪಾಲು ಮಲಿನವಾಗಿದೆ.

ತೀವ್ರಗತಿಯಲ್ಲಿ ಬೆಳೆಯುತ್ತಿರುವ ಕೋಳಿ ಉದ್ಯಮ, ಹಂದಿ ಸಾಕಾಣಿಕೆ ಹಾಗೂ ಬೆಳೆಯುತ್ತಿರುವ ಹೈನೋದ್ದಿಮೆ ಹಾಗೂ ಮಾಂಸದ ಉದ್ದಿಮೆಗಳಿಂದ ನೀರಿನ ಬಳಕೆ ಹೆಚ್ಚಾಗಿದೆ. ಒಂದು ಕಿಲೋ ಕೋಳಿಮಾಂಸದ ಉತ್ಪಾದನೆಗೆ 3900 ಲೀಟರ್ ನೀರು ಬೇಕು. ಆದರೆ ಒಂದು ಕಿಲೋ ಆಹಾರಧಾನ್ಯ ಉತ್ಪಾದಿಸಲು ಕೇವಲ 900 ಲೀಟರ್ ನೀರು ಸಾಕು. ಸರಾಸರಿಯಾಗಿ ಒಂದು ಕಿಲೋ ಮಾಂಸ ಉತ್ಪಾದಿಸಲು 10 ಕಿಲೋ ಧಾನ್ಯಗಳು ಬೇಕು. ಇಂತಹ ತೀವ್ರವಾದ ಕೃಷಿ ಉಪಉದ್ಯಮಗಳು ಶೇಕಡಾ 54ರಷ್ಟು ಮಿಥಾನ್ ಅನಿಲವನ್ನು, ಶೇಕಡಾ 80ರಷ್ಟು ಸಾರಜನಕ ಆಮ್ಲವನ್ನು ಹಾಗೂ ಎಲ್ಲ ಅಂಗಾರಾಮ್ಲ ವಾಯುವನ್ನು ಭೂಮಿಗೆ ರವಾನಿಸುತ್ತಿವೆ. ಎಷ್ಟೋ ಪ್ರಾಣಿಗಳನ್ನು ಗೂಡಿನಲ್ಲಿ ಹಾಕಿದಂತೆ ಬಂಧಿಸಿ ಬಹಳ ಕ್ರೂರ ಹಾಗೂ ಹಿಂಸಾತ್ಮಕ ರೀತಿಯಲ್ಲಿ ರವಾನಿಸಲಾಗುತ್ತಿದೆ. ಇದು ಕೂಡಾ ನೈತಿಕವಾಗಿ ಸರಿಯೇ.?

ನಮ್ಮ ಎಲ್ಲ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂಮಿಯು ಒಂದು ಅತ್ಯಂತ ಗೋಚರ ಸಂಪನ್ಮೂಲ. ಭೂಮಿ ಎಂದರೆ ಭೂಮಿಯ ಮೇಲ್ಪದರಿನ ಅತ್ಯಂತ ಘನವಾದ ಭಾಗವಾಗಿದೆ. ಆದರೆ ಇದು ಸೀಮಿತ ಸಂಪನ್ಮೂಲವಾಗಿದೆ. ಆದ್ದರಿಂದ ಇದನ್ನು ಬಹಳ ಜಾಗರೂಕತೆಯಿಂದ ಬಳಸಬೇಕಾಗಿದೆ. ಭಾರತದ ಒಟ್ಟು ಭೂಪ್ರದೇಶ 329 ದಶಲಕ್ಷ ಹೆಕ್ಟೇರುಗಳಷ್ಟಾಗಿದ್ದು ಅದರಲ್ಲಿ 266 ದಶಲಕ್ಷ ಹೆಕ್ಟೇರುಗಳಷ್ಟು ಸೂಕ್ತವಾದ ಬಳಕೆಯಲ್ಲಿದೆ. ಭೂಮಿಯ ಹಾಳುಗೆಡುವಿಕೆ, ಭೂಬಳಕೆಯಲ್ಲಿನ ಬದಲಾವಣೆ ಇವೆ ಮೊದಲಾದವುಗಳು ಭಾರತದಲ್ಲಿ ಭೂಮಿಗೆ ಸಂಬಂಧಿಸಿದ ಮಹತ್ವದ ಸಮಸ್ಯೆಗಳಾಗಿವೆ. ನಗರ ಪ್ರದೇಶಗಳಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಯಿಂದ ಹಾಗೂ ಮಾಲಿನ್ಯಕಾರಕ ವಸ್ತುಗಳ ಹೊರಚೆಲ್ಲುವಿಕೆಗಳಿಂದ ಭೂಮಾಲಿನ್ಯವುಂಟಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ತೀವ್ರ ಕೃಷಿ ಚಟುವಟಿಕೆಗಳಿಂದ, ರಸಗೊಬ್ಬರಗಳ ಅತಿಯಾದ ಬಳಕೆಯಿಂದ ಹಾಗೂ ಕೀಟನಾಶಕಗಳಿಂದ ಭೂಮಿಯು ಮಲಿನವಾಗುತ್ತಿದೆ. ಅಂತರ್‌ಜಲದ ಕೃಷಿಯ ಬಳಕೆ ಭೂಮಿಯ ಜಲಧಾರಣಾ ಸಾಮರ್ಥ್ಯದ ಎರಡು ಪಟ್ಟಿನಷ್ಟು ಹೆಚ್ಚಾಗಿದೆ. ಕೃಷಿಯಿಂದ ಸುಮಾರು 125 ದಶಲಕ್ಷ ಹೆಕ್ಟೇರು ಭೂಮಿ ಹಾಳಾಗಿದೆ. ಇದಕ್ಕೆ ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳುವಿಕೆ, ಮಿತಿಮೀರಿದ ರಸಗೊಬ್ಬರಗಳ ಬಳಕೆ, ಕೀಟನಾಶಕಗಳ ಬಳಕೆ, ಏಕಬೆಳೆ ಪದ್ಧತಿ, ಲವಣಾಂಶದ ಏರಿಕೆ, ಜವಳು ಭೂಮಿ ಮುಂತಾದವುಗಳಿಂದಲೂ



ನಮ್ಮ ಭೂಮಿ ಮಲಿನವಾಗಿವೆ. ತೀಕ್ಷ್ಣ ಒಕ್ಕಲುತನ ಕೈಗೊಳ್ಳುವುದರಿಂದ ಅದೆಷ್ಟೋ ಫಲವತ್ತಾದ ಭೂಮಿ ಪಡೆಭೂಮಿಯಾಗಿದೆ. ಇಂತಹ ಹಾಳಾದ ಭೂಮಿಯ ಫಲವತ್ತತೆ ಪುನರ್ ಪಡೆಯಬೇಕಾದರೆ ರಾಸಾಯನಿಕ ಗೊಬ್ಬರಗಳ ಬದಲಿಗೆ ಸಾವಯವ ಗೊಬ್ಬರವನ್ನು ಬಳಸಬೇಕು ಹಾಗೂ ರಾಸಾಯನಿಕ ಕೀಟನಾಶಕಗಳ ಬದಲಿಗೆ ಜೈವಿಕ ಕೀಟನಾಶಕಗಳನ್ನು ಬಳಸಬೇಕು. ಭೂಮಿಯ ಮೇಲೆ ಹೆಚ್ಚಿನ ಒತ್ತಡ ಇಲ್ಲದೆ ಹಾಗೂ ಜಲಸಂಪನ್ಮೂಲಗಳ ಅತಿ ಬಳಕೆಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆಗೆ ಸಾಕಷ್ಟು ಆಹಾರ ಒದಗಿಸಬಲ್ಲಂತಹ ಸುಸ್ಥಿರ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದು ಇಂದಿನ ಕೃಷಿರಂಗದ ಮಹತ್ವದ ಸವಾಲಾಗಿದೆ. ದೇಶದಲ್ಲಿ ಜನಸಾಂದ್ರತೆ ಹೆಚ್ಚಿದಂತೆ ಪ್ರತಿ ತಲಾ ಭೂಮಿಯ ಲಭ್ಯತೆ 0.12 ಹೆಕ್ಟೇರುಗಳಿಗೆ ಇಳಿದಿದೆ.

ವಾಶಿಂಗ್ಟನ್ ಡಿ.ಸಿ.ಯ ವರ್ಲ್ಡ್ ವಾಚ್ ಇನ್‌ಸ್ಟ್ಯೂಟಿನ ವರದಿಯ ಪ್ರಕಾರ 1970ರಿಂದ 20ದಶಲಕ್ಷ ಹೆಕ್ಟೇರು ದಟ್ಟವಾದ ಮಳೆಯಾರಣ್ಯ ದನಕರುಗಳು ಮೇಯುವ ಹುಲ್ಲುಗಾವಲಾಗಿ ಪರಿವರ್ತನೆಯಾಗಿದೆ. ಜಗತ್ತಿನ ಕೆಲವು ಭಾಗಗಳಲ್ಲಿ ಇದರ ಪರಿಣಾಮ ಇನ್ನೂ ತೀವ್ರತರವಾಗಿದೆ. ಉದಾಹರಣೆಗೆ ಅಮೇಝಾನ್ ಕೊಳ್ಳದ ಮೂರನೆಯ ಎರಡರಷ್ಟು ದಟ್ಟ ಅರಣ್ಯ ದನದ ಮಾಂಸದ ಉದ್ದಿಮೆಗಾಗಿ ದನಗಳ ಹುಲ್ಲುಗಾವಲಾಗಿ ಪರಿವರ್ತನೆ ಆಗಿದೆ. ಅಮೇಝಾನ್ ಬಯಲಿನ ಉಳಿದ ಹಾಳಾದ ಅರಣ್ಯ ಪ್ರದೇಶದಲ್ಲಿ ಪಶು ಆಹಾರ ವಿಶೇಷವಾಗಿ ಸೋಯಾ ಬೆಳೆಯಲು ಬಳಸಲಾಗುತ್ತಿದೆ.

ಭಾರತವು ಪ್ರತಿವರ್ಷ 1.3ದಶಲಕ್ಷ ಹೆಕ್ಟೇರು ಭೂಮಿಯನ್ನು ಕಳೆದುಕೊಳ್ಳುತ್ತಿದೆ. ಅರಣ್ಯ ನಾಶದ ಒಂದು ಮುಖ್ಯಕಾರಣವೆಂದರೆ ಗಿಡಮರಗಳನ್ನು ಅವ್ಯಾಹತವಾಗಿ ಕಡಿಯುವದು. ರಾಷ್ಟ್ರೀಯ ದೂರಸಂವೇದಿ ಸಂಸ್ಥೆ (ಒ.ಐ.ಐ.೦) ಯ ಪ್ರಕಾರ ನಮ್ಮ ಭೌಗೋಳಿಕ ಕ್ಷೇತ್ರದ ಶೇಕಡಾ 33ರಷ್ಟು ಇರಬೇಕಾಗಿದ್ದ ಅರಣ್ಯಗಳು ಈಗ ಭಾರತದಲ್ಲಿ ಕೇವಲ ಶೇಕಡಾ 19ರಷ್ಟು ಮಾತ್ರ ಇವೆ. ವೇದಗಳಲ್ಲಿ ಋಷಿ ಮತ್ತು ದಿವ್ಯ ಪುರುಷರನ್ನು ಗಿಡಗಳಿಗೆ ಹೋಲಿಸಲಾಗಿದೆ. ಯಾಕೆಂದರೆ ಗಿಡಮರಗಳ ಹಾಗೆ ಪ್ರತಿಯೊಬ್ಬರಿಗೂ ಅವರು ದಯೆ ತೋರುತ್ತಾರೆ. ಬೇರೆಯವರಿಗಾಗಿ ಅವರು ಬದುಕುತ್ತಾರೆ. ಗಿಡಮರಗಳು ಎಂದೂ ಯಾರ ವಿರುದ್ಧವೂ ದೂರುಕೊಡುವುದಿಲ್ಲ. ಬದಲಿಗೆ ಉಚಿತವಾಗಿ ಫಲಪುಷ್ಪಗಳನ್ನು ನೀಡುತ್ತವೆ. ಬಿಸಿಲಿನಲ್ಲಿ ತಂಪಾದ ನೆರಳನ್ನು ಕೊಡುತ್ತವೆ. ಮಳೆ, ಬಿರುಗಾಳಿಯಲ್ಲಿ ಆಶ್ರಯ ಕೊಡುತ್ತವೆ. ನಮ್ಮ ಇಂಧನದ ಅಗತ್ಯಗಳನ್ನು ಪೂರೈಸಲು ತಮ್ಮ ದೇಹವನ್ನೇ ಬೆಂಕಿಗೆ ಒಡ್ಡುತ್ತವೆ.

ಪರಿಸರ ಎಂಬುದು ಪವಿತ್ರವಾಗಿದೆ ಎಂಬ ನಿಶ್ಚಿತ ಸತ್ಯವನ್ನು ನಾವು ಒಪ್ಪಿಕೊಳ್ಳದಿದ್ದರೆ ನಾವು ಅದನ್ನು ಎಂದೂ ಗೌರವದಿಂದ ಕಾಣುವುದಿಲ್ಲ. ಕೆಲವರಿಗೆ ನಿಸರ್ಗವೆಂಬುದು ಭಗವಂತನ ಪ್ರತಿರೂಪ. ಅದಾಗ್ಯೂ ಆಧುನಿಕ ಕೈಗಾರಿಕಾ ಜಗತ್ತು ನಿಸರ್ಗವನ್ನು ನಿರ್ಭಯದಿಂದ, ನಿಷ್ಕರುಣೆಯಿಂದ ನಾಶಮಾಡುತ್ತಿದೆ. ನಿಸರ್ಗ ಸಂರಕ್ಷಣೆ, ಸ್ವಚ್ಛತೆಯ ಬಗ್ಗೆ ಶಿಕ್ಷಣ ಮುಂತಾದವು ನಮ್ಮ ಹಿಂದಿನ ಬದುಕಿನಲ್ಲಿ ಕಾಣುತ್ತೇವೆ. ನದಿ, ಸರೋವರಗಳನ್ನು ಗೌರವಿಸಿ ಅವುಗಳನ್ನು ಸ್ವಚ್ಛವಾಗಿಟ್ಟುಕೊಂಡಿದ್ದೆವು. ಪ್ರಾಣಿ, ವೃಕ್ಷ, ಸಸ್ಯ ಎಲ್ಲ ಸಜೀವ ವಸ್ತುಗಳಲ್ಲಿ ನಾವು ದೈವತ್ವವನ್ನು ಕಾಣುತ್ತಿದ್ದೆವು. ಇದರಿಂದ

ವಾಹನಗಳ ಸಂಖ್ಯೆ ಕಡಿಮೆಯಾದರೆ ವಾಯುಮಾಲಿನ್ಯ ನಿಯಂತ್ರಿಸಬಹುದು. ನಮಗೆ ಅವಶ್ಯವಿರುವಷ್ಟು ಮತ್ತು ಕಡಿಮೆ ಪ್ರಮಾಣದ ಸರಕುಗಳನ್ನು ಬಳಸುವುದರಿಂದ ತ್ಯಾಜ್ಯ ವಸ್ತುಗಳ ಉತ್ಪಾದನೆ ಕಡಿಮೆಯಾಗುವದು. ಆದ್ದರಿಂದ ಕಸ ನಿರ್ವಹಣೆಯೂ ಒಂದು ಮಹತ್ವದ ಸಂಗತಿಯಾಗಿದ್ದು ಅದನ್ನು ಕಟ್ಟುನಿಟ್ಟಾಗಿ ಮುಂದುವರೆಸಿಕೊಂಡು ಹೋಗಬೇಕು.

ಸರೋವರಗಳು, ನದಿಗಳು, ದೇವಾಲಯದ ಕೆರೆಕಟ್ಟೆಗಳು ಮುಂತಾದ ಜೀವಜಲ ತಾಣಗಳು ಮರುಪೂರಣಗೊಂಡರೆ ಹವಾಮಾನದ ಉಷ್ಣತೆ ಹಾಗೂ ವಾತಾವರಣದ ಸಮತೋಲನ ಕಾಪಾಡಲು ಸಾಧ್ಯವಾಗುತ್ತದೆ. ಜಾಣತನದಿಂದ ಮಳೆ ನೀರು ಕೊಯ್ಲು (ಶೇಖರಣೆ) ಮಾಡಿದರೆ ನಮ್ಮ ನೀರಿನ ಕೊರತೆಯೂ ಇರುವುದಿಲ್ಲ. ಹಾಗೂ ಮಣ್ಣಿನ ಒಳಪದರಿನ ಪೋಷಕಾಂಶಗಳ ಸುಧಾರಣೆ ಮುಂದುವರೆಯುವದು.

ಅಥರ್ವವೇದದಲ್ಲಿ 'ಪೃಥ್ವಿ ಸೂಕ್ತ' ಎಂಬ ಒಂದು ಸಂಪೂರ್ಣ ಮಂತ್ರವು ಭೂಮಾತೆಯ ಗುಣಗಾನ ಮಾಡಲು ಮೀಸಲಾಗಿದೆ. ಈ ಮಂತ್ರದ 63 ಸಾಲುಗಳು ನಿಸರ್ಗದ ಕುರಿತು ಮತ್ತು ಭೂಮಿ (ನಿಸರ್ಗ)ಯ ಮೇಲೆ ಮನುಷ್ಯ ಹೇಗೆ ಅವಲಂಬಿಸಿದ್ದಾನೆ, ಅದಕ್ಕಾಗಿ ಅವನು ನಿಸರ್ಗಕ್ಕೆ ಹೇಗೆ ಋಣಿಯಾಗಿರಬೇಕು ಎಂಬುದರ ಕುರಿತು ನಮ್ಮ ಪ್ರಾಚೀನ ಋಷಿಮುನಿಗಳ ವಿಚಾರಗಳನ್ನು ಸಂಯೋಜಿಸಿ ತಿಳಿಸುತ್ತದೆ.

"ಓ ಭೂತಾಯಿಯೇ ನಿನ್ನ ಗಿರಿಬೆಟ್ಟಗಳು, ಹಿಮಪರ್ವತಗಳು, ದಟ್ಟ ಅರಣ್ಯಗಳು ಬಹಳ ಪವಿತ್ರವಾಗಿವೆ. ನೀನು ಅದೆಷ್ಟು ಫಲವತ್ತಾಗಿರುವೆ, ಉಳಿಮೆಯೋಗ್ಯವಾಗಿರುವೆ. ಎಲ್ಲರನ್ನು ಪೋಷಿಸುವೆ. ಎಲ್ಲ ದೇಶಗಳ ಎಲ್ಲ ಜನಾಂಗಗಳನ್ನು ಹೇಗೆ ಪೋಷಿಸುತ್ತಾ ಹೊರಟಿರುವೆ. ನೀನು ನಿನ್ನ ಕೋಪ (ನೈಸರ್ಗಿಕ ಪ್ರಕೋಪಗಳು)ದಿಂದ ನಮ್ಮನ್ನು ರಕ್ಷಿಸು. ನಿನ್ನ ಮಕ್ಕಳನ್ನು ಯಾರೊಬ್ಬರೂ ಶೋಷಿಸದಿರಲಿ, ಸೋಲಿಸದಿರಲಿ. (ಅಥರ್ವವೇದ 12.1.11)

ನಾಲ್ಕು ಸಾವಿರ ವರುಷಗಳ ಹಿಂದೆ ಅಥರ್ವವೇದವು ಎಲ್ಲಾ ಮತಪಂಥದವರ, ಎಲ್ಲಾ ಜನಾಂಗಗಳ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಸಾಮರಸ್ಯವನ್ನು ಪ್ರಶಂಸಿಸಿದೆ. ಅಷ್ಟೇ ಅಲ್ಲ ಅದು ಭೂಮಾತೆಯೇ ಜಗತ್ತಿನ ಯಾವುದೇ ಭಾಗದಲ್ಲಿರುವ ಜನತೆಗೆ ಭಾರತದ ಋಷಿಮುನಿಗಳು ಕೋರಿದ ಎಲ್ಲ ಸುಖ ಸಮೃದ್ಧಿಯನ್ನು ದಯಪಾಲಿಸು ಎಂದು ಪ್ರಾರ್ಥಿಸುತ್ತದೆ.

"ಭೂಮಾತೆಯು ವಿಭಿನ್ನ ಜನಾಂಗದ, ವಿಭಿನ್ನವಾದ ಮತಧರ್ಮಗಳ, ವಿವಿಧ ಭಾಷೆಗಳನ್ನಾಡುವ ಎಲ್ಲ ಜನರಿಗೂ ಹಲವು ವಿಧಗಳಲ್ಲಿ ಅವರನ್ನು ಪೋಷಿಸುತ್ತದೆ. ಈ ಭೂಮಾತೆಯು ಕಾಮಧೇನುವಿನಂತೆ ಇದೆ. ನಾವೆಷ್ಟು ವಿನಾಶಕಾರಕ ಕಾರ್ಯಗಳಲ್ಲಿ ತೊಡಗಿದರೂ ಸಹಿತ ನಿಸ್ಸಂದೇಹವಾಗಿ ಅದು ಎಲ್ಲರಿಗೂ ಸಾವಿರಪಟ್ಟು ಸಮೃದ್ಧಿಯನ್ನು ಕೊಡುತ್ತದೆ"( ಅಥರ್ವವೇದ 12.1.45).

ಧರ್ಮ ಎಂದರೇನು? ಅದಕ್ಕೆ ಅನೇಕ ಅರ್ಥಗಳಿವೆ. ಆದರೆ ಮಹಾಭಾರತದ ಶಾಂತಿಪರ್ವದಲ್ಲಿ (109.00) ಧರ್ಮದ ನೇರ ಅರ್ಥವನ್ನು ವಿವರಿಸಿದೆ. ಧರ್ಮ



ಅಂದರೆ ನೀತಿಯಿಂದ ನಡೆಯುವುದು ನ್ಯಾಯಸಮ್ಮತವಾಗಿರುವುದು. ಅದು ಎಲ್ಲ ಜೀವರಾಶಿಗಳ ಅಭ್ಯುದಯವನ್ನು (ಕಲ್ಯಾಣವನ್ನು) ಸಾರ್ವತ್ರಿಕವಾಗಿ ಮಾಡುತ್ತದೆ. ಎಲ್ಲ ಜೀವಿಗಳ ಸುಸ್ಥಿರ ಕಲ್ಯಾಣವೇ ನಿಶ್ಚಿತವಾಗಿಯೂ ಧರ್ಮವಾಗಿದೆ. ಧರ್ಮ ಎಂದರೆ ಜನರ, ಪ್ರಾಣಿಗಳ, ಪರಿಸರದ ಸೇವೆ ಮಾಡುವುದು. ಹೀಗೆ ಮಾನವ ಸಮಾಜ ಹಾಗೂ ನೈತಿಕತೆಯನ್ನು ಒಂದಾಗಿ ಹೊಸೆಯುವ ಹಲವು ಕರ್ತವ್ಯಗಳ ಒಂದು ಸೂಡಾಗಿದೆ. ಅದು ಸಾಮಾಜಿಕ, ಪರಿಸರದ ಹಾಗೂ ವಿಶ್ವದ ಸಾಮರಸ್ಯವನ್ನು ಕಾಪಾಡುತ್ತದೆ. ವ್ಯಕ್ತಿಗತ ಹಾಗೂ ವಿಶ್ವದ ಸಾಮರಸ್ಯವನ್ನು ಕಾಪಾಡುತ್ತದೆ. ವ್ಯಕ್ತಿಗಳ ಹಾಗೂ ಸಾಮೂಹಿಕ ಚಾರಿತ್ರ್ಯ ನಿರ್ಮಾಣವೇ ಧರ್ಮ. ದೇವ ನಿರ್ಮಿತ ಎಲ್ಲ ಜೀವಿಗಳೊಂದಿಗಿನ ಸಂಬಂಧಗಳನ್ನು ಅರಿತುಕೊಳ್ಳುವುದು ಹಾಗೂ ಸಾಮರಸ್ಯವನ್ನು ಎತ್ತಿ ಹಿಡಿಯುವುದು. ನಾವು ಪ್ರಾಣಿಗಳನ್ನು ಹಿಂಸಿಸುವದು, ಅವುಗಳನ್ನು ನಮ್ಮ ಸ್ವಾರ್ಥಕ್ಕಾಗಿ ಪಂಜರದಲ್ಲಿಡುವುದರಿಂದ ಧರ್ಮವನ್ನು ಆಚರಿಸಿದಂತಾಗುತ್ತದೆಯೆ?

ಭಾರತದ ಪರಿಸರದ ಸಮಸ್ಯೆಗಳು ಅಂತರ್ ಸಂಬಂಧಿತವಾಗಿವೆ. ಜನಸಂಖ್ಯೆಯ ಒತ್ತಡ ಹಾಗೂ ನಗರೀಕರಣದಿಂದ ನಮ್ಮ ನಿಸರ್ಗ ಸಂಪತ್ತು ಹಾಳಾಗುತ್ತಿದೆ ಹಾಗೂ ಪರಿಸರವೂ ಕೆಡುತ್ತಿದೆ. ನಗರ ಪ್ರದೇಶಗಳಲ್ಲಿ ನಾಗರಿಕ ಸೌಕರ್ಯಗಳನ್ನು ಹೆಚ್ಚಿಸಬೇಕಾದುದರಿಂದ ಅದರ ಸಂಪನ್ಮೂಲಗಳ ಕೊರತೆಯಾಗುತ್ತದೆ. ಜಲ ಮತ್ತು ವಾಯು ಮಾಲಿನ್ಯದಿಂದ ಜನರ ಆರೋಗ್ಯ ಹದಗೆಡುತ್ತದೆ. ಜನರ ಆಹಾರದ ಅವಶ್ಯಕತೆಯನ್ನು ಪೂರೈಸಲು, ಕೃಷಿ ಉತ್ಪನ್ನಗಳು, ಉರವಲು, ಕಲ್ಮಶಗಳು ಹಾಗೂ ಮರಮುಟ್ಟುಗಳನ್ನು ಪೂರೈಸಬೇಕೆನ್ನುವ ನಮ್ಮ ಭೂನಿರ್ವಹಣಾ ನೀತಿಯು ನಮ್ಮ ಪರಿಸರ ವ್ಯವಸ್ಥೆಯನ್ನು ಭೀಕರವಾಗಿ ಹಾಳುಮಾಡುತ್ತಿದೆ. ಭೂಮಿಯ ಬರಡಾಗುವಿಕೆ ಹೆಚ್ಚುತ್ತಿದೆ. ಮರೆಯಾಗುತ್ತಿರುವ ಅರಣ್ಯಗಳಿಂದ ನಮ್ಮ ಭೂಗ್ರಹದ ಭವಿಷ್ಯವೇ ಡೋಲಾಯಮಾನವಾಗಿದೆ. ಹಾಗೂ ಮನುಷ್ಯನ ಉಳಿವಿಗೇ ಸವಾಲಾಗಿದೆ. ಹಾನಿಕಾರಕ ರಸಾಯನಗಳು ನಮ್ಮ ಅಲ್ಪಾವಧಿಯ ಅವಶ್ಯಕತೆಗಳನ್ನು ಪೂರೈಸಬಲ್ಲವು. ಆದರೆ ದೀರ್ಘಕಾಲೀನ ಅವುಗಳ ಕೆಟ್ಟ ಪರಿಣಾಮದ ಕುರಿತು ನಾವು ಆಲೋಚಿಸುತ್ತಿಲ್ಲ. ಅರಣ್ಯನಾಶದಿಂದ ಭೂಮಿ, ಫಲವತ್ತಾದ ಮಣ್ಣು, ದನಗಳ ಮೇವು, ಉರುವಲು ಕಟ್ಟಿಗೆ, ಮರದಿಮ್ಮಿಗಳ ತೀವ್ರ ಅಭಾವವಾಗುತ್ತದೆ. ಕೈಗಾರಿಕಾ ಚಟುವಟಿಕೆಗಳ ದುಷ್ಪರಿಣಾಮಗಳು ಮಾನವನ ವಲಸೆ ಹಾಗೂ ಪುನರ್‌ವಸತಿಯ ರೀತಿನೀತಿಗಳು ನಮ್ಮ ನಿಸರ್ಗ ಸಂಪತ್ತಿನ ಮೇಲೆ ಭಾರೀ ಒತ್ತಡವನ್ನು ಹಾಕುತ್ತವೆ. ಆದರೆ ಇಂತಹ ಒತ್ತಡಗಳಿಂದ ಭಾರತ ತನ್ನ ನಿಸರ್ಗ ಸಂಪತ್ತನ್ನು ರಕ್ಷಿಸಬೇಕಾಗಿದೆ. ಅಷ್ಟೇ ಅಲ್ಲ, ಬೆಳೆಸಬೇಕಾಗಿದೆ. ಕೊನೆಯದಾಗಿ ನಮ್ಮ ದೇಶದಲ್ಲಿ ಬಡತನ ಇರುವವರೆಗೂ ತಾನು ಅಭಿವೃದ್ಧಿ ಹೊಂದಿದ ದೇಶ ಎಂಬ ಕನಸನ್ನು ನನಸನ್ನಾಗಿ ಮಾಡಿಕೊಳ್ಳಲಾಗದು. ತಮ್ಮ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಅಲ್ಪಾವಧಿ ಲಾಭಕ್ಕಾಗಿ ಅವರು ಪರಿಸರವನ್ನು ಹಾಳು ಮಾಡಲು ಹಿಂಜರಿಯುವುದಿಲ್ಲ.

ನಾವು ನಿಸರ್ಗದಿಂದ ದೂರವಾಗಿ, ನಿಸರ್ಗವನ್ನು ಗೆದ್ದಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ. ನಾವು ನಮ್ಮ ಸುತ್ತಲೂ ಒಂದು ಕೃತ್ರಿಮವಾದ ಗುರುಳೆ ([illegible]) ಯನ್ನು ಆವರಿಸಿಕೊಂಡಿದ್ದೇವೆ. ಕೃತ್ರಿಮವಾಗಿ ಹವಾನಿಯಂತ್ರಿತ ಮನೆಗಳಲ್ಲಿ ವಾಸವಾಗಿದ್ದೇವೆ.

ಅನಾರೋಗ್ಯಕರವಾಗಿದ್ದರೂ ಒಳ್ಳೆಯ ಆಹಾರವೆಂದು ಅದನ್ನೇ ತಿನ್ನುತ್ತಿದ್ದೇವೆ. ನಮ್ಮ ಜೀವನವೇ ಕೃತಕವಾಗಿದೆ. ಈಗ ಇಂತಹ ಹಿತವಾದ ಜೀವನ ಮುಗಿಯಿತು. ಈಗ ಭೂಮಂಡಲವೇ ಬಿಸಿಯಾಗುತ್ತಿದೆ. ಹವಾಮಾನ ಬದಲಾಗುತ್ತಿದೆ. ಶ್ರೀಮಂತ ನಿಸರ್ಗ ಸಂಪತ್ತು ಕಾಣೆಯಾಗುತ್ತಿದೆ. ನಾವು ಅದಕ್ಕಾಗಿ ಏನ್ನೇನು ಮಾಡಬೇಕಾಗಿದೆ?

ನಾನು ಅಥರ್ವವೇದ ಋಷಿಗಳು ಹೇಳಿದ್ದನ್ನೇ ಇಲ್ಲಿ ಹೇಳಬಯಸುವೆ. "ಆಕಾಶದಲ್ಲಿ ಶಾಂತಿ ಇರಲಿ. ಪರಿಸರದಲ್ಲಿ ಶಾಂತಿ ಇರಲಿ. ಸಸ್ಯ ಸಂಪತ್ತಿನಲ್ಲಿ ಶಾಂತಿ ಇರಲಿ. ಅರಣ್ಯಗಳಲ್ಲಿ ಶಾಂತಿ ಇರಲಿ. ಎಲ್ಲ ಶಕ್ತಿಗಳು ಶಾಂತವಾಗಿರಲಿ. .. ಎಲ್ಲೆಡೆಯಲ್ಲಿಯೂ ದಟ್ಟವಾದ ಹಿತಕರವಾದ ಶಾಂತಿ ಇರಲಿ."

ಯುವ ವಿದ್ಯಾರ್ಥಿನಿಯರೇ, ನೀವು ನಿಮ್ಮ ಹೊಸಜೀವನಕ್ಕೆ ಹೋಗುವ ಹೊಸ್ತಿಲಲ್ಲಿರುವಿರಿ. ನಿಮಗೆ ನನ್ನ ಸಂದೇಶವಿಷ್ಟೇ. ನೀವು ನಿಸರ್ಗವನ್ನು ಸಂಪೂರ್ಣವಾಗಿ ಗೌರವಿಸಲು ಪ್ರಯತ್ನಿಸಿ. ಅಂದರೆ ಈ ಗ್ರಹದ ಮೇಲೆ ನಮ್ಮಷ್ಟೆ ಬದುಕುವ ಹಕ್ಕನ್ನು ಪಡೆದಿರುವ ಪ್ರಾಣಿಗಳನ್ನು, ನಾವು ನಾಶ ಮಾಡುತ್ತಿರುವ ಗಿಡಮರಗಳನ್ನು, ನಾವು ಮಲಿನಗೊಳಿಸುತ್ತಿರುವ ನೀರು ಮತ್ತು ವಾಯುವನ್ನು, ಎಲ್ಲವನ್ನು ಪ್ರೀತಿಸಿ, ಗೌರವಿಸಿ. ಮಹಾತ್ಮಾ ಗಾಂಧೀಜಿಯವರು ಇದನ್ನೇ ಹೇಳಿದ್ದಾರೆ. "ಪ್ರತಿಯೊಬ್ಬರ ಅವಶ್ಯಕತೆಗಳನ್ನು ಪೂರೈಸಲು ಈ ನಿಸರ್ಗದಲ್ಲಿ ಸಾಕಷ್ಟಿದೆ. ಆದರೆ ಅವರ ದುರಾಸೆಯನ್ನು ಪೂರೈಸಲು ಅಲ್ಲ".

ನಾವು ಪರಸ್ಪರ ಪ್ರೀತಿಸುವ, ರಕ್ಷಿಸುವ ಹಾಗೂ ಹಂಚಿಕೊಳ್ಳುವವರಾದರೆ ಜಗತ್ತಿನ ಭವಿಷ್ಯ ಸುಂದರವಾಗುವುದು. ಮ್ಯಾಥ್ಯೂ ಅರ್ನಾಲ್ಡ್ ಅವರು "ಶಿಕ್ಷಣವೆಂದರೆ ಒಳ್ಳೆಯದನ್ನು ಒಳ್ಳೆಯ ರೀತಿಯಲ್ಲಿ ಒಳ್ಳೆಯ ಕಾಲಕ್ಕೆ ಮಾಡುವ ಜಾಣತನ" ಎಂದಿದ್ದಾರೆ. ಉನ್ನತಮಟ್ಟದಲ್ಲಿ ಉದಾರವಾದ ಶಿಕ್ಷಣವು ಅತ್ಯುತ್ತಮ ಸ್ವಾತಂತ್ರ್ಯವನ್ನು, ಮನಸ್ಸು ಮತ್ತು ಪ್ರಜ್ಞೆಯ ಆತ್ಮ ಪ್ರಕಾಶವನ್ನು ಒದಗಿಸುತ್ತದೆ.

ನಮ್ಮ ಯುವಜನಾಂಗಕ್ಕೆ ಸಾರ್ವತ್ರಿಕ ಹಾಗೂ ಶಾಶ್ವತ ಧ್ಯೇಯೋದ್ದೇಶಗಳಿಗಾಗಿ ತಮ್ಮ ಸಹಜೀವಿಗಳಿಗಾಗಿ ಹಾಗೂ ಸಹಜೀವಿಗಳೊಂದಿಗೆ ಕೆಲಸಮಾಡುವ ಶಕ್ತಿ, ಜ್ಞಾನ ಹಾಗೂ ಇಚ್ಛೆಗಳನ್ನು ದೊರಕಿಸುವುದೇ ನಮ್ಮ ಶಿಕ್ಷಣದ ಗುರಿಯಾಗಿರಲಿ.

7 ನೆಯ ಘಟಿಕೋತ್ಸವ ಭಾಷಣ ದಿನಾಂಕ: 4 ಮಾರ್ಚ 2016

*******



# ವಿಜ್ಞಾನದಲ್ಲಿ ಮಹಿಳೆ: ವೃತ್ತಿ ಸಾಧನೆಯತ್ತ ಮತ್ತು ರಾಷ್ಟ್ರೀಯ ಪ್ರಗತಿಗಾಗಿ

- ಡಾ. ಮಂಜುಶರ್ಮಾ

ಘನತೆವೆತ್ತ ಕುಲಾಧಿಪತಿಯವರೆ, ಮಾನ್ಯ ಸಮಕುಲಾಧಿಪತಿಯವರೆ, ಕುಲಪತಿಯವರೆ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೆ, ವಿದ್ಯಾವಿಷಯಕ ಪರಿಷತ್ ಸದಸ್ಯರೆ, ಆಮಂತ್ರಿತ ಗಣ್ಯರೆ, ಮಾಧ್ಯಮ ಪ್ರತಿನಿಧಿಗಳೆ ಹಾಗೂ ನನ್ನ ಪ್ರೀತಿಯ ವಿದ್ಯಾರ್ಥಿನಿಯರೆ, ಸರ್ ಸಿ.ವ್ಹಿ.ರಾಮನ್ನರು, ಮದ್ರಾಸ್ ವಿಶ್ವವಿದ್ಯಾಲಯದ 1942ರ ಘಟಿಕೋತ್ಸವ ಭಾಷಣದಲ್ಲಿ ಹೀಗೆ ಹೇಳಿದ್ದರು: "ಒಂದು ರಾಷ್ಟ್ರದ ನಿಜವಾದ ಸಂಪತ್ತು ಅದರ ಸರಕಾರಿ ಖಜಾನೆಗಳಲ್ಲಿ ಕೂಡಿಟ್ಟ ಬಂಗಾರವಲ್ಲ; ಅದರ ಕಾರ್ಖಾನೆಗಳೂ ಅಲ್ಲ; ಅದು ಆ ದೇಶದ ಪುರುಷರು, ಮಹಿಳೆಯರು ಮತ್ತು ಮಕ್ಕಳಲ್ಲಿರುವ ಬೌದ್ಧಿಕ ಹಾಗೂ ದೈಹಿಕ ಶಕ್ತಿಯಲ್ಲಿದೆ".

ಈ ದೇಶವು ತನ್ನ ವಿದ್ಯಾಮಂಡಲ ಹಾಗೂ ಸಂಶೋಧನ ಸಂಸ್ಥೆಗಳ ಮೂಲಕ ರಾಷ್ಟ್ರೀಯ ವಿಜ್ಞಾನ ದಿನವನ್ನು 2015 ಫೆಬ್ರವರಿ 28ರಂದು ಆಚರಿಸಿತು. ಅದು

ಸರ್ ಸಿ. ವ್ಹಿ. ರಾಮನ್ನರು 'ರಾಮನ್ ಇಫೆಕ್ಟ್' ಎಂಬುದನ್ನು ಕಂಡುಹಿಡಿದ ದಿನ. ಅಂದಿನಿಂದ ವಿದ್ಯಾರ್ಥಿಗಳು, ಅದರಲ್ಲೂ ಯುವತಿಯರು, ರಾಮನ್‌ರನ್ನು ರಾಷ್ಟ್ರೀಯ ಕಣ್ಮಣಿ ಎಂದು ಎಣಿಸತೊಡಗಿದ್ದಾರೆ. ಅನೇಕರು ವಿಜ್ಞಾನವನ್ನು ಒಂದು ವೃತ್ತಿ, ಮಾರ್ಗವೆಂದು ಕೈಕೊಳ್ಳಲು ಉತ್ಸಾಹಿತರಾಗಿದ್ದಾರೆ. ಅಂಥವರಲ್ಲಿ ಕೆಲವರು ಈ ದೇಶದ ನಾಯಕರೂ, ಪ್ರತಿಷ್ಠಿತ ವಿಜ್ಞಾನಿಗಳೂ ಆಗಿದ್ದಾರೆ.

'ಸ್ಟ್ರೇ ಬರ್ಡ್ಸ್' (Stray Birds) ಎಂಬ ತಮ್ಮ ಒಂದು ಕವನದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಹೀಗೆ ಹೇಳುತ್ತಾರೆ: "ಮಹಿಳೆಯರೆ, ನಿಮ್ಮ ಮನೆಗಳಲ್ಲಿ ನೀವು ಸುತ್ತಾಡುತ್ತಿರುವಾಗ ನಿಮ್ಮ ಅಂಗಾಂಗಳು ಬೆಟ್ಟದ ತೊರೆಯಂತೆ, ಅದರಲ್ಲಿನ ನುಣುಪಾದ ಕಲ್ಲುಗಳು ಹಾಡುವಂತೆ ಹಾಡುತ್ತವೆ. ಭೂಮಿಯನ್ನು ಸಾಗರವು ಸುತ್ತುವರಿದಂತೆ, ನಿಮ್ಮ ಕಣ್ಣೀರಿನ ಅಲೆವು ಜಗದ ಹೃದಯವನ್ನು ಸುತ್ತುವರಿದಿದೆ. ಮಹಿಳೆಯರೆ, ನಿಮ್ಮ ನಗೆಯಲ್ಲಿ ಬಾಳ ಕಾರಂಜಿಯಲ್ಲಿ ಸಂಗೀತವಿದೆ."

ಮಾನವ ಸಂಪನ್ಮೂಲದ ಸುಮಾರು ಅರ್ಧದಷ್ಟು ಭಾಗವನ್ನು ಮಹಿಳೆಯರೇ ಹೊಂದಿದ್ದಾರೆ. ಆದರೆ ಗಣಿತ, ಭೌತಶಾಸ್ತ್ರ, ಇಂಜಿನಿಯರಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಅವರ ಸಂಖ್ಯೆ

ಬಹಳ ಕಡಿಮೆ ಇದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಅಂಕಿಸಂಖ್ಯೆಗಳು ಹೀಗಿವೆ:

| | |
|---|---|
| ಒಟ್ಟು ಸಾಕ್ಷರತಾ ಪ್ರಮಾಣ | : 74.04% |
| ಮಹಿಳಾ ಸಾಕ್ಷರತಾ ಪ್ರಮಾಣ | : 65.50% |
| ಪುರುಷ ಸಾಕ್ಷರತಾ ಪ್ರಮಾಣ | : 82.10% |
| ಕಾನೂನಿನ ಪ್ರಕಾರ ಮದುವೆಯ ವಯಸ್ಸಿಗಿಂತ ಮುಟ್ಟಾಗುವ ಮೊದಲು ಮದುವೆಯಾಗುವ ಹುಡುಗಿಯರ ಸಂಖ್ಯಾ ಪ್ರಮಾಣ | : 2% ದಿಂದ 46% |
| ಮನೆಯ ನಿರ್ವಹಣೆಯಲ್ಲಿ ನಿರ್ಣಯ ಕೈಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವವರು | : 36.70% |

(ಭಾರತಕ್ಕೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆ 2012–2017ರ ಅವಧಿಗಾಗಿ ಮಾಡಿದ ವರದಿ)

"ಜಗತ್ತಿನಾದ್ಯಂತ ಮಾನವಕುಲಕ್ಕೆದುರಾಗಿರುವ ಸಮಸ್ಯೆಗಳನ್ನು ಪರಿಹರಿಸಲು, ಉತ್ತಮ ವೈಜ್ಞಾನಿಕ, ತಾಂತ್ರಿಕ, ವೈದ್ಯಕೀಯ, ಕೃಷಿ ಸಂಬಂಧಿ, ಪರಿಸರ ಸಂಬಂಧಿ, ಜೀವವಿಜ್ಞಾನ ಸಂಬಂಧಿ ಜ್ಞಾನ ಅವಶ್ಯಕವಾಗಿದೆ. ನಮಗೆ ಆರ್ಥಿಕ ಪರಿವರ್ತನೆ, ನೈಸರ್ಗಿಕ ಸಂಪನ್ಮೂಲಗಳ ಅವ್ಯಾಹತ ಬಳಕೆ, ಬಡತನ ನಿರ್ಮೂಲನ, ಹಸಿವಿನ ಶೂನ್ಯೀಕರಣ, ರೋಗಗಳ ನಿಯಂತ್ರಣ ಇವೆಲ್ಲ ಬೇಕಾಗಿದ್ದರೆ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳು, ಎಲ್ಲ ಸ್ತರಗಳಲ್ಲಿ – ಅಂದರೆ ನಗರ ಪ್ರದೇಶಗಳಲ್ಲಿ ಮತ್ತು ತಳಸ್ತರದಲ್ಲಿ ಮಾನವ ಸಾಮರ್ಥ್ಯವನ್ನು ಕಟ್ಟಿಬೆಳೆಸುವುದು ಅವಶ್ಯ. ಮಹಿಳೆಯರ ತಾಂತ್ರಿಕ ಸಬಲೀಕರಣ ಅತ್ಯಂತ ಅವಶ್ಯಕವಾಗಿದೆ. ವಿಕಾಸಶೀಲ ಚಟುವಟಿಕೆಗಳಲ್ಲಿ ಹಾಗೂ ಸಾಮಾಜಿಕ ಸುಧಾರಣೆಗಳಲ್ಲಿ ಮಹಿಳೆಯರ ಒಳಗೊಳ್ಳುವಿಕೆ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಳ್ಳುವಿಕೆ ಇವುಗಳು ಸಾಮಾಜಿಕ, ಆರ್ಥಿಕ ಪ್ರಗತಿಯ ಅವಿಭಾಜ್ಯ ಅಂಗವಾಗಿರಬೇಕು. ನಮಗೆ ಅರಿವಿರುವಂತೆ, ವಿಶೇಷತಃ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಪರಿಸ್ಥಿತಿಯ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಯತ್ನಗಳ ಹೆಚ್ಚುಹೆಚ್ಚು ಬಳಕೆಯನ್ನು ಅಪೇಕ್ಷಿಸುತ್ತದೆ. ಮಹಿಳೆಯೆಂದರೆ ಕುಟುಂಬದ ಕೇಂದ್ರ ಬಿಂದು. ಮನೆಗೆಲಸವನ್ನು ಅಂದರೆ, ನೀರು ತರುವುದು, ಉರುವಲು ಕಟ್ಟಿಗೆ ಆಯುವುದು, ದನಗಳಿಗೆ ಹುಲ್ಲು ಮುಂತಾದ್ದನ್ನು ಹೊಂದಿಸುವುದು ಅಲ್ಲದೆ, ಮನೆಯಡಿಗೆಯನ್ನು ಮಾಡುವುದು ಆಕೆಯೇ. ಇದಲ್ಲದೆ ಆಕೆಯ ಮಹತ್ವದ ಪಾತ್ರವೆಂದರೆ ಮನೆಯ ಸಂಸ್ಕೃತಿಯನ್ನು ಕಾಪಾಡಿಕೊಂಡು ಹೋಗುವುದು, ಮಕ್ಕಳನ್ನು ಬೆಳೆಸುವುದು, ಅವರನ್ನು ತಿದ್ದುವುದು, ಅವರಿಗೆ ಓರಣವಾಗಿರಲು ಕಲಿಸುವುದು ಮತ್ತು ಈ ರೀತಿಯಲ್ಲಿ ಕುಟುಂಬದ ಭವಿಷ್ಯವನ್ನು ರೂಪಿಸುವುದು.

ಒಂದೇ ಒಂದು ಕ್ಷೇತ್ರದತ್ತ ನಮ್ಮ ದೃಷ್ಟಿ ಹರಿಸೋಣ. ಕೃಷಿ ಮತ್ತು ಮತ್ಸ್ಯ ಸಂವರ್ಧನೆ ಹಾಗೂ ಪಶುಸಂಗೋಪನೆಯಂತಹ ತತ್ಸಂಬಂಧೀ ಚಟುವಟಿಕೆಗಳು, ಮಹಿಳೆಯರು ತಮ್ಮ ಜೀವನೋಪಾಯಕ್ಕಾಗಿ ಮಾಡುವ ದುಡಿತದ 60%ರಷ್ಟನ್ನು ಮಾಡುವುದಲ್ಲದೆ, ಕುಟುಂಬಕ್ಕೆ ಅನ್ನ ಒದಗಿಸುತ್ತಾರೆ. ಆದರೆ ಅವರ ದುಡಿತದ ಕಷ್ಟ



ಕಡಿಮೆ ಮಾಡಲು ಸೌಲಭ್ಯಗಳನ್ನು ಒದಗಿಸಬೇಕೆಂದಾಗ, ಎಷ್ಟೋ ಅಡತಡೆಗಳಿವೆ. ಉದಾಹರಣಾರ್ಥವಾಗಿ ಬೇಸಾಯಕ್ಕೆ ಬೇಕಾಗುವ ಉಪಕರಣಗಳೆಲ್ಲವೂ ಪುರುಷರು ಉಪಯೋಗಿಸಬಹುದಾದಂಥವು ಮಾತ್ರ ಆಗಿರುತ್ತವೆ. ಅವುಗಳನ್ನು ನಾವು ಬದಲಿಸಬೇಕು, ಸುಧಾರಿಸಬೇಕು. ಬೇಕಿದ್ದರೆ, ಹೊಸ ಉಪಕರಣಗಳನ್ನು ಆವಿಷ್ಕರಿಸಿ, ಅವರ ದುಡಿಮೆಯ ಕಷ್ಟವನ್ನು ಪರಿಹರಿಸಬೇಕು. ಈ ದಿಸೆಯಲ್ಲಿ ಐಅಂಖ ಹಾಗೂ ನ್ಯಾಶನಲ್ ಅಕಾಡೆಮಿ ಆಫ್ ಸಾಯಿನ್ಸ್, ಇಂಡಿಯಾ ಕೆಲವು ಕಾರ್ಯಕ್ರಮಗಳನ್ನು ಚಾಲನೆಯಲ್ಲಿ ತಂದಿದೆ. ಈ ತೆರದ ಸಂಶೋಧನೆಯನ್ನು ಮಾಡುವ ವಿಜ್ಞಾನಿಗಳಿಗಾಗಿ ಒಂದು ಪ್ರಶಸ್ತಿಯನ್ನೂ ಇಡಲಾಗಿದೆ. ICAR (ಭಾರತೀಯ ಕೃಷಿ ಸಂಶೋಧನಾ ಪರಿಷತ್ತು) ಕೃಷಿಕ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿತವಾದ ಅನೇಕ ಯೋಜನೆಗಳನ್ನು ಕೈಕೊಂಡು ನಡೆಸುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಮುಂದುವರಿಕೆ ಮತ್ತು ಪ್ರಗತಿಯನ್ನು ಸುಗಮಗೊಳಿಸಲು ತೊಡಕಾಗಿರುವ ಲಿಂಗ ಸಂಬಂಧಿತ ಮತ್ತು ಮನೋಧೋರಣೆಯ ಸಮಸ್ಯೆಗಳನ್ನು ದೂರೀಕರಿಸಬೇಕಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರನ್ನು ನಿರಂತರ ಆಧಾರದ ಮೇಲೆ ಉಳಿಸಿಕೊಳ್ಳಲು ಅವರಿಗೆ ಎಲ್ಲ ಹಂತಗಳಲ್ಲಿ ಮಾರ್ಗದರ್ಶನ ಮತ್ತು ಪೋಷಣೆ ನೀಡಲ್ಪಡುವಂತಾಗಬೇಕು.

**ಅಂತಾರಾಷ್ಟ್ರೀಯ ದೃಶ್ಯಪಟ**

ಅಂತಾರಾಷ್ಟ್ರೀಯ ಮಹಿಳೆಯರ ದಿನದ ಬಗೆಗೆ ನಾನು ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಈ ದಿನವು 1900 ರಿಂದ ಇತ್ತೀಚೆಗೆ ಜಗತ್ತಿನ ಎಲ್ಲೆಡೆ ಮಾರ್ಚ್ 8 ರಂದು ಆಚರಿಸಲ್ಪಡುತ್ತಾ ಬಂದಿದೆ. ಜರ್ಮನಿಯ ಸೋಶಿಯಲ್ ಡೆಮೊಕ್ರ್ಯಾಟಿಕ್ ಪಾರ್ಟಿಯ ಮಹಿಳಾ ನಾಯಕಿಯಾದ ಕ್ಲ್ಯಾರಾ ಝೆಟ್ಕಿನ್ ಅವರು ಪ್ರತಿವರ್ಷ ಮಹಿಳೆಯರ ದಿನಾಚರಣೆ ಆಚರಿಸಬೇಕೆಂದು 1910ರಲ್ಲಿ ಕೋಪನ್‌ಹೇಗನ್‌ನಲ್ಲಿ ಕರೆಕೊಟ್ಟರು. ಮಹಿಳೆಯರನ್ನು ಸನ್ಮಾನಿಸುವುದರೊಂದಿಗೆ ಇತರ ಚಟುವಟಿಕೆಗಳೂ ಈ ದಿನದ ಅಂಗವಾಗಿರುತ್ತವೆ. 1975 ಅಂತಾರಾಷ್ಟ್ರೀಯ ಮಹಿಳಾ ವರ್ಷ ಎಂದು ಘೋಷಿತವಾಯಿತು.

ಅಂತಾರಾಷ್ಟ್ರೀಯ ದೃಶ್ಯಪಟದ ಮೇಲೆ ಕಣ್ಣು ಹಾಯಿಸುತ್ತಿದ್ದಂತೆ, ಕೆಲ ಘಟನೆಗಳನ್ನು ನಾನು ಉಲ್ಲೇಖಿಸುತ್ತೇನೆ.

ಜಗತ್ತಿನಾದ್ಯಂತ ನಡೆದ ಅನೇಕ ಘಟನೆಗಳು ಹಾಗೂ ಚಟುವಟಿಕೆಗಳು ಸಂಯುಕ್ತ ರಾಷ್ಟ್ರ ಸಂಘದ, ಸರ್ಕಾರಗಳ, ಸರ್ಕಾರೇತರ ಸಂಸ್ಥೆಗಳ, ವಿದ್ಯಾಮಂಡಲಿಗಳ ಹಾಗೂ ಇತರರ ಲಕ್ಷ್ಯವನ್ನು ಸೆಳೆದಿವೆ.

- 1975ರಲ್ಲಿ ಮೆಕ್ಸಿಕೋದಲ್ಲಿ ನಡೆದ ಸಂಯುಕ್ತರಾಷ್ಟ್ರದ ಮೊದಲ ಸಮ್ಮೇಳನವು ಮಹಿಳಾ ಸಂಬಂಧಿತ ಅನೇಕ ವಿಷಯಗಳನ್ನು ಚರ್ಚೆಗೆ ಎತ್ತಿಕೊಂಡಿತು.
- 2005ರಲ್ಲಿ UNU-IAS ಮಹಿಳೆ ಮತ್ತು ವಿಜ್ಞಾನದ ಬಗೆಗೆ ವರದಿ ಸಲ್ಲಿಸಿತು.
- 2005ರಲ್ಲಿ ಖಿಫಾಂಖ ಮಹಿಳೆಯರ ಬಗೆಗೆ ಒಂದು ಸ್ಥಾಯಿಸಮಿತಿ ರಚಿಸಿತು.
- ಬೀಜಿಂಗ್‌ನಲ್ಲಿ ಸಮಾವೇಶಗೊಂಡ ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನವು ಲಿಂಗ ಸಮಾನತೆಯನ್ನು ಬಹಳ ಸುಂದರವಾಗಿ ವರ್ಣಿಸಿತು. ಅದು ಹೀಗಿದೆ: "ಅದು

ಎಲ್ಲ ಮಾನವೀಯ ಹಕ್ಕುಗಳ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಅವಿಭಾಜ್ಯ, ಏಕಸೂತ್ರೀಯ ಹಾಗೂ ನಮ್ಮಿಂದ ದೋಚಲಾಗದ ಹಕ್ಕು."

- ಅದೇ ಬೀಜಿಂಗ ವಿಶ್ವ ಮಹಿಳಾ ಸಮ್ಮೇಳನವು ತನ್ನ ಘೋಷಣೆಯಲ್ಲಿ, 'ಸಮಾನತೆ, ವಿಕಾಸ, ಜಾಗತಿಕವಾಗಿ ಮಹಿಳೆಯರಿಗೆ ಶಾಂತಿ ಮತ್ತು ಸುರಕ್ಷೆ' ಎಂಬ ಅಂಶಗಳ ಮೇಲೆ ಒತ್ತು ನೀಡಿತು.
- IAC ಮಹಿಳೆಯರಿಗಾಗಿ ವಿಜ್ಞಾನ ಸಂಬಂಧಿ ಒಂದು ಸಲಹಾ ಸಮಿತಿ ರಚನೆ.
- ಚೀನಾ ಕೃಷಿ ವಿಜ್ಞಾನ ಕಾಲೇಜಿನಲ್ಲಿ ಚೀನಾ ಕೃಷಿ ವಿಶ್ವವಿದ್ಯಾಲಯದ 'ಮಹಿಳೆಯರು ಮತ್ತು ವಿಕಾಸ' ಎಂಬ ಯೋಜನೆ ಜಾರಿ.
- ಅಂತಾರಾಷ್ಟ್ರೀಯ ಕೃಷಿ ಸಂಶೋಧನಾ ಸಂಸ್ಥೆ (CGIAR) ಯಲ್ಲೊಂದು ಸಮಾಲೋಚನಾ ಗುಂಪೊಂದು ಕಾರ್ಯಮಾಡುತ್ತದೆ. ಇದರಲ್ಲಿ 8000 ವಿಜ್ಞಾನಿಗಳು, ತಂತ್ರಜ್ಞರು ಮತ್ತು ಪ್ರಬಂಧಕರು ಇದ್ದಾರೆ. ಅದು ಲಿಂಗ ಮತ್ತು ವೈವಿಧ್ಯತೆ ಎಂಬ ಯೋಜನೆಯನ್ನು ಸ್ಥಾಪಿಸಿದೆ. ಮೇಲಣ ಸಂಗತಿಗಳು ವಿಜ್ಞಾನದಲ್ಲಿ ಕಾರ್ಯಗೈಯುತ್ತಿರುವ ಮಹಿಳೆಯರ ಬಗೆಗೆ ಬೆಳೆಯುತ್ತಿರುವ ಪ್ರಜ್ಞೆ ಮತ್ತು ಅದರ ಪ್ರಸ್ತುತತೆಯನ್ನು ಎತ್ತಿತೋರಿಸುತ್ತದೆ.

**ಹಣಕಾಸಿನ ವಿಚಾರ ಹಾಗೂ ಪ್ರಸ್ತುತ ಅಂಕಿಸಂಖ್ಯೆಗಳು**

ರಾಷ್ಟ್ರೀಯ ಆರ್ ಆ್ಯಂಡ್ ಡಿ (ಸಂಶೋಧನೆ ಹಾಗೂ ವಿಕಾಸ) ಮಾಡಿದ ಖರ್ಚಿನ ವಿವರ: 1990–91ರಲ್ಲಿ 20,000 ಕೋಟಿ ಇದ್ದದ್ದು ಮಧ್ಯದಲ್ಲಿ ಇಳಿತ ಕಂಡು, 2005–2006 ರಿಂದ ಈಚೆಗೆ 50,000 ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ.

ಉಚ್ಚ ಶಿಕ್ಷಣ ಕ್ಷೇತ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನ ಶಾಖೆಗಳಲ್ಲಿರುವ ಮಹಿಳೆಯರ ಅಂಕಿಸಂಖ್ಯೆಗಳು ಇಂತಿವೆ: 1998–99ರಲ್ಲಿ ವಿಜ್ಞಾನ ಜ್ಞಾನಶಾಖೆಯಲ್ಲಿದ್ದ ಮಹಿಳೆಯರ ಪ್ರಮಾಣ 19.2 ಆಗಿದ್ದರೆ ಇಂದು ಅದು 19.1 ಇದೆ. (2003ರಿಂದ 2006ರ ಮಧ್ಯೆ ಸ್ವಲ್ಪ ಏರಿಕೆ ಕಂಡು ಬಂದಿತ್ತು) ಇಂಜಿನಿಯರಿಂಗ್‌ನಲ್ಲಿ 1998–99ರಲ್ಲಿ ಅವರ ಪ್ರಮಾಣ 2.1 ಇದ್ದದ್ದು ಇವೊತ್ತು 11.1ಕ್ಕೆ ಏರಿದೆ. ವೈದ್ಯಕೀಯ ಕೋರ್ಸ್‌ನಲ್ಲಿ 1998–99ರಲ್ಲಿ 3.3 ಇದ್ದದ್ದು ಈಗ 4.0ಕ್ಕೇರಿದೆ. ಕೃಷಿ ವಿಜ್ಞಾನದಲ್ಲಿ 1998–99ರಲ್ಲಿ 0.6 ಇದ್ದದ್ದು ಈಗ 0.3ಗೆ ಇಳಿದಿದೆ. ಪಶುವೈದ್ಯಕೀಯದಲ್ಲಿ 1988–99ರಲ್ಲಿ 0.1 ಇದ್ದದ್ದು ಈಗಲೂ ಅಷ್ಟೇ ಇದೆ. ಔದ್ಯೋಗಿಕ ಕ್ಷೇತ್ರದಲ್ಲಿ (ಖಾಸಗಿ, ಸಾರ್ವಜನಿಕ, ಜಂಟಿಕ್ಷೇತ್ರ) ಮಹಿಳೆಯರ ಸಂಖ್ಯೆ 1998–99ರಲ್ಲಿ 14.3 ಇದ್ದದ್ದು ಅಂದಾಜು 17%ಕ್ಕೆ ಏರಿದೆ.

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಮಹಿಳೆಯರಿಗಾಗಿಯೇ ಎಂದು ನಿಗದಿಯಾದ ಕೆಲ ಕಾರ್ಯಕ್ರಮಗಳು ಅಳವಡಿಸಲ್ಪಟ್ಟಿದ್ದವು. ಆದಾಗ್ಯೂ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರಿಗಾಗಿ ವಿಶೇಷ ಒತ್ತು ನೀಡಲ್ಪಟ್ಟುದು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ.

ಒಂದರಿಂದ ಐದನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯರ ಬಗೆಗಿನ ದೃಷ್ಟಿಕೋನ ಕಲ್ಯಾಣ ದೃಷ್ಟಿಯದಾಗಿತ್ತು. ಅಲ್ಲಿಂದ ವಿಕಾಸದೆಡೆಗೆ ಗಮನ ಹರಿದಿದ್ದು ಆರನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ.



ಮಹಿಳೆಯರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ವಿಷಯ ಕುರಿತು ಆರನೇ ಯೋಜನಾ ಕಡತದಲ್ಲಿ ಒಂದು ಅಧ್ಯಾಯವೇ ಬರೆಯಲ್ಪಟ್ಟಿದೆ.

ರಾಷ್ಟ್ರೀಯ ಮಹಿಳಾ ವಿಕಾಸ ಕಮಿಶನ್ ಸ್ಥಾಪಿತವಾದುದು 1992ರಲ್ಲಿ. ಅಂತೆಯೇ ರಾಜ್ಯಗಳಲ್ಲಿ ಮಹಿಳಾ ವಿಕಾಸ ನಿಗಮಗಳೂ ಸ್ಥಾಪಿತವಾದವು. ವರ್ಷ 2007 ಮಹಿಳಾ ಸಬಲೀಕರಣ ವರ್ಷವೆಂದು ಆಚರಿಸಲ್ಪಟ್ಟಿತು. ಮಹಿಳೆಯರಿಗಾಗಿ ಫೆಲೋಶಿಪ್ ಯೋಜನೆ ಪ್ರಾರಂಭವಾದುದು ಹತ್ತನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (2003–2007).

- ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಮಹಿಳಾ ವಿಜ್ಞಾನಿಗಳ ಕೋಶ ಎಂಬುದು ಸ್ಥಾಪಿಸಲ್ಪಟ್ಟಿತು (2012–17).
- ಹನ್ನೆರಡನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕಿರಣ ಎಂಬ ಛತ್ರದ ಕೆಳಗೆ ಎಲ್ಲ ಮಹಿಳಾ ಸಂಬಂಧಿ ಯೋಜನೆಗಳು ಒಟ್ಟುಗೂಡಿಸಲ್ಪಟ್ಟವು. 'ಕಿರಣ' ಎಂಬುದು DST (ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ)ಯ ಹೊಸ ಲಿಂಗ (Gender) ಸಮನ್ವಯಾಕರಣ ಉಪಕ್ರಮ. ಮೊಬಿಲಿಟಿ ಸ್ಕೀಮ್, ಇಂಟರ್ನ್‌ಶಿಪ್ ಸ್ಕೀಮ್, ಟೆಕ್ನಾಲಜಿ ಪಾರ್ಕ್ ಮುಂತಾದವುಗಳನ್ನು ಚಾಲ್ತಿಗೆ ತರುವಲ್ಲಿ ಆಋಖಿ ಮತ್ತು ಆಋಖಿ ಗಳು ಅತ್ಯುತ್ತಮ ಕಾರ್ಯನಿರ್ವಹಿಸಿವೆ. ಇನ್ನೊಂದು ಸಾಮಾಜಿಕ ಸಂಶೋಧನಾ ಯೋಜನೆಯ ಪ್ರಕಾರ ವಿದ್ಯಾಭ್ಯಾಸ, ವೃತ್ತಿ ಜೀವನವನ್ನು ಮಧ್ಯಕ್ಕೇ ನಿಲ್ಲಿಸಿದವರನ್ನು ಪುನಃ ಸಂಶೋಧನಾ ವೃತ್ತಿಯಲ್ಲಿ ತೊಡಗಿಸಿರುವುದು. ಈ ಎಲ್ಲ ಯೋಜನೆಗಳ ಉದ್ದೇಶ ಉದ್ಯಮಶೀಲತಾ ಅಭಿವೃದ್ಧಿ, ಕೌಶಲ್ಯ ಉತ್ತಮಿಸುವಿಕೆ (ತನ್ಮೂಲಕ ಸಬಲೀಕರಣ), ಯಾಂತ್ರಿಕ ಉಪಕರಣಗಳ ಬಳಕೆಯಿಂದ ಗ್ರಾಮೀಣ ಮಹಿಳೆಯರ ದುಡಿತದ ಕಷ್ಟವನ್ನು ಕಡಿಮೆ ಮಾಡುವುದು ಹಾಗೂ ಅವರ ಜೀವನದ ಗುಣಮಟ್ಟ ಸುಧಾರಿಸುವುದು ಇತ್ಯಾದಿ.

ವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸರ್ಕಾರಿ ನೀತಿ–ನಿಲುಮೆಗಳು ಬೆಳೆದು ಬಂದ ಬಗೆ

- ಸ್ವಾತಂತ್ರ್ಯಾನಂತರ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಪುರಸ್ಕಾರ, ಅಭಿವೃದ್ಧಿ ಮತ್ತು ಬಳಕೆಯ ವಿಷಯದಲ್ಲಿ ಸರ್ಕಾರ ಕಾಲದಿಂದ ಕಾಲಕ್ಕೆ ತನ್ನ ಪುರೋಗಾಮಿ ನೀತಿಯನ್ನು ಘೋಷಿಸುತ್ತಲೇ ಬಂದಿದೆ. ಹೊಸ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಾ ಬಂದಿದೆ.

1958ರಲ್ಲಿ ವೈಜ್ಞಾನಿಕ ನೀತಿ ನಿಲುವಳಿಯು ಮಹಿಳೆಯರ, ಪುರುಷರ ಸೃಜನಾತ್ಮಕ ಪ್ರತಿಭೆಯ ಪ್ರಕಾಶಕ್ಕೆ ಪೂರ್ಣ ಅವಕಾಶ ಸಿಗಬೇಕು ಎಂದು ಹೇಳಿತು.

2003ರ ವಿಜ್ಞಾನ ತಂತ್ರಜ್ಞಾನ ನೀತಿಯು ವಿಜ್ಞಾನ ತಂತ್ರಜ್ಞಾನದ ಎಲ್ಲ ಚಟುವಟಿಕೆಗಳಲ್ಲಿ ಮಹಿಳೆಯರ ಪೂರ್ಣ ಪ್ರಮಾಣದ ತೊಡಗಿಸಿಕೊಳ್ಳುವಿಕೆ ಮತ್ತು ಸಮಾನ ಪಾಲುದಾರಿಕೆಗೆ ಅವಕಾಶವಿರಬೇಕು ಎಂದು ಘೋಷಿಸಿತು. ಪೂರಕವಾಗಿ ಸ್ಕಾಲರ್‌ಶಿಪ್ ಸ್ಕೀಮ್, ಮೊಬಿಲಿಟಿ ಸ್ಕೀಮ್, ಪುರಸ್ಕಾರ ಯೋಜನೆ ಇತ್ಯಾದಿಗಳು ಅನುಷ್ಠಾನದಲ್ಲಿ ಬಂದಿವೆ.

ಕೊನೆಯಲ್ಲಿ, ಯುವ ಮಹಿಳೆಯರನ್ನು ವಿಜ್ಞಾನ ಕ್ಷೇತ್ರಕ್ಕೆ ಆಕರ್ಷಿಸುವುದಕ್ಕಾಗಿ ಕೆಲ ಸೂಚನೆಗಳನ್ನು ನೀಡಬಯಸುತ್ತೇನೆ. ಮಹಿಳೆಯರ ಸಮಪಾಲ್ಗೊಳ್ಳುವಿಕೆ ದೇಶದ ಸಮಾಜೋ-ಆರ್ಥಿಕ ಪ್ರಗತಿಗೆ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಅತ್ಯವಶ್ಯಕ. ಲಿಂಗ ಸಮಾನತೆ ಬಹಳ ಮಹತ್ವದ್ದು. ಅದನ್ನು ನಾವು ಸಾಧಿಸುವಂತಾಗಬೇಕು.

ಭಾರತೀಯ ವಿಜ್ಞಾನ ಸಂಸ್ಥೆಗಳು, ವಿಶೇಷತಃ ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿಯು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ವೃತ್ತಿಪಥದ ಮುನ್ನಡೆಗಾಗಿ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರ ಜೀವನ ಗುಣಮಟ್ಟ ಸುಧಾರಿಸುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿದೆ.

ಮಧ್ಯದಲ್ಲಿ ವಿದ್ಯಾರ್ಥಿದೆಸೆಯನ್ನು, ವೃತ್ತಿಯನ್ನು ತೊರೆದು ಹೋದವರ ಬಗೆಗೆ ಮಾಹಿತಿ ಲಭ್ಯವಿದ್ದು ಅಂಥವರನ್ನು ಪುನಃ ತಂದುಕೊಳ್ಳಲು, ಉಳಿಸಿಕೊಳ್ಳಲು ಈಗ ಅವಕಾಶವಿದೆ.

ಉನ್ನತಮಟ್ಟದಲ್ಲಿ ಬದ್ಧತೆಯ ಖಚಿತಪಡಿಸಿಕೊಳ್ಳುವಿಕೆ ಅವಶ್ಯ. ಆದ್ದರಿಂದ, ಕಾಲಕಾಲಕ್ಕೆ ನೀತಿ-ನಡೆವಳಿಯನ್ನು ಪುನಃ ವಿಮರ್ಶಿಸುವುದು ಮಹತ್ವದ್ದು. ನೇಮಕಾತಿಗಳಲ್ಲಿ, ಪದೋನ್ನತಿ ನೀಡಿಕೆಯಲ್ಲಿ, ಪ್ರಶಸ್ತಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಇರುವುದು ಮಹತ್ವದ್ದು.

ವಿದ್ಯಾರ್ಥಿಗಳಾದ ನೀವುಗಳು, ವಿಜ್ಞಾನದ ವಿವಿಧ ಕ್ಷೇತ್ರಗಳ ಮೂಲಭೂತ ಮಾಹಿತಿಯ ಹೊರತಾಗಿಯೂ ಕೃಷಿ, ಆರೋಗ್ಯ, ಜೀವತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮುಂತಾದವುಗಳ ಮೇಲೂ ನಿಮ್ಮ ದೃಷ್ಟಿಕೇಂದ್ರವನ್ನು ನೆಡುವ ಅವಶ್ಯಕತೆ ಇದೆ.

ಅಕ್ಯಾಡೆಮಿಗಳು ಸಹ ಅತ್ಯಂತ ಮಹತ್ವದ ಪಾತ್ರ ವಹಿಸಬೇಕಿದೆ. ಬಹುಮಟ್ಟದ ಮಾನವ ಬಂಡವಾಳದ ಅಪೇಕ್ಷಿತ ಮಟ್ಟದ ಬಳಕೆಯಾಗದಿರುವುದರಿಂದ, ವಿಜ್ಞಾನ ತಂತ್ರಜ್ಞಾನ ಪ್ರಪಂಚದಲ್ಲಿ ನಾವು ಸ್ಪರ್ಧಾತ್ಮಕತೆಯನ್ನು ಕಾಯ್ದುಕೊಳ್ಳುವುದು ಕಷ್ಟ. ವಿಜ್ಞಾನದಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳುವುದಕ್ಕೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಇತರೆ ಕಾರ್ಯಕ್ಷೇತ್ರಗಳಲ್ಲಿ ಒಳ್ಳೆಯ ವ್ಯವಹಾರನಿರ್ವಹಣಾ ಪದ್ಧತಿಗಳ ಅಳವಡಿಕೆ ಅತ್ಯವಶ್ಯಕ. ಮಹಿಳಾ ವಿಜ್ಞಾನಿಗಳಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವೂ ತುರ್ತಿನ ಅಗತ್ಯ. ಈ ಸಂದರ್ಭದಲ್ಲಿ ಮಹಿಳೆಯರು ಸಮಾಜದಲ್ಲಿ ನಿರ್ವಹಿಸಬೇಕಾದ ಬಹುಮುಖೀ ಪಾತ್ರಗಳ ಬಗ್ಗೆ ಮರೆಯುವಂತಿಲ್ಲ. ಅಂಥ ಎಲ್ಲ ಮಹಿಳೆಯರ ದುಡಿಮೆಯ ಕಷ್ಟವನ್ನು ಪರಿಹರಿಸುವೆಡೆಗೆ ಹಾಗೂ ಅವರ ಕಾರ್ಯಕ್ಷಮತೆ ಹೆಚ್ಚಿಸುವೆಡೆಗೆ, ಅವರ ಜೀವನಮಟ್ಟವನ್ನು ಸುಧಾರಿಸುವೆಡೆಗೆ ನಾವು ಲಕ್ಷವೀಯಬೇಕಾಗಿದೆ. ತಳಮಟ್ಟದಲ್ಲಿ ಮಹಿಳೆಯರ ತಾಂತ್ರಿಕ ಸಬಲೀಕರಣ ಇಂದಿನ ತುರ್ತುಗಳಲ್ಲೊಂದು.

ಇನ್ನು ಗ್ರಾಮೀಣ ಪ್ರದೇಶದಲ್ಲಿ ದುಡಿಯಲು ಸಿದ್ಧರಿರುವ ಮಹಿಳಾ ವಿಜ್ಞಾನಿಗಳ ಮತ್ತು ಇಂಜಿನೀಯರರ ಪಡೆ ನಿರ್ಮಾಣ ಮಾಡಬೇಕಿದೆ. ಗ್ರಾಮೀಣ ಮಟ್ಟದಲ್ಲಿ ಮಹಿಳೆಯರ ಕೌಶಲ್ಯ ವೃದ್ಧಿಸಿ ಅವರಿಗೊಂದು ಜೀವನೋಪಾಯ ಕಲ್ಪಿಸಿಕೊಡುವುದು, ಮಹಿಳಾ ಉದ್ಯಮ ಶೀಲತಾ ಅಭಿವೃದ್ಧಿ ಕೇಂದ್ರಗಳನ್ನು ತೆರೆಯುವುದು, ಅವರಿಗೆ ಪ್ರಶಿಕ್ಷಣ ನೀಡುವುದು, ಸಲಹಾ ಸಹಾಯ ಕಲ್ಪಿಸುವುದು ಇವೇ ಮುಂತಾದ ಮಾಡಬೇಕಾದ ಕಾರ್ಯಗಳಿವೆ.

ಮೂಲಭೂತ ಸಿದ್ಧಾಂತವೇನೆಂದರೆ, ವಿಜ್ಞಾನ ಮತ್ತು ತಾಂತ್ರಿಕತೆಯ ಬಳಕೆಯ ಪ್ರತಿಪಾದನೆ ಹಾಗೂ ತನ್ಮೂಲಕ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಸುಖ-ಶಾಂತಿ ಸಾಧಿಸುವುದು.



## ಕೊನೆಯ ಮಾತು

ಈ ವಿಶ್ವವಿದ್ಯಾಲಯವು ಮಹಿಳೆಯರಿಗಾಗಿಯೇ ಇದೆ. ಅವರು ವಿಜ್ಞಾನದ ವಿದ್ಯಾರ್ಥಿಗಳಿರಲಿ, ಇತರೇ ವಿಷಯದ ವಿದ್ಯಾರ್ಥಿಗಳಿರಲಿ, ಇದು ಅವರ ಪ್ರಗತಿಗಾಗಿ ಅತ್ಯಂತ ಫಲಕಾರಿಯಾದ ಮತ್ತು ತಕ್ಕುದಾದ ವೇದಿಕೆಯನ್ನು ಒದಗಿಸಬಲ್ಲುದು. ಇಲ್ಲಿನ ವಾತಾವರಣ, ವ್ಯಾಸಂಗಕ್ಕೆ ಪೂರಕವಾದ ಪರಿಸರ, ಸಹೃದಯಿ ಪ್ರಾಧ್ಯಾಪಕರು ಮತ್ತು ಪ್ರೀತಿ-ಆದರ ತುಂಬಿರುವ ವಿದ್ಯಾರ್ಥಿನಿಯರು ಇವೆಲ್ಲ ಘಟಕಗಳು ತ್ವರಿತ ಪ್ರಗತಿಗೆ ಪೂರಕ ಮತ್ತು ವಿದ್ಯಾಸಂಸ್ಥೆಗೆ ಒಳ್ಳೆಯ ಹೆಸರು ತರುವಂಥವುಗಳು. ಈ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿನಿಯರನ್ನು ಅವರ ಈ ಅದೃಷ್ಟಕ್ಕಾಗಿ ಅಭಿನಂದಿಸುತ್ತೇನೆ.

- 21ನೇ ಶತಮಾನದ ಅರುಣೋದಯ ಒಂದು ಸ್ಪಷ್ಟ ಸಂದೇಶ ನೀಡಿದೆ: ಜ್ಞಾನವನ್ನು ಒಂದು ಚಾಲನಾಶಕ್ತಿಯನ್ನಾಗಿ ಬಳಸಿ ಸಮಾಜವನ್ನು ನಿರಂತರವಾದ ಪರಿವರ್ತನೆಯತ್ತ ಕೊಂಡೊಯ್ಯುವುದು. 3ನೇ ಸಹಸ್ರ ಯುಗಮಾನದ ಗುರಿಯು ಲಿಂಗಸಮಾನತೆ ಮತ್ತು ಮಹಿಳೆಯ ಸಬಲೀಕರಣದತ್ತ ಕೈಮಾಡಿ ಕರೆಯುತ್ತಿದೆ. ಆದರೆ ಇದೆಲ್ಲ ಸಾಧ್ಯವಾಗುವುದು ಸರಿಯಾದ ಶಿಕ್ಷಣದ ಮೂಲಕವಷ್ಟೇ! ವಿಶ್ವವಿದ್ಯಾಲಯಗಳು ಯುವಜನಾಂಗಕ್ಕೆ ಕರ್ಮಭೂಮಿ ಇದ್ದಂತೆ. ಇಲ್ಲಿ ಊರಲ್ಪಟ್ಟ ಬೀಜಗಳು ಮೊಳೆತು, ವಿದ್ಯಾರ್ಥಿಗಳಾದ ನೀವೆಲ್ಲ ಸರಸ್ವತಿ ಹಾಗೂ ಲಕ್ಷ್ಮೀದೇವಿಯ ಆಶೀರ್ವಾದ ರೂಪದ ಫಲವನ್ನು ಉಣ್ಣುವಿರಿ. ಅದು ನಿಮ್ಮ ಶಿಕ್ಷಣ ನಿಮಗೆ ನೀಡುವ ವರದಾನ.
- ಪ್ರಿಯ ವಿದ್ಯಾರ್ಥಿನಿಯರೆ, ನಿಮಗೆಲ್ಲ ನನ್ನ ಸಂದೇಶವೇನೆಂದರೆ, ನಿಮ್ಮಲ್ಲಿ ಯಾರು ವಿಜ್ಞಾನವನ್ನು ವೃತ್ತಿ ಪಥವಾಗಿ ತೆಗೆದುಕೊಳ್ಳುತ್ತೀರೋ ಅಂಥವರಿಗೆ ಅಂತಿಮ ಗುರಿಯನ್ನು ಸಾಧಿಸಲು ಕಠಿಣ ಪರಿಶ್ರಮ ಹಾಗೂ ಸಂಪೂರ್ಣ ಸಮರ್ಪಣೆ ಬೇಕಾಗುತ್ತದೆ.

ನಮಗೆ ಹಾಗೂ ಇತರ ಮಹಿಳಾ ವಿಜ್ಞಾನಿಗಳಿಗೆ 'ರೋಲ್ ಮಾಡೆಲ್' ಆದ ಮೇರಿ ಕ್ಯೂರಿಯ ನೆನಪಿಡತಕ್ಕ ಮಾತುಗಳಿವು: "ನಮ್ಮಲ್ಲಿ ಯಾರೊಬ್ಬರಿಗೂ ಜೀವನ ಸುಲಭವಲ್ಲ. ಆದರೇನಂತೆ? ನಮ್ಮಲ್ಲಿ ಸತತ ಪರಿಶ್ರಮದ ಅಭ್ಯಾಸ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮಲ್ಲಿ ಆತ್ಮವಿಶ್ವಾಸ ಬೇಕು. ನಾವು ಯಾವುದೋ ಉದ್ದೇಶಕ್ಕಾಗಿ ಪ್ರತಿಭೆಯನ್ನು ಹೊತ್ತು ಬಂದಿದ್ದೇವೆ. ಅದನ್ನು ನಾವು ಪಲ್ಲವಿಸಿಕೊಳ್ಳಬೇಕು".

ಪದವಿಗಳನ್ನು ತೆಗೆದುಕೊಳ್ಳುತ್ತಿರುವ, ವಿಶೇಷತಃ ಉತ್ತಮ ಅಂಕಗಳನ್ನು ಪಡೆದು ಪದಕ, ಪ್ರಮಾಣ ಪತ್ರಗಳನ್ನು ಪಡೆದು ಗೌರವಿಸಲ್ಪಡುತ್ತಿರುವವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

6ನೆಯ ಘಟಿಕೋತ್ಸವ ಭಾಷಣ ದಿನಾಂಕ: 2015

*******

# ವೈಜ್ಞಾನಿಕ ದೃಷ್ಟಿಕೋನ ಮತ್ತು ಮಹಿಳೆ

❑ ಡಾ.ವಿಲ್ಲೂ ಮೊರಾವಾಲ ಪಟೇಲ್
ಸಂಸ್ಥಾಪಕರು, ಮತ್ತು ವ್ಯವಸ್ಥಾಪಕ ನಿರ್ದೇಶಕರು
ಸಿ.ಎಂ.ಡಿ ಅವೆಸ್ತಾಜೆನ್ ಲಿಮಿಟೆಡ್

ಸಮಾಜದ ಒತ್ತಡದ ನಡುವೆಯೂ ಭಾರತದ ಇತಿಹಾಸದಲ್ಲಿ ಮಹಿಳೆಯರು ಪರಿಣಾಮಕಾರಿ ಪ್ರಭಾವವನ್ನು ಬೀರಿರುತ್ತಾರೆ. ಅವರು ಮನೆ ಮತ್ತು ಸಮಾಜ ಅವೆರಡಲ್ಲದೆ ಸಮಯ ಬಂದಾಗ ಖಡ್ಗವನ್ನು ಹಿಡಿಯಲು ಹಿಂಜರಿಯದೆ ಇರುವುದು ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ಅವರುಗಳಿಂದ ಕಂಡುಬರುತ್ತದೆ. ಪ್ರಸ್ತುತ ಮಹಿಳೆಯರು ರಾಜಕೀಯ, ಆಡಳಿತ, ವಿಜ್ಞಾನ ಮತ್ತು ತಂತ್ರಜ್ಞಾನ, ಕಲೆ ಮತ್ತು ಸಾಹಿತ್ಯ, ಕಾನೂನು ವ್ಯವಹಾರ ಮತ್ತು ಉದ್ಯಮ ಮತ್ತು ಸಮಾಜದ ಇತರೆ ಕ್ಷೇತ್ರಗಳಲ್ಲಿ ಅವಕಾಶ ಪಡೆದುಕೊಂಡಿರುತ್ತಾರೆ. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಶೇಕಡವಾರು ಪ್ರಮಾಣ ಹೆಚ್ಚಿಗೆ ಇರದಿದ್ದರೂ ದಿನದಿಂದ ದಿನಕ್ಕೆ ಏರಿಕೆಯಾಗುತ್ತಲೇ ಇದೆ. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿವಿಧ ವಿಷಯಗಳಲ್ಲಿ ಪದವಿ ಪಡೆದ ಮಹಿಳೆಯರನ್ನು ಈ ಘಟಿಕೋತ್ಸವದಲ್ಲಿ ಗೌರವಿಸುತ್ತಿರುವುದು ನನಗೆ ಸಂತಸ ತಂದಿದೆ.

ನಾನು ನಿಮ್ಮ ಹಾಗೆಯೇ ಕನಸು, ನಿರೀಕ್ಷೆ ಮತ್ತು ಭಾವೋದ್ವೇಗತೆಳೊಂದಿಗೆ ವಿದ್ಯಾರ್ಥಿ ಜೀವನವನ್ನು ಪ್ರಾರಂಭಿಸಿದೆ. ಇತ್ತೀಚಿನ ವರ್ಷಗಳಲ್ಲಿ ನಾನು 'ಅವಸ್ಥೆಜನ್' ಎಂಬ ಜೈವಿಕ ತಂತ್ರಜ್ಞಾನ ಕಂಪನಿಯೊಂದನ್ನು ನನ್ನ ಕನಸುಗಳ ಆಗರವಾಗಿ ಸಾಕಾರಗೊಳಿಸಿದೆ. ಜೈವಿಕ ತಂತ್ರಜ್ಞಾನದ ಪರಿಕಲ್ಪನೆಯನ್ನು ಉಳಿದ ಕಂಪನಿಗಳು ಅಳವಡಿಸಿಕೊಳ್ಳಲು ಹಿಂಜರಿಯುತ್ತಿರುವಾಗ ಅದನ್ನು ನಾವು ಪುನರ್ ವ್ಯಾಖ್ಯಾನ ಮಾಡಿ, ಭಾರತದ ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಉದ್ಯಮಗಳಿಗೆ ಸರಿಸಾಟಿಯಾಗಿದ್ದೇವೆ. ನಮ್ಮ ವಿವಿಧೋದ್ದೇಶಗಳೆಂದರೆ ಆಹಾರ, ಔಷಧ ಮತ್ತು ಜನಸಾಂದ್ರತೆಯ ತಂತ್ರಜ್ಞಾನ. ನಾನು ಪೋಸ್ಟ್ ಡಾಕ್ಟರಲ್ ಕಾರ್ಯನಿರ್ವಹಿಸುತ್ತಿದ್ದಾಗ ವಿಕಸಿಸಿದ ತಂತ್ರಜ್ಞಾನದೊಂದಿಗೆ ನಮ್ಮ ಕಂಪನಿಯ ಕಾರ್ಯಚಟುವಟಿಕೆ ಪ್ರಾರಂಭಗೊಂಡಿತು. ಪ್ರಸ್ತುತ ನಮ್ಮ ವ್ಯಾಪ್ತಿಯು ಕೃಷಿ ಸಂಶೋಧನಾತ್ಮಕ ಭಾರತೀಯ ವೈದ್ಯಕೀಯ ಪದ್ಧತಿಗಳು ಮತ್ತು ಜನಸಾಂದ್ರತೆ ತಂತ್ರಜ್ಞಾನ ಒಳಗೊಂಡಿದ್ದಲ್ಲದೆ ಆರೋಗ್ಯ ರಕ್ಷಣೆಗೆ ಕಾಳಜಿಗಳನ್ನೊಳಗೊಂಡ ಭವಿಷ್ಯ ಸೂಚಕ ತಂತ್ರಜ್ಞಾನದ ಶಿಕ್ಷಣದಲ್ಲಿ ನಾವು ಭಾರತದಲ್ಲಿ ಮುಂದಿದ್ದೇವೆ. ಉದಾಹರಣೆಗೆ-



ಭಾರತೀಯ ಔಷಧದ ಕೈಗಾರಿಕೆಯಲ್ಲಿ ವಿಶ್ವದಲ್ಲಿಯೇ ಜಿನೋಮ್ ಔಷಧಗಳಲ್ಲಿ ಮುಂಚೂಣಿಯಲ್ಲಿದ್ದೇವೆ. ಆದರೆ ನಾವುಗಳು ಬಯೋ-ಸಿಮಿಲರ್ಸ್ ತಂತ್ರಜ್ಞಾನಗಳಲ್ಲಿ ಎಲ್ಲರಿಗಿಂತ ಮುಂಚೂಣಿಯಲ್ಲಿದ್ದೇವೆ. ಪ್ರಸ್ತುತ ನಾವು ಎಂಟು ಬಯೋ-ಸಿಮಿಲರ್ಸ್ ಮಾಲೀಕ್ಯೂಲ್ ವಿಕಾಸದಲ್ಲಿ ಅತ್ಯಂತ ಶ್ರೇಷ್ಠಸ್ಥಾನದಲ್ಲಿದ್ದೇವೆ. ಅವುಗಳಲ್ಲಿ ಎರಡು ಪ್ರಯೋಗಾಲಯ ಫಲಿತಾಂಶದ ಹಂತದಲ್ಲಿದ್ದೇವೆ. ಮಾನವನ ಬಹಳಷ್ಟು ರೋಗಗಳಿಗೆ ವಿವಿಧ ಔಷಧಗಳನ್ನು ಜೈವಿಕವಾಗಿ ಪಾರ್ಸಿ ಸಮುದಾಯದ ತಂತ್ರಜ್ಞಾನದೊಂದಿಗೆ ಅವೆಸ್ಥೆಜಿನೋಮ್ ಯೋಜನೆಯನ್ನು ಪ್ರತಿಷ್ಠಾಪಿಸಿದ್ದೇವೆ.

ಇದೇ ಕೇವಲ ಒಂದು ಸಲ ಮಾತ್ರ ಇಡೀ ವಿಶ್ವದಲ್ಲಿ ಹೆಜ್ಜೆ ಊರಿದ್ದು, ಅದರಲ್ಲಿ ಡಿಕೋಡ್ ಎಂಬ ಐಸ್‌ಲ್ಯಾಂಡ್ ಕಂಪನಿಯು ಐಸ್‌ಲ್ಯಾಂಡ್ ಪ್ರದೇಶದಲ್ಲಿ ಮುಂಚೂಣಿಯಲ್ಲಿದೆ. ಜಿನೋಮ್, ಟ್ರಾನ್ಸ್‌ಸ್ಕ್ರಿಪ್ಟೋಮ್, ಪ್ರೋಟೀಮ್ ಮತ್ತು ಮೆಟಾಬೊಲೊಮ್ ಹಂತಗಳಲ್ಲಿನ ರೋಗಗಳನ್ನು ಜೀವ ವಿಜ್ಞಾನದ ದೃಷ್ಟಿಕೋನ ಪದ್ಧತಿಗಳಿಂದ ಡಿಕೋಡ್‌ನ್ನು ಅಭಿವ್ಯಕ್ತಗೊಳಿಸಲಾಗುತ್ತದೆ. ಈ ಯೋಜನೆಯ ಭಾಗವಾಗಿ ಹನ್ನೊಂದು ಪಾರ್ಸಿ ವ್ಯಕ್ತಿಗಳಲ್ಲಿ ಐದು ಸ್ತನ ಕ್ಯಾನ್ಸರ್ ಮತ್ತು ಆರು ಕ್ಯಾನ್ಸರ್‌ಗಳಿಲ್ಲದ ವ್ಯಕ್ತಿಗಳಿಗೆ ಪರಿಪೂರ್ಣ ಜಿನೋಮ್ ನಿರಂತರತೆಯನ್ನು ಪೂರ್ಣಗೊಳಿಸಲಾಗಿದೆ. 234 ಅವಿಷ್ಕಾರದ ಆಧಾರದ ಮೇಲೆ ವಿಶ್ವದಲ್ಲಿ ಅವ್ಯಕ್ತ ಜಿನೋಮ್ ವಿಜ್ಞಾನವು 316 ಪ್ರಯತ್ನಶೀಲ ಅರ್ಜಿಗಳನ್ನು ಅವುಗಳ ಜೊತೆಗೆ 53 ಅನುದಾನಿತ ಪೇಟೆಂಟ್‌ಗಳನ್ನು ಪ್ರಭಾವಕ್ಕೆ ಒಳಪಡಿಸಿದೆ. ಜಯವು ಬಹಳ ವಿರಳವಾಗಿ ಸರಳವಾಗಿರುತ್ತದೆ. ಮಹಿಳೆಯರಿಗಾಗಿ ಈ ಹಾದಿಯು ಅತ್ಯಂತ ಕಠಿಣತೆಯಿಂದ ಕೂಡಿರುತ್ತದೆ. ಶಿಕ್ಷಣದ ಜೊತೆಗೆ ನಿಮ್ಮತನದ ವಿಕಾಸವೇ ಇದಕ್ಕೆ ಉತ್ತಮವಾಗಿರುತ್ತದೆ. ನೀವು ಆತ್ಮಸ್ಥೈರ್ಯ, ಶ್ರಮ, ತಾಳ್ಮೆಗಳನ್ನು ಹೊಂದಿರತಕ್ಕದ್ದು, ಜಯಶಾಲಿಯಾಗಲು ಸಿದ್ಧರಾಗಿರತಕ್ಕದ್ದು. ನಿಮ್ಮ ಹಾದಿಯನ್ನು ಅವಶ್ಯಕತೆಗೆ ಅನುಗುಣವಾಗಿ ಕಂಡುಕೊಳ್ಳತಕ್ಕದ್ದು. ನಿಮ್ಮಲ್ಲಿ ಕೆಲವರು ಮದುವೆಯಾಗಿದ್ದು, ಕೆಲವರಿಗೆ ಮಕ್ಕಳಿದ್ದು ಇನ್ನೂ ಹಲವರು ಮದುವೆಯಾಗಲಿದ್ದಾರೆ. ಮದುವೆ, ಮಕ್ಕಳು, ಕುಟುಂಬ ನಿಮ್ಮ ಕನಸುಗಳನ್ನು ಸಾಕಾರಗೊಳ್ಳುವಲ್ಲಿ ಹಿಂದೇಟು ಹಾಕಲಾಗದು. ನೀವು ಮೊದಲು ಕನಸನ್ನು ಹೊಂದಿರತಕ್ಕದ್ದು ಮತ್ತು ಅವುಗಳನ್ನು ಹೇಗೆ ಸಾಕಾರಗೊಳಿಸಿಕೊಳ್ಳಬೇಕು ಮತ್ತು ಅಂತಿಮವಾಗಿ ನಿಮ್ಮ ಕನಸನ್ನು ತಲುಪಲು ಸತತ ಪ್ರಯತ್ನ ಮಾಡಬೇಕು. ನಾನು ನನ್ನ ಉದಾಹರಣೆಯನ್ನು ಮಾತ್ರ ನೀಡಬಲ್ಲೆ. ಅಲ್ಲದೇ ಪ್ರತಿಯೊಬ್ಬ ಮಹಿಳೆಗೂ ಇದು ಅನ್ವಯಿಸುತ್ತದೆ. ಅತ್ಯುನ್ನತ ಸಾಧನೆಗೈಯುವಲ್ಲಿ ಇದು ಮಹತ್ತರ ಪಾತ್ರವಹಿಸುತ್ತದೆ.

ನನ್ನ ಮೊದಲ ಆದ್ಯತೆ ಕಲಿಕೆ, ಆಲೋಚನೆ ಮತ್ತು ಸೃಜನಶೀಲತೆ. ನಾನು ಬಲಿಷ್ಠ ಮೌಲ್ಯಗಳನ್ನೊಳಗೊಂಡ ಮಧ್ಯಮ ವರ್ಗದ ಕುಟುಂಬದಿಂದ ಬಂದವಳು. ಪ್ರಸ್ತುತ ಇರಾನಿನ ಪಾರ್ಸಿಗಳು ಈಗಿನ ಗುಜರಾತಿನ ನವಸಾರಿ ಎಂಬ ಪಟ್ಟಣದಲ್ಲಿ ಪ್ರಾಚೀನ ಪರ್ಶಿಯಾದಿಂದ ಪಾರ್ಸಿ ಜನಾಂಗ ಬಂದು ನೆಲೆನಿಂತ ಪಟ್ಟಣದಲ್ಲಿ ನಾನು ಜನಿಸಿದೆ. ನನ್ನ ಕುಟುಂಬ ನಿಜಾಮಾಬಾದನಲ್ಲಿ ವಾಸವಾಗಿತ್ತು ಮತ್ತು ನನ್ನ ಅಜ್ಜ ನಿಜಾಮರ ಕಾಲದಲ್ಲಿ ಬೀದರ್ ಜಿಲ್ಲೆಯ ನಿಜಾಮರ ತೆರಿಗೆ ಸಂಗ್ರಹಕಾರನಾಗಿ

ಕಾರ್ಯನಿರ್ವಹಿಸುತ್ತಿದ್ದರು. ನನ್ನ ಮನೆತನದಲ್ಲಿ ಸೃಜನಶೀಲರು, ಪರಿಶೋಧಕರು ಮತ್ತು ಪ್ರಾಧ್ಯಾಪಕರಿದ್ದರು. ನಾವೆಲ್ಲರೂ ನಿರಂತರವಾಗಿ ಪ್ರೋತ್ಸಾಹಕ್ಕೆ ಒಳಪಟ್ಟಿದ್ದೆವು. ಹೊಸ ಜಗತ್ತಿನ ಸವಾಲುಗಳಾದ ಮುಂದಾಲೋಚನೆ, ಕ್ರಿಯಾಶೀಲತೆಗೆ ಅನುಗುಣವಾಗಿ ನಮ್ಮ ದೃಷ್ಟಿಕೋನ ವಿಕಾಸ ಹೊಂದಲು ಹೆಚ್ಚು ಅಭ್ಯಸಿಸಲು ಪ್ರೋತ್ಸಾಹಿಸಲಾಯಿತು. ನಾನು ನನ್ನ ಶಾಲಾ ಮತ್ತು ಪದವಿಯನ್ನು ಹೈದರಾಬಾದಿನಲ್ಲಿ ಮುಗಿಸಿ ಬಾಂಬೆಯಲ್ಲಿ ಮೆಡಿಕಲ್ ಜೈವಿಕ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದೆನು. ಮುಂದುವರೆದು ಪಿಎಚ್.ಡಿ. ಪದವಿಯನ್ನು ಪಡೆದೆನು.

ಪ್ರತಿದಿನ ನಾನು ಕಲಿಯುತ್ತಾ ಇದ್ದೆ. ಇವತ್ತಿಗೂ ಕೂಡ ಕಲಿಕೆಯು ನನ್ನ ಸೃಜನಶೀಲತೆ ಮತ್ತು ಆಲೋಚನೆಯನ್ನು ವಿಕಾಸಗೊಳಿಸಲು ಸಹಾಯಕವಾಗಿದೆ. ಪರಿಣಾಮಕಾರಿಯಾದ ಶೋಧನಾತ್ಮಕ ಬೆಳವಣಿಗೆಗಳನ್ನು ನವೀನ ವಿಚಾರಗಳನ್ನು ಹೊಂದಲು ನೀವು ನಿಮ್ಮ ಮನಸ್ಸನ್ನು ಮುಕ್ತಗೊಳಿಸಬೇಕಾಗಿದೆ.

**ನಿಮ್ಮ ಆದ್ಯತೆಗಳನ್ನು ತಿಳಿದುಕೊಳ್ಳಿ:**

ಪ್ರತಿಯೊಬ್ಬ ಜಯಶಾಲಿ ವ್ಯಕ್ತಿಯು ತನ್ನ ದಾರಿಯನ್ನು ತಾನೇ ಕಂಡುಕೊಳ್ಳಬೇಕಿದೆ. ಒಂದು ವೇಳೆ ಸರಿಯಾದ ದಾರಿ ಸಿಗದೇ ಇದ್ದರೆ ನಿಮ್ಮ ದಾರಿಯನ್ನು ನೀವೆ ಮಾಡಿಕೊಳ್ಳಬೇಕು. ಇದು ಕೇವಲ ಒಂದು ದಿನದಲ್ಲಾಗಲೀ ಅಥವಾ ಒಂದು ತಿಂಗಳಲ್ಲಾಗಲೀ ಅಥವಾ ಒಂದು ವರ್ಷದಲ್ಲಾಗಲೀ ಸಾಧ್ಯವಾಗಲಾರದು ಅಥವಾ ಒಂದು ದಶಕದಲ್ಲಿಯೂ ಆಗದಿರಬಹುದು. ಆದರೆ ಸತತ ಪ್ರಯತ್ನ ನಿರಂತರವಾಗಿರಬೇಕು ಮತ್ತು ಅದರಲ್ಲಿಯೇ ಕಾರ್ಯೋನ್ಮುಖವಾದಾಗ ಮಾತ್ರ ಗುರಿ ತಲುಪಲು ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಯೂ ವಿವಿಧ ವ್ಯಕ್ತಿತ್ವ ಹೊಂದಿರುತ್ತಾರೆ. ನೀವು ನಿಮ್ಮ ನಿಜವಾದ ನೆಲೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಇದು ಮನೆಯಾದರೂ ಆಗಿರಬಹುದು. ಅದು ಹೇಗೆಂದರೆ ವಕೀಲರು, ಕಲಾವಿದರೂ, ಕವಿಗಳು, ವೈದ್ಯರು, ಅಭಿಯಂತರರು, ಶಿಕ್ಷಕರು, ಲೇಖಕರು ಏನಾದರೂ ಆಗಿರಬಹುದು. ಆದರೆ ಇದು ನಿಮ್ಮ ವ್ಯಕ್ತಿತ್ವಕ್ಕೆ ಒಂದು ಚಿತ್ರಣ ಕೊಡುವಂತಿರಬೇಕು. ಏನೇ ಆಗಲಿ ನೀವು ಅದನ್ನು ಮೊದಲು ನಿರ್ಧರಿಸಬೇಕು. ಹುಮ್ಮಸ್ಸಿನಿಂದ ಮಾಡಬೇಕು. ಅರೆಮನಸ್ಸಿನಿಂದ ನನ್ನ ಎಂ.ಎಸ್ಸಿ. ಸ್ನಾತಕೋತ್ತರ ಪದವಿಯ ನಂತರ ಹೈದರಾಬಾದಿನಲ್ಲಿರುವ ಇಂಟರ್ ನ್ಯಾಷನಲ್ ಕ್ರಾಪ್ಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ದ ಸೆಮಿ-ಅರಿಡ್-ಟ್ರಾಪಿಕ್ಸ್‌ನಲ್ಲಿ (ICRISAT) ಕಾರ್ಯನಿರ್ವಹಿದೆನು. ಅತ್ಯುನ್ನತ ಕೃಷಿ ವಿಜ್ಞಾನಿಗಳು ನನ್ನ ಸಹ ಉದ್ಯೋಗಿಗಳಾಗಿದ್ದರು. ಈ ಅವಧಿಯಲ್ಲಿ ನಾನು ಮದುವೆಯಾದೆ ಎರಡು ಆಕರ್ಷಣೀಯ ಹೆಣ್ಣುಮಕ್ಕಳನ್ನು ಪುತ್ರಿಯರನ್ನಾಗಿ ಪಡೆದೆ. ನಾನು ತೃಪ್ತಿಕರ ವೃತ್ತಿ ಮತ್ತು ಕೌಟುಂಬಿಕ ಜೀವನವನ್ನು ಹೊಂದಿದ್ದೆ. ಆದರೆ ಇದು ನನ್ನ ದಾರಿಯಲ್ಲ ಎಂಬುದು ಮನವರಿಕೆಯಾಯಿತು. ನಾನು ಏನನ್ನಾದರೂ ಸಂಶೋಧಿಸಬೇಕು ಮತ್ತು ಸೃಷ್ಟಿಸಬೇಕು ಎಂಬ ಮಹತ್ವಕಾಂಕ್ಷೆಯನ್ನು ಹೊಂದಿದ್ದೆ. ಈ ಹಂತದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬೆಳಕಿಗೆ ಬರಬೇಕು ಎಂಬ ಛಲದಿಂದ ನಾನು ನನ್ನ ತೃಪ್ತಿಕರ ಜೀವನದ ವ್ಯಾಪ್ತಿಯಿಂದ ಹೊರ ಬಂದು ಪಿಎಚ್.ಡಿ. ಪದವಿಯನ್ನು ಮಾಡಲು ಮನವರಿಕೆಯನ್ನು ಮಾಡಿಕೊಂಡೆನು. ಆ ಹಂತದಲ್ಲಿ ನನಗೆ 32 ವಯಸ್ಸು



ಮತ್ತು ನನ್ನ ಎರಡು ಹೆಣ್ಣುಮಕ್ಕಳಿಗೆ 8 ಮತ್ತು 6 ವರ್ಷಗಳಾಗಿದ್ದವು. ನಾನು ಫ್ರಾನ್ಸಿನ ಸ್ಟ್ರಾಸ್‌ಬರ್ಗ್‌ನಲ್ಲಿರುವ ಲೂಯಿಸ್ ಪಾಶ್ಚರ್ ವಿಶ್ವವಿದ್ಯಾಲಯದಲ್ಲಿ ಉನ್ನತ ಹುದ್ದೆಯನ್ನು ಪಡೆದುಕೊಂಡೆ. ನನ್ನ ಇಡೀ ಕುಟುಂಬವು ಫ್ರಾನ್ಸ್ ದೇಶಕ್ಕೆ ವರ್ಗವಾಯಿತು. ನನ್ನ ಪತಿಯು ಅರ್ಧ ವರ್ಷ ಕಳೆದ ನಂತರ ಭಾರತ ದೇಶಕ್ಕೆ ಮರಳಬೇಕಾಗಿತ್ತು. ಆದರೆ ಪಿಎಚ್.ಡಿ. ಪದವಿಯು ನಮ್ಮ ಅತ್ಯುತ್ತಮ ಸಂಬಂಧಗಳಿಗೆ ಒಂದು ಒತ್ತಡವಾಗಿ ಪರಿಣಮಿಸಿತು. ಎರಡು ಹೆಣ್ಣುಮಕ್ಕಳ ಜವಾಬ್ದಾರಿಯು ಏಕಪೋಷಕರಾಗಿ ಪಿಎಚ್.ಡಿ. ಪದವಿಯನ್ನು ಮಾಡುವುದು ಸುಲಭದ ಮಾತಾಗಿರಲಿಲ್ಲ. ಹೇಗೋ ಕಷ್ಟಕರವಾದ ಸಂದರ್ಭದಲ್ಲಿ ಈ ಬೃಹತ್ ಕಾರ್ಯವನ್ನು ನಿರ್ವಹಿಸಿ ಮೂರುವರೆ ವರ್ಷಗಳಲ್ಲಿ ಪ್ಲ್ಯಾಂಟ್ ಮಾಲಿಕೂಲರ್ ಜೀವಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದೆನು.

ನಿಮ್ಮ ಆದ್ಯತೆಯು ಉತ್ಕೃಷ್ಟವಾಗಿದ್ದರೆ ಅವುಗಳು ನಿಮಗೆ ರಾಜಿಯ ಅಥವಾ ತ್ಯಾಗಗಳನ್ನು ವ್ಯವಸ್ಥಿತವಾಗಿ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ನಾನು ನನ್ನ ಕುಟುಂಬದ ಜೀವನದೊಂದಿಗೆ ಗುರಿ ಮುಟ್ಟಲು ಒಪ್ಪಂದ ಮಾಡಿಕೊಳ್ಳಬೇಕಾಗಿತ್ತು. ಅದೃಷ್ಟವಶಾತ್ ನನ್ನ ಕುಟುಂಬ ಪೋಷಕರು ಮತ್ತು ಅತ್ತೆ-ಮಾವಂದಿರು ಅತ್ಯಂತ ಉತ್ಕಟವಾದ ಅಭಿಮತದಿಂದ ಪ್ರೋತ್ಸಾಹಿಸಿದರಲ್ಲದೇ ಜಯಶಾಲಿಯಾಗಲು ನನಗೆ ಬೆಂಬಲಿಸಿದರು. ವೈಯಕ್ತಿಕವಾಗಿ ಹೇಳಬೇಕಾದರೆ ನಾನು ನನ್ನ ಜೀವನದಲ್ಲಿ ಶಾಶ್ವತ ನೆಲೆ ನಿಲ್ಲಲು ವಿಚಾರ ಮಾಡಿದವಳಲ್ಲ. ಏಕೆಂದರೆ ನೆಲೆ ನಿಲ್ಲಲು ಅವಕಾಶಗಳು ಸಂದರ್ಭಗಳು ಅಲ್ಲಾಡಿಸುತ್ತಿದ್ದವು ಮತ್ತು ಅವುಗಳು ಮನುಷ್ಯನ ಕನಸುಗಳನ್ನು ಸಾಕಾರಗೊಳಿಸಲು ಹಿಂದೇಟು ಹಾಕುತ್ತವೆ.

**ದೊಡ್ಡ ಕನಸು ಮತ್ತು ಉತ್ಕೃಷ್ಟ ಗುರಿ:**

ಚೌಕಟ್ಟನ್ನು ಮೀರಿ ಕೆಲವೊಂದು ಸಲ ನೀವು ಉನ್ನತ ಕನಸನ್ನು ಹೊಂದಬೇಕಾಗುತ್ತದೆ. ನನ್ನ ಪೋಸ್ಟ್ ಡಾಕ್ಟರಲ್ ಸಂಶೋಧನೆಯ ನಂತರ ನಾನು 1995ರಲ್ಲಿ ಭಾರತಕ್ಕೆ ಮರಳಿದೆನು. ನಾನು ರ್‍ಯಾಲ್ಲಿಸ್ ಇಂಡಿಯಾದಲ್ಲಿ ಮೂರು ತಿಂಗಳ ಕಾಲ ಕಾರ್ಯನಿರ್ವಹಿಸಿದ್ದೇನೆ. ತದನಂತರ ಆಸ್ಟ್ರೇಲಿಯಾದಲ್ಲಿ ರಿಚರ್ಡ್ ಝುಫರ್‌ಸನ್ಸ್ ಅವರೊಂದಿಗೆ ಅಲ್ಪಕಾಲ ಕಾರ್ಯನಿರ್ವಹಿಸಿ ಜೂನ್ 1995ರಲ್ಲಿ ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸ್ ಇನ್ ಬೆಂಗಳೂರ್ (ಓಅಃಖ)ಗೆ ಸೇರಿಕೊಂಡೆನು. ರಾಕ್ ಫೆಲ್ಲರ್ ಫೌಂಡೇಶನ್‌ನಿಂದ ನಾನು ಉತ್ಕೃಷ್ಟತೆಯ ಅನುದಾನವನ್ನು ಪಡೆದುಕೊಂಡೆನು. ಮುಂದಿನ ನಾಲ್ಕು ವರ್ಷಗಳಲ್ಲಿ ಓಅಃಖಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಅಕ್ಕಿ ಜೀನ್ ತಂತ್ರಜ್ಞಾನದಲ್ಲಿ ಸಂಶೋಧನೆ ಮಾಡಿದೆನು.

ಭಾರತದಲ್ಲಿ ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಕಾರ್ಯ ವೈಖರಿಯ ನಡುವೆ ತುಂಬಾ ಅಂತರವಿರುವುದನ್ನು ಕಂಡುಕೊಂಡೆ. ಇಲ್ಲಿ ಶೈಕ್ಷಣಿಕ ವೈಜ್ಞಾನಿಕ ಸಂಶೋಧನೆಯು ಮೂಲ ಸಂಶೋಧನೆ ಅಥವಾ ಅನ್ವಯಿಕ ಸಂಶೋಧನೆಗಿಂತ ಹೆಚ್ಚು ಬಳಕೆಯಲ್ಲಿದೆ. ಇನ್ನೊಂದು ಹಂತದಲ್ಲಿ ಭಾರತದ ಉದ್ದಿಮೆಯ R&Dಯಲ್ಲಿ ಮತ್ತು ಸಂಶೋಧನೆಯಲ್ಲಿ ಹೆಚ್ಚು ಹೂಡಿಕೆ ಮಾಡಲು ಆಸಕ್ತಿ ಹೊಂದಿದೆ. ನಾನು ಈ ಎರಡರ ನಡುವೆಯಿರುವ

ಅಂತರವನ್ನು ಕಡಿಮೆ ಮಾಡಬೇಕಾಗಿತ್ತು. ನಾನು ಬರಪೀಡಿತ ಪ್ರದೇಶಗಳಲ್ಲಿ ಬೆಳೆಯುವ ಅಕ್ಕಿಯ ತಳಿಯನ್ನು ಸಂಶೋಧನೆ ಮಾಡುತ್ತಿದ್ದೆ, ಇದಕ್ಕಾಗಿ ಒಂದು ಪೇಟೆಂಟ್‌ನ್ನು ದಾಖಲಿಸಿದೆ ಹಾಗೂ 1999ರಲ್ಲಿ ಅದರ ಜಿನೋಮ್ ಆರಂಭಿಸಿದೆ (ನಾವು ನಂತರ ಇದಕ್ಕೆ ಅವಸ್ಥೇ ಗೆಂಗ್ರಾಯಿನ್ ಟೆಕ್ನಾಲಾಜಿಸ್ ಎಂದು ಕರೆದೆವು). ನಾವು ವಿವಿಧ ಮಹತ್ವಾಕಾಂಕ್ಷೆಯುಳ್ಳ ವೈವಿಧ್ಯಮಯವಾದ ದಿಕ್ಕುಗಳಲ್ಲಿ ಆಗಲೇ ಹೇಳಿದಂತೆ ಪ್ರತಿಯೊಂದು ಹಂತದಲ್ಲಿ ಉತ್ಕೃಷ್ಟ ಕನಸನ್ನು ಮತ್ತು ಉನ್ನತ ಗುರಿಯನ್ನು ಹೊಂದಿದೆವು.

ಉತ್ಕೃಷ್ಟ ಕನಸು ಹಗಲುಗನಸಿಗೆ ಮಾತ್ರ ಸೀಮಿತವಾಗಿರಬಾರದು. ನಿಮ್ಮ ಬಲವಾದ ಆತ್ಮಸ್ಥೈರ್ಯ ಮತ್ತು ದೃಢ ಸಂಕಲ್ಪ ನಿಮ್ಮ ಕನಸನ್ನು ಸಾಕಾರಗೊಳಿಸಲು ಹೊಂದಿರತಕ್ಕದ್ದು. ಕೇವಲ ದೃಢ ಸಂಕಲ್ಪ ಹೊಂದಿದ್ದರೆ ಅವಶ್ಯಕವಿದ್ದಾಗ ವ್ಯವಸ್ಥೆಯ ಜೊತೆ ಹೋರಾಡಲು ನೀವು ಸಿದ್ಧರಿದ್ದೀರಾ? ಕೆಲವೊಂದು ಸಲ ಅವಶ್ಯಕವಿದ್ದಾಗ ನೀವು ಸಂಪ್ರದಾಯವಲ್ಲದ ನಮ್ಮ ಗುರಿಗಳನ್ನು ಮುಟ್ಟಲು ಬಂಡಾಯಗಾರರಾಗಬೇಕಾಗುತ್ತದೆ. ಹಾಗೆಯೇ ಕಠಿಣ ಶ್ರಮಕ್ಕೆ ಬೇರೆ ಪದವಿಲ್ಲ. ಅಮೇರಿಕಾ ದೇಶದ ಸಂಶೋಧನಾಕಾರ ಮತ್ತು ವ್ಯಾಪಾರಸ್ಥರು ಆದ ಥಾಮ್ಸ್ ಎಡಿಸನ್‌ನ ಸಂಶೋಧನೆಗಳಾದ ಗ್ರಾಮೋಫೋನ್ ಎಲೆಕ್ಟ್ರಿಕಲ್ ಬಲ್ಬ್ ಚಲನಾ ಕ್ಯಾಮರಾಗಳು ಪ್ರಪಂಚವನ್ನೇ ಬದಲಿಸಿದವು. ಅವನ ಈ ಸಾಧನೆಗಳು 1% ಆಂತರಿಕ ಉತ್ತೇಜನ ಮತ್ತು 99% ಸ್ವೇದದಿಂದ ಆಗಿವೆ. ನಾನು ದಿನದ 16 ಗಂಟೆಗಳ ಅಂತೆಯೇ ವಾರದ 7 ದಿನಗಳು ಕೆಲಸ ಮಾಡುತ್ತೇನೆ. ನಾನು ತುತ್ತ ತುದಿಯನ್ನು ತಲುಪಲು ನನ್ನಷ್ಟಕ್ಕೆ ನನ್ನನ್ನೇ ಒಳಪಡಿಸಿಕೊಳ್ಳುತ್ತೇನೆ.

**ತೊಂದರೆಗಳನ್ನು ತೆಗೆದುಕೊಳ್ಳಲು ಹೆದರದಿರಿ:**

ಸವಾಲುಗಳನ್ನು ಸ್ವಾಗತಿಸಿ ತೊಂದರೆಯಿಲ್ಲ ಲಾಭವಿಲ್ಲ' ಎಂಬ ನುಡಿಗಟ್ಟು ಅಕ್ಷರಶಃ ಸತ್ಯ. ಒಂದು ಸಲ ನಿಮ್ಮ ಆದ್ಯತೆಗಳು ಸರಿಯಾಗಿದ್ದರೆ ತೊಂದರೆಗಳನ್ನು ತೆಗೆದುಕೊಳ್ಳಲೇಬೇಕು. ಆದರೆ ಅವುಗಳನ್ನು ಸರಿಯಾಗಿ ಯೋಜನೆಗಳನ್ನು ಹಾಕಿಕೊಳ್ಳುವುದರ ಮೂಲಕ ತೊಂದರೆಗಳನ್ನು ಲೆಕ್ಕಾಚಾರ ಮಾಡಿಕೊಳ್ಳತಕ್ಕದ್ದು. ತೊಂದರೆಗಳಿಂದ ಕೆಲವೊಂದು ಸಲ ಒಳ್ಳೆಯ ಅವಕಾಶಗಳನ್ನು ಹಿಮ್ಮೆಟ್ಟುವುದುಂಟು. ಆದಕಾರಣ ಹೆದರಬೇಕಾಗಿಲ್ಲ. ಏನಾದರೂ ಕಳೆದುಕೊಳ್ಳುವ ಪ್ರಸಂಗ ಬಂದರೆ ಹೆದರಿಕೊಳ್ಳುವ ಅವಶ್ಯಕತೆಯಿಲ್ಲ. ಇವೆಲ್ಲವೂ ಸಹಜ. ಅಪಜಯ ಅಥವಾ ಧೈರ್ಯಹೀನವಾಗುವಿಕೆ ಸೋಲನ್ನು ಸೂಚಿಸುವುದಿಲ್ಲ. ಅರ್ಥಾತ್ ಕಲಿಕಾ ತಿರುವಿನಲ್ಲಿ ಇವುಗಳ ಗುರಿಮುಟ್ಟುವಲ್ಲಿ ಅವಶ್ಯಕತೆಯಿದೆ. ಉತ್ಕೃಷ್ಟ ವಿದ್ಯಾವಂತ ಸೋಲನ್ನು ಹೊಂದಿದ್ದರೂ ಆತನ ಸ್ವವಿಕಾಸಕ್ಕೆ ಕಾರಣಶಕ್ತಿಯಾಗಿರುತ್ತದೆ. ಶೈಕ್ಷಣಿಕ ಸಂಶೋಧನೆಯಲ್ಲಿ ಜೀವನದ ತೃಪ್ತಿದಾಯಕವಾದ ವಲಯಗಳನ್ನು ಬಿಟ್ಟು ಒಂದು ಕಂಪನಿಯನ್ನು ಹುಟ್ಟುಹಾಕುವುದು ಒಂದು ಅತಿ ದೊಡ್ಡದಾದ ಗಂಡಾಂತರ. ಆದರೆ ನನ್ನ ಆದ್ಯತೆಗಳು ಸ್ಫಟಿಕದಷ್ಟು ಸ್ಪಷ್ಟವಾದ್ದರಿಂದ ನಾನು ಸವಾಲುಗಳನ್ನು ಸ್ವೀಕರಿಸಿದೆ. ಪ್ರತಿದಿನವೂ ನಾನು ಅಪಾಯಗಳನ್ನು ತೆಗೆದುಕೊಳ್ಳುತ್ತೇನೆ. ಆದರೆ ಅವುಗಳಲ್ಲಿ ಕೆಲವೊಮ್ಮೆ ಜಯಶಾಲಿಯಾಗುವುದಿಲ್ಲ. ಆದರೆ ಪ್ರತಿಯೊಂದು ಸಮಯದಲ್ಲಿ ಸೋತಾಗ



ನಾನು ನನ್ನ ತಪ್ಪುಗಳಿಂದ ಕಲಿಯುತ್ತೇನೆ. ಮುಂದಿನ ಸಮಯದಲ್ಲಿ ಒಳ್ಳೆಯದನ್ನು ಮಾಡುತ್ತೇನೆ ಮತ್ತು ನನ್ನ ಗುರಿಗಳನ್ನು ಮುಟ್ಟಲು ಅದು ನನಗೆ ಭರವಸೆ ಕೊಡುತ್ತದೆ.

**ತಾಳ್ಮೆ ಮತ್ತು ಅವಿರತ ಪ್ರಯತ್ನ:**

ಈ ಎರಡೂ ಕಠಿಣವಾದ ಸಮಯದಲ್ಲಿ ಸಂದಿಗ್ಧವಾಗಿ ತೇಲಿ ಹೋಗುತ್ತವೆ. ನೀವು ದೃಢಸಂಕಲ್ಪ ಹೊಂದಿದ್ದರೆ ಮತ್ತು ನಿಮ್ಮ ಗುರಿಗಳನ್ನು ನಂಬಿದ್ದಾದರೆ ನಿಮ್ಮ ಅವಿರತ ಯತ್ನದಿಂದ ಯಶಸ್ಸನ್ನು ಕಂಡುಕೊಳ್ಳುತ್ತೀರಿ. 2008–09ರ ಜಾಗತಿಕ ಆರ್ಥಿಕ ಹಿಂಜರಿಕೆಯು ನಮ್ಮನ್ನು ಅತ್ಯಂತ ಕ್ರೂರವಾಗಿ ಹಿಮ್ಮೆಟ್ಟಿಸಿತು. IPO ಹೋಗಲು ಆರ್ಥಿಕ ಹಿಂಜರಿಕೆಯ ಸಂದರ್ಭವು ನಮ್ಮನ್ನು ನೂಕಿಸಿದ್ದು ಕೊನೆಯಕ್ಷಣದಲ್ಲಿ ನನ್ನನ್ನು ಹಿಂದಕ್ಕೆ ಸೆಳೆಯಲಾಯಿತು. ಇವೆಲ್ಲವುಗಳು ತನ್ನ ಯೋಜನೆಗಳನ್ನು ದೂರತಳ್ಳುವಂತೆ ಮಾಡಿತು. ಆದರೂ ಸಹ ಆ ಗಂಡಾಂತರದಿಂದ ಗುಣಮುಖರಾಗುತ್ತಿದ್ದೇವೆ. ಆದರೂ ನಾವು ಒಪ್ಪಂದಗಳನ್ನು ತುಂಬಾ ದೃಢಸಂಕಲ್ಪದಿಂದ ಸಹಿ ಮಾಡುತ್ತಿರುವುದು ನಾನು ಹೊಂದಿರುವ ಅವಿರತ ಶ್ರಮದಿಂದ ಮಾತ್ರ.

**ವೈಜ್ಞಾನಿಕ ಕಾಠಿಣ್ಯ ಮತ್ತು ಸಂಘಟನೆ:**

ನನ್ನ ವೈಜ್ಞಾನಿಕ ತರಬೇತಿಯಲ್ಲಿ ಅದರಲ್ಲಿಯೂ ಟ್ರಾಸ್‌ಬರ್ಗ್‌ನಲ್ಲಿ ಪಿಎಚ್.ಡಿ. ಮಾಡುವ ಅವಧಿಯಲ್ಲಿ ಮತ್ತು ಬೆಲ್ಜಿಯಂನ ಘೆಂಟ್‌ನಲ್ಲಿ ಡಾ. ಮಾರ್ಕ್ ವಾನ್ ಮಾಂಟೇಗ್ (2013ರಲ್ಲಿ ವಿಶ್ವ ಆಹಾರ ಪ್ರಶಸ್ತಿಯನ್ನು ಪಡೆದವರು) ಅವರ ಪ್ರಯೋಗ ಶಾಲೆಯಲ್ಲಿ ಪೋಸ್ಟ್ ಡಾಕ್ಟರಲ್ ಕಾರ್ಯನಿರ್ವಹಿಸುವಾಗ ಇವೆರಡು ಆಂತರಿಕ ಭಾಗಗಳಾಗಿದ್ದವು. ಇವೆರಡನ್ನು ನನ್ನ ಜಯಕ್ಕೆ ಮತ್ತು ಸಾಹಸಕ್ಕೆ ಅನ್ವಯಿಸಿಕೊಳ್ಳುತ್ತೇನೆ. ವೈಜ್ಞಾನಿಕ ಕಾಠಿಣ್ಯವನ್ನು ಅನ್ವಯಿಸಿಕೊಳ್ಳುವುದಕ್ಕೆ ನೀವು ವಿಜ್ಞಾನಿಗಳಾಗಬೇಕಿಲ್ಲ. ನಿಮ್ಮ ಮೂಲ ಅಗತ್ಯತೆಗಳು ದೃಢವಾಗಿದ್ದರೆ ಮತ್ತು ಪರಿಪಕ್ವ ವಿಚಾರಗಳಿಂದ ಕೂಡಿದ್ದೆ ಆದರೆ ಮತ್ತು ನೀವು ಏನನ್ನಾದರೂ ಮಾಡಬೇಕೆಂದಿದ್ದರೆ ಇವೆಲ್ಲವುಗಳನ್ನು ವ್ಯವಸ್ಥಿತವಾಗಿ ಸಂಘಟಿಸಬೇಕಾಗುತ್ತದೆ. ಪರಿಪೂರ್ಣವಾದ ಮಾಹಿತಿ ವ್ಯವಸ್ಥೆಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಾವು ನಿರ್ಧರಿಸಬೇಕಾಗುತ್ತದೆ. ನಾವು ಭಾರತದಲ್ಲಿ ಮೂರು ತರಹನಾದ ಸಾಂಪ್ರದಾಯಿಕ ಔಷಧಗಳನ್ನು ಪ್ರಯೋಗ ಮಾಡುತ್ತೇವೆ. ಆಯುರ್ವೇದ, ಯುನಾನಿ ಮತ್ತು ಸಿದ್ಧ. ನಾವು ಇದರ ಪ್ರೇರೇಪಣೆಗಾಗಿ ಇವುಗಳನ್ನು ಸಂಗಮಿಸುವುದಕ್ಕೆ ನಿರ್ಧರಿಸಿದ್ದೇನೆ. ನಾವು ಪ್ರತಿಯೊಂದು ಸಸ್ಯಭಾಗದ ಈ ಮೂರು ಔಷಧ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ರೋಗದ ಲಕ್ಷಣಗಳನ್ನು ಕಂಡುಕೊಳ್ಳಲು ಮತ್ತು ವೈಜ್ಞಾನಿಕ ಅಧ್ಯಯನದ ಮೇಲೆ ಅಂಕಿ ಅಂಶಗಳನ್ನು ಸಿದ್ಧಪಡಿಸಿದ್ದೇವೆ. ಲಭ್ಯವಿರುವ ಎಲ್ಲ ದತ್ತಾಂಶಗಳನ್ನು ಸಾರ್ವಜನಿಕ ತಾಣಗಳಲ್ಲಿ ನಮ್ಮ ಅಂಕಿ ಅಂಶಗಳಲ್ಲಿ ಸಂಘಟಿಸಿದ್ದೇವೆ. ಈ ಮೇಲೆ ನಾನು ಹೇಳಿದಂತೆ ನಾವು ಅತ್ಯಂತ ಕಠಿಣ ಸಮಯದೊಂದಿಗೆ ಮುನ್ನುಗ್ಗುತ್ತಿದ್ದು, ಅವಸ್ಥೆಜೆನ್ ಸಹಾಯದೊಂದಿಗೆ ವೈಜ್ಞಾನಿಕ ಕಾಠಿಣ್ಯ ಸಾಧಿಸುವಲ್ಲಿ ನಮ್ಮ ವಿಜ್ಞಾನವು ದೃಢವಾಗಿದ್ದು ಈ ವೈವಿಧ್ಯತೆಯಲ್ಲಿ ಸಂಚರಿಸಲು ವಿಜ್ಞಾನವನ್ನು ಬಳಸಬೇಕಾಗುತ್ತದೆ. ನಾವು ಸಮಾಜಜೀವಿಯಾಗಿದ್ದು ಮತ್ತು ನಮ್ಮಷ್ಟಕ್ಕೆ ನಾವು ಬೇರ್ಪಡಿಸಿಕೊಂಡಿದ್ದೇಯಾದರೆ

ಅದೊಂದು ಆಭಾಸದ ಭಾಗವಾಗುತ್ತದೆ. ನಾನು ಎಲ್ಲಿಗೆ ಹೋದರೂ ಜನರೊಟ್ಟಿಗೆ ಜಾಲ ಬೆಳೆಸಿಕೊಳ್ಳಲು ಮಹತ್ವ ಕೊಡುತ್ತೇನೆ. ನನ್ನ ICRISAT, ಟ್ರಾನ್ಸ್‌ಬರ್ಗ್, ಘೆಂಟ್, NCBS, UASನ ಸಹದ್ಯೋಗಿಗಳು ಈಗಲೂ ಸಹ ಸಹಾಯ ಮಾಡುತ್ತಾರೆ. ಅವರಲ್ಲಿ ಕೆಲವರು ನನ್ನ ಸಲಹಾ ಸಮಿತಿ ಸದಸ್ಯರು, ಸರಕಾರಿ ಸಮಿತಿಗಳ ಸದಸ್ಯರು, ಧನಸಹಾಯ ಸಂಘಟನೆಗಳ ಮುಂತಾದವುಗಳ ಸದಸ್ಯರಾಗಿರುತ್ತಾರೆ. ನನ್ನ ಜಾಲದ ಭಾಗವಾಗಿ ನನ್ನ ಹಳೆಯ ವಿದ್ಯಾರ್ಥಿಗಳು ಮತ್ತು ಹಳೆಯ ಸಹೋದ್ಯೋಗಿಗಳು ವಿಶ್ವದ ವಿವಿಧ ಸಂಘಟನೆಗಳಲ್ಲಿ ಇರುತ್ತಾರೆ. ಇದಲ್ಲದೆ ವಿಜ್ಞಾನಿಗಳ ಸಮ್ಮೇಳನಗಳಲ್ಲಿ, ವ್ಯಾಪಾರ ಸಮ್ಮೇಳನಗಳಲ್ಲಿ, ಸರಕಾರಿ ಸಭೆಗಳಲ್ಲಿ ಸಾಮಾಜಿಕವಾಗಿ ಅಥವಾ ಇವತ್ತಿನ ಘಟಿಕೋತ್ಸವದ ಜನರೊಟ್ಟಿಗೆ ಸಂಪರ್ಕ ಬೆಳೆಸಿಕೊಳ್ಳುತ್ತೇನೆ. ಅಂತರ್‌ಜಾಲದಿಂದ ನಾನು ಒತ್ತಡಕ್ಕೆ ಒಳಗಾಗುವುದಿಲ್ಲ. ನಾನು ಹೇಳಿದಂತೆ ಅವೆಸ್ಥಾಜಿನೂಮ್ ಯೋಜನೆಯೂ ರೋಗಗಳನ್ನು ಬೃಹತ್ ಪ್ರಮಾಣದಲ್ಲಿ ಅರ್ಥ ಮಾಡಿಕೊಳ್ಳಲು ಜನಸಾಂದ್ರತಾ ಜನ್ ತಂತ್ರಜ್ಞಾನ ಮತ್ತು ವ್ಯವಸ್ಥಿತ ಜಿನ್ ವಿಜ್ಞಾನ ಬೆಳೆಸಿಕೊಳ್ಳುವುದಾಗಿದೆ. ಇದು ಕೇವಲ ಒಬ್ಬರಿಂದ ಸಾಧ್ಯವಿಲ್ಲ. ಎಲ್ಲದರಲ್ಲಿಯೂ ಪರಿಣತಿ ಹೊಂದಲು ಕೂಡ ಸಾಧ್ಯವಿಲ್ಲ. ಆದಾಗ್ಯೂ ನಾವು ಭಾರತ ಮತ್ತು ಹೊರದೇಶದ ಸಂಸ್ಥೆಗಳು ಮತ್ತು ಕಂಪನಿಗಳೊಂದಿಗೆ ಸಹಯೋಗವನ್ನು ಸ್ಥಾಪಿಸುತ್ತಿದ್ದೇವೆ. ಉದಾಹರಣೆಗೆ ನ್ಯೂರೊಡಿಜೆಸಿರೆಟಿವ್ ರೋಗಗಳನ್ನು ಮಾಡಿಕೊಳ್ಳುತ್ತೇವೆ. ಸಂಗ್ರಹಿಸಿದ ಬೃಹದಾಕಾರದ ದತ್ತಾಂಶಗಳನ್ನು ವಿಶ್ಲೇಷಿಸಲು ನಾವು ಜೈವಿಕ ಮಾಹಿತಿ ತಂತ್ರಜ್ಞಾನದಲ್ಲಿ ಪರಿಣತಿಹೊಂದಿದ ಸಂಘಟನೆಗಳೊಂದಿಗೆ ಸಹಯೋಗವನ್ನು ಸ್ಥಾಪಿಸುತ್ತೇವೆ. ಬಹಳಷ್ಟು ಸಹಯೋಗಗಳು ವೈಯಕ್ತಿಕ ಸಂಪರ್ಕಜಾಲದಿಂದ ಮತ್ತು ಪರಿಚಯಗಳಿಂದ ಬರುತ್ತವೆ. ಮಹಿಳೆಯರೇ ನಿಮ್ಮ ಗುರಿ ತಲುಪಲು ನಿಮ್ಮ ಆದ್ಯತೆಗಳನ್ನು ಅರ್ಥ ಮಾಡಿಕೊಂಡು ಕಠಿಣಶ್ರಮದಿಂದ ಗುರಿಮುಟ್ಟ ಬೇಕಾಗುತ್ತದೆ.

ಪ್ರತಿಯೊಂದು ಸಾಹಸದ ಕ್ಷಣದಲ್ಲಿ ಉತ್ಕೃಷ್ಟ ಗುರಿಯನ್ನು ಸಾಧಿಸಬೇಕಾಗುತ್ತದೆ. ಯಾವುದೇ ತೆರನಾದ ಸಮಸ್ಯೆಗಳಿಂದ ಹಿನ್ನೆಡೆಯುವಿಕೆಯಿಂದ ಭಯಭೀತರಾಗದಿರಿ. ನಿಮ್ಮೆಲ್ಲರಿಂದಲೂ ಅನೇಕ ಜಯಶಾಲಿ ಕಥೆಗಳನ್ನು ಕೇಳುತ್ತೇನೆ ಎಂದು ನಾನು ಆಶಿಸುತ್ತೇನೆ. ಉತ್ಕೃಷ್ಟ ಭವಿಷತ್ತಿಗಾಗಿ ನಿಮ್ಮೆಲ್ಲರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

5 ನೆಯ ಘಟಿಕೋತ್ಸವ ಭಾಷಣ 2014

*******



# ಭಾರತೀಯ ಶಿಕ್ಷಣ ಹಾಗೂ ಮೌಲ್ಯಗಳು

❑ ನ್ಯಾಯಮೂರ್ತಿ ಶ್ರೀಮತಿ ಮಂಜುಳಾ ಚೆಲ್ಲೂರ
ಮುಖ್ಯ ನ್ಯಾಯಮೂರ್ತಿಗಳು, ಕೇರಳ ಹೈಕೋರ್ಟ್
ಮಾರ್ಚ್ 3, 2013

ಕರ್ನಾಟಕ ಸರ್ಕಾರದ ಘನತವೆತ್ತ ರಾಜ್ಯಪಾಲರು, ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಎಚ್.ಆರ್ ಭಾರದ್ವಾಜ ಅವರೇ, ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರು, ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಮಾನ್ಯ ಶ್ರೀ ಸಿ.ಟಿ ರವಿ ಅವರೇ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಡಾ. ಮೀನಾ ಆರ್ ಚಂದಾವರಕರ ಅವರೇ, ಗೌರವಾನ್ವಿತ ಅತಿಥಿಗಳೇ, ಗೌರವ ಡಾಕ್ಟರೇಟ್ ಪದವಿಗಳನ್ನು ಪಡೆಯುವ ಸನ್ಮಾನಿತರೇ ಹಾಗೂ ವಿವಿಧ ಪದವಿಗಳನ್ನು ಪಡೆಯುತ್ತಿರುವ ಪದವೀಧರರೇ,

ಕರ್ನಾಟಕ ರಾಜ್ಯದಲ್ಲಿಯೇ ಮೊಟ್ಟಮೊದಲು ಮತ್ತು ಏಕೈಕ ಮಹಿಳಾ ವಿಶ್ವವಿದ್ಯಾಲಯವಾದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ನಾಲ್ಕನೆಯ ಘಟಿಕೋತ್ಸವದಲ್ಲಿ ಭಾಗವಹಿಸಲು ನನಗೆ ಹೆಮ್ಮೆ ಹಾಗೂ ಸಂತೋಷವೆನಿಸುತ್ತದೆ. ಮೊದಲಿಗೆ ವಿವಿಧ ಪದವಿಗಳನ್ನು, ಗೌರವ ಡಾಕ್ಟರೇಟ್‌ಗಳನ್ನು ಪಡೆಯುತ್ತಿರುವ ವಿದ್ವಾಂಸರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ 'ಒಬ್ಬ ಪುರುಷ ವಿದ್ಯಾವಂತನಾದರೆ ಅವನಿಗಷ್ಟೇ ಸೀಮಿತವಾಗುತ್ತದೆ. ಆದರೆ ಒಬ್ಬ ಮಹಿಳೆ ವಿದ್ಯಾವಂತಳಾದರೆ ಇಡೀ ಕುಟುಂಬವೇ ವಿದ್ಯಾವಂತವಾಗುತ್ತದೆ.' ಈ ನಿಟ್ಟಿನಲ್ಲಿ ಈ ವಿಶ್ವವಿದ್ಯಾಲಯವು ಗ್ರಾಮೀಣ ಮಹಿಳೆಯರ ಆಶೋತ್ತರಗಳನ್ನು, ಅವಶ್ಯಕತೆಗಳನ್ನು ನೀಗಿಸುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. 2003 ರಂದು ಐತಿಹಾಸಿಕ ನಗರ ವಿಜಾಪುರದಲ್ಲಿ ಮಹಿಳೆಯರಿಗಾಗಿಯೇ ಸ್ಥಾಪಿತಗೊಂಡಿರುವ ವಿಶ್ವವಿದ್ಯಾಲಯವು 86 ಮಹಿಳಾ ಮಹಾವಿದ್ಯಾಲಯಗಳ ಸಂಲಗ್ನಕ್ಕೆ ಪಡೆದಿದ್ದು ನಾನು ಓದಿದ ಬಳ್ಳಾರಿಯ ಶ್ರೀಮತಿ ಅಲ್ಲಂ ಸುಮಂಗಳಮ್ಮ ಮಹಿಳಾ ಮಹಾವಿದ್ಯಾಲಯವು ಇದರಲ್ಲಿ ಒಂದಾಗಿದೆ.

ಶಿಕ್ಷಣವು ಪುರುಷ ಹಾಗೂ ಮಹಿಳೆಯರಿಗೆ ಅವರವರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಲ್ಲದೆ ಅದನ್ನು ಪಡೆಯುವ ಸಾಮರ್ಥ್ಯವನ್ನು ತಿಳಿದುಕೊಳ್ಳುವಲ್ಲಿ ಹಾಗೂ

ಅಭಿವೃದ್ಧಿಪಡಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ವಿಶೇಷವಾಗಿ ಮಹಿಳೆಯರಿಗಾಗಿ ಶಿಕ್ಷಣ ಕೊಡುವುದರಿಂದ ಅವರ ಬೌದ್ಧಿಕ ಹಾಗೂ ಮಾನಸಿಕ ಆರೋಗ್ಯಕರ ಬೆಳವಣಿಗೆ, ಹಕ್ಕುಗಳ ಮಾಹಿತಿ, ಸಾಂಸ್ಕೃತಿಕ ಅರಿವು ಸ್ವ-ಸಾಮರ್ಥ್ಯ ಹೆಚ್ಚಿಸಿಕೊಳ್ಳುವಲ್ಲಿ ಶಿಕ್ಷಣ ಮುಖ್ಯ ಪಾತ್ರವಹಿಸುತ್ತದೆ. ಅಲ್ಲದೆ ಲಿಂಗ ಸಮಾನತೆ ಅಭಿವೃದ್ಧಿಗೆ ಪೂರಕವಾಗುತ್ತದೆ.

ಮಹಿಳಾ ಶಿಕ್ಷಣವು ಭಾರತದಲ್ಲಿ ಬ್ರಿಟಿಷರ ಕಾಲಕ್ಕಿಂತಲೂ ಮೊದಲೇ ಇತ್ತು. ಈಸ್ಟ್ ಇಂಡಿಯಾ ಕಂಪನಿಯೂ ಕೂಡ ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಯೋಜಿಸಿತ್ತು. ಆದರೆ ಪ್ರಗತಿ ಆಮೆಯ ನಡಿಗೆಯಾಗಿತ್ತು. ಏಕೆಂದರೆ ಆಗಿನ ಶಿಕ್ಷಣವು ಶ್ರೀಮಂತರಿಗೆ ಮಾತ್ರ ಸೀಮಿತವಾಗಿತ್ತು. ಪ್ರಾಥಮಿಕ ಶಿಕ್ಷಣ ಮಾತ್ರ ಲಭ್ಯವಾಗುತ್ತಿತ್ತು. 1878 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯವು ಮಹಿಳೆಯರು ಪದವಿಗೆ ಸೇರುವ ಅವಕಾಶವನ್ನು ಕಲ್ಪಿಸಿತು.

ಭಾರತದ ಮಹಾನಗರಗಳಲ್ಲಿ ಲಾರ್ಡ್ ಡಾಲ್ ಹೌಸಿಯವರ ಆಡಳಿತದಲ್ಲಿ ಪ್ರಥಮವಾಗಿ ಮಹಿಳೆಯರಿಗಾಗಿ ಸಾರ್ವಜನಿಕ ಶಾಲೆಗಳನ್ನು ಮಾನ್ಯ ಬತುನೇ ಅವರು ಪ್ರಾರಂಭಿಸಿದರು. ಇದು ದೇಶದಲ್ಲಿ ವಿರೋಧ ಹಾಗೂ ಅಶಾಂತಿ ವ್ಯಕ್ತವಾಗಲು ಕಾರಣವಾಯಿತು. ಆದರೆ ಸಮಾಜ ಪರಿವರ್ತಕರಾದ ಶ್ರೀ ರಾಜಾರಾಂ ಮೋಹನರಾಯ್, ದಾದಾಬಾಯಿ ನವರೋಜಿ (ಆಗಿನ ಈಸ್ಟ್ ಇಂಡಿಯಾ ಕಂಪನಿಗೆ ಗ್ವಾರವಾನ್ವಿತ ಕಾರ್ಯದರ್ಶಿಗಳು) ಮತ್ತು ಹಲವಾರು ಮಾನವೀಯ ಹೃದಯವಂತ ಮಹಿಳೆಯರ ಸಹಕಾರದಿಂದ ಮಹಿಳಾ ಶಿಕ್ಷಣ ಬೆಳಕು ಕಂಡಿತು.

ಭಾರತದಲ್ಲಿ ಸ್ವಾತಂತ್ರ್ಯಾ ನಂತರ ಶಿಕ್ಷಣವನ್ನು ಸಮಾಜದ ಬದಲಾವಣೆಯಲ್ಲಿ ಸಮರ್ಥ ಅಸ್ತ್ರವಾಗಿ ಬಳಸಲಾಯಿತು. ಇದರ ಪರಿಣಾಮ ಸುಮಾರು 100 ಹಳ್ಳಿಗಳಲ್ಲಿ ಸಮುದಾಯ ಬೆಳವಣಿಗೆಗಳ ವಲಯಗಳು ನಿರ್ಮಿತಗೊಂಡವು. ಮುಂದುವರೆದು ವ್ಯಕ್ತಿ ಹಾಗೂ ಸಮುದಾಯ ವೃತ್ತಿಯನ್ನಾಧರಿಸಿ ಒಕ್ಕಲುತನ, ಪಶು ಸಂಗೋಪನೆ, ಸಹಕಾರ, ಗುಡಿ ಕೈಗಾರಿಕೆ, ಆರೋಗ್ಯ, ಕುಟುಂಬ ಯೋಜನೆ, ಮಕ್ಕಳ ಪಾಲನೆ ಪೋಷಣೆ, ವಯಸ್ಕರ ಶಿಕ್ಷಣಗಳಂತಹ ಕಾರ್ಯಕ್ರಮಗಳು ಜಾರಿಗೊಂಡವು. ಈ ಪ್ರಗತಿಯ ಹಿನ್ನೆಲೆಯನ್ನು ಗಮನಿಸಿದರೆ ಮೊದಲಿಗೆ ಮಹಿಳೆಯರನ್ನು ಇವುಗಳಿಂದ ದೂರವಿರಿಸಿದ್ದರು. ಈಗ ಶಿಕ್ಷಣದಲ್ಲಿ ಮಹಿಳೆಯ ಪ್ರಗತಿಯನ್ನು ಗಮನಿಸಿದರೆ ಅತೀ ಸಂತೋಷವೆನಿಸುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿ ತಾರತಮ್ಯ ಗಣನೀಯವಾಗಿ ಕಡಿಮೆಯಾಗಿದೆ. ಗಂಡು ಹೆಣ್ಣಿನ ತಾರತಮ್ಯದ ಬಗ್ಗೆ ಹೇಳುವದಾದರೆ ಹೆಣ್ಣಿರಲಿ ಗಂಡಿರಲಿ ಒಂದೇ ಎಂಬ ಭಾವನೆ ಎಲ್ಲಾ ಹಂತಗಳಲ್ಲೂ ವ್ಯಕ್ತವಾಗಬೇಕು. ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರನ್ನು ಲಕ್ಷ್ಮೀ, ಸರಸ್ವತಿ, ಶಕ್ತಿಯಂಥ ದೇವತೆಗಳ ಸ್ಥಾನದಲ್ಲಿ ನೋಡಲಾಗುತ್ತಿದೆ. ಆದರೆ ನಿಜ ಜೀವನದಲ್ಲಿ ಕೆಲವೇ ಅದೃಷ್ಟವಂತರನ್ನು ಬಿಟ್ಟರೆ ಇದು ಸಾಧ್ಯವಾಗಿದೆಯೇ? ಶಿಕ್ಷಣವು ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಮುಖ್ಯಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ 2001ರಲ್ಲಿ ಭಾರತ ಸರ್ಕಾರವು ಹಲವು ಕಾರ್ಯಕ್ರಗಳನ್ನು ರೂಪಿಸಿತು. ಆದಾಗ್ಯೂ ಮುಂದುವರೆದುಕೊಂಡು ಬಂದ ಪ್ರವೃತ್ತಿಯಿಂದಾಗಿ ಲಿಂಗಾನುಪಾತ, ಕೌಟುಂಬಿಕ ದೌರ್ಜನ್ಯ, ವಯಸ್ಕ ಹೆಣ್ಣು ಮಕ್ಕಳ ತಾರತಮ್ಯಗಳಂತಹ ಅನಿಷ್ಠ ಪದ್ಧತಿಗಳು ಇನ್ನೂ



ಮುಂದುವರೆಯುತ್ತಲಿವೆ. ಇದಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳೂ ಕಾರಣವಾಗಿವೆ.

ಹಳ್ಳಿಗಳು ಹಾಗೂ ಸಾಮಾಜಿಕವಾಗಿ/ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಬುಡಕಟ್ಟು ಜನಾಂಗದವರು ಇಂದಿಗೂ ಶಿಕ್ಷಣ-ಆರೋಗ್ಯ-ಜೀವನ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರುಗಳು ಶಿಕ್ಷಣ ಸೌಲಭ್ಯದಿಂದ ಮಾತ್ರ ಸಬಲೀಕರಣಗೊಳ್ಳಲು ಸಾಧ್ಯ. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಮಹಿಳೆಯರನ್ನು ಶಿಕ್ಷಣದ ಮುಖಾಂತರ ಸ್ವನಿರ್ಣಯದ ಸಾಮರ್ಥ್ಯ, ಆರ್ಥಿಕ ಮಟ್ಟದ ಸುಧಾರಣೆ, ರಾಜಕೀಯ ಜೀವನದ ಅರಿವು ಈ ಮೊದಲಾದ ಕ್ಷೇತ್ರಗಳಲ್ಲಿ ಸಬಲೀಕರಣಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಸಬಲೀಕರಣಗೊಳಿಸುವ ಕಾರ್ಯಗಳಲ್ಲಿ ಮಹಿಳಾ ಸಂಘಗಳು ಸಹಭಾಗಿತ್ವವನ್ನು ಪಡೆಯಬಹುದಾಗಿದೆ.

ನ್ಯಾಯಾಂಗ ವ್ಯವಸ್ಥೆಯು ಲಿಂಗ ತಾರತಮ್ಯದ ಸೂಕ್ಷ್ಮತೆಯನ್ನರಿತು ಮಹಿಳೆಯರ ಆಸ್ತಿ ಹಕ್ಕು, ಕಾರ್ಮಿಕ ಕಾಯ್ದೆ, ಉದ್ಯೋಗಾವಕಾಶ, ಸಾಮಾಜಿಕ ಹಕ್ಕುಗಳ ತಿಳುವಳಿಕೆ ನೀಡುವ ಹಾಗೂ ಪಡೆಯುವ ನಿಟ್ಟಿನಲ್ಲಿ ಕಾರ್ಯನಿರತವಾಗಿದೆ. ಕೌಟುಂಬಿಕ ದೌರ್ಜನ್ಯ, ಮಹಿಳಾ ಸಾಮಾಜಿಕ ದೌರ್ಜನ್ಯಗಳಂತಹ ಪ್ರವೃತ್ತಿಗಳನ್ನು ಮಟ್ಟ ಹಾಕುವಲ್ಲಿ ಕಠಿಣ ಕ್ರಮಗಳನ್ನು ಜರುಗಿಸುವುದಕ್ಕಾಗಿ ಕಾನೂನಿನಲ್ಲಿ ಬದಲಾವಣೆಗಳನ್ನು ತರುತ್ತಲೇ ಇದ್ದೇವೆ. ಮಹಿಳೆಯರು ಉನ್ನತ ಶಿಕ್ಷಣದಿಂದ ಸಮಾಜದಲ್ಲಿ ಸ್ಥಾನಮಾನದ ವೃದ್ಧಿ, ಅನನ್ಯತೆಯನ್ನು ಗುರುತಿಸಿಕೊಳ್ಳುವಿಕೆ, ಸ್ವಾಭಿಮಾನದಿಂದ ಸ್ವತಂತ್ರವಾಗಿ ಬದುಕುವ ಸಾಮರ್ಥ್ಯ ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ದಿನ ಅತೀ ವಿಶೇಷವಾಗಿದೆ ಏಕೆಂದರೆ ನನ್ನ ಎಲ್ಲಾ ಅಕ್ಕತಂಗಿಯರು ತಮ್ಮ ಅರ್ಹ ಪದವಿಗಳನ್ನು ಪಡೆಯಲು ಇಲ್ಲಿ ಸೇರಿದ್ದಾರೆ. ಅವರ ತಂದೆ ತಾಯಿಗಳು, ಶುಭ ಚಿಂತಕರು, ಬಂಧು ಬಳಗದವರು ಅವರ ಪ್ರಶಸ್ತಿ ಪ್ರದಾನವನ್ನು ವೀಕ್ಷಿಸಲು ಆಗಮಿಸಿದ್ದಾರೆ. ಮಹಿಳೆಯರು ಸ್ನಾತಕ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ಪದವಿಗಳನ್ನು ಪಡೆಯುವಲ್ಲಿ ಸತತವಾಗಿ ಹತ್ತು ವರ್ಷಗಳಿಂದ ಶ್ರಮಿಸುತ್ತಿರುವವರಿಗೆಲ್ಲವೂ ನನ್ನ ಅಭಿನಂದನೆಗಳು.

ಈ ಸಂದರ್ಭದಲ್ಲಿ ಹಳ್ಳಿಗಳಿಗೆ ಸಂಬಂಧಿಸಿದಂತೆ ಒಂದು ಸತ್ಯವನ್ನು ಹೇಳಬಯಸುತ್ತೇನೆ. ಯಾರೂ ದ್ವೀಪದಲ್ಲಿ ಬದುಕುತ್ತಿಲ್ಲ. ನಮ್ಮದೇ ಆದ ಈ ವಿಶ್ವದಲ್ಲಿ ನಾವೆಲ್ಲರೂ ಒಬ್ಬರನ್ನೊಬ್ಬರು ಅವಲಂಬಿಸಿ ಬದುಕಲೇ ಬೇಕಾಗಿದೆ. ನಮ್ಮೆಲ್ಲರಿಗೂ ಮಾಡಲೇ ಬೇಕಾದ ಕರ್ತವ್ಯವಿದೆ. ಈ ಕರ್ತವ್ಯವು ನಮ್ಮದೇ ಆದ ಕುಟುಂಬ, ನಮ್ಮ ದೇಶ ಹಾಗೂ ನಮ್ಮ ಜಗತ್ತನ್ನು ಸುಂದರಗೊಳಿಸುವುದಕ್ಕಾಗಿ, ನಾಗರಿಕತೆಯ ದಿವ್ಯ ಶ್ರೀಮಂತಿಕೆ ಅಥವಾ ದೈಹಿಕ ಬಲಗಳನ್ನಾಧರಿಸದೆ ಮಾನವೀಯ ಮೌಲ್ಯಗಳಿಂದ ಗುರುತಿಸಲ್ಪಡುವಂತಾಗಬೇಕು. ಹಾಗೂ ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗಿರಬೇಕು. ವ್ಯಕ್ತಿಯು ಮನುಷ್ಯನಾಗಿ ಜನಿಸಿದ್ದಕ್ಕಾಗಿ, ಸ್ಥಾನಮಾನಗಳಿಗಾಗಿ, ಶ್ರೀಮಂತಿಕೆಗಾಗಿ, ಜ್ಞಾನಕ್ಕಾಗಿ ಹೆಮ್ಮೆ ಪಡುವುದರಿಂದ ಅಹಂಕಾರ ಲಭಿಸಿ ಅಜ್ಞಾನದಿಂದ ಮರೆತು ಬದುಕುತ್ತಾನೆ. ಅಲೆಕ್ಸಾಂಡರ್‌ನಂತಹ ಮಹಾನ್ ವ್ಯಕ್ತಿ

ಈ ವಿಷಯವನ್ನು ತಮ್ಮ ಜೀವನದ ಕೊನೆ ಗಳಿಗೆಯಲ್ಲಿ ಅರಿತುಕೊಂಡರು. ಆದರೆ ಏನು ಪ್ರಯೋಜನ? ಏಕೆಂದರೆ ನಾವೆಲ್ಲರೂ ಈ ಲೋಕ ತ್ಯಜಿಸುವಾಗ ಯಾವುದೂ ನಮ್ಮೊಂದಿಗೆ ಬರುವುದಿಲ್ಲ. ಆದರೆ ಉಳಿಯುವುದು ನಮ್ಮ ಬದುಕಿನ ರೀತಿ ಮಾತ್ರ. ನಮ್ಮ ದೇಶವು ಗಾಂಧೀಜಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟ್ಯಾಗೋರ್, ಶ್ರೀಮತಿ ಸರೋಜಿನಿ ನಾಯ್ಡು, ಶ್ರೀಮತಿ ಇಂದಿರಾ ಗಾಂಧಿಯಂತಹ ಮಹಾನ್ ಸುಪುತ್ರ ಸುಪುತ್ರಿಯರಿಗೆ ಜನ್ಮ ಕೊಟ್ಟಿದೆ. ಇಲ್ಲಿ ನನಗೆ ಬುದ್ಧನ ಒಂದು ಮಾತು ನೆನಪಿಗೆ ಬರುತ್ತದೆ. ಅದೇನಂದರೆ ಓ ಆನಂದ : "ನಿನಗೆ ನೀನೇ ಬೆಳಕು, ಏಕೆಂದರೆ ಅವರವರ ಧರ್ಮದ ಶೋಧನೆ ಅವರ ಅಂತರಾತ್ಮದಲ್ಲಿ ಆಗಬೇಕು' ಸ್ವಾಮಿ ವಿವೇಕಾನಂದರ ಪ್ರಕಾರ " ವ್ಯಕ್ತಿಯ ಸ್ವಾತಂತ್ರ್ಯದ ಹೋರಾಟವನ್ನು ಧ್ವನಿಸುವ ಪ್ರತಿ ಸಾಹಿತ್ಯವು ನಾವೆಲ್ಲರೂ ಒಂದೇ ಎನ್ನುವುದನ್ನು ಸಾರುತ್ತದೆ.' ಭಾರತೀಯ ತತ್ವಶಾಸ್ತ್ರದ ಪ್ರಕಾರ ಮಾನವೀಯ ಮೌಲ್ಯಗಳು ಮತ್ತು ಆಧ್ಯಾತ್ಮಿಕತೆಗಳು ಏಕತೆಯನ್ನು ಆಧರಿಸಿವೆ. ಆದರೆ ಇಂದಿನ ಆಧುನಿಕತೆಯ ದುರಂತವೆಂದರೆ ಎಲ್ಲಾ ಅನುಕೂಲತೆಗಳಿದ್ದಾಗ್ಯೂ, ಅಪಾರ ಶಕ್ತಿ, ಅಪಾರ ಶ್ರೀಮಂತಿಕೆ, ಅಪಾರ ಜ್ಞಾನ ಇದ್ದಾಗ್ಯೂ ನಾವು ನೀವೆಲ್ಲರೂ ನಿಖರವಾದ ಮಾರ್ಗದರ್ಶನ(ಗುರು) ಅಥವಾ ದರ್ಶನದಿಂದ (ಗುರಿ) ವಂಚಿತರಾಗುತ್ತಿದ್ದೇವೆ. ಇಂದು ವ್ಯಕ್ತಿಗಳು ಮೌಲ್ಯಾಧಾರಿತ ಪ್ರವೃತ್ತಿ ಬೆಳೆಸಿಕೊಳ್ಳದಿದ್ದರೆ, ವೈಜ್ಞಾನಿಕ ಬೆಳವಣಿಗೆಗಳನ್ನು ಸದುಪಯೋಗಪಡಿಸಿಕೊಳ್ಳದಿದ್ದರೆ, ಸ್ಥಾನಮಾನಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸದಿದ್ದರೆ ಸಮಾಜದಲ್ಲಿ ಅಲ್ಲೋಲ ಕಲ್ಲೋಲ/ಅಶಾಂತಿ ಉಂಟಾಗುವುದರಲ್ಲಿ ಸಂಶಯವಿಲ್ಲ.

ಇಲ್ಲಿಯವರೆಗೆ ನೀವೆಲ್ಲ ಸಂರಕ್ಷಿತ ಜೀವನದಲ್ಲಿದ್ದೀರಿ, ಇನ್ನು ಮುಂದೆ ಸ್ಪರ್ಧಾತ್ಮಕ ಜಗತ್ತಿಗೆ ಕಾಲಿಡುತ್ತೀರಿ. ಸಂರಕ್ಷಣೆ ಮಾಡಿರುವ ಸಮಾಜಕ್ಕೆ ಕೃತಜ್ಞರಾಗಿ, ಭಾವಿ ಜೀವನವನ್ನು ಉತ್ತಮಗೊಳಿಸಿಕೊಳ್ಳಿ ಹಾಗೂ ಈ ದೇಶದ ಅಭಿವೃದ್ಧಿಯಲ್ಲಿ ನಿಮ್ಮದೂ ಪಾತ್ರವಿರಲಿ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುವೆ.

4 ನೆಯ ಘಟಿಕೋತ್ಸವ ಭಾಷಣ ದಿನಾಂಕ: 03.03.2013

*******



# ಮುನ್ನಡೆಯತ್ತ ಮಹಿಳೆ

❑ ಶ್ರೀಮತಿ ವಿ.ಎಸ್.ರಮಾದೇವಿ
ಸನ್ಮಾನ್ಯ ಕರ್ನಾಟಕದ ನಿವೃತ್ತ
ರಾಜಪಾಲರು

ಐತಿಹಾಸಿಕ ಬಿಜಾಪುರ ನಗರದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯದ ಮೂರನೆಯ ವಾರ್ಷಿಕ ಘಟಿಕೋತ್ಸವದಲ್ಲಿ ಮಹಿಳಾ ಪದವೀಧರರನ್ನು ಹಾಗೂ ಇತರ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಲು ನನಗೆ ಸಂತೋಷವೆನಿಸುತ್ತದೆ.

ನಮ್ಮ ಸಮಾಜವು ಬಹುತೇಕವಾಗಿ ಪಿತೃಪ್ರಧಾನ ಸಮಾಜವಾಗಿರುವುದರಿಂದ ಸಹಜವಾಗಿ ಪುರುಷರು ಎಲ್ಲ ರಂಗಗಳಲ್ಲಿ ಮಹಿಳೆಯರ ಮೇಲೆ ಪ್ರಭುತ್ವ ಸಾಧಿಸುತ್ತಾರೆ. ಕುಟುಂಬದ ಹೆಸರು ಪುರುಷ ಪ್ರಧಾನವಾಗಿ ಬೆಳೆಯುತ್ತದೆ. ಅವಳನ್ನು ಹೆಚ್ಚು ಕಡಿಮೆ ಒಂದು ಆಸ್ತಿಯನ್ನಾಗಿ ಪರಿಭಾವಿಸಲಾಗಿದೆ. ಇದು ಅವಳ ದೈಹಿಕ ಮತ್ತು ಮಾನಸಿಕ ಹಿಂಸೆಗೆ ಕಾರಣವಾಗಿದೆ. ಭಾರತದಲ್ಲಿ ಮಹಿಳಾ ಸ್ಥಾನಮಾನ ಸಮಿತಿಯನ್ನು ಕೇಂದ್ರ ಸರ್ಕಾರವು ನೇಮಕ ಮಾಡಿತು. ಮಹಿಳೆಯ ಸ್ಥಾನಮಾನ ಕುರಿತು ಅಧ್ಯಯನ ಮಾಡಿ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ತಿಳಿಸಲಾಯಿತು.

ಮಹಿಳೆಯ ಸ್ಥಿತಿಯು ಪ್ರಾಯೋಗಿಕವಾಗಿ ನೋಡಿದಲ್ಲಿ ತುಂಬಾ ದುರ್ಬಲಗೊಳ್ಳುತ್ತಿದೆ. ಕೆಲವು ಮಧ್ಯಮ ವರ್ಗದ ಮಹಿಳೆಯರು ಶಿಕ್ಷಣ ಮತ್ತು ಉದ್ಯೋಗ ಪಡೆಯಲು ಸಫಲರಾಗುತ್ತಿದ್ದಾರೆ. ಅತಿ ಕಡಿಮೆ ಸಂಬಳದ ಉದ್ಯೋಗಗಳಲ್ಲಿ ಮಹಿಳೆಯು ದುಡಿಯುತ್ತಿದ್ದಾಳೆ. ಕಠಿಣ ಕೆಲಸ, ಹೆಚ್ಚಿನ ಅವಧಿ ಮತ್ತು ಕನಿಷ್ಠ ವೇತನದ ಮೂಲಕ ಅವಳನ್ನು ದುಡಿಸಿಕೊಳ್ಳಲಾಗುತ್ತಿದೆ. ಮನೆಯ ಜವಾಬ್ದಾರಿ, ಕುಟುಂಬ, ಉದ್ಯೋಗ ಮತ್ತು ಮನೆಗೆಲಸವನ್ನು ಅವಳು ನಿಭಾಯಿಸುತ್ತಿದ್ದಾಳೆ. ಮಕ್ಕಳನ್ನು ನೋಡಿಕೊಳ್ಳುವುದು ವಯಸ್ಸಾದವರು, ರೋಗಿಗಳನ್ನು ಆರೈಕೆ ಮಾಡುವುದು ಸಹ ಇವರ ಕೆಲಸವಾಗಿದೆ. ಅವಳ ಮೇಲೆ ಅತ್ಯಾಚಾರ, ಆಕ್ರಮಣ, ಕೌಟುಂಬಿಕ ಹಿಂಸೆ, ವರದಕ್ಷಿಣೆ ಸಾವುಗಳು ಮತ್ತು ವೇಶ್ಯಾವಾಟಿಕೆಯಂತಹ ಸಮಸ್ಯೆಗಳಲ್ಲಿ ಮಹಿಳೆ ಬದುಕುತ್ತಾಳೆ(1974 ವರದಿ). 1980 ರ ನಂತರದಲ್ಲಿ ಮಹಿಳೆಯರನ್ನು ಮುಖ್ಯ ವಾಹಿನಿಗೆ ತರಲು ರಾಷ್ಟ್ರೀಯ ಯೋಜನೆಗಳು ರೂಪಿತವಾದವು. ಆರ್ಥಿಕವಾಗಿ, ಸಾಮಾಜಿಕವಾಗಿ ಸಮಾನ ಅವಕಾಶವನ್ನು ಅವಳಿಗೆ

ನೀಡುವುದು ಇವುಗಳ ಗುರಿಯಾಗಿತ್ತು. ನ್ಯಾಯಮೂರ್ತಿಗಳಾದ ಕೃಷ್ಣಾ ಅಯ್ಯರ್ ಅವರು ಪುರುಷರ ಮತ್ತು ಮಹಿಳೆಯರ ಸಮಾನತೆ ಎಂದರೇನು ಎಂಬುದರ ಬಗ್ಗೆ ಬಹಳ ಉತ್ತಮವಾಗಿ ನಿರೂಪಿಸಿದ್ದಾರೆ. ಅವರು ಹೇಳುವಂತೆ ಪುರುಷ ಮತ್ತು ಮಹಿಳೆಯ ಸಮಾನತೆ ಎಂದರೆ, ವ್ಯಕ್ತಿಗತವಾಗಿ ಗುರುತಿಸಿಕೊಳ್ಳುವಿಕೆಯಲ್ಲ ಹಾಗೂ ವ್ಯಕ್ತಿತ್ವದಲ್ಲಿ ವ್ಯತ್ಯಾಸ ಗುರುತಿಸುವದಲ್ಲ. ಮಹಿಳೆಯು ತನ್ನ ಶಕ್ತಿ ಸಾಮರ್ಥಗಳನ್ನು ಮುಕ್ತವಾಗಿ ಬಳಸಲು ಸ್ವಾತಂತ್ರವಿರುವ ವಾತಾವರಣವನ್ನು ಕಲ್ಪಿಸುವಿಕೆಯನ್ನು ಸಮಾನತೆ ಎನ್ನಬೇಕೆಂದು ಅವರು ನಿರೂಪಿಸಿದ್ದಾರೆ. **(Women Unbonda plea for gender Justice)**

ನಾವು ನಮ್ಮ ಕಲ್ಯಾಣ ರಾಜ್ಯವನ್ನು ಮತ್ತು ಅದರ ಆಡಳಿತವನ್ನು ಕಾನೂನಿನ ಅಡಿಯಲ್ಲಿ ತಂದಿದ್ದೇವೆ. ಇದರ ಮೂಲಕವೇ ಸಾಮಾಜಿಕ ಬದಲಾವಣೆಯನ್ನು ತರಬೇಕಾಗುತ್ತದೆ. ಸಂವಿಧಾನದ ಕೆಲವು ಕಲಂಗಳು ಮಹಿಳೆಯರ ಹಕ್ಕುಗಳ ರಕ್ಷಣೆಗೆ ಅವಕಾಶ ಮಾಡಿವೆ. ಮಹಿಳೆಯ ರಕ್ಷಣೆ ಹಾಗೂ ಜೀವನದಲ್ಲಿ ಅವಳಿಗೆ ಸಮಾನ ಅವಕಾಶಗಳನ್ನು ಇವು ಘೋಷಣೆ ಮಾಡಿವೆ. ಇದರಿಂದ ಮಹಿಳೆಯ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿದೆ. ಬಹುತೇಕ ಅವಕಾಶಗಳು 1981 ಸೆಪ್ಟೆಂಬರ್ 3 ರಂದು ನಡೆದ ಸಂಯುಕ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಒಪ್ಪಿಕೊಂಡಿರುವುದಾಗಿವೆ. ಮಹಿಳೆಯರ ಮೇಲಿನ ಎಲ್ಲ ತರಹದ ದೌರ್ಜನ್ಯಗಳನ್ನು ತಡೆಗಟ್ಟಲು ಇವುಗಳನ್ನು 1950 ರಿಂದಲೇ ಭಾರತದ ಸಂವಿಧಾನದಲ್ಲಿ ಸೇರಿಸಲಾಗಿದೆ. ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು, ರಾಜನೀತಿ ನಿರ್ದೇಶಕ ತತ್ವಗಳು, ಮೂಲಭೂತ ಕರ್ತವ್ಯಗಳಲ್ಲಿ ಮಹಿಳೆಗೆ ಪುರುಷನಷ್ಟೇ ಸಮಾನವಾದ ಹಕ್ಕುಗಳನ್ನು ನೀಡಿವೆ. ಆದರೆ ಎಲ್ಲ ಕಡೆಯಲ್ಲೂ ಇವುಗಳಲ್ಲಿ ತಾರತಮ್ಯ ಇರುವುದು ಕಂಡು ಬರುತ್ತದೆ.

ಮಹಿಳೆಗೆ ವಿಶೇಷ ಪ್ರಾತಿನಿಧ್ಯ ನೀಡಲು 15 (3) ಕಲಂ ಅಡಿಯಲ್ಲಿ ಅವಕಾಶವಿದ್ದು, ಇದನ್ನು ಯಾವುದೇ ಆಧಾರದಿಂದ ಪ್ರಶ್ನಿಸಲು ಬರುವುದಿಲ್ಲ. ಕಲಂ 15 (3) ರಂತೆ ಯಾವುದೇ ರಾಜ್ಯವು ಮಹಿಳೆಯರಿಗೆ ವಿಶೇಷ ಪ್ರಾತಿನಿಧ್ಯವನ್ನು ಮಾಡಿಕೊಡುವಿಕೆಯು ಇತರರಿಗೆ ಮಾಡುವ ಅನ್ಯಾಯವೆಂದು ತಿಳಿಯಕೂಡದು. ಇದರಂತೆ ಭಾರತದ ಸಂವಿಧಾನವು ಮಹಿಳೆಯರ ರಕ್ಷಣೆ ಮತ್ತು ಕೆಲವು ಹೆಚ್ಚಿನ ಸೌಲಭ್ಯಗಳನ್ನು ನೀಡುವ ದೃಷ್ಟಿಯಿಂದ ಈ ಕಾನೂನು ನೀಡಲಾಗಿದೆ. ಸಂವಿಧಾನದ ಕಲಂ 16(4) ರಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನೇಮಕಾತಿಯಲ್ಲಿ ನೀಡುವ ಕುರಿತು ರೂಪಿಸಿದೆ. ಇದು ಮಹಿಳೆಯರಿಗೂ ಅನ್ವಯವಾಗುತ್ತದೆ. ರಾಜ್ಯಗಳು ಇದನ್ನು ಬಳಸಿಕೊಳ್ಳಬೇಕಾಗುತ್ತದೆ. ಹಲವು ರಾಜ್ಯಗಳಲ್ಲಿ ಈ ರೀತಿಯ ಮೀಸಲಾತಿಯನ್ನು ಆಧರಿಸಿ ನೇಮಕ ಮಾಡಲಾಗಿದೆ. 1974 ರಲ್ಲಿ ರಚಿಸಲಾದ ಸಮಿತಿಯು ತನ್ನ ವರದಿಯಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಅತಿಯಾದ ಅಂತರ ಇರುವುದನ್ನು ಮನಗಂಡಿದೆ. ಸಾಮಾಜಿಕ, ಆರ್ಥಿಕ ಹಾಗೂ ಅತಿಯಾದ ಹಿಂದುಳಿಕೆಯನ್ನು ಗುರುತಿಸಲಾಗಿದೆ. ಅವರು ತಮ್ಮ ವರದಿಯಲ್ಲಿ ಈ ಬಗೆಯ ಹಲವು ನಿರ್ದೇಶನಗಳನ್ನು ನೀಡಿದ್ದಾರೆ. ಈ ನೆಲೆಯಲ್ಲಿ ನ್ಯಾಯಾಂಗದ ಪ್ರತಿಕ್ರಿಯೆಯು ಉತ್ತಮವಾಗಿದೆ. ದೆಹಲಿ ಹೈಕೋರ್ಟ್ ರೇಲ್ವೆ ಗುಮಾಸ್ತರ ನೇಮಕಾತಿಯಲ್ಲಿ



ಮಹಿಳೆಯರಿಗೆ ನೀಡಿದ ಮೀಸಲಾತಿಯನ್ನು ಎತ್ತಿಹಿಡಿದಿದೆ. ಹಲವು ಮಹಾನಗರಗಳಲ್ಲಿ ನಡೆದ ನೇಮಕಗಳನ್ನು ಸಿಂಧು ಮಾಡಿದೆ. ಮಹಿಳೆಯರಿಗೆ ಈ ಇಲಾಖೆಯಲ್ಲಿ ಕಡಿಮೆ ಸ್ಥಾನಮಾನವನ್ನು ನೀಡಿರುವುದನ್ನು ಗಮನಿಸಿದ ನ್ಯಾಯಾಲಯವು ಮಹಿಳೆಯರಿಗೆ ಉತ್ತಮ ಅವಕಾಶ ಕಲ್ಪಿಸಲು ಸೂಕ್ತ ಆದೇಶ ನೀಡಿದೆ.

ಸಾಮಾಜಿಕ ಬದಲಾವಣೆಯನ್ನು ತರಲು ವಿಶೇಷವಾಗಿ ಮಹಿಳೆಯರ ವಿರುದ್ಧ ನಡೆಯುವ ಅತ್ಯಾಚಾರ, ದೌರ್ಜನ್ಯ, ಹಿಂಸೆ, ವಿವಾಹ, ಶಿಶುಪಾಲನೆ, ಕೌಟುಂಬಿಕ ದೌರ್ಜನ್ಯ ಮುಂತಾದವುಗಳನ್ನು ತಡೆಯಲು ಕಾನೂನಿನ ಅಡಿಯಲ್ಲಿ ಸೌಲಭ್ಯಗಳನ್ನು ನೀಡಲಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ವೀಕ್ಷಿಸಿದಾಗ ಹಲವು ತೀರ್ಪುಗಳು ಮಹಿಳಾ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸಿವೆ ಎಂದು ಹೇಳಬಹುದು. ಕೆಲಸದ ಸ್ಥಳದಲ್ಲಿಯ ತಾರತಮ್ಯಗಳನ್ನು ನಿವಾರಿಸುವುದು ಸೇರಿದಂತೆ ಮಹಿಳಾ ಅಪರಾಧಿಗಳಿಗೆ ಕಾನೂನು ಸಹಾಯ ನೀಡುವುದು, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಪರಿಹಾರ, ವರದಕ್ಷಿಣೆ ವಿರೋಧಿ ಕಾನೂನು ರಚಿಸಲಾಗಿದೆ ಹಾಗೂ ಕುರಾನನಲ್ಲಿ ಇರುವ ನಿಯಮದಂತೆ ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಬದುಕಿಗೆ ನಿರ್ವಹಣಾ ವೆಚ್ಚವನ್ನು ಭರಿಸುವ ಪೂರಕವಾದ ಕಾನೂನುಗಳು ರೂಪಿತವಾಗಿದೆ.

ಹೈಕೋರ್ಟಿನ ನಿವೃತ್ತ ಹಿರಿಯ ನ್ಯಾಯಮೂರ್ತಿಗಳಾದ, ಮಾನವ ಹಕ್ಕುಗಳ ಕಾರ್ಯಕರ್ತರಾದ ಶ್ರೀ ರಾಜೇಂದ್ರ ಸಚಾರ ಅವರು ಹೇಳುವಂತೆ, ಮೀಸಲಾತಿಯ ಮೂಲಕ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾದರೆ ಆಡಳಿತದಲ್ಲಿಯ ಲಿಂಗತಾರತಮ್ಯವನ್ನು ನಿವಾರಿಸಲು ಸಾಧ್ಯವಿದೆ. ಅವರ ಪ್ರಕಾರ ಲಿಂಗತಾರತಮ್ಯವು ಅನ್ಯಾಯವಾಗಿದೆ. ಅವರ ಅಭಿಪ್ರಾಯದಲ್ಲಿ ಕೋರ್ಟುಗಳು ಲಿಂಗತಾರತಮ್ಯದ ಕುರಿತು ತಿಳಿದುಕೊಂಡಿವೆ. ಅದರಂತೆ ಕೋರ್ಟುಗಳು ಈ ತಾರತಮ್ಯದ ನಿವಾರಣೆಗೆ ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ನಾವುಗಳು ನ್ಯಾಯಾಲಯಗಳ ಕಾರ್ಯಗಳನ್ನು ಶ್ಲಾಘಿಸಬೇಕು, ಅತ್ಯಾಚಾರಕ್ಕೆ ಒಳಗಾದ ಲಕ್ಷಾಂತರ ಜನರಿಗೆ ಪರಿಹಾರ ಕೊಡಿಸುವಲ್ಲಿ ಸಫಲವಾಗಿದೆ.

ನಿಮಗೆ ತಿಳಿದಿರುವಂತೆ ಮಾರ್ಚ 8 ಅಂತರ್‌ರಾಷ್ಟ್ರೀಯ ಮಹಿಳಾ ದಿನವೆಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಸಂಸತ್ತಿನ ಎರಡು ಸದನಗಳು ಏಕಮತದಿಂದ ಮಾರ್ಚ 8 ನ್ನು ಮಹಿಳಾ ಸಬಲೀಕರಣದ ದಿನವೆಂದು 1996 ರಲ್ಲಿಯೆ ಒಪ್ಪಿಕೊಂಡಿವೆ. ಆ ಮೂಲಕ ಸಂಸತ್ತಿನಲ್ಲಿ ಹಾಗೂ ರಾಜ್ಯ ಶಾಸಕಾಂಗಗಳಲ್ಲಿ ಮಹಿಳಾ ಪ್ರತಿನಿಧ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಅದರಂತೆ ಇಂದು ಶ್ರೇಷ್ಠ ಕಾನೂನು ರೂಪಿಸುವ ಕೇಂದ್ರಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯವು ಸಾಧ್ಯವಾಗಿದೆ.

ಭಾರತದ ಸ್ವಾತಂತ್ರ್ಯಾನಂತರದಲ್ಲಿ ಮಹಿಳಾ ಸ್ಥಾನಮಾನದ ಕುರಿತು ಸುಧಾರಣೆಗಳು ನಡೆದಿರುವುದರಲ್ಲಿ ಸಂದೇಹವಿಲ್ಲ, ಆದರೆ ಅವುಗಳು ನಿರೀಕ್ಷಿತ ಪ್ರಮಾಣದಲ್ಲಿ ಸಾಧ್ಯವಾಗಿಲ್ಲವೆಂದು ಹೇಳಬಹುದು ಲಿಂಗಸಮಾನತೆಯ ಬಗ್ಗೆ ತಿಳುವಳಿಕೆ ಮೂಡುತ್ತಿದೆ. ಮಹಿಳಾ ಸಂಘಗಳು ಈ ನೆಲೆಯಲ್ಲಿ ಪ್ರಯತ್ನಿಸುತ್ತಿವೆ. ವಾಸ್ತವವೆಂದರೆ ಇಷ್ಟೊಂದು

ಕಾನೂನುಗಳು ಚಾಲನೆಯಲ್ಲಿದ್ದರೂ ಸಹ ಮಹಿಳಾ ದೌರ್ಜನ್ಯದ ಘಟನೆಗಳು ದಾಖಲಾಗುತ್ತಿವೆ. ಸ್ತ್ರೀಯರ ತೇಜೋವಧೆ ಮತ್ತು ಅವರ ಮೇಲೆ ಆಕ್ರಮಣಗಳು ಹೆಚ್ಚಾಗುತ್ತಲಿವೆ. ಇಂತಹವುಗಳನ್ನು ಮುಚ್ಚಿಡದೆ, ಅವುಗಳನ್ನು ಬೆಳಕಿಗೆ ತಂದು, ಸೂಕ್ತ ಕೇಸುಗಳನ್ನು ದಾಖಲಿಸಬೇಕಾಗಿದೆ.

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಮಹಿಳಾ ಪ್ರಗತಿಗೆ ಸಹಾಯಕವಾಗಿವೆ. ಮಹಿಳಾ ಪ್ರಗತಿಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಮಹತ್ವ ನೀಡುವುದನ್ನು ಕಾಣಬಹುದು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾಜಿಕ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಲಾಗಿದೆ.

1976 ರಲ್ಲಿ ರೂಪಿಸಿದ ರಾಷ್ಟ್ರೀಯ ಯೋಜನಾ ಕಾರ್ಯಸೂಚಿಯು ಮಹಿಳಾ ಪ್ರಗತಿಗೆ ರೂಪಿಸಿದ ಪ್ರಥಮ ಹೆಜ್ಜೆಯಾಗಿದ್ದು, ಇದು ಮಧ್ಯಮ ಯೋಜನೆ ಮತ್ತು ಸಂವಹನದ ಸಾಧ್ಯತೆಗಳನ್ನು ಹೆಚ್ಚಿಸಿದೆ. ಪ್ರಥಮ ಬಾರಿಗೆ ಆರನೆಯ ಪಂಚವಾರ್ಷಿಕ ಯೋಜನೆ (1980–1985) ರಲ್ಲಿ ತಾರತಮ್ಯಗಳ ನಿವಾರಣೆಯನ್ನು ಅತಿ ಹೆಚ್ಚಿನ ಮಟ್ಟದಲ್ಲಿ ನಿವಾರಿಸಲಾಯಿತು. ಇದರ ಮೂಲಕ ಶಾಲಾ ಪಠ್ಯಕ್ರಮವನ್ನು ಮರು ಪರೀಕ್ಷಿಸಲಾಯಿತು. ಪಠ್ಯ ಪುಸ್ತಕಗಳು, ಶಿಕ್ಷಕರ ತರಬೇತಿಯ ಮೂಲಕ ಬಾಲಕಿಯರ ಶಿಕ್ಷಣಕ್ಕೆ ಒತ್ತು ನೀಡಲಾಯಿತು. ಪುರುಷ ಹಾಗೂ ಮಹಿಳೆಯರಿಗೆ ಗೃಹವಿಜ್ಞಾನವನ್ನು ಕಲಿಸುವ ಮೂಲಕ ಕೌಟಂಬಿಕ ಸೌಹಾರ್ದವನ್ನು ರೂಪಿಸಲಾಯಿತು. ಏಳನೇ ಪಂಚವಾರ್ಷಿಕ ಯೋಜನೆ (1985–1990) ಸ್ಪಷ್ಟವಾದ ಮಹಿಳಾ ಅಭಿವೃದ್ಧಿಯ ಚಿಂತನೆಯನ್ನು ರೂಪಿಸಿದೆ. ಮಹಿಳಾ ಅಭಿವೃದ್ಧಿಯ ದೂರಗಾಮಿ ಯೋಜನೆಗಳಿಂದ ಅವಳ ಸಬಲೀಕರಣ ಸಾಧ್ಯವಿದೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯು ಸಾಧ್ಯವಾಗುತ್ತದೆ.

1975 ನ್ನು ಮಹತ್ವದ ವರ್ಷವಾಗಿ ಪರಿಗಣಿಸಲಾಗಿದೆ. ಆ ಮೂಲಕ ಎರಡನೆ ಸಂಯುಕ್ತ ರಾಷ್ಟ್ರ ಅಭಿವೃದ್ಧಿ ಯೋಜನೆಗೆ ಅವಕಾಶವಾಗಿದೆ. ಎಲ್ಲ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಮಹಿಳಾ ಪರ ಅಭಿವೃದ್ಧಿಗಳು ಕಾರ್ಯ ಸಾಧ್ಯವಾಗಿವೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಸಂಸ್ಥರ ಅಭಿವೃದ್ಧಿ ಸಾಧ್ಯವಾಗಿದೆ. ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಮಹಿಳಾ ಸಂವೇದನೆಯನ್ನು ಪ್ರಚಾರ ಮಾಡಲು ಪ್ರಯತ್ನ ಮಾಡಲಾಗಿದೆ. ಮಹಿಳೆಗೆ ಇರುವ ಪೂರ್ವಗ್ರಹಗಳನ್ನು ತೆಗೆದು ಹಾಕಿ ಅವಳ ಸಾಮರ್ಥ್ಯಗಳನ್ನು ಮನಗಾಣುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದರಿಂದ ಮಹಿಳೆಯರು ಉದ್ಯೋಗಗಳಲ್ಲಿ ತೊಡಗುತ್ತಿದ್ದಾರೆ, ಎರಡನೆಯ ಸಂಯುಕ್ತ ರಾಷ್ಟ್ರಗಳಲ್ಲಿ ಅಭಿವೃದ್ಧಿ ದಶಕವು 1980 ರಲ್ಲಿ ಸಾಧಿಸಲಾಗಿದೆ. ಆಡಳಿತ, ಆರೋಗ್ಯ, ಹೆರಿಗೆ ಸೌಲಭ್ಯಗಳು, ತರಬೇತಿ ಮತ್ತು ಉದ್ಯೋಗ ಮತ್ತು ಶಿಕ್ಷಣಗಳಲ್ಲಿ ಗಣನೀಯ ಪ್ರಗತಿ ಮೂಡಿಸಿವೆ. ಸರ್ಕಾರಗಳ ನೀತಿಗಳು ಕಲ್ಯಾಣದಿಂದ ಅಭಿವೃದ್ಧಿಗಳಾಗಿ ಬದಲಾವಣೆಗೊಂಡು ಇರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಅದರಂತೆ ರಾಷ್ಟ್ರೀಯ ದೂರಗಾಮಿ ಯೋಜನೆಯನ್ನು 1988–2000 ರಲ್ಲಿ ರೂಪಿಸುವುದು ಮಹಿಳಾ ಬದುಕಿನ ಮೇಲಾಗುವ ಈ ಪರಿಣಾಮಗಳನ್ನು ಅಧ್ಯಯನ ಮಾಡಲು ಸಾಧ್ಯವಾಗಿದೆ. ಸಂಗತಿಗಳು ಬದಲಾಗುತ್ತಿವೆ ಮಹಿಳೆಯರು ಮುಂದೆ ಸಾಗಿದ್ದಾರೆ. ಪೆದ್ದ ಮಲ್ಲಾಪೂರರಂ ಹಳ್ಳಿಯಲ್ಲಿ ಮಹಿಳೆಯರು



ಅನಕ್ಷರಸ್ತರಾದರೂ ಸಹ ಆತಂಕವಾದ ಮತ್ತು ಕರ್ನಾಟಕದಲ್ಲಿ ಸರಾಯಿ ವಿರುದ್ಧ ನಡೆಸಿದ ಪ್ರತಿಭಟನೆಯನ್ನು ಯಾರೂ ಮರೆಯಲಾಗದು. ಅದರಂತೆ ಬೀದರ್ ಹಾಗೂ ಉತ್ತನ್ನೂರುಗಳಲ್ಲಿ ಕರ್ನಾಟಕದಲ್ಲಿ ಮಹಿಳೆಯರು ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಹೋರಾಟ ನಡೆಸಿರುವುದು ನೆನಪಿಸಿಕೊಳ್ಳಬೇಕಾದ ಸಂಗತಿಯಾಗಿದೆ.

ಇಡಿ ಜಗತ್ತಿನಲ್ಲಿ ಅದರಲ್ಲೂ ಭಾರತದಲ್ಲಿ ಮಹಿಳಾ ಚಳುವಳಿಗಳು ಆರಂಭವಾಗಿವೆ ಎಂದು ಹೇಳಬಯಸುತ್ತೇನೆ. ಇವುಗಳನ್ನು ತಡೆಯುವುದು ಅಸಾಧ್ಯ. ಆದಾಗ್ಯೂ ಶ್ರೀಮತಿ ಇಂದಿರಾಗಾಂಧಿ ಹೇಳಿದಂತೆ, ಮಹಿಳಾ ಹೋರಾಟವು ಪುರುಷರ ವಿರುದ್ಧದ ಹೋರಾಟವಾಗಿರಬಾರದು. ಇದೊಂದು ದೂರ ದೃಷ್ಟಿಯ, ಶ್ರೇಷ್ಠ ಸ್ವಾತಂತ್ರವಿರುವ, ವ್ಯಾಪಕವಾದ ಸುಧಾರಣೆಯ ದೃಷ್ಟಿಯ ವೈಯಕ್ತಿಕ ಮತ್ತು ಸಮಷ್ಠಿಯ ಸುಧಾರಣೆಯನ್ನು ತರುವ ಮತ್ತು ಆ ಮೂಲಕ ಸುಸ್ಥಿರ ಸಮಾಜ ಮತ್ತು ಉತ್ತಮ ಜಗತ್ತನ್ನು ನಿರ್ಮಾಣ ಮಾಡಬೇಕು ಎಂದು ಹೇಳಿದರು.

1995 ಸಪ್ಟಂಬರ್ 5 ರಂದು ಆಗಿನ ಮಾನವ ಅಭಿವೃದ್ಧಿ ಸಚಿವರಾದ ಶ್ರೀ ಮಾಧವರಾವ್ ಸಿಂಧಿಯಾ ಅವರು 4 ನೇ ಜಾಗತಿಕ ಮಹಿಳಾ ಸಮ್ಮೇಳನದಲ್ಲಿ ಹೀಗೆ ಹೇಳಿದ್ದಾರೆ. "ಮಹಿಳೆಯರು ಹೆಚ್ಚು ಭಾವನಾ ಜೀವಿಗಳು ಹಾಗೂ ಪುರುಷರು ಕಟು ಹೃದಯಿಗಳೆಂದು ಆಗಾಗ ಹೇಳಲಾಗುತ್ತದೆ. ಇದು ಒಂದು ವೇಳೆ ಸರಿಯಾಗಿದ್ದರೆ ನಿರ್ಣಯ ಕೈಗೊಳ್ಳುವ ಸ್ಥಾನಗಳಲ್ಲಿ ಹೆಚ್ಚು ಮಹಿಳೆಯರು ಬರಲಿ. ಈ ಜಗತ್ತು ಹೆಚ್ಚು ಭಾವನಾ ಜೀವಿಗಳ ತಾಣವಾಗಲಿ ಕಠಿಣ ಮನಸ್ಸುಗಳು ಕಡಿಮೆಯಾಗಲಿ"

ವಿಕ್ಟರ್ ಹ್ಯೂಗೊ ಅವರು ಹೇಳಿದಂತೆ "ಪುರುಷರಿಗೆ ದೃಷ್ಟಿಯಿದೆ ಆದರೆ ಮಹಿಳೆಯರಿಗೆ ಒಳ ದೃಷ್ಟಿಯಿದೆ"

1996 ರ ಡಿಸೆಂಬರನಲ್ಲಿ ಆಗಿನ ಉಪರಾಷ್ಟ್ರಪತಿಗಳಾದ ಶ್ರೀ ಕೆ. ಆರ್ ನಾರಾಯಣನ್ ಅವರು 20 ನೇ ಅಂತರ್‌ರಾಷ್ಟ್ರೀಯ ಮಹಿಳಾ ಕಾಂಗ್ರೇಸ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಹೇಳಿದಂತೆ "ಹೆಚ್ಚಿನ ಮಹಿಳೆಯರು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಭಾಗವಹಿಸಲು ಮುಂದೆ ಬರಬೇಕಾಗಿದೆ ಅವರ ಸಾಮರ್ಥ್ಯಗಳನ್ನು ಅರಿಯಬೇಕಿದೆ. ಅವರಲ್ಲಿರುವ ಮೌಢ್ಯಗಳನ್ನು ತೆಗೆದು ಹಾಕಿ ನಮ್ಮ ಸಾಮಾಜಿಕ ಕ್ರಿಯೆಯಲ್ಲಿ ತೊಡಗುವ ಮೂಲಕ ಸಮಾಜದ ಶಕ್ತಿಯನ್ನು ಹೆಚ್ಚಿಸಬೇಕಿದೆ"

ಹಿಂದಿನ ಪ್ರಧಾನಿ ದಿವಂಗತ ಶ್ರೀ ರಾಜೀವ ಗಾಂಧೀಯವರು ಒಮ್ಮೆ ಹೀಗೆ ಹೇಳಿದರು "ಮಹಿಳೆಯರು ನಮ್ಮ ಜನಸಂಖ್ಯೆಯ ಅರ್ಧದಷ್ಟಿದ್ದಾರೆ. ಅವರು ಸಹ ರಾಷ್ಟ್ರೀಯ ಅಭಿವೃದ್ಧಿಗೆ ಒಂದಾಗಬೇಕು ನಾವು ಪುರುಷರಲ್ಲಿಯ ಸಂದೇಹ ಮನೋಭಾವನೆಗಳನ್ನು ದೂರ ಮಾಡಿಕೊಳ್ಳಬೇಕು ಇನ್ನೂ ಕೆಲವು ಮಹಿಳೆಯರ ಮನಸ್ಸಿನಲ್ಲಿರುವ ಇಂತಹ ಮೌಢ್ಯಗಳು ಸೇರಿವೆ ಅವುಗಳನ್ನು ಸಹ ದೂರಮಾಡಬೇಕಾಗಿದೆ."

ಅವರು 1985 ಏಪ್ರೀಲ್ 10–11 ರಂದು ದೆಹಲಿಯಲ್ಲಿ ನಡೆದ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು "ಮಹಿಳೆಯರು

ದೇಶದ ಸಾಮಾಜಿಕ ಸಾಕ್ಷಿ ಪ್ರಜೆಗಳಾಗಿದ್ದಾರೆ. ಅವರು ನಮ್ಮ ಸಮಾಜವನ್ನು ಒಗ್ಗಟ್ಟಾಗಿ ಇಡಬಲ್ಲರು. ಸುಧಾರಿತ ದೇಶಗಳಲ್ಲಿ ಮಹಿಳೆಯು ಎಲ್ಲ ರಂಗಗಳಲ್ಲಿ ಕ್ರಿಯಾ ಶೀಲವಾಗಬೇಕು ಇದರಲ್ಲಿ ರಾಜಕೀಯ ಪ್ರಗತಿಯು ಪ್ರಮುಖವಾದದ್ದು ದರಂತವೆಂದರೆ ನಾವು ಅವಳಿಗೆ ಅತಿ ಕಡಿಮೆಯಾದ ಪ್ರಾತಿನಿಧ್ಯವನ್ನು ನೀಡುವಂತಾಗಿದೆ. ಸಾವಿರಾರು ವರ್ಷಗಳಿಂದ ಪುರುಷ ಮನೋಧರ್ಮಗಳು ಅವಳಿಗೆ ನೀಡಿರುವ ಅಸಮಾನತೆಯನ್ನು ದಾಟಲು ಅವಳಿಗೆ ಸಾಧ್ಯವಾಗಿಲ್ಲ ಅವರು ಮುಂದುವರೆದು ಹೀಗೆ ಹೇಳಿದ್ದಾರೆ ಇತಿಹಾಸದುದ್ದಕ್ಕೂ ಮಾನವ ಕಲ್ಯಾಣಕ್ಕಾಗಿ ಅವಳು ನೀಡಿದ ಕೊಡುಗೆ ಅಪಾರ. ಮನೆಯಿರಲಿ, ಕಾರ್ಯಸ್ಥಾನವಿರಲಿ ಅಥವಾ ಸಮಾಜವಿರಲಿ ಅವಳಿಗೆ ಪುರುಷರಷ್ಟು ಪ್ರಾಧಾನ್ಯತೆ ದೊರಕಿಲ್ಲ ಇದು ಇಂದಿನ ವಾಸ್ತವವಾಗಿದೆ."

ನಾನು ನನ್ನ ಭಾಷಣದ ಮೂಲಕ ಮಹಿಳೆಯರ ಪರವಾಗಿಯೆ ಹೇಳಿಬಿಡಲು ಇಷ್ಟಪಡುವುದಿಲ್ಲ. ಇದಕ್ಕೆ ಶ್ರೇಷ್ಠ ವ್ಯಕ್ತಿಗಳು ನೀಡಿದ ಧನಾತ್ಮಕ ಆಯಾಮವನ್ನು ನೀಡಲು ಇಷ್ಟಪಡುತ್ತೇನೆ. ನಮ್ಮ ಹಿರಿಯ ಹಿಂದಿನ ಪ್ರಧಾನಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಹೀಗೆ ಹೇಳಿದರು "ಮಹಿಳೆ ಹಾಗೂ ಪುರುಷರಿಬ್ಬರೂ ಸಮಾನವಾಗಿ ಸಾಮರ್ಥ್ಯ ಹೊಂದಿದ್ದರೂ ಅವರ ಗಳಿಕೆಯಲ್ಲಿ ಪುರುಷರ ಆದಾಯವು ಸಿಗರೇಟಿಗಾಗಿ, ಸಾರಾಯಿಗಾಗಿ, ಹೋದರೆ ಮಹಿಳೆಯರ ಆದಾಯವು ಕುಟುಂಬದ ಸಲುವಾಗಿ ವಿನಿಯೋಗವಾಗುತ್ತದೆ."

ಇನ್ನೊಬ್ಬ ಶ್ರೇಷ್ಠ ಮಾನವಶಾಸ್ತ್ರಜ್ಞರಾದ ಅಸ್ಲೆ ಮಾಂಟಾಗೊ ಅವರು ಹಲವು ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಕೆಲವು ವಿವಾದಾತ್ಮಕ ಕೃತಿಗಳು ಸಹ ಇವೆ "The Natural superi orty of women" ನಲ್ಲಿ ಹೇಳುವಂತೆ ಅವರ 82 ನೇ ವಯಸ್ಸಿನಲ್ಲಿ ಮಹಿಳೆಯು ಶ್ರೇಷ್ಠ ಲಿಂಗವೆಂದು ಒಪ್ಪಿಕೊಂಡರು. ಅವರ ಸಂಶೋಧನೆ, ಬೋಧನೆ, ಬರವಣಿಗೆ, ಮತ್ತು ಸಾಮಾಜಿಕ ಜೀವಶಾಸ್ತ್ರ ಮತ್ತು ಭೌತಿಕಮಾನವಶಾಸ್ತ್ರದ ಆಧಾರದ ಮೇಲೆ ಮಹಿಳೆಯು ಅತ್ಯಂತ ಸಂವೇದನಾ ಶೀಲ, ಪ್ರಾಮಾಣಿಕ, ಪ್ರತಿಭಾನಿತ್ವ, ಬುದ್ಧಿವಂತ ಮತ್ತು ಪುರುಷರಿಗಿಂತ ಕರುಣಾಮಯಿಯಾಗಿರುತ್ತಾಳೆ. ಅಮೇರಿಕಾದಲ್ಲಿ ಸುದ್ದಿ ಪತ್ರಿಕೆಯೊಂದು ಸಂದರ್ಶನದಲ್ಲಿ ಬರೆದಿರುವಂತೆ ಅವರು ಹೀಗೆ ಹೇಳಿದ್ದಾರೆ "ಮಹಿಳೆಯು ಒಂದು ವೇಳೆ ಪುರುಷರೊಂದಿಗೆ ಸಮಾನತೆಯನ್ನು ಬಯಸಿದರೆ ಅವಳು ಒಂದು ಹೆಜ್ಜೆ ಹಿಂದೆ ಹೋದಂತೆ, ಅವರು ಏನು ಮಾಡಬೇಕೆಂದರೆ ಅವರು ಪುರುಷರನ್ನು ಸರಿಗಟ್ಟಲು ಪ್ರಯತ್ನಿಸಬೇಕು ಆದರೆ ತಮ್ಮನ್ನು ತಾವೇ ಸರಿಗಟ್ಟಲು ಪ್ರಯತ್ನಿಸಬಾರದು. ಎರಡು-ಮೂರುದಶಕಗಳ ಹಿಂದೆ ಹೇಳಿದ ಈ ಮಾತು ಇಂದಿಗೂ ಪ್ರಸ್ತುತವಾಗಿದೆ."

3 ನೆಯ ಘಟಿಕೋತ್ಸವ ಭಾಷಣ ದಿನಾಂಕ:22.01.2009

*******



# ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆ

❑ ಡಾ.(ಶ್ರೀಮತಿ) ಡಿ.ಪುರಂದೇಶ್ವರಿ
ರಾಜ್ಯ ಸಚಿವರು, ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ
(ಉನ್ನತ ಶಿಕ್ಷಣ), ಭಾರತ ಸರ್ಕಾರ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಹೆಚ್.ಆರ್.ಭಾರಧ್ವಾಜ ಅವರೇ, ಡಾ.ವಿ.ಎಸ್. ಆಚಾರ್ಯ, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರೇ, ಪ್ರೊ.ಗೀತಾ ಬಾಲಿ, ಮಾನ್ಯ ಕುಲಪತಿಗಳೇ, ಆಹ್ವಾನಿತ ಗಣ್ಯ ಮಾನ್ಯರೆ, ಅತಿಥಿಗಳೇ, ಪದವೀಧರ ವಿದ್ಯಾರ್ಥಿನಿಯರೇ, ಪದವಿ ವಿಜೇತರೆ, ಪದಕ ಹಾಗೂ ಬಹುಮಾನ ವಿಜೇತರೇ, ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರೇ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಎರಡನೆಯ ಘಟಿಕೋತ್ಸವದ ಭಾಷಣವನ್ನು ನೀಡಲು ನನಗೆ ಹರ್ಷವೆನಿಸುತ್ತದೆ. 2003ರಲ್ಲಿ ಆರಂಭವಾದ ಈ ವಿಶ್ವವಿದ್ಯಾನಿಲಯವು ಮಹಿಳೆಯರಿಗೆ ಉನ್ನತ ಶಿಕ್ಷಣವನ್ನು ನೀಡುವಲ್ಲಿ ಶ್ರಮಿಸುತ್ತಿರುವ ಹಲವು ವಿಶ್ವವಿದ್ಯಾಲಯಗಳ ನಡುವೆ ವಿಶೇಷ ಸ್ಥಾನವನ್ನು ಹೊಂದಿದೆ. ಇದು ಗ್ರಾಮೀಣ ಹಾಗೂ ಬಡ ಮಹಿಳೆಯರಿಗೆ ಮತ್ತು ಗ್ರಾಮೀಣ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡಲು ಶ್ರಮಿಸುತ್ತಿದೆ.

ಈ ಮಹಿಳಾ ವಿಶ್ವವಿದ್ಯಾನಿಲಯವು ಉತ್ತರ ಕರ್ನಾಟಕದ 13 ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದ್ದು 75 ಮಹಿಳಾ ಮಹಾವಿದ್ಯಾಲಯಗಳು ಸಂಲಗ್ನಗೊಂಡಿವೆ. ಕರ್ನಾಟಕದ ಹಿಂದುಳಿದ ಭಾಗದಲ್ಲಿ ಬಿಜಾಪುರ ಜಿಲ್ಲೆಯು ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ 23 ನೆಯ ಸ್ಥಾನವನ್ನು ಹೊಂದಿದೆ. ಸಾಮಾಜಿಕ, ಸಾಂಸ್ಕೃತಿಕ ಸಮನ್ವಯವನ್ನು ಮಹಿಳಾ ಸಬಲೀಕರಣವನ್ನು, ಏಕರೂಪದ ಶೈಕ್ಷಣಿಕ ಗುಣಮಟ್ಟವನ್ನು ತರಲು ನಿರಂತರ ಪ್ರಯತ್ನಿಸುತ್ತಿದೆ.

ನಾನು ಘಟಿಕೋತ್ಸವವನ್ನು ಆರಂಭಿಸುವ ಮುನ್ನ, ವಿವಿಧ ಪದವೀಧರರನ್ನು, ಬಂಗಾರದ ಪದಕ ವಿಜೇತರನ್ನು, ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರನ್ನು ಅಭಿನಂದಿಸುತೇನೆ.

ಒಂದು ಸಮಾಜದ ಆಂತರಿಕ ಶಕ್ತಿಯನ್ನು ಮಹಿಳೆಗೆ ಆ ಸಮಾಜವು ನೀಡುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಗೌರವದ ಮೇಲೆ ನಿರ್ಧರಿಸಲಾಗುತ್ತದೆ. ಶ್ರೇಷ್ಠ

ಸಾಮಾಜಿಕ ಮತ್ತು ಧಾರ್ಮಿಕ ಸಂತರಾದ ಸ್ವಾಮಿ ವಿವೇಕಾನಂದ ಅವರು ಹೀಗೆ ಹೇಳಿದ್ದಾರೆ. "ತಾಯಿಯ ಸ್ಥಾನ ಹೊಂದಿರುವ ಮಹಿಳೆಯನ್ನು ಗೌರವಿಸದೇ ಯಾವ ಸಮಾಜವೂ ಸುಧಾರಣೆಯಾಗಲು ಸಾಧ್ಯವಿಲ್ಲ".

ಲಿಂಗ ಸಮಾನತೆ ಎಂದರೆ ಒಂದು ಸಮಾಜದ ಸ್ತ್ರೀ ಮತ್ತು ಪುರುಷರನ್ನು ಸಮಾನವಾಗಿ ಗೌರವಿಸುವಿಕೆಯಾಗಿದೆ. ಸೈದ್ಧಾಂತಿಕವಾಗಿ ಭಾರತೀಯ ಧರ್ಮ ಮತ್ತು ತತ್ವಶಾಸ್ತ್ರಗಳಲ್ಲಿ ಮಹಿಳೆಗೆ ದೇವತೆಯ ಸ್ಥಾನ ನೀಡಲಾಗಿದೆ. ಮಹಿಳೆಗೆ ಪೂಜ್ಯನೀಯ ಸ್ಥಾನವನ್ನು ಇತಿಹಾಸದಲ್ಲಿ ನೀಡಲಾಗಿದೆ. ಭಾರತಕ್ಕೆ ಭಾರತಮಾತೆ ಎನ್ನುವಲ್ಲಿ ಸ್ತ್ರೀಗೆ ವಿಶೇಷ ಗೌರವ ನೀಡಲಾಗಿದೆ.

ಆದರೆ ವಾಸ್ತವದಲ್ಲಿ ಸಮಾನ ಸ್ಥಾನ ನೀಡಲಾಗಿಲ್ಲ. ಸ್ತ್ರೀ ಮತ್ತು ಪುರುಷರ ನಡುವೆ ಸಮಾನತೆ ತರುವ ಪ್ರಯತ್ನಗಳು ವಿಫಲವಾಗಿವೆ. ಯಾವುದೇ ಸಮಾಜ ಮಹಿಳೆಗೆ ಪುರುಷನ ಜೊತೆ ಸಮಾನ ಸ್ಥಾನ ನೀಡದೆ ಇರುವುದನ್ನು ಗಮನಿಸಬಹುದು ಇದರಿಂದ ಮಹಿಳೆಯು ನಿರಂತರವಾಗಿ ಅವಕಾಶ ವಂಚಿತಳಾಗಿದ್ದಾಳೆ. ನಮ್ಮ ಸಮಾಜದ ಪ್ರತಿಶತ 50 ರಷ್ಟು ಇರುವ ಮಹಿಳೆಯರು ಅತೀ ಹೆಚ್ಚಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಆದರೆ ಸ್ವಂತ ಆಸ್ತಿ ಹೊಂದಿದ ಮಹಿಳೆಯರ ಪ್ರಮಾಣ 1% ಮಾತ್ರ.

ಲಿಂಗ ಸಮಾನತೆ ತತ್ವವನ್ನು ಭಾರತದಲ್ಲಿ ಜಾರಿ ಮಾಡುವ ಕ್ರಿಯೆ ಒಂದು ಶತಮಾನದಿಂದ ಈಚೆಗೆ ಆರಂಭಗೊಂಡಿದೆ. ಹದಿನೆಂಟು, ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಮಹಿಳಾ ಚಳವಳಿಯು ಆರಂಭಗೊಂಡಿತು. ಮೊದಲು ಮಹಿಳಾ ಶಿಕ್ಷಣ, ಆಸ್ತಿಹಕ್ಕು ಹಾಗೂ ವಿಧವಾ ವಿವಾಹ, ಸ್ವಾತಂತ್ರ್ಯ ಮುಂತಾದ ವಿಷಯಗಳು ಮಹತ್ವ ಪಡೆದವು. ಈ ಕಾಲದಲ್ಲಿ ರಾಜಾರಾಮ ಮೋಹನರಾಯ್, ಪಂಡಿತ ಈಶ್ವರಚಂದ್ರ ವಿದ್ಯಾಸಾಗರ್ ಮತ್ತು ಇತರರು ಮಹಿಳಾ ಸುಧಾರಣೆಯ ಬಗ್ಗೆ ಹೋರಾಟ ಮಾಡಿದರು. ಮಹಾತ್ಮಾ ಜ್ಯೋತಿಬಾ ಫುಲೆ, ಪೆರಿಯಾರ ಹಾಗೂ ಬಾಬಾಸಾಹೇಬ್ ಅಂಬೇಡ್ಕರ ಅವರು ಮಹಿಳಾ ಶಿಕ್ಷಣದ ಕುರಿತು ಮಹತ್ವದ ಕಾರ್ಯ ಮಾಡಿದರು. ಭಾರತದ ಪ್ರಥಮ ಪ್ರಧಾನಿ ಜವಾಹಾರಲಾಲ್ ನೆಹರು ಅವರು ಹೀಗೆ ಹೇಳುತ್ತಾರೆ. "ಮಾನವೀಯತೆಯನ್ನು ತೆಗೆದು ಹಾಕಿದ ಪ್ರಜಾತಾಂತ್ರಿಕ ವ್ಯವಸ್ಥೆಯು ಸಫಲವಾಗಲಾರದು. ಪ್ರತಿಶತ ಐವತ್ತರಷ್ಟು ಜನವರ್ಗ ಅವಕಾಶ ವಂಚಿತರಾದಾಗ ಅವರು ಬಂಡಾಯ ಏಳುವುದು ಸಹಜವಾಗಿದೆ".

1950 ರಲ್ಲಿ ಸಂವಿಧಾನವನ್ನು ರೂಪಿಸಿದಾಗ ಮಹಿಳೆಗೆ ಸಾಮಾಜಿಕ ರಾಜಕೀಯ ಅಧಿಕಾರ ನೀಡುವುದು ಮುಖ್ಯವಾಗಿತ್ತು. ನಮ್ಮ ಸಂವಿಧಾನದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಹಲವು ಕಲಂಗಳನ್ನು ನೀಡಲಾಗಿದೆ. ಅದರಲ್ಲಿ ಕಲಂ 14, 15, 16(2), 21, 23, 39(ಎ,ಡಿ,ಇ)ಗಳು ಮುಖ್ಯವಾಗಿವೆ. ಇವು ಪುರುಷ ಮತ್ತು ಸ್ತ್ರೀಯರಿಗೆ ಸಮಾನ ಅವಕಾಶಗಳನ್ನು ನೀಡಿವೆ.

ಈ ಸಂದರ್ಭದಲ್ಲಿ ಜವಹರಲಾಲ್ ನೆಹರು ಅವರ ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರದಿಂದ ಹಿಂದೂ ಕೊಡ್‌ಬಿಲ್ ಜಾರಿ ಮಾಡಿತು. ಅದರಲ್ಲಿ "ನಾವು ಭಾರತದಲ್ಲಿ ರಾಜಕೀಯ ಕ್ರಾಂತಿಯನ್ನು ಕಂಡಿದ್ದೇವೆ. ಆರ್ಥಿಕ ಬದಲಾವಣೆ,



ಸಾಮಾಜಿಕ ಬದಲಾವಣೆಯ ಮೂಲಕ ಕ್ರಾಂತಿಯನ್ನು ತರಲು ಪ್ರೇರೇಪಿಸಲಾಗುತ್ತದೆ. ರಾಜಕೀಯ ಸಂದರ್ಭಗಳು ಬದಲಾಗುತ್ತಿರುವ ಈ ಸನ್ನಿವೇಶದಲ್ಲಿ ನಾವು ಮಹಿಳಾ ಪ್ರಗತಿಯನ್ನು ಗಮನಿಸಬೇಕಾಗಿದೆ. ಅದಕ್ಕಾಗಿ ನಾವು ಸಾಮಾಜಿಕ ಕಾನೂನುಗಳನ್ನು ಜಾರಿ ಮಾಡುತ್ತಿದ್ದೇವೆ.

ಎರಡನೆಯ ಜಾಗತಿಕ ಮಹಾಯುದ್ಧದ ನಂತರ ಮಹಿಳಾ ಸಬಲೀಕರಣವು ರಾಜಕೀಯ ರಂಗದಲ್ಲಿ ಒಂದು ಸಹಜ ಪ್ರಕ್ರಿಯೆಯಾಗಿದೆ. ಅಧ್ಯಯನದ ಪ್ರಕಾರ ಕೇವಲ 14% ಮಹಿಳೆಯರು ಸಂಸತ್ತಿನ ಸದಸ್ಯರಾಗಿ ಏಷಿಯಾ ಖಂಡದಲ್ಲಿ ಇದ್ದಾರೆ. ಅವರ ಸಂಖ್ಯಾ ಗಾತ್ರವೇನು ದೊಡ್ಡದಾಗಿಲ್ಲ. ಆದರೆ ಅವರ ಸಹಭಾಗಿತ್ವದಿಂದ ರಾಜಕೀಯ ಗುಣಮಟ್ಟ ಹೆಚ್ಚಿದೆ. ಆಡಳಿತದಲ್ಲಿ ಹೆಚ್ಚು ಸುಧಾರಣೆಯನ್ನು ತರಲು ಪ್ರಯತ್ನಿಸಿದೆ. ಅವರು ಹೆಚ್ಚು ಕ್ರಿಯಾಶೀಲರಾಗಿರುವುದು ಕಂಡುಬರುತ್ತದೆ.

ಆಸ್ಟ್ರೇಲಿಯಾದಲ್ಲಿ ಕೆಲ ವರ್ಷಗಳ ಹಿಂದೆ ನಡೆಸಿದ ಒಂದು ಅಧ್ಯಯನದಲ್ಲಿ ತಿಳಿದು ಬಂದಿರುವುದೇನೆಂದರೆ 54% ಜನರು ಮಹಿಳೆಯ ರಾಜಕೀಯದಲ್ಲಿ ಭಾಗವಹಿಸುವಿಕೆಯ ಮೂಲಕ ಸಾಮಾಜಿಕ ಕಲ್ಯಾಣ ಸಾಧ್ಯವೆಂದು ತಿಳಿಸಿದ್ದಾರೆ. ಅದರಲ್ಲಿ 13% ಪುರುಷರಿದ್ದಾರೆ. ಅದರಂತೆ 64% ಜನರು ಹೇಳುವಂತೆ ಪುರುಷರು ಸ್ವಆಸಕ್ತಿಗಾಗಿ ಪ್ರೇರಣೆ ಹೊಂದಿರುತ್ತಾರೆ. ಅಧಿಕಾರವನ್ನು ಸ್ವಯಂ ಪ್ರಗತಿಗೆ ಬಳಸಿಕೊಳ್ಳುತ್ತಾರೆ. ಇದರಲ್ಲಿ 11% ಮಹಿಳೆಯರಿದ್ದಾರೆ. ಇದಕ್ಕೆ ಹೋಲಿಸಿದರೆ ಭಾರತದ ಸ್ಥಿತಿಯು ಅಷ್ಟೇನು ಚಿಂತಾಜನಕವಾಗಿಲ್ಲ.

ಇದಕ್ಕೆ ವಿರುದ್ಧವಾಗಿ ಇತರ ದಕ್ಷಿಣ ಏಷಿಯಾ ರಾಷ್ಟ್ರಗಳಲ್ಲಿ ಮಹಿಳೆಯ ರಾಜಕೀಯ ಪ್ರತಿನಿಧಿತ್ವವನ್ನು ಹೋಲಿಸಿದರೆ, ಅವಳಿಗೆ ಸಂಸತ್ತಿನಲ್ಲಿ ಮೀಸಲಾತಿ ಪದ್ಧತಿಯನ್ನು ಅಳವಡಿಸಿದೆ. ಇದರಲ್ಲಿ ತಳಮೂಲದ ಮತ್ತು ಬಡಮಹಿಳೆಯರ ಭಾಗವಹಿಸುವಿಕೆಯು ನಗಣ್ಯವಾಗಿದೆ. 2006 ಪ್ರಕಾರ ಮಹಿಳಾ ಪ್ರಾತಿನಿಧ್ಯವು 11.7% ಇದೆ. ಇದು ಜಾಗತಿಕ 17% ಗಿಂತ ತೀರಾ ಕಡಿಮೆ ಇರುವುದು ಕಂಡುಬರುತ್ತದೆ.

ರಾಜಕೀಯದಲ್ಲಿ ಅಸಹಿಷ್ಣುತೆಯು ಮಹಿಳೆಯರ ಮೇಲೆ ಹಿಂಸೆ, ಆಕ್ರಮಣವನ್ನು ಉಂಟುಮಾಡಿದೆ. ಅದನ್ನು ತೆಗೆದುಹಾಕಿ ಪ್ರಾಂತೀಯ ಮಟ್ಟದಲ್ಲಿ ಸುಧಾರಣೆ ತರಲು ಪ್ರಯತ್ನಿಸಬೇಕು. ಮಹಿಳಾ ಜನವರ್ಗವು ರಾಜಕೀಯದೊಂದಿಗೆ ಸಂಪರ್ಕ ಹೊಂದುವ ಮೂಲಕ ದೇಶದ ಭವಿತ್ವ ರೂಪಿಸಲು ಸಾಧ್ಯವಿದೆ.

ನಮ್ಮ ನೆಚ್ಚಿನ ಮಾಜಿ ಪ್ರಧಾನಿ ಇಂದಿರಾಗಾಂಧಿಯವರು ಹೀಗೆ ಹೇಳಿದ್ದಾರೆ. "ನಮ್ಮ ಮುಂದಿರುವ ಮಹಿಳೆಯರು ಒಂದು ಗಹನವಾದ ಜವಾಬ್ದಾರಿಯನ್ನು ಹೊಂದಿದ್ದು, ನಮ್ಮ ಸಂಪ್ರದಾಯಿಕ ನಂಬಿಕೆ ಮತ್ತು ಆಧುನಿಕ ಚಿಂತನೆಗಳಲ್ಲಿ ಯಾವುದು ಮುಖ್ಯ ಎಂದು ತಿಳಿಯಬೇಕಾದ ಅನಿವಾರ್ಯವಿದೆ. ನಾವು ಹಂತಹಂತವಾಗಿ ಇದರ ಬಗೆಗೆ ಚಿಂತನೆ ಮಾಡಬೇಕು. ನಾವು ವಾರ, ತಿಂಗಳು ಮತ್ತು ಕಾಲಕಾಲಕ್ಕೂ ಬರುತ್ತಿರುವ ಆಧುನಿಕತೆಯಲ್ಲಿ ಯಾವುದು ಮುಖ್ಯ ಎಂದು ನಿರ್ಧರಿಸಿ, ಹಳೆಯದನ್ನು ಹೇಗೆ ಉಳಿಸಿಕೊಳ್ಳುವುದೆಂದು ಚಿಂತಿಸಬೇಕಿದೆ.

ಅದರಂತೆ ಇನ್ನೊಬ್ಬ ಮಾಜಿ ಪ್ರಧಾನಿಯಾದ ಶ್ರೀ ರಾಜೀವಗಾಂಧಿಯವರು ನಮ್ಮ ದೇಶದ ಮಹಿಳೆಯರು ದೇಶದ ಪ್ರಗತಿಯಲ್ಲಿ ಮತ್ತು ದೇಶದ ಭವಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದಿದ್ದಾರೆ. ಅವರು ಹೇಳಿದ ಮಾತುಗಳನ್ನು ನಾನು ಇಲ್ಲಿ ದಾಖಲಿಸಲು ಬಯಸುತ್ತೇನೆ.

"ನಾವು ಮಹಿಳೆಯರನ್ನು ರಾಷ್ಟ್ರ ನಿರ್ಮಾಣದಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗಿಯಾಗುವುದನ್ನು ಬಯಸುತ್ತೇನೆ. ನಾವು ಮಹಿಳೆಯನ್ನು ಆರ್ಥಿಕವಾಗಿ ಸಬಲರಾಗುವಂತೆ, ಸ್ವಾತಂತ್ರ ಹೊಂದುವಂತೆ ಮಾಡಲು ಪ್ರಯತ್ನಿಸುತ್ತೇವೆ. ಮಹಿಳೆಯರು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು. ಆ ಮೂಲಕ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೀಡಿದ ಕೊಡುಗೆಯನ್ನು ಸ್ಮರಿಸಬೇಕು.

ಈ ಸಂದರ್ಭದಲ್ಲಿ ನಾನು ನಮ್ಮ ಸರ್ಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಮಾಡಿದ ನೀತಿಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲು ಬಯಸುತ್ತೇವೆ. ಇದರಲ್ಲಿ ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಕಾರ್ಪೊರೇಟ್ ಜಗತ್ತಿನ ಕೆಲವು ಸಂಸ್ಥೆಗಳು ಸೇವೆ ಮಾಡಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ–1976 ಯೋಜನೆಯು ಅಳವಡಿಸಿಕೊಂಡ ಮಹಿಳಾ ಕ್ರಿಯಾ ರಾಷ್ಟ್ರೀಯ ಯೋಜನೆಯು ಒಂದು ಮಾರ್ಗದರ್ಶಿಯಾಗಿದೆ. ಇದು 1988 ರ ವರೆಗೂ ಜಾರಿಯಲ್ಲಿತ್ತು. 1988 ರಲ್ಲಿ "ಮಹಿಳಾ ಸ್ವಯಂ ಉದ್ಯೋಗ ಮತ್ತು ಅನೌಪಚಾರಿಕ ವಲಯದಲ್ಲಿ ಮಹಿಳಾ ಸ್ಥಿತಿಗತಿ ರಾಷ್ಟ್ರೀಯ ವರದಿ" ಯು ಮಹತ್ವದ್ದಾಗಿದೆ. ಇದು ಅಸಂಘಟಿತ ಮಹಿಳೆಯ ಬದುಕಿಗಾಗಿ ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಇದರಲ್ಲಿ ಮಹಿಳಾ ಉದ್ಯೋಗ, ವೃತ್ತಿ ತೊಂದರೆಗಳು, ಶಾಸಕಾಂಗದ ರಕ್ಷಣೆ, ತರಬೇತಿ ಹಾಗೂ ಕೌಶಲ್ಯವೃದ್ಧಿ, ಉತ್ಪಾದಕತೆಯ ಅಂಶಗಳು ಸೇರಿವೆ.

1991–2000 ರಲ್ಲಿ ಬಂದ ಬಾಲಕಿಯರ ರಾಷ್ಟ್ರೀಯ ಕ್ರಿಯಾಯೋಜನೆಯು ಒಂದು ಮಹತ್ವದ ಯೋಜನೆಯಾಗಿದ್ದು, ಇದು ಒಂದು ದಶಕದ ಕಾರ್ಯಸೂಚಿಯಾಗಿದೆ, ಇದರಲ್ಲಿ ಬಾಲಕಿಯರ ಉಳಿಕೆ, ತಾರುಣ್ಯಾವಸ್ಥೆಯ ಹುಡುಗಿಯರ ರಕ್ಷಣೆ, ಮಹಿಳಾ ಸಂಬಂಧಿ ನೀತಿಗಳು ಸೇರಿವೆ. ಅದರಂತೆ ರಾಷ್ಟ್ರೀಯ ಶಿಕ್ಷಣ ನೀತಿ (1986), ರಾಷ್ಟ್ರೀಯ ಆರೋಗ್ಯ ನೀತಿ (1983), ರಾಷ್ಟ್ರೀಯ ಜನಸಂಖ್ಯಾ ನೀತಿ (1993) ಇವುಗಳು ದೇಶದ ಮಹಿಳೆಯರ ಹಾಗೂ ಬಾಲಕಿಯರ ಅಭ್ಯುದಯಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಿವೆ.

ಇಂದಿಗೂ ಭಾರತದಲ್ಲಿ ಮಹಿಳೆಯು ಪುರುಷನೊಂದಿಗೆ ಸಮಾನತೆಯನ್ನು ಸಾಧಿಸಿಲ್ಲ. ಜನಸಂಖ್ಯೆಯ ಬಹುಭಾಗವಾಗಿರುವ ಮಹಿಳೆಯರು ಬಡತನ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಲಿಂಗತಾರತಮ್ಯ ನಿರಂತರವಾಗಿದೆ. ಬಹುದೊಡ್ಡ ಈ ದೇಶದಲ್ಲಿ ಲಿಂಗಾನುಪಾತದಲ್ಲಿ ಏಕರೂಪ ಇಲ್ಲ. 1981ರಲ್ಲಿ 1000 ಪುರುಷರಿಗೆ ಇದ್ದ 934 ಮಹಿಳೆಯರ ಲಿಂಗಾನುಪಾತವು 1991 ರಲ್ಲಿ 1000 ಪುರುಷರಿಗೆ 927 ಆಗಿರುವುದು ಲಿಂಗಾನುಪಾತದ ವ್ಯತ್ಯಾಸವನ್ನು ಸೂಚಿಸುತ್ತದೆ. ಇಂದು ಈ ಸ್ಥಿತಿಯು ಚಿಂತಾಜನಕವಾಗಿದೆ.



ಮಹಿಳೆಯು ನಿರಂತರವಾಗಿ ಕಡಿಮೆ ಉತ್ಪಾದಕ ವೃತ್ತಿಗಳಲ್ಲಿ ಕೌಟುಂಬಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಇದು ಯಾರಿಗೂ ಕಾಣದ 'ಮರೆಮಾಚಿದ' ವೃತ್ತಿಯಾಗಿದೆ. ಮನೆಯ ನಾಲ್ಕು ಗೋಡೆಗಳ ಒಳಗೆ ಅವಳ ಬದುಕು ನಿರ್ಮಾಣವಾಗಿದೆ. ಅಪೌಷ್ಟಿಕತೆ, ಪರಿಸರದ ಕೊರತೆ, ಕಡಿಮೆ ಆದಾಯದ ಉದ್ಯೋಗಗಳಿಂದ, ಸಂಬಳವಿಲ್ಲದ ಕೃಷಿ ಆಧಾರಿತ ವೃತ್ತಿಗಳಿಂದಾಗಿ ಮಹಿಳೆಗೆ ಹಿನ್ನಡೆಯಾಗಿದೆ. ಸಂಪ್ರದಾಯಿಕ ವೃತ್ತಿಗಳಿಂದ ಮಹಿಳೆಯ ಬದುಕು ಏಕರೂಪದ, ಅಂತಿಮ ಮಟ್ಟದ, ಕೊರತೆಯ ಸ್ಥಿತಿ ಉಂಟಾಗಿದೆ.

ಇದಕ್ಕೆ ಪರಿಹಾರವೇನು? ಇದರಿಂದ ಹೊರಬರಲು ಇರುವ ಮಾರ್ಗಗಳಾವುವು? ಇದರಿಂದ ಹೊರಬರಲು ಮಹಿಳೆಯು ಮಾನಸಿಕವಾಗಿ ಸಿದ್ಧಗೊಳ್ಳಬೇಕು. ಮಹಿಳೆಯು ರಾಜಕೀಯ ಪ್ರವೇಶ ಪಡೆಯಬೇಕು. ಇದರಿಂದ ಅವಳ ಸ್ಥಿತಿ ಉತ್ತಮವಾಗುವುದು. ಹಲವು ಅಧ್ಯಯನಗಳು ಇದಕ್ಕೆ ಸಾಕ್ಷಿಯನ್ನು ಒದಗಿಸಿವೆ. ಜಗತ್ತಿನಾದ್ಯಂತ ಮಹಿಳೆಯರು ಜವಾಬ್ದಾರಿಯಿಂದ, ಪ್ರಜ್ಞಾಪೂರ್ವಕವಾಗಿ ಕರ್ತವ್ಯ ನಿರ್ವಹಿಸಬಲ್ಲರು ಎಂದು ಅಧ್ಯಯನಗಳು ತಿಳಿಸಿವೆ.

ಭಾರತದಲ್ಲಿ 73ನೇ ಸಂವಿಧಾನದ ತಿದ್ದುಪಡಿಯ ಮೂಲಕ ಮೂರನೇ ಒಂದರಷ್ಟು ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವಕಾಶ ನೀಡಲಾಗಿದೆ. 73 ಹಾಗೂ 74ನೇ ತಿದ್ದುಪಡಿಯು 1993ರಲ್ಲಿ ಮಹಿಳೆಯರ ಬದುಕಿನ ಮೇಲೆ ನೇರವಾದ ಪರಿಣಾಮವನ್ನು ಉಂಟುಮಾಡಿವೆ. 1993 ಹಾಗೂ 1997 ಚುನಾವಣೆಯಲ್ಲಿ ಪ್ರತಿ 33% ಮಹಿಳೆಯರಿಗೆ ಅವಕಾಶ ಲಭ್ಯವಾಗಿದೆ. ಬಡತನ, ಶಿಕ್ಷಣ ಕೊರತೆ, ಸಾಮಾಜಿಕ ಹಾಗೂ ಕುಟುಂಬದ ಅಡ್ಡಿಯಿಂದಾಗಿ ಮಹಿಳೆಯ ರಾಜಕೀಯ ಪ್ರವೇಶ ಕಠಿಣವಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಮೀಸಲಾತಿಯಿಂದ ಮಹಿಳೆಗೆ ಅಧಿಕಾರ ಅವಕಾಶ ಲಭಿಸಿದೆ. ಸಂಸತ್ತು ಹಾಗೂ ರಾಜ್ಯ ಶಾಸಕಾಂಗದಲ್ಲಿ ಮಹಿಳೆಯರಿಗೆ ನೀಡುವ ಮೀಸಲಾತಿಯಿಂದ ಮಹಿಳಾ ಬದುಕಿನಲ್ಲಿ ಮಹತ್ತರ ಬದಲಾವಣೆಗಳು ಬರಲಿವೆ. ಇದರಿಂದ ಮಹಿಳಾ ಸಬಲೀಕರಣ ಸಾಧ್ಯವೆಂದು ನಾನು ನಂಬಿದ್ದೇನೆ.

ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ ಸಾಧ್ಯತೆಯ ಇನ್ನೂ ಅನೇಕ ವಿಧಾನಗಳನ್ನು ತಿಳಿಸಬೇಕಿದೆ. ಶಿಕ್ಷಣವು ಮಹಿಳೆಯರ ಬಹುವಲಯದ ಸಮಸ್ಯೆಗಳನ್ನು ಪರಿಹರಿಸಬಲ್ಲದು. ಇದು ಕಾನೂನಾತ್ಮಕವಾದ, ಮಾನಸಿಕ ಸ್ಥಿತಿಯನ್ನು ವಿಸ್ತರಿಸಬಲ್ಲದು. ಅದಕ್ಕಾಗಿ ಶಿಕ್ಷಣದ ಮಹತ್ವವನ್ನು ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ. "ಮಹಿಳೆಯನ್ನು ಮೊದಲು ಸುಶಿಕ್ಷಿತಳನ್ನಾಗಿ ಮಾಡಿಬಿಡಿ. ಆಗ ಅವರು ಯಾವ ಸುಧಾರಣೆಗಳು ಆಗಬೇಕೆಂದು ತಿಳಿಸುತ್ತಾರೆ".

ನನ್ನ ಆತ್ಮೀಯ ಯುವ ಪದವೀಧರರೇ, ಜಗತ್ತಿನಲ್ಲಿ ಹೊಸ ತಂತ್ರಜ್ಞಾನವು ವಿಸ್ಮಯಕಾರಿ ಬದಲಾವಣೆಯನ್ನು ತಂದಿದೆ. ಜೀವನ ವಿಧಾನ ಬದಲಾಗಿದೆ. ಸ್ಥಳೀಯರು ಅನೇಕ ಜ್ಞಾನ ಹೊಂದಿದ್ದಾರೆ. ಸಾಮಾಜಿಕ ಹಾಗೂ ಭೌಗೋಳಿಕ ವೈರುಧ್ಯಗಳು ಇನ್ನು ಸಹ ಹಾಗೆಯೇ ಉಳಿದಿವೆ. ಆತಂಕವಾದ, ಪರಿಸರ ಆತಂಕಗಳು ಉಂಟಾಗಿವೆ. ಈಗ ಸಮಯ ಬಂದಿದೆ. ಜೀವನದಲ್ಲಿ ನೆಮ್ಮದಿ, ಶಾಂತಿ ಹಾಗೂ ಪ್ರಗತಿಯನ್ನು ತರುವ

ಪ್ರಯತ್ನಗಳು ಆಗಬೇಕಾಗಿದೆ. ನನ್ನ ಮುಂದೆ ನಿಂತಿರುವ ಈ ಯುವ ಪದವೀಧರರು ಹೊಸ ಭರವಸೆಯ ಬದುಕನ್ನು ನಿರ್ಮಿಸಲಿ. ಶಿಕ್ಷಣದ ಮೂಲಕ ಸಬಲೀಕರಣಗೊಳ್ಳಲಿ. ಧೈರ್ಯ, ಸಾಮರ್ಥ್ಯಗಳು ವೃದ್ಧಿಯಾಗಲಿ ಆ ಧೈರ್ಯವು ನಿಮ್ಮಲ್ಲಿ ಉಂಟಾಗಲಿ ಎಂದು ಈ ಮೂಲಕ ಕೋರುತ್ತೇನೆ.

ಅಮೆರಿಕಾದ ಶ್ರೇಷ್ಠ ತಜ್ಞರಾದ ರೇನ್‌ಹೊಲ್ಡ್ ನೆಲ್‌ಬರ್ ಅವರು ಹೇಳುವಂತೆ– "ಓ ದೇವರೆ ಬದಲಾವಣೆಗಳನ್ನು ಅಪ್ಪಿಕೊಳ್ಳುವ ಮನಸ್ಸನ್ನು ನನಗೆ ನೀಡು. ಬದಲಾವಣೆಗಳನ್ನು ತರುವ ಧೈರ್ಯವನ್ನು ನೀಡು. ಇವುಗಳ ನಡುವಿನ ವ್ಯತ್ಯಾಸ ತಿಳಿಯುವ ಪ್ರಜ್ಞೆಯನ್ನು ನೀಡು" ಎಂದಿದ್ದಾರೆ.

ನಾನು ನಿಮ್ಮಲ್ಲಿ ಭಾರತದ ಭವಿಷ್ಯವನ್ನು ಎದುರು ನೋಡುತ್ತಿದ್ದೇನೆ. ಬಹಳ ದುಃಖದ ಸಂಗತಿ ಎಂದರೆ ನಮ್ಮಲ್ಲಿ ಉನ್ನತ ಆದಾಯವಿದೆ, ಆದರೆ ಕನಿಷ್ಠ ಮೌಲ್ಯಗಳಿವೆ. ಗುಣಾತ್ಮಕತೆಯ ಕೊರತೆ ಇದೆ. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯವು ತಮ್ಮಲ್ಲಿ ಉಂಟು ಮಾಡಿರುವ ತಿಳಿವಳಿಕೆ, ಸಿದ್ಧಾಂತ, ಸಾಮರ್ಥ್ಯವು ಸಾಮಾಜಿಕ ಅಭ್ಯುದಯಕ್ಕಾಗಿ ಬಳಕೆಯಾಗಲಿ. ನೀವು ಈ ವಿಶ್ವವಿದ್ಯಾನಿಲಯದಿಂದ ನಿರ್ಗಮಿಸುತ್ತಿದ್ದಂತೆ ನಿಮ್ಮ ಬದುಕಿನಲ್ಲಿ ಹೊಸ ಬೆಳಕಿನ ಪ್ರವೇಶವಾಗಲಿ ಎಂದು ಹಾರೈಸುತ್ತೇನೆ.

ನಾನು ಈ ಭಾಷಣವನ್ನು ಜವಾಹರಲಾಲ್ ನೆಹರು ಅವರ ಕೆಲವು ಬಂಗಾರದಂತಹ ನುಡಿಗಳಿಂದ ಸಮಾರೋಪಗೊಳಿಸಲು ಬಯಸುತ್ತೇನೆ. ಅವು ಭಾರತದ ಮಹಿಳೆಯರ ಆತ್ಮವಿಶ್ವಾಸದ ಬೆಳವಣಿಗೆಗೆ ಕಾರಣವಾಗಿವೆ.

"ನನಗೆ ಮಹಿಳೆಯರ ಬಗ್ಗೆ ಶ್ರೇಷ್ಠವಾದ ನಂಬಿಕೆ ಇದೆ. ನಾನು ಭಾರತದ ಸಂಪ್ರದಾಯಿಕ ಮೌಲ್ಯಗಳನ್ನು ಮಹಿಳೆಯರ ಬದುಕಿಗೆ ಸಂಬಂಧ ಹೊಂದಿರುವ ಬಗ್ಗೆ ಮಾತನಾಡುತ್ತಿಲ್ಲ. ನನಗೆ ಇಂದಿನ ಭಾರತೀಯರ ಮಹಿಳೆಯರ ಬಗ್ಗೆ ನಂಬಿಕೆ ಇದೆ. ನನಗೆ ಅವರ ಬಗ್ಗೆ ಆತ್ಮವಿಶ್ವಾಸವಿದೆ. ಅವರ ಸೌಂದರ್ಯ, ಆತ್ಮೀಯತೆ, ಬುದ್ಧಿವಂತಿಕೆ, ಆತ್ಮವಿಶ್ವಾಸ, ತ್ಯಾಗ–ಬಲಿದಾನಗಳ ಬಗ್ಗೆ ಗೌರವವಿದೆ. ಭಾರತದ ಶಕ್ತಿಯನ್ನು ಪುರುಷನಿಗಿಂತ ಮಹಿಳೆ ಹೆಚ್ಚಿಸಬಲ್ಲಳು ಎಂಬುದು ನನ್ನ ನಂಬಿಕೆಯಾಗಿದೆ".

ಈ ಮಾತುಗಳೊಂದಿಗೆ ಇಲ್ಲಿರುವ ಎಲ್ಲರಿಗೂ ಗೌರವ ಪೂರ್ವಕ ನಮನಗಳನ್ನು ಸಲ್ಲಿಸುತ್ತಾ ನನ್ನ ಭಾಷಣ ಮುಗಿಸುತ್ತೇನೆ.

– ಜೈ ಹಿಂದ್ –

2ನೆಯ ಘಟಿಕೋತ್ಸವ ಭಾಷಣ ದಿನಾಂಕ : 04/02/2011

*******



# ಸಾಹಿತ್ಯ ಹಾಗೂ ಮಹಿಳೆಯರು

❑ ಶ್ರೀಮತಿ ಸರೋಜಿನಿ ಮಹಿಷಿ

ರಾಜ್ಯ ಪುನರ್ಘಟನೆಗೆ ಮೊದಲು ಮುಂಬೈ, ಮದ್ರಾಸ್, ಹೈದ್ರಾಬಾದ, ಮೈಸೂರು ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಆಯಾ ಪ್ರಾಂತಗಳ ಭಾಷೆ, ಸಾಹಿತ್ಯ, ಸಮಸ್ಯೆಗಳನ್ನರಿತು ಮೈಗೂಡಿಸಿಕೊಂಡು ಒಂದಾಗಿ ಬದುಕಲು ಯತ್ನಿಸಿತು. ಈಗ ನಾಡು ಒಂದಾಗಿದೆ. ಅದರ ಬಲ ಹೆಚ್ಚಬೇಕು. ಕಲೆ, ಸಾಹಿತ್ಯಗಳ ಗುಣಗಾತ್ರಗಳಲ್ಲಿ ವಿಕಾಸ ಹೊಂದಬೇಕು. ಬದುಕುವ ಹೋರಾಟ ಮುಗಿದು ಒಳ್ಳೆಯ ರೀತಿಯಲ್ಲಿ ಬದುಕಲು ಹೋರಾಟ ಸಾಗಬೇಕು ಎಂಬ ಆಶೆ ಸ್ವಾಭಾವಿಕ.

ಪರಿಸರದ ಪರಿಣಾಮ ಜೀವನದ ಮೇಲಾಗಿ ಅದರ ಪಡಿನೆಳಲು ಸಾಹಿತ್ಯದಲ್ಲಿ ಬೀಳುವುದು. ಈ ಬೆಳಕಿನಲ್ಲಿ ನೋಡಿದಾಗ, ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕೆಚ್ಚು ಹೋರಾಟಗಳ ರೀತಿ ಬೇರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂದಿನ ಗುರಿ ಬೇರೆ! ಅಂದಿನ ಸಂಘಟನೆ, ಕತೃತ್ವಶಕ್ತಿ, ತ್ಯಾಗಗಳು ಅಷ್ಟೇ ಏಕೆ ದೈಹಿಕ ಶಕ್ತಿ, ಸಹಿಷ್ಣುತೆಗಳೂ ಇಂದು ಜನತೆಯಲ್ಲಿ ಕಡಿಮೆಯಾಗಿವೆ ಎಂದು ಎರಡೂ ಕಾಲಗಳನ್ನು ಬಲ್ಲವರು ಹೇಳುತ್ತಾರೆ. ಹಳೆಯದೆಲ್ಲ ಒಳ್ಳೆಯದೆನ್ನುವವರು ಹೀಗೆನ್ನುತ್ತಾರೆಂದು ತಿಳಿಯಬಹುದೇ ಹಾಗಾದರೆ? ನಮ್ಮ ಕಾಲವೂ ಹಳೆಯದಾದ ಮೇಲೆ, ಮುಂದಿನ ಪೀಳಿಗೆ ಅದನ್ನು ಮೆಚ್ಚೀತೆಂಬ ಸಮಾಧಾನವನ್ನು ನಾವು ತಾಳಬಹುದೇ? ಅದು ದುರ್ಬಲರ ವಾದ. ಗಳಿಸುವ ಶಕ್ತಿ ಸಾಲದೆ, ತ್ಯಾಗ ಮಾತನಾಡಿದರೆ, ಅದು ಹುರುಳಿಲ್ಲದ ಮಾತು.

ಕನ್ನಡಿಗರ ನಿದ್ರೆ ಗಾಢವಾದದ್ದು, ಎದ್ದರೆ ಮಾತ್ರ ಯಾವುದಕ್ಕೂ ವಿಳಂಬವೇ ಇಲ್ಲ. ಆದರೆ ಏಳಲಿಕ್ಕೆ ವಿಳಂಬ ಅಷ್ಟೇ, ಸಾಮ್ರಾಜ್ಯಗಳನ್ನು ಕಟ್ಟಿ ತೋರಿಸಿದ ಕನ್ನಡಿಗರು ಅದನ್ನು ತೊರೆದು ತೋರಿಸಿದ್ದಾರೆ. ಅಂದು ಇತಿಹಾಸವು ಮಾಡಲ್ಪಟ್ಟಿತು. ಇಂದು ಅದು ಓದಲ್ಪಡುತ್ತಿದೆ.

ಕರ್ತೃತ್ವಶಕ್ತಿ, ಸೇವೆ, ತ್ಯಾಗಗಳು ಅಂದು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಅವಶ್ಯಕವಾಗಿದ್ದರೆ ಇಂದೂ ಅವು ಅವಶ್ಯಕವಾಗಿವೆ. ಜನರ ಜೀವನ ಒಳೆಯದಾಗಲು ಇದ್ದ ಪರಿಸ್ಥಿತಿಯಲ್ಲಿಯ ಕೊರತೆಯೇ ಕರ್ತೃತ್ವಶಕ್ತಿಗೆ ಆಹ್ವಾನವಾಗಿ ಒಳ್ಳೆಯ

ಸಾಹಿತ್ಯವೂ ಹೊರಬಂತು. ಮಂಡಾಲೆಯ ಕಾರಾಗೃಹದಲ್ಲಿ ಲೋಕಮಾನ್ಯ ಟಿಳಕರ ಹೃದಯಗೀತೆಯ ರಹಸ್ಯವನ್ನು ಕಂಡಿತು. ದಾಸ್ಯದ ಪರಿಸರ, ಅಜ್ಞಾನಗಳು ಗಾಂಧೀಜಿಗೆ ಆಹ್ವಾನವಿತ್ತು ಸತ್ಯದೊಡನೆ ಪ್ರಯೋಗ ನಡೆಸಲು ಕಾರಣವಾದವು. 'ಬಡವರ ಬಗ್ಗರ ತುತ್ತಿನ ಚೀಲ, ಬರಿದೋ ಬರಿದು, ತೆರವೋ ತೆರವು.' ಎಂದು ಕವಿ ಬೇಂದ್ರೆಯವರ ಹೃದಯ ಮಿಡಿಯಿತು.

ಕರ್ತೃತ್ವಶಕ್ತಿ, ಸೇವೆ, ತ್ಯಾಗಗಳ ಬೆಲೆ ಕಡಿಮೆಯಾಗಿಲ್ಲ. ಆಗುವುದು ಶಕ್ಯವೂ ಇಲ್ಲ. ನಾವು ನಮ್ಮ ದೌರ್ಬಲ್ಯದಿಂದಾಗಿ ಅವುಗಳ ಬೆಲೆಯನ್ನು ಕಡಿಮೆ ಮಾಡುವ ಯತ್ನ ಮಾಡುತ್ತಿದ್ದೇವೆ. ದುರ್ಬಲರ ತ್ಯಾಗ, ಅಹಿಂಸೆಗಳಿಗೆ ಯಾವ ಬೆಲೆಯಿದೆ? ಈ ಶಬ್ದಗಳು ಕೋಶದಲ್ಲಿ ಅಂದಿನಿಂದ ಇಂದಿಗೂ ಇವೆ. ಅವುಗಳಿಗೆ ಸಜೀವತೆ ಬರಬೇಕಾದದ್ದು ವ್ಯಕ್ತಿಯ ಜೀವನದಲ್ಲಿ, ರಾಷ್ಟ್ರದ ಜೀವನದಲ್ಲಿ!

ಮಹಿಳೆ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿದ್ದರೂ, ಅದೊಂದು ಚಿಕ್ಕ ಪ್ರಪಂಚವೇ. ಸೇವಾಬುದ್ಧಿ-ತ್ಯಾಗಬುದ್ಧಿಗಳು ಅವಳ ಜೀವನದಲ್ಲಿ ಹಾಸುಹೊಕ್ಕಾಗಿಯೇ ಬಂದಿವೆ. ತನಗಲ್ಲದಿದ್ದರೂ ಸರಿ, ತನ್ನ ಪತಿ ಉಂಡರವಳಿಗೆ ಸಂತಸ. ಬಂದ ಅತಿಥಿಗಳು ತಿಂದು ತೇಗಿದರೆ ಸಂತೃಪ್ತಿ! ಅವಳ ಈ ತ್ಯಾಗಬುದ್ಧಿ ಸಮಾಜದ ಮಟ್ಟಕ್ಕೂ, ರಾಷ್ಟ್ರಮಟ್ಟಕ್ಕೂ ಸ್ವಲ್ಪ ವಿಸ್ತರಿಸಿದರೆ ಎಂತಹ ಕ್ರಾಂತಿಯಾದೀತು. ಎಷ್ಟು ಒಳ್ಳೆಯದಾದೀತು! ಮನೆಯ ಜನಕ್ಕಾಗಿ ತ್ಯಾಗ ಮಾಡುವ ಮಹಿಳೆ ತಾನು ತ್ಯಾಗ ಮಾಡಿದ್ದೇನೆಂಬುದನ್ನು ನೆನೆಯುದೂ ಇಲ್ಲ. ಇಲ್ಲದೆ ಹೋದರೆ ತ್ಯಾಗದ ಅಹಂಕಾರವನ್ನು ತಾಳಿಕೊಳ್ಳುವುದೇ ಕಷ್ಟವಾದೀತು.

ಮಹಿಳೆಯು ಸೇವೆ ಮಾಡಬಲ್ಲಳು, ತ್ಯಾಗ ಮಾಡಬಲ್ಲಳು ಎಂಬುದನ್ನು ಸಮಾಜವು ತಿಳಿಯದೆ ಹೋದರೆ ಅಥವಾ ತಿಳಿದು ದುರುಪಯೋಗ ಮಾಡಿಕೊಂಡರೆ ಆ ನಷ್ಟವು ನಾಡಿಗೆ, ನುಡಿಗೆ. ತನ್ನ ಶಕ್ತಿಯೆಷ್ಟಿದೆಯೆಂಬುದನ್ನು ಮಹಿಳೆಯೂ ಸ್ವತಃ ತಿಳಿಯಬೇಕಾದದ್ದು ಅತ್ಯವಶ್ಯ.

ಸಾಹಿತ್ಯ ರಚನೆ, ಪರಿಸರ, ಸಂಸ್ಕಾರ ಹಾಗೂ ನಿರೂಪಣ ಶಕ್ತಿಗಳನ್ನು ಅವಲಂಬಿಸಿದೆ. ಇದ್ದ ಬುದ್ಧಿ-ಭಾವನೆಗಳಲ್ಲವೇ? ನಿರೀಕ್ಷಣೆ, ನಿರೂಪಣೆಗಳು ಹೆಚ್ಚು ಕಡಿಮೆ ಪ್ರಮಾಣದಲ್ಲಿರಬಹುದು. ಆದರೆ ಅಭಿವ್ಯಕ್ತಿಗೆ ಅವಕಾಶ, ಧಾರ್ಮಿಕ, ಸಾಮಾಜಿಕ ಅವನತಿಯಿಂದಾಗಿ, ಅಷ್ಟು ಪ್ರಭಾವಿಯೆನಿಸಲಿಲ್ಲ. ಅಲ್ಲಿಂದೀಚೆಗೆಂದರೆ ಪುರುಷನ ಧರ್ಮಾರ್ಥ ಕಾಮಕ್ಕೆ ಸ್ತ್ರೀ ಒಂದು ಸಾಧನ ಮಾತ್ರವಾದಳು. ಸಾಧನಕ್ಕೆ ಸಾಧಕನ ಸೇವೆಯೇ ಗುರಿ. ಪುರುಷನ ಸೇವೆಯಲ್ಲಿಯೇ ಆಕೆಗೆ ಮೋಕ್ಷವೇರ್ಪಟ್ಟಿತು: ಸ್ತ್ರೀ ಶೃಂಗಾರದ ಬೊಂಬೆಯಾದಳು; ಮಾತೃದೇವತೆಯಾದಳು; ಕಾವ್ಯಕ್ಕೆ ವಸ್ತುವಾದಳು; ಕವಿಸಮಯ ಅವಳನ್ನು ವಿಧವಿಧವಾಗಿ ಚಿತ್ರಿಸಿತು.

ಮಾತೃದೇವೋಭವ ಎಂಬ ಗೌರವವನ್ನು ತಾಯಿ ಪಡೆಯಬೇಕಾದರೆ ಅವಳೂ ತಪಸ್ಸನ್ನಾಚರಿಸಬೇಕಾಗುತ್ತದೆ ಎಂಬುದರ ಅರಿವು ಆಕೆಗೂ ಆಗಲಿಲ್ಲ. ಸಮಾಜಕ್ಕೂ ಇರಲಿಲ್ಲ. ಮಗುವಿಗೆ ಜನ್ಮಕೊಟ್ಟ ಮಾತ್ರದಿಂದಲೇ ಅವಳಿಗೆ ಆ ಪದವಿ ದೊರತಿತೇ? ಆ ಮಗುವನ್ನು ಮನುಷ್ಯನನ್ನಾಗಿ ಮಾಡುವ ತಪಸ್ಸು ಅವಳದು. ಮಗುವಿನ ದೈಹಿಕ ಬೆಳವಣಿಗೆಯನ್ನಷ್ಟೇ ಅಲ್ಲ, ಸಾಂಸ್ಕೃತಿಕ ಆತ್ಮಿಕ ಬೆಳವಣಿಗೆಯನ್ನೂ ಆಕೆ



ನೋಡಬೇಕಾಗುತ್ತದೆ. ಅವಳಿಗೆ ಆ ವಿಚಾರ, ಶಕ್ತಿ ಎಲ್ಲಿಂದ ಬರಬೇಕು? ಮೇಲೆ ಇದ್ದ ದೌರ್ಬಲ್ಯಕ್ಕೆ ಮುಸುಕುಹಾಕಿ ಪರರನ್ನೂ ತಮ್ಮನ್ನೂ ಒಟ್ಟಿಗೆ ವಂಚಿಸುವುದು ಅನಿಷ್ಟ ರೂಢಿಯಾಗಿಯೇ ಬೆಳೆದುಬಂದಿದೆ. ನಮ್ಮಲ್ಲಿದ್ದ ಶಕ್ತಿಯನ್ನು ಒರೆಗಲ್ಲಿಗೆ ಹಚ್ಚದೆ ನಮ್ಮ ಶಕ್ತಿ ಎಷ್ಟಿದೆಯೆಂಬುದರ ಕಲ್ಪನೆಯೂ ನಮಗೆ ಬರಲಾರದು. ಓದಿ, ಕೇಳಿ, ನೋಡಿ, ತಿಳಿದು, ಕಲ್ಪನೆಮಾಡಿ ಪಡೆದ ಎಲ್ಲ ಬಗೆಯ ಜ್ಞಾನವೂ ಯಾವುದೊಂದು ಕಾರ್ಯದಲ್ಲಿ ಉಪಯುಕ್ತವಾಗಬೇಕು. ಆ ಕಾರ್ಯವನ್ನು ಮಾಡುವಾಗ ಅಥವಾ ಮಾಡಿದ ಮೇಲೆ ಉಂಟಾಗುವ ಅನುಭವಜನ್ಯ ಜ್ಞಾನ ಇದ್ದ ಜ್ಞಾನಕ್ಕೆ ಕಳೆ ಕಟ್ಟುತ್ತದೆ.

ನಯ-ನಾಜೂಕು ಹಾಗೂ ದೌರ್ಬಲ್ಯಗಳಲ್ಲಿ ಮಹದಂತರವಿದೆ. ಕರ್ತೃತ್ವ ಶಕ್ತಿ, ಕಾರ್ಯಕ್ಷಮತೆ, ಕಾರ್ಯದಕ್ಷತೆ, ಕರ್ತವ್ಯನಿಷ್ಠೆ ಇವೆಲ್ಲ ದೈವಿಶಕ್ತಿಯ ಆವಿಷ್ಕಾರ; ದೌರ್ಬಲ್ಯದಿಂದ ಹುಟ್ಟುವ ಗುಣಗಳಲ್ಲ ಅವು. ತನ್ನ ಕರ್ತೃತ್ವ ಶಕ್ತಿಯನ್ನು ಲೋಕಕ್ಕೆ ತೋರಿಸಿದ ಅಕ್ಕಮಹಾದೇವಿ, ಝಾಂಸೀ ರಾಣಿಯರಿಗೆ ನಯ-ನಾಜೂಕು ಗೊತ್ತಿರಲಿಲ್ಲವೇನೋ!

ಆತ್ಮಜ್ಞಾನ, ಮೋಕ್ಷಗಳಿಗೆ ಸ್ತ್ರೀ ತಾನೇ ಸ್ವಾವಲಂಬಿಯಾಗಿ ಅರ್ಹತೆಯನ್ನು ಪಡೆಯಬಲ್ಲಳೇ ಎಂಬ ಶಂಕೆ ಪ್ರಚಲಿತವಿದ್ದಾಗ, ಅದು ಸಾಧ್ಯವೆಂಬುದನ್ನು ತಪಸ್ಸಿನಿಂದ ತೋರಿಸಿದ ಶ್ರೇಯಸ್ಸು ಶಿವಶರಣೆಯರಾದ ವಚನಕಾರ್ತಿಯರದು; 'ಪತಿ ಎಂಥವನಿದ್ದರೂ ಅವನೇ ದೇವರು, ಸತಿಗೆ ಮೋಕ್ಷಕ್ಕೆ ನೇರವಾದ ದಾರಿಯಿಲ್ಲ' ಎಂಬ ಅಂದಿನ ಸಾಮಾನ್ಯ ತಿಳುವಳಿಕೆಯನ್ನು ಖಂಡಿಸಿ ದೇವರೇ ಪತಿಯೆಂದು ಪರಮಾರ್ಥದಲ್ಲಿ ಪ್ರಪಂಚವನ್ನು ಹೂಡಿದವರು ಶಿವಶರಣೆಯರು. ಜಗತ್ತಿನ ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ತಿಳುವಳಿಕೆಗೆ ಅವರು ಸಲ್ಲಿಸಿದ ಕಾಣಿಕೆ ಅಮೂಲ್ಯವಾದುದು. ಮಹಿಳಾ ಪ್ರಪಂಚದಲ್ಲಂತೂ ಅದು ಅವಿಸ್ಮರಣೀಯ. "ಹೆಣ್ಣು ಮಾಯೆಯಲ್ಲ, ಹೆಣ್ಣು ರಾಕ್ಷಸಿಯಲ್ಲ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ" ಎಂದು ಸ್ತ್ರೀಯಲ್ಲಿ ದೇವತ್ವವನ್ನು ಕಂಡು ಆಚರಿಸಿದ ಶ್ರೇಯಸ್ಸು ಅವರದು. ಪತಿಭಕ್ತಿಯಿಂದ ದೈವಭಕ್ತಿಯವರೆಗೂ ಮಹಿಳೆಯರ ಕಾರ್ಯಕ್ಷೇತ್ರವನ್ನು ವಿಸ್ತರಿಸಿದವರು ಅಕ್ಕಮಹಾದೇವಿ, ಮೀರಾಬಾಯಿಯಂತಹ ಶರಣೆಯರು !

ಸಮಾಜದಲ್ಲಿ ಸ್ವಾರ್ಥದಿಂದಲೋ ಅಜ್ಞಾನದಿಂದಲೋ, ರೂಪುಗೊಂಡ ಕೃತಕ ಮೌಲ್ಯಗಳನ್ನು ಪರಂಪರೆಯಾಗಿ ಕುರುಡು ನಂಬಿಕೆಯಿಂದ ನಡೆಸಿಕೊಂಡು ಬರುವವರ ಸಂಖ್ಯೆಯೇ ಹೆಚ್ಚು. ಯಾವ ಕೃತಕ ಮೌಲ್ಯಗಳು ಹೇಗೆ ಕೂಡಿದವೋ ತಿಳಿಯದು. ಆದರೆ ಸುಶಿಕ್ಷಿತತೆಗೂ ಅಹಂಮನ್ಯತೆಗೂ ಸಂಬಂಧ ಕಂಡುಬರುತ್ತದೆ. ಸಾಮಾನ್ಯರಿಗೆ ನಿಲುಕದಂತೆ ದೂರವಿರುವುದೇ ಸುಶಿಕ್ಷಿತರ ಲಕ್ಷಣ ಎಂದು ಮಹಿಳೆಯರೂ ತಿಳಿದಿದ್ದಾರೆ. ಓದಿದ ಹುಡುಗಿ ತಮ್ಮೊಡನೆ ಮಾತನಾಡಿದರೆ ಹಿಂದಿನ ಪೀಳಿಗೆಯ ತಾಯಂದಿರಿಗೆ ತುಂಬ ಆಶ್ಚರ್ಯ.

ಸಿರಿವಂತ ವರ್ಗದ ಮಹಿಳೆ ತಾನು ಆ ವರ್ಗದಲ್ಲಿ ಹುಟ್ಟಿಬಂದದ್ದು ತನ್ನ ಹೋದ ಜನ್ಮದ ಪುಣ್ಯ ಎಂದು ತಿಳಿಯುತ್ತಾಳೆ. ಮಧ್ಯಮ ವರ್ಗದ ಮಹಿಳೆ ಸಿರಿವಂತ ವರ್ಗದ ಮಹಿಳೆಯನ್ನು ಅನುಕರಿಸಲು ಯತ್ನಿಸುತ್ತಾಳೆ. ದುಡಿಯುವ ಪ್ರಸಂಗವೇ ಬಂದರೆ ಅದಕ್ಕಾಗಿ ನೊಂದುಕೊಳ್ಳುತ್ತಾಳೆ. ಅವಳ ನೋವಿಗೆ, ತನ್ನ ದೌರ್ಬಲ್ಯಕ್ಕೆ ಮನೆಯ

ಯಜಮಾನನೂ ನೊಂದುಕೊಳ್ಳುತ್ತಾನೆ. ಕೂಲಿಕಾರ ವರ್ಗದ ಮಹಿಳೆ ದುಡಿಯುವುದು ತನ್ನಂಥವರಿಗೆ ಬಿಟ್ಟದ್ದಲ್ಲ ಎಂದು ತಿಳಿದಿದ್ದಾಳೆ. ದುಡಿಮೆ ಅವಳ ಜೀವನದ ಉಸಿರು; ಅದನ್ನು ಮಾಡಿಯೂ ಅವಳ ಜೀವನದ ರೀತಿ, ವೈಯಕ್ತಿಕ ಜೀವನದ ವೈಯಕ್ತಿಕ ಸುಖ-ಸ್ವಾತಂತ್ರ್ಯಗಳ ಕಲ್ಪನೆ ಭಿನ್ನವಾಗಿದೆ.

ಯಾವ ಕ್ಷೇತ್ರದಲ್ಲಾದರೂ ಕೃಷಿಯಿಲ್ಲದೆ ಪ್ರಗತಿ ಸಾಧ್ಯವಿಲ್ಲ. ಪುಣ್ಯ ಮಾಡಿ ಬಂದವರು ಕೂತು ಉಣ್ಣುತ್ತಾರೆ. ಪಾಪ ಮಾಡಿದವರು ದುಡಿಯುತ್ತಾರೆ ಎಂದು ನಂಬಿದ ತಾಯಿ-ತಂದೆಗಳು ತನ್ನ ಮಕ್ಕಳಾದರೂ ಸುಖವಾಗಿರಲಿ ಎಂದು ಆಶಿಸುವುದಲ್ಲವೇ?

ಕಾಯಕವೇ ಕೈಲಾಸ ಎಂದು ಬಸವಣ್ಣನವರು ಅಂದು ಹೇಳಿದ ಮಾತು ಇಂದಿಗೂ ಸತ್ಯ. ಎಂದಿಗೂ ಸತ್ಯ । ಆದರೆ ಯಾವ ಕಾಯಕವೂ ಇಲ್ಲದೆ ಕೈಲಾಸ ಸುಖ ಪಡೆಯುತ್ತಿದ್ದೇವೆಂದು ತಿಳಿದ ಪುರುಷರೂ ಇದ್ದಾರೆ. ಮಹಿಳೆಯರೂ ಇದ್ದಾರೆ. ಸಾಮಾನ್ಯವಾಗಿ ದುಡಿದು ಹಣಗಳಿಸಿ ತರುವುದು ಪುರುಷನ ಮುಖ್ಯ ಉದ್ಯೋಗವೆಂದೂ ತಿಳಿಯಲಾಗುತ್ತದೆ. ಸಾಹಿತ್ಯ ರಚನೆಯನ್ನೇ ಮುಖ್ಯ ಉದ್ಯೋಗವೆಂದೂ ಮನೆ-ಮಕ್ಕಳನ್ನು ನೋಡಿಕೊಂಡಿರುವದು ಮಹಿಳೆಯ ಉದ್ಯೋಗವೆಂದೂ ತಿಳಿಯಲಾಗುತ್ತದೆ. ಸಾಹಿತ್ಯರಚನೆಯನ್ನೇ ಮುಖ್ಯ ಉದ್ಯೋಗವೆಂದು ಕೈಕೊಂಡವರು, ಎಲ್ಲ ಭಾಷೆಗಳ ಸಾಹಿತ್ಯದಲ್ಲಿ ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ ವಿರಳರೆಂದೇ ಹೇಳಬೇಕು. ಅಂಥಹ ಸಾಹಸವನ್ನೇ ಮಾಡಿದರೆ, ಪಡೆಯಬೇಕಾದ ಕಷ್ಟವಿದ್ದೇ ಇದೆ. ಇಂತಹ ಪರಿಸರದಲ್ಲಿ ಮಹಿಳೆ ಪರಿಸರದಲ್ಲಿ ಮಹಿಳೆ ಅಧ್ಯಯನ ಮಾಡುವುದು ಸ್ವಲ್ಪ ಸಾಹಸದ ಮಾತು. "ಮಹಿಳೆಯಾದರೇನಾಯಿತು? ಸಾಹಿತ್ಯ ರಚನೆ ಮಾಡಬಲ್ಲಳು. ಅದರಲ್ಲಿಯೂ ಅವಳ ಪರಿವಾರದಲ್ಲಿ ಮನೋಭೂಮಿಕೆ ಸುತ್ತಲಿನ, ಜನರಲ್ಲಿ, ಅದರಲ್ಲಿಯೂ ಅವಳ ಪರಿವಾರದಲ್ಲಿ ಮೂಡಬೇಕು. ಈ ಸಾಮಾಜಿಕ ಕೃತಕ ಮೂಲ್ಯಗಳನ್ನು ಅರಗಿಸಿಕೊಂಡರೆ ಮುಂದೆ ಬರೆದ ಕೃತಿಯನ್ನು ಪ್ರಕಟಿಸುವ ಸಮಸ್ಯೆ. ಆರ್ಥಿಕ ತೊಂದರೆ ಇದ್ದೆ ಇವೆ.

19ನೆಯ ಶತಮಾನದಲ್ಲಿ ಸಾಮಾನ್ಯ ಮನೆತನದ ಮಹಿಳೆಯರನೇಕರು ಬುದ್ಧಿ ವಿಕಾಸಕ್ಕೆ ಅವಕಾಶವಿಲ್ಲದೆ, ಕೇವಲ ಪ್ರತಿಭೆಯ ಬಲದಿಂದ ಸಮಾಜಕ್ಕೆ ಮನ್ನಣೆಯಾದ ರೀತಿಯಲ್ಲಿಯೇ ದೈವಭಕ್ತಿಯನ್ನು ವಸ್ತುವನ್ನಾಗಿಟ್ಟುಕೊಂಡು ಕೃತಿ ರಚಿಸಿದದವರಿದ್ದಾರೆ. ಯಾವ ಅಡೆತಡೆಗಳನ್ನು ಲೆಕ್ಕಿಸದೆ ಕಲ್ಲುಬಂಡೆಗಳನ್ನು ಕೊರೆದು ಎತ್ತರದಿಂದ ಧುಮ್ಮಿಕ್ಕುವ ಪ್ರವಾಹದಂತೆ ಅವರ ಸಾಹಿತ್ಯ ಧುಮ್ಮಿಕ್ಕಿದೆ. ಅದರಲ್ಲಿ ಹಲವು ಭಾಗ ಗ್ರಂಥಸ್ಥ. ಉಳಿದ ಭಾಗಗಳನ್ನು ಗ್ರಂಥಸ್ಥಗೊಳಿಸುವ ಪ್ರಯತ್ನ ನಡೆಯುತ್ತಿದೆ. ಇವರಲ್ಲಿ ಕೆಲವರ ಕಾಲ ಹದಿನೆಂಟನೇಯ ಶತಮಾನವಾದರೂ ಗಲಗಲಿಯ ಅವ್ವನವರು, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಈ ಗುಂಪಿಗೆ ಸೇರಿದವರು.

1850ರ ಸುಮಾರಿಗಿದ್ದ ಕವಯಿತ್ರಿ ಸಿ.ಆರ್. ಚೆಲ್ಲಮ್ಮ, ಮೈಸೂರಿನ ಮಹಾರಾಣಿ ಬಾಲಿಕಾ ಪಾಠಶಾಲೆಯ ಅಧ್ಯಾಪಕಿ. 1885ಕ್ಕೆ ಆಕೆ ಒಳ್ಳೆ ಲೇಖಕಿಯಾಗಿದ್ದರು. ರಾಜಕಳಾನಿಧಿ ಅವರ ಪ್ರೌಢಕೃತಿ ಚೆಲ್ಲಮ್ಮ ರಚಿಸಿದ 'ರುಕ್ಮಿಣೀಪರಿಣಯ' 1895ರಲ್ಲಿಯೇ ಶ್ರೀ ಆರ್. ನರಸಿಂಹಾಚಾರ್ಯರಿಂದ ಪರಿಶೋಧಿಸಲ್ಪಟ್ಟು ಪ್ರಕಟವಾಗಿದೆ. ಅವರು ರಚಿಸಿದ ಇನ್ನೆರಡು ಕೃತಿಗಳೆಂದರೆ ಗೀತಿಕಾಲಹರಿ ಕಾವ್ಯ ಹಾಗೂ ಪಾರಿಜಾಪರಣ ನಾಟಕ, ರಾಜಕಳಾನಿಧಿ'- ರಾಜಕೀಯ ರಾಜ್ಯಾಂಗ, ಅಮಾತ್ಯ, ಬಾಂಧವೀಯ,



ರಾಜವೃತ್ತಿ, ಪ್ರಜಾರಂಜನ, ಸಭಾರಂಜನ, ಇತ್ಯಾದಿಗಳನ್ನೆಲ್ಲ ಒಳಗೊಂಡ ಪ್ರೌಢಕೃತಿ. ಈ ಕೃತಿಗೆ ತಾನೇ ಬರೆದ ಮುನ್ನುಡಿಯಲ್ಲಿ ಲೇಖಕಿ. "ಈ ಕೃತಿಗಳಿಗೆ ಅಚ್ಚು ಹಾಕಿಸುವ ಸಾಮರ್ಥ್ಯ ತನ್ನಲ್ಲಿಲ್ಲ: ಮಹಾಜನರು ಉದಾರಾಂತುಕರಣದಿಂದ ಅಚ್ಚು ಹಾಕಿಸಬೇಕು" ಎಂದು ಕೇಳಿಕೊಂಡಿದ್ದಾರೆ.

"ವಿನುತ ಮಹಿಸೂರ ರಾಣಿಯರ ಸ
ದ್ವಿನುತ ಬಾಲಿಕ ಪಾಠಶಾಲೆಯೊ
ಳನುಗತೋಪಾಧ್ಯಾಯಿನಿ ಶ್ರೀ ಚೆಲ್ಲಮಾಂಬೆಯಿದ

ಎಂದು ಎಲ್ಲ ಕೃತಿಗಳಲ್ಲಿಯೂ ತನ್ನ ವಂಶ ಹಾಗೂ ಉದ್ಯೋಗವನ್ನು ಕುರಿತು ಹೇಳಿದ್ದಾಳೆ . 1870ರ ಸುಮಾರಿಗಿದ್ದ ಉತ್ತರ ಕನ್ನಡ ಜಿಲ್ಲೆಯ ಗಣಪಕ್ಕ ಗೋಕರ್ಣ ಮಹಾತ್ಮೆ, ಕೃಷ್ಣನ ಹುಟ್ಟು ಎಂಬ ಯಕ್ಷಗಾನ, ಇತ್ಯಾದಿಗಳನ್ನು ರಚಿಸಿದ್ದಾರೆ. ಮನೆಯಲ್ಲಿ ತೀರ ಬಡತನ; ಸ್ವಲ್ಪ ಓದು ಬರಹ ಬಲ್ಲ ಗಣಪಕ್ಕೆ ಸಂಸ್ಕಾರಬಲದಿಂದ ಇವುಗಳನ್ನು ಬರೆದೂ ಇಟ್ಟಿದ್ದಾಳೆ. ಪ್ರತಿ ಇನ್ನೂ ಕೈಬರಹದಲ್ಲೇ ಇದೆ.

ಇಂತಿರುವ ಪುಣ್ಯಕಥೆಯನು ಸಂತಸದೊಳು
ಮುಂತೊರೆವೆ ಯಕ್ಷಗಾನ ಸ್ವರೂಪದೊಳು
ಅರಿಯೆ ನಾ ಸಂಸ್ಕೃತದ ಶ್ರುತಿಶಾಸ್ತ್ರಗಳನು
ವರಪುರಾಣದ ಅರ್ಥ ಅನ್ವಯಂಗಳನು
ತರಳೆ ರಚಿಸಿದಳೆಂದು ಇರಿಸಿ ದೋಷವನು
ಜರಿಯದಿರಿ ಮುಂದುವರಿಸಿ ತಿದ್ದತಾ ಕೃತಿಯನು

ಗಣಪಕ್ಕನಿಗೂ ಮಹಿಳೆಯ ಕೃತಿಯಂದರೆ ಸಮಾಜ ಯಾವ ದೃಷ್ಟಿಯಿಂದ ನೋಡುವುದೋ ಎಂಬ ಅಧೈರ್ಯ. ಇಪ್ಪತ್ತನೆಯ ಶತಮಾನದಲ್ಲಿ ಬರೆದ ಬೆಳಗೆರೆ ಜಾನಕಮ್ಮ

ಕಸಕ್ಕಿಂತ ಕಡೆಯಾಯ್ತೆ
ಹೆಣ್ಣು ಜನ್ಮವು ನಿನಗೆ?

-ಎಂದು ದೇವರಿಗೆ ಸವಾಲು ಹಾಕಿದರು. ಜಯದೇವಿತಾಯಿ ಲಿಗಾಡೆ ಕಣ್ಣಿದ್ದ ಕುರುಡರನ್ನು ದೂರಿದರು.

ಚೆನ್ನಮ್ಮನ ಶೌರ್ಯ
ಹೊನ್ನಮ್ಮನ ಕಾವ್ಯ
ಮಹತಿ ಮಹಾದೇವಿಯಕ್ಕನ
ನೆನೆವರೇ ಕಣ್ಣಿದ್ದ ಕುರುಡರು?

ಕನ್ನಡ ನಾಡಿನ ಒಳಹೊರಗೆ ಇನ್ನೂ ಅನೇಕ ಜನ ಕವಿಯತ್ರಿಯರಿದ್ದಾರೆ. ಅವರಲ್ಲಿ ವಿದ್ಯೆ ಪಡೆದವರೂ ಇದ್ದಾರೆ. ನಿರಕ್ಷರಿಗಳೂ ಇದ್ದಾರೆ ಅವರವರ ಪ್ರತಿಭೆ ಸಂಸ್ಕಾರಗಳಿಗನುಗುಣವಾಗಿ ಹಾಡಿದ್ದಾರೆ.

ಕವಯಿತ್ರಿಯರೆಲ್ಲ ಈ ರೀತಿ ಅಧೈರ್ಯದಿಂದ ಹಾಡಿದ್ದೇಕೆ? ಹೆಣ್ಣಿಗಿದ್ದ ಆರ್ಥಿಕ, ಸಾಮಾಜಿಕ ಹಿನ್ನೆಲೆಯ ಚಿತ್ರ ಅವರ ಕವನದಲ್ಲಿ ಮೂಡಿಬಂದಿದೆಯೇ? ಹೆಣ್ಣು ಎಂಬ ಒಂದೇ ಕಾರಣಕ್ಕಾಗಿ ಸಮಾಜದ ಅವಹೇಳನೆಯನ್ನು ಆಕೆ ಅನುಭವಿಸಬೇಕೇ? ಸಮಾಜ ಹಾಕಿಕೊಟ್ಟ ಈ ಕೃತಕ ಮೌಲ್ಯಗಳ ದಾರಿಯನ್ನೆ ತುಳಿದು, "ಹೆಂಗಸು ನನಗೇನು ತಿಳಿಯುತ್ತದೆ"- ಎಂದು ಆಕೆಯು ತನ್ನ ಅಜ್ಞಾನವನ್ನು ಸಮರ್ಥಿಸಿಕೊಳ್ಳುತ್ತಾಳೆ.

ದಾರಿದ್ರ್ಯ, ಅಜ್ಞಾನಗಳನ್ನು ಕಿತ್ತೆಸೆದು ಸಂಸ್ಕೃತಿ ಸಮೃದ್ಧಿಗಳನ್ನು ಜನತೆಯಲ್ಲಿ ತರಬೇಕಾದರೆ ವೈಜ್ಞಾನಿಕ ಕ್ರಾಂತಿ ಮೊದಲು ಅವಶ್ಯ. ಇಂತಹ ಕ್ರಾಂತಿ ಉಂಟುಮಾಡುವುದೇ ಸಾಹಿತ್ಯದ ಗುರಿ. ಸಾಹಿತ್ಯ ಸಮಾಜಗಳು ಪರಸ್ಪರ ಪ್ರತಿಕ್ರಿಯೆಯನ್ನು ಬೀರಬಲ್ಲವಾಗಬಲ್ಲವು. ದುರ್ಬಲವೂ ಆಗಬಲ್ಲವು. ಸಾಹಿತ್ಯವು ಮಲೀನವಾಗಿ ಬಣ್ಣ ಬಳೆದುಕೊಂಡು ಬಂದರೆ ಇಲ್ಲವೆ ಮತದ ತೊತ್ತಾಗಿ ಹೊರಹೊರಟರೆ ಅದು ಸಜೀವನ ಸಾಹಿತ್ಯವಾಗಲಾರದು.

ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಮೌಲ್ಯಗಳಲ್ಲಿ ಕ್ರಾಂತಿಯಾಗಿದೆ. ವಿಧಾಯಕವಾದ ಹೊಸ ಮೌಲ್ಯಗಳನ್ನು ಅರ್ಥಮಾಡಿಕೊಳ್ಳದೆ, ಜೀವನದಲ್ಲಿ ಪ್ರಗತಿಯಾಗದು. ದೃಷ್ಟಿ ವಿಶಾಲವಾಗದು. ಜಾತಿ-ಮತ ನಿರಪೇಕ್ಷವಾಗಿ, ಒಳ್ಳೆಯದು ಎಲ್ಲಿದ್ದರೂ, ಸಪ್ತಸಮುದ್ರಗಳ ಆಚೆಗಿದ್ದರೂ ಅದು ನಮ್ಮ ಜೀವನದಲ್ಲಿ ಬರುವಂತಿದ್ದರೆ ಬರಮಾಡಿಕೊಳ್ಳಬೇಕು. ನಮ್ಮ ಜ್ಞಾನ-ವಿವೇಕಗಳನ್ನು ಬೆಳೆಸಿಕೊಳ್ಳುವಲ್ಲಿ ಮಡಿವಂತಿಕೆ ಸಲ್ಲದು. ಅರ್ಥವಿಲ್ಲದ ವೈಚಾರಿಕ ಪರಂಪರೆಯ ಕೊಳೆಯಿಂದ, ಅಂಧಶ್ರದ್ಧೆಯ ಆಳದಿಂದ ಮಹಿಳೆಯರೂ ಹೊರಬರಬೇಕು. ಅಜ್ಜನ ಕಾಲದಲ್ಲಿ ಬಾವಿಯ ಉಪ್ಪು ನೀರನ್ನು ಕುಡಿಯುತ್ತದ್ದರೆ ಇಂದಿಗೂ ಅದನ್ನೇ ಕುಡಿಯುವುದು ಯಾವ ಅಭಿಮಾನ! ಅಂದಿನ ಹುಡಿಗೆ ಶಾಲೆಯ ಕಟ್ಟೆಯನ್ನೇ ಹತ್ತಿರಲಿಕ್ಕಿಲ್ಲ. ಇಂದಿನವಳು ಶಾಲೆಯನ್ನು ಕಲಿಸುತ್ತಿದ್ದಾಳೆ. ವ್ಯತ್ಯಾಸ ಹೊಂದುತ್ತಿರುವ ಬೆಲೆಗಳನ್ನು ನಾವು ತೀವ್ರಗತಿಯಿಂದ ಅರ್ಥಮಾಡಿಕೊಳ್ಳಬೇಕಾಗುತ್ತದೆ. ದುಡಿಯುವ ಮಹಿಳೆಯ ಬಗ್ಗೆ ನಮ್ಮ ಜನ ಇನ್ನೂ ಕರುಣೆಪಡುತ್ತಾರೆ. ಪಾಪ ದುಡಿದು ಹಾಕುವವರು ಯಾರೂ ಇಲ್ಲವೇನೋ ಎಂದು ಮರುಕ ತೋರುತ್ತಾರೆ. ಹಲವು ಸಲ ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ಸೇವೆ ಸಲ್ಲಿಸುವುದು ಪುರುಷನ ಜೊತೆಗೆ ಅವಳು ಹೂಡಿದ ಸ್ಪರ್ಧೆ ಎಂದೂ ಅರ್ಥ ಮಾಡಲಾಗುತ್ತದೆ. ಎಲ್ಲರೂ ಸ್ಪರ್ಧೆಯಿಂದ ದುಡಿದರೆ ಒಳ್ಳೆಯದೇ ಆದಿತೇನೋ! ಆದರೆ ಇಲ್ಲಿ ಮಾತ್ರ ಸ್ಪರ್ಧೆಯಿಲ್ಲ. ಪರಸ್ಪರರು ಪೂರಕವಾಗಿ ದುಡಿಯುತ್ತಾರೆ.

ವೈಜ್ಞಾನಿಕ ಸಂಶೋಧನೆಗಳನ್ನು ರಾಷ್ಟ್ರದ ವಿವಿಧ ಯೋಜನೆಗಳನ್ನು ಭಾರತೀಯ ಮಹಿಳೆ ತಾನು ತಿಳಿದುಕೊಳ್ಳುವದಿಲ್ಲವೆಂದು ಹಟ ತೊಟ್ಟರೂ ಇಂದು ಅವಳನ್ನವು ಬಿಡುತ್ತಿಲ್ಲ. ರಾಷ್ಟ್ರೀಯ ಪ್ರಯೋಗಶಾಲೆಯಲ್ಲಿ ಏನು ನಡೆದಿದೆ.! ಜೋಗದ ಜಲಪಾತದಿಂದ ಹುಟ್ಟುವ ವಿದ್ಯುತ ಶಕ್ತಿಯಷ್ಟು ಎಂಬ ವಿಷಯದಲ್ಲಿ ಅವಳಿಗೆ ವಿಶೇಷ ಅಸ್ಥೆಯಿಲ್ಲದಿದ್ದರೂ ಗುಂಡಿಯನ್ನೊತ್ತಿದಾಗ ಆ ವಿದ್ಯುದ್ದೀಪಗಳು ತನ್ನ ಮನೆಯನ್ನು ಬೆಳಗಿದಾಗ ಅವಳಿಗೆ ಸಂತೋಷ. ಯೋಜನೆಗಳ ಫಲ ಅವಳಿಗಿಷ್ಟವಾದರೂ ಅವುಗಳನ್ನು ತಿಳಿಯಲು ಪರಿಶ್ರಮ ಪಡಬೇಕಾದುದು ಅವಳಿಗೆ ಮೊದಮೊದಲು ಸ್ಮರಣೆಯವಾಗಿ ಕಾಣಲಿಕ್ಕಿಲ್ಲ.

ರಾಜಾಶ್ರಯ ಪಡೆದು ಅಂದು ಸರ್ವಸಾಮಾನ್ಯವಾದ ಹದಿಬದೆಯ ಧರ್ಮವನ್ನು



ಕುರಿತು ಬರೆದವಳು ಸಂಚಿ ಹೊನ್ನಮ್ಮ. ಅಂದರೆ ಇಂದಿನ ಪರಿಸರದಲ್ಲಿ ವಿಶ್ವಜೀವನವನ್ನೂ, ಮಾನವ ಮನದ ಸೂಕ್ಷ್ಮತೆಯನ್ನೂ, ಮೂಲ್ಯಗಳ ತಪ್ಪು ತಿಳುವಳಿಕೆಯಿಂದಾಗಿರುವ ತಾಕಲಾಟವನ್ನೂ, ಬುದ್ಧಿ ಹೃದಯಗಳೇರಡರಿಂದಲೂ ಸಾಹಿತಿ ತಿಳಿದಿರಬೇಕಾಗುತ್ತದೆ. ಸಮಗ್ರ ದೃಷ್ಟಿಯ ಅಭಾವದಿಂದಾಗಿ ಇಂದಿನ ಜೀವನದಲ್ಲಿ ಅದೆಷ್ಟು ಕೊಲಾಹಲವೆದ್ದಿದೆ. ವಿಜ್ಞಾನಿ ಕವಿಯನ್ನು ಅಲ್ಲಗಳೇಯುತ್ತಾನೆ. ಕವಿ ಸಮಾಜಸೇವಕರನ್ನು ದೂರುತ್ತಾನೆ. ಸಮಾಜಸೇವಕ ರಾಜಕಾರಣಿಯನ್ನು ನಿಂದಿಸುತ್ತಾನೆ. ರಾಜಕಾರಣಿ ತತ್ವಜ್ಞಾನಿಯನ್ನು ಮೆಚ್ಚುವುದಿಲ್ಲ. ಬುದ್ಧಿಜೀವಿ, ಭಾವಜೀವಿಗಳು ಬುದ್ಧಿಭಾವನೆಗಳೆರಡೂ ಒಂದು ನಾಣ್ಯದ ಎರಡು ಮುಖಗಳೆನ್ನುವುದನ್ನು ಅರಿಯೆದೆಯೇ ಪರಸ್ಪರರನ್ನು ದೂರುತ್ತಾರೆ. ಇದರ ತಿರುಳನ್ನರಿತ ಸಾಹಿತಿ ಸಮಗ್ರ ದೃಷ್ಟಿಯಿಂದ ಕೂಡಿದ ಸಾಹಿತ್ಯವನ್ನು ರಚಿಸುವುದು ಅವಶ್ಯವಿದೆ.

ಮನುಷ್ಯನು ಗುಂಪು ಕಟ್ಟಿಕೊಂಡು ಜೀವಿಸುತ್ತಿದ್ದ ಕಾಲದಿಂದ ಪ್ರಜಾಪ್ರಭುತ್ವದವರೆಗೂ ನಾವಿಂದು ಅನೇಕ ಹಂತಗಳನ್ನು ದಾಟಿ ಬಂದಿದ್ದೇವೆ. ಈ ಸಾಮಾಜಿಕ ರಾಜಕೀಯ ವ್ಯತ್ಯಾಸಗಳಲ್ಲಿ ಮಹಿಳೆಯೂ ಪಾಲುಗಾರ್ತಿಯಾಗಿದ್ದಾಳೆ. ಅನೇಕ ಸಲ ಅವುಗಳಿಗೆ ಆಹುತಿಯಾಗಿದ್ದಾಳೆ. ಇಂದು ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯವಿದೆ, ವ್ಯಕ್ತಿತ್ವದ ವಿಕಾಸಕ್ಕೆ ಅವಕಾಶವಿದೆ. ವ್ಯಕ್ತಿಗೂ ಪ್ರಾಧಾನ್ಯವಿದೆ. ಸಮಾಜಕ್ಕೂ ಪ್ರಾಧಾನ್ಯವಿದೆ. ಎರಡೂ ಪರಸ್ಪರ ಪೂರಕಗಳಾಗಿವೆ. ಮತ್ತೆ ಬರೀ ಅಂದಿನ ರಾಮ-ಸೀತೆಯರ ಆದರ್ಶ ಚಿತ್ರಣವೊಂದೇ ಇವತ್ತು ಸಾಲದು, ಯತಾರ್ಥವು ಬೇಕು. ಜೊತೆಗೆ ಇಂದಿನ ಆದರ್ಶವು ಬೇಕು.

ಭಾರತೀಯ ಮಹಿಳೆ ಒಬ್ಬ ನಾಗರೀಕಳು ಸಮಾಜದ ಒಂದು ಮುಖ್ಯ ಘಟಕ ರಾಜ್ಯಘಟನೆ ರಾಜನಾಗರಿಕರಿಗೆ ಕೊಟ್ಟ ಎಲ್ಲ ಹಕ್ಕು ಬಾಧ್ಯತೆಗಳೂ ಆಕೆಗಿವೆ. ಆದರೆ ಹಕ್ಕುಗಳ ಜೊತೆಗೆ ಕರ್ತವ್ಯವೂ ಇದೆಯೆಂಬುದನ್ನು ಆಕೆ ಮರೆಯಕೂಡದು. ಎರಡು ಬೇಡ ಎಂಬ ಉದಾರ ಬುದ್ಧಿಯ ಮಹನೀಯರೂ ನಮ್ಮಲ್ಲಿದ್ದಾರೆ. ಮಹಿಳೆಯರೂ ಇದ್ದಾರೆ. ಈ ನಿಷ್ಕ್ರೀಯತೆಯನ್ನು ದೂರಗೊಳಿಸಿ ಮಂಗಲಕರವಾದ ಶಕ್ತಿಯಲ್ಲಿ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಅದಕ್ಕೆ ಕೊಳೆ, ಅನ್ಯಾಯಗಳನ್ನು ಕಿತ್ತಿ ಚೆಲ್ಲುವ ನ್ಯಾಯನಿಷ್ಠುರತೆಯೂ, ಆತ್ಮ ವಿಶ್ವಾಸವೂ ಅಷ್ಟೇ ಅವಶ್ಯ. ವಿಧಾಯಕ ದೃಷ್ಟಿ ಹಾಗೂ ಆತ್ಮ ವಿಶ್ವಾಸಗಳು ಹೊಸ ಸಮಾಜ ರಚನೆಗೆ ತೀರ ಅವಶ್ಯ. ಆತ್ಮವಿಶ್ವಾಸವನ್ನು ಕಳೆದುಕೊಂಡರೆ ಇನ್ನಾವ ಸಂಪತ್ತಿನಲ್ಲಿ ತಾನೇ ನಾವು ವಿಶ್ವಾಸವನ್ನಿಡಬಹುದು?

ವಿಚಾರ ಮಾಡುವ ಶಕ್ತಿಯನ್ನು ಮಹಿಳೆಯರು ಬೆಳೆಸಿಕೊಂಡಿಲ್ಲ. ಶತಮಾನಗಳವರೆಗೆ ಅವಳು ಅಜ್ಞಾನ ದಾರಿದ್ರ್ಯಗಳಿದ್ದುದರ ಪರಂಪರೆಯ ಫಲವಿರಬೇಕು.- ಯಾವುದೇ ವಿಷಯದಲ್ಲಿ 'ಹೆಂಗಸು ತನಗೇನು ತಿಳಿಯುತ್ತದೆ' ಎಂದು ಅವಳು ಪಾರಾಗಬಹುದೆಂದು ಯೋಚಿಸಿದಂತಿದೆ. ಸಮಾಜವು ಅದನ್ನು ಒಪ್ಪುತ್ತದೆ. ಇದರಿಂದ ನಾವು ಪಾರಾದೆವೆಂದು ತಿಳಿದರೂ ನಾವೇ ಆಹುತಿಯಾಗಿರುವ ಕೆಲವೊಂದು ದುಷ್ಟ ಸಂಪ್ರದಾಯ ಪರಂಪರೆಗಳಿಂದ ಹೊರಬರುವುದು ಅವಶ್ಯವಿದೆ. ಅದಕ್ಕೆ ವಿಚಾರ ಶಕ್ತಿಯ ಬೆಳವಣಿಗೆಯಾಗಬೇಕು. ಆಗ ಕ್ರಾಂತಿಯೇ ಮಾಡಬಹುದು. ಮಗುವಿಗೆ ಮೈಸರಿಯಿಲ್ಲದಾಗ ದೇವರು ಕಾಡುತ್ತಿದ್ದಾನೆ ಎಂಬುದು ತಾಯಿಯ ತಲೆಯಲ್ಲಿ ಹೊಕ್ಕರೆ ಯಾವ ದೇವರಿಗೆ ಅದನ್ನು ಬಿಡಿಸಲು ಸಾಧ್ಯವಾದೀತು !

ಹಲವು ಸಾಮಾಜಿಕ ಕಾನೂನುಗಳು ಇಂದು ಮಹಿಳೆಯ ಸಾಮಾಜಿಕ, ಆರ್ಥಿಕ ಜೀವನದಲ್ಲಿ ಆ ಮೂಲಕ ಕೌಟುಂಬಿಕ ಜೀವನದಲ್ಲಿ ಪರಿವರ್ತನೆಯನ್ನುಂಟು ಮಾಡಿದೆ. ಒಂದು ಕಾಲದಲ್ಲಿ ಅಸ್ತಿತ್ವವಿಲ್ಲದೆ ತಾನೇ ಆಸ್ತಿಯಾಗಿದ್ದ ಮಹಿಳೆ ಇಂದು ತಾನೂ ಆಸ್ತಿ ಪಡೆಯುತ್ತಿದ್ದಾಳೆ. ದುಡಿಯುವ ಮಹಿಳೆ ತನ್ನ ವಿಶಿಷ್ಟ ಹಕ್ಕುಗಳಿಂದ ಸೌಲಭ್ಯ ಪಡೆಯುತ್ತಾಳೆ. ಈ ಕಾನೂನುಗಳು ಕೆಲಮಟ್ಟಿಗೆ ಸಾಮಾಜಿಕ, ಆರ್ಥಿಕ ಮೌಲ್ಯಗಳಲ್ಲಿ ಕ್ರಾಂತಿಯನ್ನೇ ಉಂಟುಮಾಡಿದವು. ಇದರ ಮೂಲಕ ಸ್ತ್ರೀಯ ಸಮಸ್ಯೆಗಳಲ್ಲಿಯೂ ಹೊಸತನ ಕಂಡುಬಂದಿತು. ಅರ್ಧ ಶತಮಾನ ಮಹಿಳೆಯರ ಅಭಿವೃದ್ಧಿಗಾಗಿ ಪರಿಶ್ರಮಿಸಿದ ಮಹರ್ಷಿ ಕರ್ವೆಯವರು ಆ ಅವಧಿಯಲ್ಲಿ ಸ್ತ್ರೀಯ ಸಮಸ್ಯೆಗಳು ವಿವಿಧ ರೂಪಗಳನ್ನು ತಾಳಿದ ಬಗ್ಗೆ ಹೇಳಿದ್ದಾರೆ. ಬಳಿಕ ಕೌಟುಂಬಿಕ ಜೀವನದತ್ತ ನೋಡುವ ದೃಷ್ಟಿಕೋನದಲಗಲ್ಲಿಯೂ ವ್ಯತ್ಯಾಸವಾಗುತ್ತದೆ. ಬಂಡವಾಳಶಾಹಿ ಸಮಾಜ ರಚನೆಯಲ್ಲಿ ಪ್ರೇಮದ ಕಲ್ಪನೆ ಬೇರೆ, ಸಮಾಜವಾದಿ ಸಮಾಜ ರಚನೆಯಲ್ಲಿ ಪ್ರೇಮದ ಕಲ್ಪನೆ ಬೇರೆ. ಇಂದಿನ ಕಥಾನಾಯಕಿ ಪ್ರಿಯಕರನ ಮೋಸದಿಂದ ಬಾವಿಹಾರಲು ಇಚ್ಚಿಸಲಿಕ್ಕಿಲ್ಲ.

ಆರ್ಥಿಕ, ಸಾಮಾಜಿಕ, ರಾಜಕೀಯ ಮೌಲ್ಯಗಳಲ್ಲಾಗುತ್ತಿರುವ ವ್ಯತ್ಯಾಸವು ಅನೇಕ ಹೊಸ ಸಮಸ್ಯೆಗಳಿಗೆ ಆಶ್ರಯವಿತ್ತಿದೆ. ಸುಶಿಕ್ಷಿತ ಮಹಿಳೆ ವೇಷಭೂಷಣ ನಡವಳಿಕೆಯಲ್ಲಿಯೂ ಸ್ತ್ರೀಯರಂತಿರಬೇಕು ಪುರುಷರನ್ನು ಅನುಸರಿಸಲು ಯತ್ನಿಸುತ್ತಾಳೆಂಬುದು ಒಂದು ದೂರು. ಸ್ತ್ರೀಯರನ್ನು ಕುರಿತಿದ್ದ ರೂಢಿಮೂಲ ನೀತಿಗಳನ್ನು ಆಕೆ ಅನುಸರಿಸುವದಿಲ್ಲವೆಂಬುದು ಇನ್ನೊಂದು. ಇಂತಹ ಸಮಸ್ಯೆಗಳ ಸೂಕ್ಷ್ಮತೆಯನ್ನು ಸಹೃದಯತೆಯಿಂದ ವಿಶ್ಲೇಷಿಸಲೆತ್ನಿಸುವ ಮಹಿಳೆ ಚೆನ್ನಾಗಿ ಅರಿಯಬಲ್ಲಳು. ಮನದ ಹಿಂದಿನ ಪದರಿನೊಳಗೆ ಇಣುಕಿ ನೋಡಿ ಸತ್ಯವನ್ನೂ ಕಂಡುಹಿಡಿದು ಹೃದಯಂಗಮವಾದ ರೀತಿಯಲ್ಲಿ ಚಿತ್ರಿಸುವ ಕೆಲಸ ಸಾಹಿತಿಯದು. ಕೊಡಗಿನ ಗೌರಮ್ಮ ಇಂತಹ ಹೃದಯಂಗಮ ಚಿತ್ರಗಳ ಕಥೆಗಳನ್ನಿತ್ತು ತೆರವನ್ನು ತುಂಬಿದರು. ಹೆಣ್ಣು ಬರೆದ ಕೃತಿ ಎಂಬ ಮೊಳ್ಳು ಸಹಾನುಭೂತಿ ಅಂದು ಅವರಿಗೆ ಬೇಕಿರಲಿಲ್ಲ. ಆ ರೂಢಿಯನ್ನು ಮೀರಿನಿಂತ ಕೃತಿ ಅವರವು. ಕನ್ನಡ ನಾಡು-ನುಡಿಗಳು ಅವರನ್ನೂ, ಹೃದಯಂಗಮ ಮನೋವಿಶ್ಲೇಷಣೆಯ ಕಾದಂಬರಿಗಳ ಲೇಖಿಕಿ ತ್ರಿವೇಣಿಯವರನ್ನು ಕಳಕೊಂಡು ಬಡವಾದವು. ತ್ರಿವೇಣಿಯವರ ನಿರೀಕ್ಷಣೆ, ವಿಶ್ಲೇಷಣೆ ಬಹುಸೂಕ್ಷ್ಮ 'ಬೆಕ್ಕಿನ ಕಣ್ಣಿ'ನಲ್ಲಿಯ ಮನೋವಿಶ್ಲೇಷಣೆಯ ಚಿತ್ರ ಕಲ್ಲನ್ನೂ ಕರಗಿಸುವಂತಿದೆ. ಹಾಗೆಯೇ 'ಕಂಕಣ' 'ಅಪಜಯ' ಸಾಮಾಜಿಕ ಸಮಸ್ಯೆಗಳನ್ನೂ, ಕೌಟುಂಬಿಕ ಚಿತ್ರಗಳನ್ನೂ ಚಿತ್ರಿಸುವಲ್ಲಿಯೂ ಅವರ ಕೌಶಲ್ಯ ಹಾಗೂ ಸಹೃದಯತೆ ಅವರವೇ! ಕಾದಂಬರಿಗಳ ಅಮೂಲ್ಯ ಕಾಣ್ಕೆಯನ್ನು ಕನ್ನಡ ಸಾಹಿತ್ಯಕ್ಕಿತ್ತ ಶ್ರೇಯಸ್ಸು ತ್ರಿವೇಣಿಯವರದು. ಕಾದಂಬರಿಗಳನ್ನು ಬರೆದ ಮಹಿಳೆಯರ ಸಂಖ್ಯೆ ಕನ್ನಡದಲ್ಲಿ ಹೆಚ್ಚಿಲ್ಲವಾದರೂ, ಬರೆದ ಕಾದಂಬರಿಗಳು ಸ್ವಾರಸ್ಯಯುತವಾಗಿವೆ. ತಮ್ಮ ವೈದ್ಯಕೀಯ ವೃತ್ತಿಯಲ್ಲಯೂ ಬಿಡುವು ಮಾಡಿಕೊಂಡು ಶ್ರೀಮತಿ ಅನುಪಮಾ ಎರಡು ಮೂರು ಕಾದಂಬರಿಗಳನ್ನು ಬರೆದಿದ್ದಾರೆ. ನವದೆಹಲಿಯ ಶ್ರೀಮತಿ. ಉಮಾದೇವಿ ರಾಷ್ಟ್ರದ ವಿಭಜನೆಯಿಂದುಂಟಾದ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಶ್ರೀಮತಿ ಲಲಿತಾಂಬಾ ಹಾಗೂ ಮಂಗಳೂರಿನ ಶ್ರೀಮತಿ ಪದ್ಮಾ ತಮ್ಮ ಕಾದಂಬರಿಗಳಲ್ಲಿ ಕೌಟುಂಬಿಕ ಜೀವನ ಚಿತ್ರಣದ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ.



ಸಣ್ಣ ಕಥೆಯ ಕ್ಷೇತ್ರದಲ್ಲೆಂದರೆ ಬರಹಗಾರ್ತಿಯರ ಬಳಗ ದಿನದಿನಕ್ಕೆ ಹೆಚ್ಚುತ್ತಿದೆ. ಕತೆಗಳ ಗಾತ್ರ, ಶೈಲಿ, ವಿಷಯಗಳಲ್ಲಿ ವೈವಿಧ್ಯತೆ ಕಂಡುಬರುತ್ತಿದೆ. ನಾಡಿನ ಎಲ್ಲೆಡೆಗಳಲ್ಲಿಯೂ ಆಯಾ ಭಾಗದ ಜನತೆಯ ವಿಶಿಷ್ಟ ಜೀವನ ಹಾಗೂ ಅವರ ಸಮಸ್ಯೆಗಳನ್ನು ಕಥೆಗಳಲ್ಲಿ ಲೇಖಕಿಯರು ಚಿತ್ರಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಶ್ರೀಮತಿಯರಾದ ಚಂದ್ರಿಕಾ ಕೊಪ್ಪರ, ಶಾಂತಾದೇವಿ ಮಾಳವಾಡ, ಗೀತಾದೇವಿ ಕುಲಕರ್ಣಿ, ಸರಸ್ವತಿದೇವಿ ಗೌಡರ, ಚಂಪಾ ಮಹಿಷಿ- ಇವರುಗಳು ಪ್ರಮುಖರಾಗಿದ್ದಾರೆ. ಇವರೆಲ್ಲರ ಕಥೆಗಳಲ್ಲಿ ಸಾಮಾಜಿಕ ಸಮಸ್ಯೆ ಹಾಗೂ ಮಕ್ಕಳ ಮನೋವಿಶ್ಲೇಷಣೆಯ ಚಿತ್ರಗಳೇ ಪ್ರಧಾನವಾಗಿವೆ. ಸರಸ್ವತಿದೇವಿ ಗೌಡರರವರು ಐತಿಹಾಸಿಕ ಮಹಿಳೆಯರ ಹಲವು ಚಿತ್ರಗಳನ್ನೂ ಬಿಡಿಸಿದ್ದಾರೆ. ಮಹಿಳೆಯ ಜೀವನದ ಸಮಸ್ಯೆಗಳನ್ನು ವಿಶ್ಲೇಷಿಸಿ ಇನ್ನೊಂದು ಕೃತಿಯನ್ನೇ ರಚಿಸಿದ್ದಾರೆ. ಪತ್ರಿಕಾ ವ್ಯವಸಾಯದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಸುಶೀಲಾ ಕೊಪ್ಪರರ ಲೇಖನಿ ಕಥೆ ಬರೆಯುವಲ್ಲಿ, ಅದರಂತೆ ವ್ಯಕ್ತಿ ಚಿತ್ರಗಳನ್ನು ಬಿಡಿಸುವಲ್ಲಿ ಮೊನೆಯಾಗಿದೆ, ಮೃದುವು ಇದೆ. ಕರಗಡದ ಶ್ರೀಮತಿ ಎಂ.ಕೆ ಜಯಲಕ್ಷ್ಮೀಯವರು ಕಥೆ, ನಾಟಕಗಳೆರಡರಲ್ಲೂ ಕೃಷಿ ಮಾಡಿದ್ದಾರೆ. ಅದರ ಶೈಲಿ ಸಹೃದಯದ ಕುತೂಹಲವನ್ನು ಸೆರೆಹಿಡಿಯುವಂತಿದೆ. ಶ್ರೀಮತಿಯವರಾದ ವಾಣಿ. ಎಚ್. ಎಸ್. ಕಾತ್ಯಾಯಿನಿ, ಸರಸ್ವತಿಬಾಯಿ ರಾಜವಾಡೆ, ಅನುಪಮಾ, ಜಯಲಕ್ಷ್ಮೀ ಆರ್. ಶ್ರೀನಿವಾಸನ್, ರಾಜಲಕ್ಷ್ಮೀ ಸುತ್ತಲಿನ ಜೀವನದಲ್ಲಿ ಉಂಟಾಗುತ್ತಿರುವ ಮೌಲ್ಯಗಳ ಕ್ರಾಂತಿಯನ್ನು ಕೂಲಂಕಷವಾಗಿ ಅರಿತು ಕಥೆಗಳನ್ನು ಚಿತ್ರಿಸಿದ್ದಾರೆ. ಸಮಸ್ಯೆಯ ತೀವ್ರ ಅರಿವು ಈ ಕಥೆಗಳಲ್ಲಿ ಮೂಡಿಬಂದಿದೆ. ಈ ಅರಿವು ಶಕ್ತಿಯುತ ಬರಹಕ್ಕೆ ಒಂದು ಚಾಲನೆ. ಬೆಳೆದು ಬಂದ ಅಭ್ಯಾಸ ಬಲದಿಂದ ತಪ್ಪು ಮೌಲ್ಯಗಳನ್ನು ತಮಗರಿವಾಗದಂತೆಯೇ ಎಷ್ಟೋ ಸಲ ಸಾಹಿತಿಗಳು ಎತ್ತಿಕೊಂಡು ಬಿಡಬಹುದಾಗಿದೆ. ಆದರೆ ಈ ಲೇಖಕಿಯರು ಆತ್ಮ ವಿಶ್ವಾಸದಿಂದ ತಮ್ಮ ಮೌಲ್ಯಗಳನ್ನು ಖಂಡಿಸಿದ್ದಾರೆ. ಶ್ರೀಮತಿ ಗೌರಮ್ಮನರ ಕಥೆ 'ಪುನರ್ವಿವಾಹ' ಈಗ ಇಪ್ಪತ್ತೈದು ವರ್ಷಗಳ ಹಿಂದೆ ಬೆಳಕಿಗೆ ಬಂದರೂ, ಕಥಾನಾಯಕ ವಿದುರ ಯುವಕನು ತಾನು ವಿವಾಹವಾಗುವ ವಧು ಬಾಲವಿಧವೆಯೆಂದು ತಿಳಿದಾಗ ಹಿಂಜರಿದ ವಿಚಾರವನ್ನು ಎಷ್ಟು ನಯವಾಗಿ ಖಂಡಿಸಿದೆ!

ಕವನ, ಕಥೆ, ಕಾದಂಬರಿಗಳು ಅಲ್ಲದೇ ಹರಟೆ, ಪ್ರಬಂಧ, ಏಕಾಂಕ ನಾಟಕಗಳ ಭಾಂಡಾರಕ್ಕೂ ಮಹಿಳೆಯರು ಕಾಣಿಕೆ ಸಲ್ಲಿಸಿದುದುಂಟು .ಆದರೆ ಹೆಚ್ಚು ಪ್ರಮಾಣದಲ್ಲಿಲ್ಲ.

ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸುವಲ್ಲಿ ಪ್ರೌಢ ಜನದ ಸಮಸ್ಯೆಗಳೇ ಸದ್ಯಕ್ಕೆ ಹೆಚ್ಚಾಗಿ ಚಿತ್ರಿತವಾಗಿದೆ. ಮಕ್ಕಳ ಮನಸ್ಸಿನ ವಿಕಾಸವನ್ನು ಹೆಜ್ಜೆ ಹೆಜ್ಜೆಗೂ ನಿರೀಕ್ಷಿಸಿ ದಾರಿ ತೋರುವ ಮಹಿಳೆ ಮಕ್ಕಳ ಸಾಹಿತ್ಯ ರಚನೆಗೆ ಇನ್ನೂ ಹೆಚ್ಚು ಲಕ್ಷ್ಯ ಪೂರೈಸಬಹುದಾಗಿದೆ. ಕಥೆ, ಕವನ, ಚುಟುಕುಗಳು, ಆತ್ಮಚರಿತ್ರೆಗಳು ಮಕ್ಕಳಿಗೆ ಹಿಡಿಸುವ ರೀತಿಯಲ್ಲಿ ಬರೆಯಲ್ಪಟ್ಟಲ್ಲಿ, ಬೆಳೆಯುವ ಮಕ್ಕಳ ಮನಸ್ಸಿನ ಮೇಲೆ ತುಂಬ ಪ್ರಭಾವವನ್ನು ಬೀರಬಲ್ಲವು. ವಿದೇಶಿ ಸಾಹಿತ್ಯದಲ್ಲಿ, ಅದೇಕೆ ದೇಶದಲ್ಲಿಯೇ ಬೇರೆ ಸಾಹಿತ್ಯಗಳಲ್ಲಿ ಮಕ್ಕಳ ಸಾಹಿತ್ಯ ಚಿತ್ತಾಕರ್ಷಕವಾಗಿ ಪ್ರಕಟವಾಗುತ್ತಿದೆ. ಬಾಲ ಅಪರಾಧ, ಅಂಗವಿಕಲ ಮಕ್ಕಳು, ರಾಷ್ಟ್ರದ ವಿಭಜನೆಯಿಂದ ಮಕ್ಕಳ ಮೇಲಾದ ಪರಿಣಾಮ, ಭಿಕ್ಷುಕರ ಸಂಸ್ಥೆಯ ಅನಿಷ್ಟ ಕಾರ್ಯ ಇಂತಹ ಇನ್ನೂ ಅನೇಕ ವಿಷಯಗಳನ್ನು ಕುರಿತು ನಮ್ಮ ಸೋದರಿಯರು ತಮ್ಮ ಸರಸ

ಶೈಲಿಯಲ್ಲಿ ಚಿತ್ರಗಳನ್ನು ಬಿಡಿಸಿ ಸಮಾಜದಲ್ಲಿ ಬೆಳಕನ್ನುಂಟು ಮಾಡಬಲ್ಲರು.

ವಾಸ್ತವಿಕತೆ ಆದರ್ಶವಾದಗಳ ಹೋರಾಟ ವಾಸ್ತವವಾಗಿ ಇದ್ದುದ್ದಕ್ಕಿಂತಲೂ ಹೆಚ್ಚಾಗಿ ಸಾಹಿತ್ಯದಲ್ಲಿ ಮೂಡಿಬರುತ್ತಿದೆ. ಆದರ್ಶ ಗುರಿ, ವಾಸ್ತವಿಕತೆ ದಾರಿ, ಅಂದಿನ ವಾಸ್ತವಿಕತೆ ಆದರ್ಶಗಳಿಗೂ ಇಂದಿನವುಗಳಿಗೂ, ತಲೆಮಾರುಗಳ ಅಂತರದಿಂದಾಗಿ ಸ್ವಲ್ಪ ವ್ಯತ್ಯಾಸವು ಕಂಡು ಬರಬಹುದು. ಕಲ್ಪನೆಯನ್ನು ಪ್ರತ್ಯಕ್ಷದಲ್ಲಿ ಕಾಣಬಯಸಿದ ಅಂದಿನ ಆಶೆಭರಿತ ಜೀವನಕ್ಕೂ ಪ್ರತ್ಯಕ್ಷದಲ್ಲಿ ಕಾಣದ್ದನ್ನು ಕಲ್ಪನೆಯಲ್ಲಾದರೂ ಕಾಣಬಯಸುವ ಇಂದಿನ ಜೀವನಕ್ಕೂ ವ್ಯತ್ಯಾಸವಿದೆ. ವಾಸ್ತವತೆಗೆ ಸತ್ಯ ಒರೆಗಲ್ಲು. ಬಳಿಕ ಸತ್ಯದ ಆಭಾಸದ ಮೇಲೆ ನಿಂತ ಅದ್ಭುತ ಕಲ್ಪನೆ. ಅಂಥ ರೂಢಿಗಳು ಹಿಂದೆ ಸರಿಯಲೇಬೇಕು. ವಾಸ್ತವ ಸಾಹಿತ್ಯವು ಸತ್ಯದ ಭಕ್ತಿ ಮಾನವತೆಯ ಪ್ರೇಮಗಳಿಂದ ಪ್ರೇರಿತವಾದುದು. ಸಮಾಜ ಸಾಹಿತ್ಯಗಳ ಜೀವನ ಸಂಬಂಧವನ್ನು ಸಾಹಿತ್ಯವೇ ದೃಢಗೊಳಿಸಬಲ್ಲದು.

ನವ್ಯತೆ, ಸೋದರಿಯರು ರಚಿಸಿದ ಕೆಲ ಕಥೆ-ಕವನಗಳಲ್ಲಿಯೂ ಕಂಡುಬರುತ್ತಿದೆ. ನವ್ಯತೆ ಎನ್ನುವದು ಶೈಲಿಯ ನವ್ಯತೆಯೂ ಅಲ್ಲ, ಶಬ್ದಪ್ರಯೋಗಗಳ ಸರ್ಕಸ್ಸು ಅಲ್ಲ. ಅದು ಇಂದಿನ ಪರಿಸರದಲ್ಲಿ ಮೂಡಿಬಂದಿರುವ ಒಂದು ವೈಚಾರಿಕ ಕ್ರಾಂತಿ. ಜೀವನದ ತೀವ್ರತೆ ಈ ನವ್ಯ ಕೃತಿಗಳಲ್ಲಿ ಭಾಸವಾಗುತ್ತದೆ. ನಿರ್ಜೀವ ಸಂಪ್ರದಾಯ, ಹತಾಶ ದೈವವಾದಗಳನ್ನು ಹತ್ತಿಕ್ಕಿ ವೈಚಾರಿಕ ಕ್ರಾಂತಿಯ ತೀವ್ರತೆಯನ್ನು ನವ್ಯತೆ ಚಿತ್ರಿಸುತ್ತದೆ. ರಾಜಲಕ್ಷ್ಮೀ ಈ ದಿಕ್ಕಿನಲ್ಲಿ ಕೆಲ ಸ್ತುತ್ಯ ಪ್ರಯೋಗಗಳನ್ನು ಮಾಡಿದ್ದಾರೆ.

ಹಿಂದಿನ ಪರಂಪರೆ ಹಾಗೂ ಇಂದಿನ ಜೀವನದ ತೀವ್ರತೆ ನವ್ಯತೆಗಳನ್ನು ಅರಗಿಸಿಕೊಂಡು ಸಂಕ್ರಾಂತಿಯ ಇಂದಿನ ಸಮಯದಲ್ಲಿ ನಾಡಿನ ಜನಜೀವನವನ್ನು ವ್ಯಕ್ತಿವಿಕಾಸವನ್ನೂ ರೂಪಿಸಬಲ್ಲ ಶಕ್ತಿ ಕನ್ನಡ ಸಾಹಿತ್ಯದಲ್ಲಿದೆ. ಇದನ್ನು ಅರ್ಥವತ್ತಾಗಿ ಗ್ರಹಿಸಿ, ಇಂದಿನ ಪ್ರಜಾತಂತ್ರದ ಪ್ರಜೆಯಾದ ಮಹಿಳೆಯು ತನ್ನ ಅಭಿವ್ಯಕ್ತಿಯ ಶಕ್ತಿಗೆ ಮೂರ್ತರೂಪ ಕೊಡಬೇಕು. ಅವಳ ಆಸೆ, ಭಯ, ಕಲ್ಪನೆ ಮತ್ತು ದೃಷ್ಟಿಕೋನಗಳನ್ನು ಇಂದು ವಿಜ್ಞಾನ ಮನೋವಿಜ್ಞಾನಗಳು ರೂಪಿಸುತ್ತಿವೆ. ವಿಶಾಲ ಪ್ರಪಂಚದಲ್ಲಿ ಬದುಕಬೇಕೆನ್ನುವ ಅವಳೂ ಸಮಸ್ಯೆಗಳನ್ನೆದುರಿಸಿಯೇ ಬದುಕಬೇಕು. ಈ ಹೋರಾಟ ಕಥೆ, ಕಾದಂಬರಿ, ನಾಟಕ, ಹರಟೆ, ಕವನ-ಯಾವುದಾದರ ಮೂಲಕವಾಗಿಯೂ ಅಭಿವ್ಯಕ್ತಿಯನ್ನು ಪಡೆಯಬಹುದು ಆದರೆ ಹೀಗೆ ಅಭಿವ್ಯಕ್ತಿಗೊಳಿಸುವ ಕಲೆ ಹಾಗೂ ಸಾಹಸಗಳು ಹೆಚ್ಚು ಜನ ಸೋದರಿಯರಲ್ಲಿಲ್ಲ. ಜಾನಪದ ಕವಯತ್ರಿಯರು ಅಂದಿನಿಂದ ಇಂದಿನವರೆಗೂ ಹಾಡುತ್ತಲೇ ಇದ್ದಾರೆ. ಅವರಿಗೆ ಹೊಸ ಸಂಸ್ಕೃತಿಯ ಸಂಪರ್ಕ ಬೇಕು. ಸುಶಿಕ್ಷಿತೆಯರು ಜಾನಪದ ಜೀವನ ತಿರುಳನ್ನರಿಯಬೇಕು. ಮಹಿಳೆಯ ಕಾರ್ಯಕ್ಷೇತ್ರ ಇಂದು ವ್ಯಾಪಕವಾಗಿದೆ. ಆದಕ್ಕನುಗುಣವಾಗಿ ಸಾಹಿತ್ಯವು ವಿಶಾಲದೃಷ್ಟಿವುಳ್ಳದ್ದಾಗಬೇಕು. ಶಕ್ತಿಯುತವಾಗಬೇಕು. ಅವರ ಭಾವನೆ ವಿಚಾರಗಳು ಅವಳವೇ ಆಗಿ ಹೊರಬರುವ ಆತ್ಮ ವಿಶ್ವಾಸದ ಪೀಠಿಕೆ ಅವಳದಾಗಬೇಕು. ಆಗಲೇ ನಾಡಿನ ಜನತೆಯಲ್ಲಿ ಚೈತನ್ಯವನ್ನು ತುಂಬಬಲ್ಲ ಸಾಹಿತ್ಯ ವ್ಯಾಪಕವಾಗಿ ಅವಳಿಂದ ನಿರ್ಮಾಣವಾದಿತು.

ಜೈ ಹಿಂದ್

1ನೇಯ ಘಟಿಕೋತ್ಸವ ಭಾಷಣ, 30-09-2009

*******



# ಅನುಬಂಧ

## 1. ವಾರ್ಷಿಕ ಘಟಿಕೋತ್ಸವಗಳ ವಿವರ

| ಕ್ರ. ಸಂ | ಘಟಿಕೋತ್ಸವದ ಸಂಖ್ಯೆ ಮತ್ತು ದಿನಾಂಕ | ಉನ್ನತ ಶಿಕ್ಷಣ ಸಚಿವರು (ಸಮಕುಲಾಧಿಪತಿಗಳು) | ಕುಲಪತಿಗಳು | ಮುಖ್ಯ ಅತಿಥಿಗಳು | ಗೌರವ ಡಾಕ್ಟರೇಟ್ ಪುರಸ್ಕೃತರು |
|---|---|---|---|---|---|
| 01 | ಒಂದನೆಯ-30-ಸೆಪ್ಟಂಬರ್ 2009 | ಶ್ರೀ. ಅರವಿಂದ ಲಿಂಬಾವಳಿ | ಡಾ. ಗೀತಾ ಬಾಲಿ | ಡಾ. ಸರೋಜನಿ ಮಹಿಷಿ | ಡಾ.ಸರೋಜನಿ ಮಹಿಷಿ<br>ಡಾ. ಕಿರಣಮಜುಂದಾರ್ ಷಾ<br>ಡಾ. ಶುಬದೇವ್ ತೋರಾಟ್<br>ಡಾ. ಗಂಗೂಬಾಯಿ ಹಾನಗಲ್(ಮರಣೋತ್ತರ) |
| 02 | ಎರಡನೆಯ-04 ಫೆಬ್ರವರಿ 2011 | ಡಾ.ವಿ.ಎಸ್.ಆಚಾರ್ಯ | ಡಾ. ಗೀತಾ ಬಾಲಿ | ಡಾ. ಡಿ. ಪುರಂದೇಶ್ವರಿ | ಶ್ರೀಮತಿ ವಿದ್ಯಾ ಮುರಕುಂಬಿ<br>ಡಾ. ಶಾ.ದಾ. ಅಜೂಬಕ್ಕರ<br>ಮಾಲತಿ ಹೊಳ್ಳ |
| 03 | ಮೂರನೆಯ-22 ಜನವರಿ 2012 | ಡಾ. ವಿ.ಎಸ್. ಆಚಾರ್ಯ | ಡಾ. ಗೀತಾ ಬಾಲಿ | ಶ್ರೀಮತಿ ವಿ.ಎಸ್. ರಮಾದೇವಿ | ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ<br>ನಾಗಮ್ಮ ಕೇಶವಮೂರ್ತಿ<br>ಶ್ರೀಮತಿ. ಅರುಂಧತಿನಾಗ<br>ಅಶ್ವಿನಿ ನಾಚಪ್ಪ |
| 04 | ನಾಲ್ಕನೆಯ-03 ಮಾರ್ಚ 2013 | ಶ್ರೀ. ಸಿ.ಟಿ ರವಿ | ಡಾ. ಮೀನಾ ಚಂದಾವರಕರ | ಶ್ರೀಮತಿ. ಮಂಜುಳಾ ಚೆಲ್ಲೂರ್ | ಡಾ. ಮೀರಾಕುಮಾರ<br>ಶ್ರೀಮತಿ. ಲೀಲಾದೇವಿ ಆರ್ ಪ್ರಸಾದ<br>ಡಾ. ವಿಜಯಲಕ್ಷ್ಮೀ ದೇಶಮಾನೆ<br>ಡಾ. ಶಾಲಿನಿ ರಜನೀಶ್<br>ಶ್ರೀಮತಿ. ಸಂಧ್ಯಾ ಪೈ |
| 05 | ಐದನೆಯ-27 ಜನವರಿ 2014 | ಶ್ರೀ. ಆರ್.ವಿ ದೇಶಪಾಂಡೆ | ಡಾ. ಮೀನಾ ಚಂದಾವರಕರ | ಡಾ. ವಿಲ್ಲೂ ಮೋರಾವಾಲಾ ಪಟೇಲ್ | ಲಲಿತಾ ಶ್ರೀನಿವಾಸನ್<br>ಮಾಧುರಿ ದೇವಧರ್<br>ಶ್ರೀಮತಿ. ಮೋಟಮ್ಮ<br>ಶ್ರೀಮತಿ. ಮೀರಾಶಾಯಿ ಕೊಪ್ಪಿಕರ್<br>ಶ್ರೀಮತಿ. ಶಾಂತಾದೇವಿ ಕಣವಿ<br>ಡಾ. ವಿಲ್ಲೂ ಮೋರಾವಾಲಾ ಪಟೇಲ |
| 06 | ಆರನೆಯ- 03 ಮಾರ್ಚ 2015 | ಶ್ರೀ. ಆರ್.ವಿ ದೇಶಪಾಂಡೆ | ಡಾ. ಮೀನಾ ಚಂದಾವರಕರ | ಪದ್ಮಭೂಷಣ ಡಾ. ಮಂಜು ಶರ್ಮಾ | ಶ್ರೀಮತಿ. ಇಂದುಮತಿರಾವ್<br>ಶ್ರೀಮತಿ. ಮಧು ಸಿಂಘಲ್<br>ಶ್ರೀಮತಿ. ವಿಲಾಸವತಿ ಖೂಬಾ<br>ಶ್ರೀಮತಿ. ಗುರಮ್ಮ ಸಂಕದ |
| 07 | ಏಳನೆಯ-04 ಮಾರ್ಚ 2016 | ಶ್ರೀ. ಟಿ.ಬಿ ಜಯಚಂದ್ರ | ಡಾ. ಮೀನಾ ಚಂದಾವರಕರ | ಡಾ. ನಂದಿತಾ ಕೃಷ್ಣಾ | - |
| 08 | ಎಂಟನೆಯ- 17 ಏಪ್ರಿಲ್ 2017 | ಶ್ರೀ. ಬಸವರಾಜ ರಾಯರಡ್ಡಿ | ಡಾ. ಸಬಿಹಾ ಭೂಮಿಗೌಡ | ಶ್ರೀಮತಿ. ಇಂದ್ರಾಣಿ ಕರುಣಾಸಾಗರ್ | ಶ್ರೀಮತಿ. ಮಲ್ಲಮ್ಮ ಯಾಳವಾರ |
| 09 | ಒಂಬತ್ತನೆಯ -22 ಜನವರಿ 2018 | ಶ್ರೀ. ಬಸವರಾಜ ರಾಯರಡ್ಡಿ | ಡಾ. ಸಬಿಹಾ ಭೂಮಿಗೌಡ | ಡಾ. ಶಶಿಕಲಾ ಗುರುಪುರ | ಡಾ. ಪಂಕಜ್ ಮಿತ್ತಲ್<br>ಡಾ. ಅನುರಾಧಾ |
| 10 | ಹತ್ತನೆಯ-13 ಫೆಬ್ರವರಿ 2019 | ಶ್ರೀ. ಜಿ. ಟಿ ದೇವೆಗೌಡ | ಡಾ. ಸಬಿಹಾ ಭೂಮಿಗೌಡ | ಶ್ರೀಮತಿ. ನೇಮಿಚಂದ್ರ | ಡಾ. ನಂದಾ ಪಾಟೀಲ್ |

# 2. ಘಟಿಕೋತ್ಸವದ ಅತಿಥಿಗಳ ಪರಿಚಯ

**ಶ್ರೀಮತಿ ನೇಮಿಚಂದ್ರ:** ಇವರೋರ್ವ ಬಹುಮುಖ ಪ್ರತಿಭೆಯ ಮತ್ತು ಚಲನಶೀಲ ವ್ಯಕ್ತಿತ್ವವುಳ್ಳವರು. ಹಲವು ಜನರಿಗೆ ಪ್ರೇರಣೆಯಾಗಿರುವ ಇವರು ವೃತ್ತಿಯಿಂದ ಇಂಜನಿಯರ್. ವಿದ್ಯುನ್ಮಾನ ಮತ್ತು ಸಂವಹನ ಶಾಸ್ತ್ರದಲ್ಲಿ ಇಂಜನಿಯರಿಂಗ್ ಪದವಿಯನ್ನು ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್, ಇಲ್ಲಿ ಮುಗಿಸಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್. ಪದವಿಯನ್ನು ಪಡೆದಿದ್ದಾರೆ.

ನೇಮಿಚಂದ್ರರ ವೃತ್ತಿ ಜೀವನವು 1985ರಲ್ಲಿ ಪ್ರತಿಷ್ಠಿತ ಹೆಚ್.ಎ.ಎಲ್. ಸಂಸ್ಥೆಯಲ್ಲಿ ಆರಂಭವಾಯಿತು. ಹೆಲಿಕಾಪ್ಟರ್ ಸಂಶೋಧನೆ ಮತ್ತು ವಿಸ್ತರಣೆ ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಆ ನಂತರದಲ್ಲಿ ಸುಧಾರಿತ ಹಗುರ ಯುದ್ಧವಿಮಾನ ತಯಾರಿಕೆಯ ತಾಂತ್ರಿಕ ಮುಖ್ಯಸ್ಥೆಯಾಗಿ ಹಾಗೂ ವಿನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಭೂದಳ, ವಾಯುದಳ ಮತ್ತು ನೌಕಾದಳಗಳ ಸಾಗಾಣಿಕಾ ಶಸ್ತ್ರ ಉಡ್ಡಾಣಶಾಸ್ತ್ರ ಸಮನ್ವಯತೆಯ ಅನುಭವವನ್ನು ಇವರು ಹೊಂದಿರುತ್ತಾರೆ. 2013 ರಿಂದ 2018ರವರೆಗೆ ಬಿಎಇ-ಹೆಚ್‌ಎಎಲ್ ಸಾಫ್ಟ್‌ವೇರ್ ಲಿಮಿಟೆಡ್‌ನ ನಾಮನಿರ್ದೇಶಿತ ನಿರ್ದೇಶಕಿಯಾಗಿದ್ದರು. ಸೇನಾ ಆವಿಷ್ಕಾರಗಳ ಸಂಘಟನೆಯ (ಡಿಫೆನ್ಸ್ ಇನ್ನೋವೇಶನ್ ಆರ್ಗನೈಜೇಷನ್) ಪ್ರಥಮ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಪ್ರಸ್ತುತ ನೇಮಿಚಂದ್ರ ಅವರು 'ಹೆಚ್.ಎ.ಎಲ್. ಮ್ಯಾನೇಜಮೆಂಟ್ ಅಕಾಡೆಮಿಯ' ಜನರಲ್ ಮ್ಯಾನೇಜರ್ ಮತ್ತು ಡೀನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಹೆಚ್.ಎ.ಎಲ್. ಅನ್ನು ೦ಜಿಅಖಿಇ ಯ ಮಾನ್ಯತೆಯ ಕೇಂದ್ರವಾಗಿ ಸ್ಥಾಪಿಸಿದ್ದಾರೆ. ವಾಯುಯಾನ ನಿರ್ವಹಣೆಯ ವಿಷಯದಲ್ಲಿ ಪಿಜಿ ಡಿಪ್ಲೋಮಾ, ಆಕಾಶಕಾಯ ನಿರ್ವಹಣೆಯಲ್ಲಿ ಸರ್ಟಿಫಿಕೇಟ್ ಕೋರ್ಸುಗಳನ್ನು ಅವರು ಆರಂಭಿಸಿದ್ದಾರೆ. ಅವರು 2017ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನವರು ನೀಡಿದ 'ದೇವಿ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.



ಅಂತರಿಕ್ಷಯಾನ ಮಹಿಳಾ ಸಾಧಕಿ ಪ್ರಶಸ್ತಿಯನ್ನು 2017ರಲ್ಲಿ ಭಾರತೀಯ ಅಂತರಿಕ್ಷಯಾನ ತಂತ್ರಜ್ಞಾನ ಮತ್ತು ಕೈಗಾರಿಕಾ ಸೊಸೈಟಿಯಿಂದ ಪಡೆದುಕೊಂಡಿರುತ್ತಾರೆ. ಕರ್ನಾಟಕ ಸರ್ಕಾರವು ಮಹಿಳಾ ಸಾಧಕಿಯಾಗಿ ಗುರುತಿಸಿ ಅವರ ಜೀವನ ಕುರಿತು ಸಾಕ್ಷ್ಯಚಿತ್ರ ತಯಾರಿಸಿದೆ.

ಓರ್ವ ಸಮರ್ಥ ಇಂಜನಿಯರಾಗಿರುವಂತೆಯೇ, ಶ್ರೀಮತಿ ನೇಮಿಚಂದ್ರ ಅವರು ಪ್ರಖ್ಯಾತ ಕನ್ನಡದ ಬರಹಗಾರ್ತಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಅವರು 30 ಕೃತಿಗಳನ್ನು ರಚಿಸಿದ್ದು, ಅವು ವಿಜ್ಞಾನ, ಸಾಹಿತ್ಯ, ಪ್ರವಾಸ ಕಥನ ಹಾಗೂ ಮಹಿಳಾ ಅಧ್ಯಯನಗಳಿಗೆ ಸಂಬಂಧಿಸಿವೆ. ಅವರು ರಚಿಸಿರುವ 'ಬೆಳಕಿನೊಂದು ಕಿರಣ ಮೇರಿ ಕ್ಯೂರಿ', 'ಪೆರುವಿನ ಪವಿತ್ರ ಕಣಿವೆಯಲ್ಲಿ' ಮತ್ತು 'ಯಾದ್ ವಶೇಮ್' ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಯೂ ಅವರಿಗೆ ಸಂದಿದೆ. ಅವರು ಬರೆದ ಕೃತಿಗಳು ರಾಜ್ಯದ ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಹಂಪಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಪ್ರಬಂಧಗಳಿಗೆ ವಿಷಯಗಳಾಗಿರುವುದು ಉಲ್ಲೇಖಾರ್ಹವಾಗಿದೆ.

ನೇಮಿಚಂದ್ರರ ಕಥೆಗಳು (ಸಮಗ್ರ ಕಥಾಸಂಕಲನ), ನೋವಿಗದ್ದಿದ ಕುಂಚ, ಥಾಮಸ್ ಆಲ್ವಾ ಎಡಿಸನ್, ಬೆಳೆಗೆರೆ ಜಾನಕಮ್ಮ-ಬದುಕು-ಬರಹ, ನ್ಯಾಯಕ್ಕಾಗಿ ಕಾದಿರುವ ಬಾಂಪ್ರಿದೇವಿ (ಜೀವನಚರಿತ್ರೆ), ಒಂದು ಕನಸಿನ ಪಯಣ (ಪ್ರವಾಸ ಕಥನ), ಕಾಲು ಹಾದಿಯ ಕೋಲ್ಮಿಂಚುಗಳು-ಮಹಿಳಾ ವಿಜ್ಞಾನಿಗಳು, ಸಾಹಿತ್ಯ ಮತ್ತು ವಿಜ್ಞಾನ (ಮಹಿಳಾ ಅಧ್ಯಯನ), ಬದುಕು ಬದಲಿಸಬಹುದು, ಸಾವೇ ಬರುವುದಿದ್ದರೆ ನಾಳೆ ಬಾ, ಸೋಲೆಂಬುದು ಅಲ್ಪವಿರಾಮ (ಅಂಕಣ ಬರಹ ಸಂಗ್ರಹ) ಹೀಗೆ ವೈವಿಧ್ಯಮಯವಾದ ಸಾಹಿತ್ಯ ಶ್ರೀಮತಿ ನೇಮಿಚಂದ್ರ ಅವರಿಂದ ರಚನೆಗೊಂಡಿದೆ.

ವಿಜ್ಞಾನ ಮತ್ತು ಸಾಹಿತ್ಯ ಎರಡನ್ನೂ ಪ್ರೀತಿಸುತ್ತಾ ಈ ದೇಶದ ಬಹುದೊಡ್ಡ ಇಂಜನಿಯರಾಗಿ, ಬರಹಗಾರ್ತಿಯಾಗಿರುವ ನೇಮಿಚಂದ್ರ, ಅವರಿಗೆ ರಾಜ್ಯದ ದೇಶದೆಲ್ಲೆಡೆಯಿಂದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಶಿವರಾಮ ಕಾರಂತ ಪ್ರಶಸ್ತಿ, ಹಾ.ಮಾ.ನಾಯಕ ಪ್ರಶಸ್ತಿ, ಸಿದ್ಧವನಹಳ್ಳಿ ಕೃಷ್ಣಶರ್ಮ ಪ್ರಶಸ್ತಿ, ಇಂದಿರಾತನಯ ಪ್ರಶಸ್ತಿ, ಮಾಸ್ತಿ ವೆಂಕಟೇಶ ಐಯ್ಯಂಗಾರ್ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಗೊರೂರು ಪ್ರಶಸ್ತಿ ಹಾಗೂ ಅಕ್ಕ ಪ್ರಶಸ್ತಿಗಳು ಲಭಿಸಿವೆ.

***

**ಡಾ. ಶಶಿಕಲಾ ಗುರುಪುರ:** ಹಲವು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿರುವ ಇವರದು ಬಹುಮುಖ ಪ್ರತಿಭೆ. ತಮ್ಮ ಆರಂಭಿಕ ಶಾಲಾ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಮಂಗಳೂರ ಸಮಿಪದ ಗುರುಪುರನಲ್ಲಿ ಮುಗಿಸಿದ ಇವರು, ಮಂಗಳೂರು ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದರು. ಪಿಎಚ್.

ಡಿಯನ್ನು ಅಂತಾರಾಷ್ಟ್ರೀಯ ಕಾನೂನು ವಿಷಯದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಮುಗಿಸಿದರು. ಎಲ್.ಎಲ್.ಎಂ ಪದವಿಯನ್ನು ಬಂಗಾರದ ಪದಕದೊಂದಿಗೆ ಪಡೆದುಕೊಂಡ ಹೆಗ್ಗಳಿಕೆ ಇವರದು. ಡಾ ಶಶಿಕಲಾರವರು ಪ್ರತಿಭಾನ್ವಿತರು, ಶ್ರೇಷ್ಠ ಕಾನೂನು ತಜ್ಞರು. 200 ಕ್ಕೂ ಹೆಚ್ಚು ಆಹ್ವಾನಿತ ಉಪನ್ಯಾಸಗಳನ್ನು ಸಮ್ಮೇಳನ, ವಿಚಾರ ಸಂಕಿರಣಗಳಲ್ಲಿ ನೀಡಿದ್ದಾರೆ ಹಾಗೂ ಪ್ರಬಂಧ ಮಂಡಿಸಿದ್ದಾರೆ. ಭಾರತದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅಲ್ಲದೇ ಥೈಲ್ಯಾಂಡ್, ಅಮೇರಿಕಾ, ಇಂಗ್ಲೆಂಡ್, ಐರ್ಲ್ಯಾಂಡ್, ಜರ್ಮನಿ, ಆಸ್ಟ್ರೇಲಿಯಾ, ಕೆನಡಾ ಮತ್ತು ಯು.ಎ.ಇ ಗಳಲ್ಲಿಯೂ ಸಹ ಪ್ರಬಂಧಗಳನ್ನು ಮಂಡಿಸಿದ್ದಾರೆ. ತಮ್ಮ ವೃತ್ತಿ ಬದುಕಿನಲ್ಲಿ ವೈವಿಧ್ಯಮಯವಾದ ಬೋಧನೆ ಸಂಶೋಧನೆ ಮತ್ತು ತಜ್ಞತೆಯಿಂದ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುತ್ತಾರೆ. ಪ್ರಸ್ತುತ ಪುಣೆಯಲ್ಲಿ ಸಿಂಬಯಾಸಿಸ್ ಲಾ ಸ್ಕೂಲ್‌ನಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಾನೂನು ಶಿಕ್ಷಣದ ಅಪಾರ ಅನುಭವದ ನೆಲೆಯಲ್ಲಿ ಕಾನೂನು ಸಾಕ್ಷರತೆ ಮತ್ತು ಜಂಡರ್ ತರಬೇತಿಯನ್ನು ನೀಡುವ ಸ್ವಯಂ ಸೇವಾ ಸಂಸ್ಥೆಯಲ್ಲಿ 3 ವರ್ಷದವರೆಗೆ ಸಹ ನಿರ್ದೇಶಕರಾಗಿ ಸೇವೆ ಮಾಡಿದರು. ಅಬುದಾಬಿಯಲ್ಲಿ ಮಾನವ ಸಂಪನ್ಮೂಲ ನಿರ್ವಾಹಕಿ ಮತ್ತು ಆಡಳಿತಗಾರರಾಗಿ ನಾಲ್ಕು ವರ್ಷಗಳ ವರೆಗೆ ಸೇವೆಯನ್ನು ನಿರ್ವಹಿಸಿದ್ದಾರೆ. ಒಟ್ಟು 24 ವರ್ಷಗಳ ದೀರ್ಘ ಬೋಧನಾ ಅನುಭವವನ್ನು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿಯೇ ನಿರ್ವಹಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು, ಎಸ್.ಡಿ.ಎಂ ಕಾನೂನು ಕಾಲೇಜು ಮಂಗಳೂರು, ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್, ಮಾಹೆ, ಮಣಿಪಾಲ ಹಾಗೂ ಕಾರ್ಕ ಯುನಿವರ್ಸಿಟಿ ಕಾಲೇಜ್, ಐರಲ್ಯಾಂಡ್‌ಗಳಲ್ಲಿ ಬೋಧನಾ ಕಾರ್ಯ ನಿರ್ವಹಿಸಿದ್ದಾರೆ.

ಪ್ರೊ. ಶಶಿಕಲಾರವರು ಕಾನೂನು ಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಜ್ಞಾನ ಶಾಖೆಗಳ ಕುರಿತು ಬೋಧನೆ ಮತ್ತು ಸಂಶೋಧನಾ ಅನುಭವ ಹೊಂದಿದ್ದಾರೆ. ನ್ಯಾಯಶಾಸ್ತ್ರ, ಮಾಧ್ಯಮ ಕಾನೂನು, ಅಂತಾರಾಷ್ಟ್ರೀಯ ಕಾನೂನು, ಮಾನವ ಹಕ್ಕುಗಳು, ಬೋಧನಾ ಸಂಶೋಧನಾ ವಿಧಾನ, ಮಹಿಳಾ ನ್ಯಾಯಶಾಸ್ತ್ರ ಅಧ್ಯಯನ, ಜೈವಿಕ ತಂತ್ರಜ್ಞಾನ ಕಾನೂನು, ಕಾನೂನು ಮತ್ತು ಸಾಮಾಜಿಕ ಪರಿವರ್ತನೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿಯನ್ನು ಹೊಂದಿದ್ದು, 12 ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

***



**ಪ್ರೊ. ಡಾ. ಇಂದ್ರಾಣಿ ಕರುಣಾಸಾಗರ:** ಹಲವು ಪ್ರಮುಖ ಜವಾಬ್ದಾರಿಗಳ ಹೊಣೆಗಾರಿಕೆಯನ್ನು ನಿರ್ವಹಿಸಿರುವ ಅವರದು ಬಹುಮುಖ ಪ್ರತಿಭೆ. ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿನಲ್ಲಿ ಸೂಕ್ಷ್ಮಜೀವಾಣುಶಾಸ್ತ್ರದ ಉಪನ್ಯಾಸಕರಾಗಿ 1976ರಲ್ಲಿ ವೃತ್ತಿ ಜೀವನ ಆರಂಭಿಸಿದರು. ಸದ್ಯ ಅವರು ನಿಟ್ಟೆ ವಿಶ್ವವಿದ್ಯಾಲಯದ ನಿರ್ದೇಶಕರು (ಆರ್ &ಡಿ), ಯುನೆಸ್ಕೊ ಎಂಐಆರ್ ಸಿಇಎನ ವೈದ್ಯಕೀಯ ಮತ್ತು ಸಾಗರ ಜೈವಿಕ ತಂತ್ರಜ್ಞಾನ ವಿಭಾಗದ ನಿರ್ದೇಶಕರು, ಜೈವಿಕವೈದ್ಯಕೀಯ ವಿಜ್ಞಾನಗಳ ವಿಭಾಗದ ಡೀನ್, ಮತ್ತು ನಿಟ್ಟೆ ವಿಶ್ವವಿದ್ಯಾಲಯದ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರು.

ಸ್ಟರ್ಲಿಂಗ್ ವಿಶ್ವವಿದ್ಯಾಲಯದ ಮೀನುಕೃಷಿ ಅಧ್ಯಯನ ಕೇಂದ್ರದಲ್ಲಿ 1991ರ ಮಾರ್ಚ್‌ನಿಂದ ಆಗಸ್ಟ್ ವರೆಗೆ ಅಧ್ಯಯನ ನಡೆಸಿದ ಅವರು ರೋಗಸೂಕ್ಷ್ಮಾಣುಗಳ ವೈಜ್ಞಾನಿಕ ಅಧ್ಯಯನಕ್ಕಾಗಿ ಬ್ರಿಟಿಷ್ ಕೌನ್ಸಿಲ್ ನೀಡುವ ಫೆಲೋಷಿಪ್ ಪಡೆದುಕೊಂಡಿದ್ದರು. 1993ರಲ್ಲಿ ಡೆನ್ಮಾರ್ಕ್‌ನ ಕೂಪೆನ್ ಹ್ಯಾಗನ್ ವಿಶ್ವವಿದ್ಯಾಲಯದಲ್ಲಿ ಐಬಿಸಿ/ಡಿಎಎನ್‌ಐಡಿಎ ಫೆಲೋ ಆಗಿದ್ದರು. 1995ರ ಸೆಪ್ಟೆಂಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಅಮೆರಿಕಾದ ಮೇರಿಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಜೈವಿಕತಂತ್ರಜ್ಞಾನದ ಅಧ್ಯಯನಕ್ಕಾಗಿ ಯುನೆಸ್ಕೋ ಫೆಲೋ ಪಡೆದಿದ್ದರು. 1999ರ ಏಪ್ರಿಲ್-ಜುಲೈ ಅವಧಿಯಲ್ಲಿ ಅಮೆರಿಕಾದ ಬಾಲ್ಟಿಮೋರ್‌ನಲ್ಲಿ ಸಾಗರ ಜೈವಿಕ ತಂತ್ರಜ್ಞಾನ ಕೇಂದ್ರದಲ್ಲಿ ಭಾರತ ಸರಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಸಾಗರೋತ್ತರ ಪ್ರತಿನಿಧಿಯಾಗಿದ್ದರು. 2000-2006ರ ನಡುವಿನ ಅವಧಿಯಲ್ಲಿ ಮತ್ತು 2011ರಲ್ಲಿ ಡಾ.ಇಂದ್ರಾಣಿ ಅವರು ಜರ್ಮನಿಯ ಉರ್ಜ್‌ಬರ್ಗ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 2006ರಿಂದ ಬೆಲ್ಜಿಯಂನ ಘೇಂಟ್ ವಿಶ್ವವಿದ್ಯಾಲಯ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

ಡಾ.ಇಂದ್ರಾಣಿ ಅವರು ಭಾರತ- ಆಸ್ಟ್ರೇಲಿಯಾ, ಭಾರತ-ನಾರ್ವೆ, ಭಾರತ-ಸ್ವೀಡಿಷ್, ಭಾರತ-ಜರ್ಮನ್, ಭಾರತ-ಬೆಲ್ಜಿಯಂ, ಭಾರತ-ಶ್ರೀಲಂಕಾ, ಭಾರತ-ಜಪಾನ್, ಸಾಗರೋತ್ತರ ಅಭಿವೃದ್ಧಿ ಘಟಕ (ಯುಕೆ) ಮತ್ತು ಅಂತಾರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ (ಐಎಫ್‌ಎಸ್), ಏಷ್ಯಾ- ಪೆಸಿಫಿಕ್ (ಎನ್‌ಎಸಿಎ)ನ ಮೀನುಕೃಷಿ ಕೇಂದ್ರದ ಯೋಜನೆಯ ಪ್ರಮುಖ ಸಂಶೋಧಕಿಯಾಗಿದ್ದಾರೆ. ಜೈವಿಕತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತೀಯ ವೈದ್ಯಕೀಯ ಸಂಶೋಧನ ಪರಿಷತ್ತು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಪರಿಷತ್ತಿನಂತಹ ರಾಷ್ಟ್ರಮಟ್ಟದ ಸಂಸ್ಥೆಗಳಿಂದ ಸಂಶೋಧನೆಗಾಗಿ ಧನಸಹಾಯ ಪಡೆದಿದ್ದಾರೆ. 50ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಶೋಧನಾ ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಿರುವ ಅವರು ಈಗ 12ಕ್ಕೂ ಹೆಚ್ಚು ವಿವಿಧ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವವಿಜ್ಞಾನಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡುತ್ತಿದ್ದಾರೆ.

ಡಾ.ಇಂದ್ರಾಣಿ ಅವರಿಗೆ ಹಲವು ಪ್ರಶಸ್ತಿ ಮತ್ತು ಫೆಲೋಷಿಪ್‌ಗಳು ಸಂದಿವೆ.

ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವವರ ಜೀವಮಾನದ ಸಾಧನೆಗಾಗಿ ಕರ್ನಾಟಕ ಸರಕಾರ ನೀಡುವ ಸರ್ ಎಂ ವಿಶ್ವೇಶ್ವರಯ್ಯ ಪ್ರಶಸ್ತಿ– 2014; ಭಾರತ ಸರಕಾರದ ಜೈವಿಕ ತಂತ್ರಜ್ಞಾನ ಇಲಾಖೆ ನೀಡುವ ರಾಷ್ಟ್ರೀಯ ತಂತ್ರಜ್ಞಾನ ಅಭಿವೃದ್ಧಿ ಪ್ರಶಸ್ತಿ–2014; ಗಣನೀಯ ಸಾಧನೆಗಾಗಿ ವೈರಾಲಜಿ ಮತ್ತು ಇಮ್ಯುನಾಲಜಿಯ ಅಮಿಟ ವಿಶ್ವವಿದ್ಯಾಲಯ ನೀಡುವ ರೋಗಸೂಕ್ಷ್ಮಾಣುಗಳ ವೈಜ್ಞಾನಿಕ ಅಧ್ಯಯನ ಪ್ರಶಸ್ತಿ –2013; ಹೀಗೆ ಅವರು ಪಡೆದಿರುವ ಪ್ರಶಸ್ತಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ತಮ್ಮ ಹೆಸರಿನಲ್ಲಿ ಐದು ಹಕ್ಕುಸ್ವಾಮ್ಯದ ಸನದು ಹೊಂದಿರುವ ಡಾ.ಇಂದ್ರಾಣಿ ಅವರು ತಂತ್ರಜ್ಞಾನ ಕ್ಷೇತ್ರಕ್ಕೆ ಅಸಾಧಾರಣ ಕೊಡುಗೆ ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು ಹೀಗಿವೆ: ಸೀಗಡಿ ಮತ್ತು ಸಿಹಿನೀರಿನ ಸೀಗಡಿಗಳಿಗೆ ಪ್ರತಿರಕ್ಷಾ ಉದ್ದೀಪನ, ಸೀಗಡಿಗಳಿಗೆ ಸೂಕ್ಷ್ಮ ಕ್ರಿಮಿಗಳ ರೋಗ ನಿಯಂತ್ರಣಕ್ಕಾಗಿ ವೈರಸ್‌ಗಳ ಪತ್ತೆ ಮತ್ತು ಜೈವಿಕ ನಿಯಂತ್ರಣ ಮಧ್ಯವರ್ತಿಗಳ ಬಳಕೆಯ ತಂತ್ರಗಳು; ಡಾ.ಇಂದ್ರಾಣಿಯವರು 40 ವಿದ್ಯಾರ್ಥಿಗಳನ್ನು ಪಿಎಚ್.ಡಿ. ಪದವಿಗಾಗಿ ಮತ್ತು 35 ಎಂ.ಎಫ್. ಎಸ್ಸಿ ಪದವಿಗಾಗಿ ಮಾರ್ಗದರ್ಶನ ಮಾಡಿದ್ದಾರೆ. 200ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಮುಖ ಅಂತಾರಾಷ್ಟ್ರೀಯ ವೈಜ್ಞಾನಿಕ ಜರ್ನಲ್‌ಗಳಲ್ಲಿ ಹಾಗೂ 95 ಲೇಖನಗಳನ್ನು ಮಹತ್ವದ ರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಿರುವ ಡಾ.ಇಂದ್ರಾಣಿ ಅವರ ಎಚ್ ಇಂಡೆಕ್ಸ್ 38. ಡಾ. ಇಂದ್ರಾಣಿ ಅವರು ಜೈವಿಕ ತಂತ್ರಜ್ಞಾನದ ಸಾಮಾಜಿಕ ಅಳವಡಿಕೆಯ ಕ್ಷೇತ್ರದಲ್ಲಿ ನಿಯಮಿತವಾಗಿ ತೊಡಗಿಸಿಕೊಂಡಿದ್ದಾರೆ.

***



**ಶ್ರೀಮತಿ ನಂದಿತಾ ಕೃಷ್ಣಾ:** ಇವರು ಒಬ್ಬ ಇತಿಹಾಸ ತಜ್ಞೆ, ಲೇಖಕಿ ಹಾಗೂ ಪರಿಸರವಾದಿಯಾಗಿದ್ದು ಸದ್ಯ ಚೆನ್ನೈನಲ್ಲಿ ನೆಲೆಸಿದ್ದಾರೆ. ಶ್ರೀಮತಿ ನಂದಿತಾ ಕೃಷ್ಣಾ ಅವರು ಮುಂಬೈ ವಿಶ್ವವಿದ್ಯಾಲಯದಿಂದ ಭಾರತೀಯ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ ವಿಷಯ ಕುರಿತು ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಅವರು ಮದ್ರಾಸ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ಹಾಗೂ ಸಂಶೋಧನಾ ಮಾರ್ಗದರ್ಶಿಯಾಗಿದ್ದಾರೆ.

ಶ್ರೀಮತಿ ನಂದಿತಾ ಕೃಷ್ಣಾ ಅವರು ಸಿ.ಪಿ. ರಾಮಸ್ವಾಮಿ ಅಯ್ಯರ್ ಪ್ರತಿಷ್ಠಾನದ ನಿರ್ದೇಶಕರಾಗಿ, ಅದರ ಆಧೀನ ಹಲವಾರು ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಉದಾಹರಣೆಗಾಗಿ ಸಿ. ಪಿ. ಕಲಾಕೇಂದ್ರ, ಸಿ.ಪಿ.ಆರ್. ಇನ್‌ಸ್ಟಿಟ್ಯೂಟ್ ಆಫ್ ಇಂಡೋಲಾಜಿಕಲ್ ರಿಸರ್ಚ್ ಸಂಸ್ಥೆ, ಮಕ್ಕಳ ಕಲಿಕೆಯ ಸರಸ್ವತಿ ಕೇಂದ್ರ, ಚೆನ್ನೈನ ಗ್ರೂಪ್ ಶಾಲೆ, ಕಾಂಚಿಪುರಂನ ಜಾನಪದ ಕಲೆ ಮತ್ತು ವಸ್ತುಸಂಗ್ರಹಾಲಯ, ಕುಂಬಕೋಣಂನ ಸಿ.ಪಿ. ರಾಮಸ್ವಾಮಿ ಅಯ್ಯರ್ ಸ್ಮಾರಕ, ನರ್ಸರಿ ಮತ್ತು ಪ್ರಾಥಮಿಕ ಶಾಲೆ ಹಾಗೂ ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ ಮಾನ್ಯತೆ ಪಡೆದ ಪರಿಸರ ಶಿಕ್ಷಣ ಸಂಸ್ಥೆ ಇವೇ ಮುಂತಾದವುಗಳ ಅವರ ನಾಯಕತ್ವದಲ್ಲಿ ಬೆಳೆದ ಸಂಸ್ಥೆಗಳಾಗಿವೆ. ಅವರು ಕಾಂಚೀವರಮ್‌ದ ಹಿಂದು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಕಾಂಚಿಪುರಂನ ಬ್ಲ್ಯೂ ಕ್ರಾಸ್ ಸೊಸಾಯಿಟಿಯ ಸದಸ್ಯರು, ಚೆನ್ನೈನ ಎನ್ ಕೆ ಟಿ ಶಿಕ್ಷಣ ಸಂಸ್ಥೆಯ ನಿರ್ದೇಶಕರೂ ಆಗಿದ್ದಾರೆ. ಅವರು ಇಂಡಿಯನ್ ಜರ್ನಲ್ ಆಫ್ ಎನ್ವಿರಾನಮೆಂಟಲ್ ಎಜ್ಯುಕೇಶನ್ ಹಾಗೂ ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರ್ ಇವುಗಳ ಸಂಚಾಲಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀಮತಿ ನಂದಿತಾ ಕೃಷ್ಣಾ ಅವರು ಒಬ್ಬ ನುರಿತ ಲೇಖಕಿಯಾಗಿದ್ದು ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಸೆಕ್ರೆಡ್ ಪ್ಲ್ಯಾಂಟ್ಸ್ ಆಫ್ ಇಂಡಿಯಾ, ಮದ್ರಾಸ ದೆನ್ ಆ್ಯಂಡ್ ನೌ, ಸೆಕ್ರೆಡ್ ಆ್ಯನಿಮಲ್ಸ್ ಆಫ್ ಇಂಡಿಯಾ, ಬುಕ್ ಆಫ್ ಡೆಮನ್ಸ್, ಬುಕ್ ಆಫ್ ವಿಷ್ಣು, ಬಾಲಾಜಿ ವೆಂಕಟೇಶ್ವರ, ಗಣೇಶ, ವಿ ಆರ್ಟ್ ಆ್ಯಂಡ್ ಆಫ್ ತಮಿಳನಾಡು ಮೊದಲಾದವುಗಳನ್ನು ಹೆಸರಿಸಬಹುದು.

***

**ಡಾ. ಮಂಜು ಶರ್ಮಾ** : ಅವರು 1940 ಫೆಬ್ರವರಿ ತಿಂಗಳಲ್ಲಿ ಜನಿಸಿದರು. 1961ರಲ್ಲಿ ಲಕ್ನೋ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದುಕೊಂಡರು. ನಂತರ ಅಮೇರಿಕದ ಪರಡ್ಯೂ ವಿಶ್ವವಿದ್ಯಾಲಯದಲ್ಲಿ ಪೋಸ್ಟ್ ಡಾಕ್ಟರಲ್ ಪದವಿ ಪಡೆದರು. ಮಲೇಶಿಯಾದ ರಬ್ಬರ್ ಪ್ಲ್ಯಾಂಟೇಶನ್ ಬಗ್ಗೆ ಇವರು ಮಾಡಿದ ಸಂಶೋಧನೆ ಜಗತ್ತಿನ ಗಮನ ಸೆಳೆದಿದೆ. ಭಾರತೀಯ ಔಷಧೀಯ ಸಸ್ಯಗಳ ಬಗ್ಗೆ ಇವರು ಮಾಡಿದ ಸಂಶೋಧನೆ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ. ಡಾ. ಮಂಜು ಶರ್ಮಾ ಅವರು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಯಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಈಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ರೀಸರ್ಚ್ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯಕಾರಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಜೈವಿಕ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿ ಗಳಿಸಿದ್ದಾರೆ. ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಯೋಜನಾ ಆಯೋಗ, ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹಾ ಕಚೇರಿಗಳಲ್ಲಿ 1974ರಿಂದ ವಿವಿಧ ಹುದ್ದೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಇವರ ಸ್ಮರಣೀಯ ಸೇವೆಗೆ ಪ್ರತಿಫಲವಾಗಿ ಭಾರತ ಸರ್ಕಾರವು ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೇ, ಹಿರಿಯ ಮಹಿಳಾ ಜೀವ ವಿಜ್ಞಾನಿ ರಾಷ್ಟ್ರೀಯ ಪ್ರಶಸ್ತಿ, ಓಂಪ್ರಕಾಶ ಪ್ಲಾಟಿನಂ ಜುಬಿಲಿ ಚಿನ್ನದ ಪದಕ, BIOSPECTRUM ಜೀವಮಾನ ಸಾಧನೆ ಪ್ರಶಸ್ತಿಗಳು ಇವರಿಗೆ ಲಭಿಸಿವೆ.

***



**ಡಾ. ವಿಲ್ಲೂ ಮೊರಾವಾಲ ಪಟೇಲ್**: ಅವರು ಅವೆಸ್ಥಾಜೆನ್ ಲಿಮಿಟೆಡ್ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದು, ಗುಜರಾತ್‌ನ ನವಾರ್ಸಿ ಎಂಬಲ್ಲಿ ಜೂನ್ 18, 1955 ರಲ್ಲಿ ಜನಿಸಿದರು. ಅವರು ತೆಲಂಗಾಣ ಜಿಲ್ಲೆಯ ನಿಜಾಮಾಬಾದ್‌ನಲ್ಲಿ ಪಾಲಕರಾದ ದರಾ ದಿನ್ಶಾ ಮೊರವಾಲಾ ಮತ್ತು ದೌಲತ್ ಸೊರಬ್ಜಿ ಕಸಬ್, ಸೋದರ ಮಹಿಯಾರ್, ಸೋದರಿ ಭಕ್ತಾವರ್ ಅವರೊಂದಿಗೆ ಬೆಳೆದರು. ನಂತರ ಹೈದ್ರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿ, ಬಾಂಬೆ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಪದವಿ ಪಡೆದರು. ಫ್ರಾನ್ಸ್‌ನ ಸ್ಟ್ರಾಸ್‌ಬರ್ಗ್‌ನಲ್ಲಿರುವ ಲೂಯಿ ಪ್ಯಾಶ್ಚರ್ ವಿಶ್ವವಿದ್ಯಾಲಯದಿಂದ ಪೋಸ್ಟ್ ಡಾಕ್ಟರಲ್ ಅಧ್ಯಯನ ನಡೆಸಿದರು.

1978ರಲ್ಲಿ ಅವರು ಜಾರ್ಘ್ ಪಿಯಾನಿಸ್ಟ್ ಝುರೀರ್ ಎಂಬುವರನ್ನು ವಿವಾಹವಾದರು. ಝುರೀರ್ ಅವರು ಡಾ. ರಷೀದ್ ರಿಪೋರ್ಟರ್ ಮತ್ತು ಮಿನೂ ಪಟೇಲ್ ಎಂಬುವರ ಪುತ್ರ. ಡಾ. ವಿಲ್ಲೂ ಅವರಿಗೆ 26 ವರ್ಷದ ಫರ್ಹಾ ಎಂಬ ಮಗಳು ಮತ್ತು 24ರ ಹರೆಯದ ಸನಯಾ ಎಂಬ ಪುತ್ರರಿದ್ದಾರೆ. ಇವರಿಬ್ಬರೂ ಇಂಗ್ಲೆಂಡ್‌ನ ಕೇಂಬ್ರಿಜ್ ವಿಶ್ವವಿದ್ಯಾಲಯದ ಪಿಎಚ್.ಡಿ. ವಿದ್ಯಾರ್ಥಿಗಳು. ಈಚೆಗೆ ಅವರು ಅವೆಸ್ಥಾಜೆನ್‌ನ ಬೋರ್ಡ್ ಮೆಂಬರ್‌ಗಳಾಗಿ ನೇಮಕವಾಗಿದ್ದಾರೆ.

ಡಾ. ವಿಲ್ಲೂ ಪಟೇಲ್ ಅವರು ತಮ್ಮ ವೃತ್ತಿ ಜೀವನವನ್ನು 1978ರಲ್ಲಿ ಹೈದ್ರಾಬಾದ್‌ನ ಇಂಟರ್‌ನ್ಯಾಶನಲ್ ಕ್ರಾಪ್ಸ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಫಾರ್ ಸೆಮಿ ಆರಿಡ್ ಟ್ರಾಪಿಕ್ಸ್ ಎಂಬ ಸಂಸ್ಥೆಯಲ್ಲಿ ಪ್ರಾರಂಭಿಸಿದರು. ಅವರು ದ್ವಿದಳ ಸಸ್ಯಗಳ ಬೀಜಕೋಶದಲ್ಲಿ ಸಾರಜನಕ ಸ್ಥಿರೀಕರಣ ಜೈವಿಕ ರಸಾಯನ ಹಾಗೂ ಬರ ಸಹಿಷ್ಣುತೆ ಸ್ಕ್ರೀನಿಂಗ್ ತಂತ್ರ ಪ್ರಮಾಣೀಕರಣ ಕುರಿತ ಯೋಜನೆಗಳಲ್ಲಿ ಕೆಲಸ ಮಾಡಿದರು. ಅಲ್ಲದೆ, ರಾಗಿ ಮತ್ತು ಹುಲ್ಲುಜೋಳಗಳ ಹೀಟ್‌ಶಾಕ್ ಪ್ರೋಟೀನುಗಳ ಕುರಿತಂತೆಯೂ ಸಂಶೋಧನೆ ನಡೆಸಿದರು.

ಸಸ್ಯ ಅಣುಜೀವಿ ವಿಜ್ಞಾನದ ಮೇಲೆ ಡಾ. ವಿಲ್ಲೂ ಪಟೇಲ್ ಅವರು ನಡೆಸಿದ ಪಿಎಚ್.ಡಿ. ಅಧ್ಯಯನವು ಹೊಸ ಉತ್ಪನ್ನಗಳ ಅಭಿವೃದ್ಧಿಗೆ ಪ್ರೇರಣೆಯಾಯಿತು. ಅವರು ಪಿಎಚ್.ಡಿ.ಯೋತ್ತರ ಅಧ್ಯಯನವನ್ನು ಬೆಲ್ಜಿಯಂನಿಂದ ಘೆಂಟ್ ವಿಶ್ವವಿದ್ಯಾಲಯದಲ್ಲಿ 9ತಿಂಗಳ ಕಾಲ ನಡೆಸಿದರು. ಭಾರತಕ್ಕೆ ಮರಳಿದ ನಂತರ ಅವರು ಒಬ್ಬ ಸ್ವತಂತ್ರ ವಿಜ್ಞಾನಿಯಾಗಿ ರೂಪುಗೊಂಡರು. ಜೊತೆಗೆ ನ್ಯಾಷನಲ್ ಸೆಂಟರ್ ಫಾರ್ ಬಯಾಲಾಜಿಕಲ್ ಸೈನ್ಸ್‌ಸ್‌ನಲ್ಲಿ ಪ್ರಮುಖ ಸಂಶೋಧನಾರ್ಥಿಯಾಗಿ ಕೆಲಸ ಪ್ರಾರಂಭಿಸಿದರು. ಇದಕ್ಕೆ ರಾಕ್‌ಫೆಲ್ಲರ್ ಫೌಂಡೇಷನ್ ಹಣಕಾಸು ನೆರವು ನೀಡಿತು. ಅದರೊಂದಿಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವು ಸಹ ಐಎಫ್‌ಸಿಪಿಎಆರ್ (Indo-French Centre for the Promotion of Advanced Research) ಅನುದಾನದಿಂದ ಹಣಕಾಸು ನೆರವು ನೀಡಿತು.

ಡಾ. ವಿಲ್ಲೂ ಅವರು ದೇಶಕ್ಕಾಗಿ ಅತ್ಯುತ್ತಮ ಸುಸ್ಥಿರ ಸಂಶೋಧನಾ

ವೇದಿಕೆಯೊಂದನ್ನು ರಚಿಸಲು ವಿವಿಧ ಮಾದರಿಗಳನ್ನು ಸಿದ್ಧಪಡಿಸಿದರು. ಅವರು 1998ರಲ್ಲಿ ಅವೆಸ್ಥಾಜೆನ್ ಎಂಬ ಸಾರ್ವಜನಿಕ-ಖಾಸಗಿ- ಮಾದರಿಯ ಸಂಸ್ಥೆಯೊಂದನ್ನು ನೋಂದಣಿ ಮಾಡಿದರು. ಅದು ವಿನೂತನ ಮಾದರಿಯೊಂದನ್ನು ರೂಪಿಸಿದ ಅತ್ಯುತ್ತಮ ಮಾರ್ಗವಾಗಿತ್ತು. ಅದು ಪ್ರಾರಂಭ ಮಾತ್ರ. ಅಂದಿನಿಂದ ಡಾ. ವಿಲ್ಲೂ ಅವರು ತಮ್ಮ ಸಂಸ್ಥೆಯನ್ನು ಸದೃಢವಾಗಿ ಬೆಳೆಸಲು ಅವಿರತವಾಗಿ ಕೆಲಸ ಮಾಡತೊಡಗಿದರು ಮತ್ತು ಅಂತಾರಾಷ್ಟ್ರೀಯ ಧನಸಹಾಯ ಪಡೆದರು. ಈ ವಿನೂತನ ಜೈವಿಕ ತಂತ್ರಜ್ಞಾನ ಸಂಸ್ಥೆಯಲ್ಲಿ ವಿದೇಶಿ ಹೂಡಿಕೆದಾರರು ಹೊಸ ಆಶಾಭಾವನೆ ಕಂಡುಕೊಂಡರು. ಅಲ್ಲದೆ ಅದು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕಂಪನಿ ಎಂದೂ, ಪ್ರೆಡಿಕ್ಟಿವ್, ಪ್ರಿವೆಂಟಿವ್ ಮತ್ತು ವ್ಯಕ್ತಿಗತ ಆರೋಗ್ಯ ವರ್ಧಕಗಳು ಮತ್ತು ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳುವ ಮತ್ತು ಅಧಿಕ ಪೌಷ್ಟಿಕಾಂಶಗಳನ್ನು ಉತ್ಪಾದಿಸುವ ಬೀಜಗಳನ್ನು ಉತ್ಪಾದಿಸುವ ಕಂಪನಿ ಎಂದು ಹೆಸರು ಗಳಿಸಿತು. ಡಾ. ವಿಲ್ಲೂ ಅವರು, ಬಯೋಅಗ್ರಿಕಲ್ಚರ್, ಬಯೊನ್ಯೂಟ್ರಿಷನ್, ಬಯೊಫಾರ್ಮಾಸ್ಯಟಿಕಲ್ಸ್ ಎಂಬ ವೈವಿಧ್ಯಮಯ ಕ್ಷೇತ್ರಗಳಲ್ಲಿ ವಿನೂತನ ಮಾದರಿಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ & ಡಿ) ರೂಪಿಸಿ, ಅವೆಸ್ಥಾಜೆನ್‌ಗೆ ಒಂದು ಭದ್ರ ಬುನಾದಿ ಹಾಕಿದರು. ಇಂದು ಈ ಕಂಪನಿಯು 350 ಪೇಟೆಂಟ್‌ಗಳನ್ನು ಹೊಂದಿದೆ. ಉತ್ಪನ್ನಗಳನ್ನು ವಾಣಿಜ್ಯೀಕರಣ ಮಾಡುವ ಮೂಲಕ ಕಂಪನಿಯು ತನ್ನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ತೀವ್ರವಾಗಿ ಅನುಷ್ಠಾಪಿಸುತ್ತಿದೆ.

ಡಾ. ವಿಲ್ಲೂ ಅವರು ವಿವಿಧ ಆಲೋಚನೆಗಳಿಂದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು 'ಬಿಸಿನೆಸ್ ಆಫ್ ಸೈನ್ಸ್' ಎಂಬ ಪರಿಕಲ್ಪನೆ ರೂಪಿಸಿದ್ದು, ಅದರ ಮೂಲಕ 'ಸೈನ್ಸ್ ಆಫ್ ಬಿಸಿನೆಸ್' ಎಂಬ ಹೊಸ ಮಾದರಿಯೊಂದನ್ನು ಕಂಡುಕೊಂಡಿದ್ದಾರೆ. ಜಾಗತಿಕ ಮಟ್ಟದ ಹಲವು ಬೃಹತ್ ಸಂಸ್ಥೆಗಳೊಂದಿಗೆ ಕೈ ಜೋಡಿಸಿರುವ ಅವರು, ದೂರದರ್ಶಿತ್ವ ಹೊಂದಿರುವ ಅಪರೂಪದ ವ್ಯಕ್ತಿ ಎನಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಡಾ. ವಿಲ್ಲೂ ಅವರು ಬಹುಬೇಡಿಕೆ ಇರುವ ಭಾಷಣಕಾರ್ತಿಯಾಗಿದ್ದು, ಹಾರ್ವರ್ಡ್ ವಿಶ್ವವಿದ್ಯಾಲಯ, ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಮತ್ತು ಕೆಲಾಗ್ ಬಿಸಿನೆಸ್ ಸ್ಕೂಲ್‌ಗಳಲ್ಲಿ ಉಪನ್ಯಾಸ ನೀಡಿದ್ದಾರೆ.

ಡಾ. ವಿಲ್ಲೂ ಅವರು ಹಲವು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಕೃಷಿ ಮತ್ತು ಆರೋಗ್ಯ ಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಕಾರ್ಪೊರೇಟ್ ನಾಗರಿಕರಿಗೆ 'ಐಕಾಂಗೊ' ಫಾರ್ ಸಿಟಿಜೆನ್ ಆಕ್ಷನ್ ಮತ್ತು ಸೋಷಿಯಲ್ ಜಸ್ಟೀಸ್ ನೀಡುವ ಪ್ರತಿಷ್ಠಿತ 'ಕರ್ಮವೀರ ಪುರಸ್ಕಾರ' ಅವರಿಗೆ ಲಭಿಸಿದೆ. ವರ್ಲ್ಡ್ ಝುರಥುಸ್ಟಿ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಯು ನೀಡುವ ಪ್ರತಿಷ್ಠಿತ 'ಔಟ್‌ಸ್ಟ್ಯಾಂಡಿಂಗ್ ಝುರಾಥುಸ್ಟಿ ಎಂಟರ್‌ಪ್ರಿನರ್ ಅವಾರ್ಡ್ 2009' ಗೆ ಅವರು ಭಾಜನರಾಗಿದ್ದಾರೆ. ಹೊಸಸೃಷ್ಟಿ ಮತ್ತು ಮೌಲ್ಯ ಸೃಷ್ಟಿಗಳ ಸಾಧನೆಗಾಗಿ ಅಡಾಲ್ಫೊ ಇಬಾನೆಝ್ ವಿಶ್ವವಿದ್ಯಾಲಯವು ಡಾ. ವಿಲ್ಲೂ ಅವರನ್ನು ಗುರುತಿಸಿ ಗೌರವಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಸಾಧನೆಗಾಗಿ



2008ರ ಆಗಸ್ಟ್‌ನಲ್ಲಿ 'ಝೀ-ಅರ್ಚನಾ ಅಸ್ತಿತ್ವ' ನೀಡುವ 'ಅಸ್ತಿತ್ವ ಅವಾರ್ಡ್' ಸಹ ಅವರ ಮುಡಿಗೇರಿದೆ. ಇದಲ್ಲದೇ, ಮಲೇಷ್ಯದ ಕರೆನಾ ತುಹಾನ್ ಉಂತುಕ್ ಮುನಾಸಿಯಾ ಯುನಿವರ್ಸಿಟಿ ಟೆಕ್ನಾಲಾಜಿ ಅವಾರ್ಡ್, ಇಂಡಿಯನ್ ಕೌನ್ಸಿಲ್ ಫಾರ್ ಸ್ಮಾಲ್ ಆಂಡ್ ಮೀಡಿಯಂ ಎಕ್ಸ್‌ಪೋರ್ಟರ್ಸ್ ಪ್ರಶಸ್ತಿ, ಫಿಕ್ಕಿ ನೀಡುವ ಇಂಡಿಯನ್ ಕೌನ್ಸಿಲ್ ಫಾರ್ ಸ್ಮಾಲ್ ಆಂಡ್ ಮೀಡಿಯಾ ಆಫ್ ದಿ ಇಯರ್ 2006 ಪ್ರಶಸ್ತಿ, ಇಂಡಿಯನ್ ಟೆಲಿವಿಷನ್ ಅಕಾಡೆಮಿ ನೀಡುವ 'ಗ್ರೇಟ್ ವುಮನ್ ಅವಾರ್ಡ್ ಫಾರ್ ಸೈನ್ಸ್ & ಟೆಕ್ನಾಲಾಜಿ 'ಪ್ರಾನ್ಸ್‌ನ ಲಾ ಒರಿಯಲ್ ಆಫ್ ಫ್ರಾನ್ಸ್ ಅವಾರ್ಡ್ ಫಾರ್ ವುಮನ್ ಇನ್ ಸೈನ್ಸ್ –2004' ಮುಂತಾದ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಇದಲ್ಲದೆ, ಫ್ರೆಂಚ್ ರಿಪಬ್ಲಿಕನ್ ಪ್ರೆಸಿಡೆಂಟ್ ಅವರು ನೀಡುವ ಅತ್ಯಂತ ಪ್ರತಿಷ್ಠಿತ 'ಆಫೀಸರ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ಮೆರಿಟ್-2008' ಪ್ರಶಸ್ತಿಯೂ ಲಭ್ಯವಾಗಿದೆ.

ಅವರು ಹಲವಾರು ಸಂಸ್ಥೆಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ, ಕ್ಲಿಂಟನ್ ಗ್ಲೋಬಲ್ ಇನಿಷಿಯೇಟಿವ್ 2008ನ ಗಲೋಬಲ್ ಹೆಲ್ತ ವರ್ಕಿಂಗ್ ಗ್ರೂಫ್‌ನ ಸಲಹಾ ಸಮಿತಿ ಸಭೆಯ ಸದಸ್ಯರಾಗಿದ್ದಾರೆ. ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸ್‌ಸನ ಸದಸ್ಯರು, ಬೀಜ ಉದ್ಯಮಗಳ ಸಂಘಗಳ ಸದಸ್ಯರು, ಅಮೇರಿಕನ್ ಸೊಸೈಟಿ ಫಾರ್ ಪ್ಲಾಂಟ್ ಬಯಾಲಜಿಸ್ಟ್ ಸಂಸ್ಥೆಯ ಸದಸ್ಯರು, ಕರ್ನಾಟಕ ಸರಕಾರ ಸ್ಥಾಪಿಸಿದ ಟಾಸ್ಕ್ ಫೋರ್ಸ್ ಮತ್ತು ವಿಷನ್ ಗ್ರೂಫ್‌ನ ಪ್ರಮುಖ ಸದಸ್ಯರು ಆಗಿದ್ದರು. ಜೊತೆಗೆ ಭತ್ತದ ಜಿನೋಮ್ ಸೀಕ್ವೆನ್ಸ್ ಕಂಡು ಹಿಡಿಯಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಯತ್ನ ನಡೆಸಿರುವ 'ಐಬಲ್' ಎಂಬ ಸಂಸ್ಥೆಯ ಸ್ಥಾಪಕ ಸದಸ್ಯೆಯಾಗಿದ್ದಾರೆ. ಅವರಿಗೆ 2005ರಲ್ಲಿ ಯುಎಸ್‌ಏಡ್ ಅನುದಾನ, ಭಾರತ ಸಕಾರದ ಸಿಎಸ್‌ಐಆರ್‌ನ ನ್ಯೂಮಿಲೆನಿಯಂ ಬ್ಯಾಂಕ್ ಅನುದಾನ, 2004ರ ಡಿಏಫ್‌ಐಡಿ ಅನುದಾನ, ಇಂಡೊ ಫ್ರೆಂಚ್ ಗ್ರಾಂಟ್ ರಾಕ್‌ಫೆಲ್ಲರ್ ಫೌಂಡೇಶನ್ (ಒಟ್ಟು 4 ಅನುದಾನಗಳು) 1993ರ ಭಾರತ ಸಕಾರದ ಸಿಎಸ್‌ಐಆರ್ ಫೆಲೊಶಿಪ್ , ಟಾಟಾ ಮೆರಿಟ್ ಫೆಲೊಶಿಪ್, 1989ರಲ್ಲಿ ಫ್ರಾನ್ಸ್‌ನ ವಿದೇಶಾಂಗ ಸಚಿವಾಲಯದ ಫೆಲೊಶಿಪ್ ಸೇರಿದಂತೆ ಹಲವಾರು ಗೌರವಗಳನ್ನು ಅವರು ಪಡೆದಿದ್ದಾರೆ.

***

**ಶ್ರೀಮತಿ ಮಂಜುಳಾ ಚೆಲ್ಲೂರ್:** ಅವರು 1955 ಡಿಸೆಂಬರ್ 5 ರಂದು ಬಳ್ಳಾರಿಯ ಸುಪ್ರಸಿದ್ಧ ವಕೀಲರೂ, ಸ್ವಾತಂತ್ರ್ಯ ಹೋರಾಟಗಾರರೂ ಆದ ದಿವಂಗತ ಶ್ರೀ ಸಿ.ಭೀಮಪ್ಪ ಚೆಟ್ಟಿಯವರು ಮತ್ತು ಶ್ರೀಮತಿ ರಂಗಮ್ಮನವರ ಸುಪುತ್ರಿಯಾಗಿ ಜನಿಸಿದರು. ವಿದ್ಯಾವಂತ, ಪ್ರಜ್ಞಾವಂತ ಹಾಗೂ ಸಾಮಾಜಿಕ ಕಳಕಳಿಯಿಂದ ಕೂಡಿದ ಕುಟುಂಬದಲ್ಲಿ ಜನಿಸಿದ ಅದೃಷ್ಟ ಅವರದ್ದು. ಮಂಜುಳಾ ಅವರು ಶಾಲೆಯಲ್ಲಿ ಬಹಳ ಚಟುವಟಿಕೆಯಿಂದ ಎಲ್ಲ ಆಟ, ಪಾಠಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಡು, ನೃತ್ಯ ಮೊದಲಾದ ಲಲಿತ ಕಲೆಗಳಲ್ಲಿ ಅತ್ಯಂತ ಆಸಕ್ತಿ ಹೊಂದಿದ್ದು, ಅವರು ಕರ್ನಾಟಕದ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿ ಪಡೆದಿದ್ದಾರೆ ಹಾಗೂ ಇಂದಿಗೂ ಸುಶ್ರಾವ್ಯವಾಗಿ ಹಾಡುವ ಅಭ್ಯಾಸ ಇಟ್ಟುಕೊಂಡಿದ್ದಾರೆ.

ಇವರು ತಮ್ಮ ಪದವಿಯನ್ನು ಬಳ್ಳಾರಿಯ ಅಲ್ಲಂ ಸುಮಂಗಳಮ್ಮ ಮಹಿಳಾ ಮಹಾವಿದ್ಯಾಲಯದಲ್ಲಿ ಪಡೆದಿದ್ದು, ಸದರಿ ಮಹಿಳಾ ಮಹಾವಿದ್ಯಾಲಯವು ಈ ವಿಶ್ವವಿದ್ಯಾಲಯದ ಸಂಯೋಜಿತ ಮಹಿಳಾ ಮಹಾವಿದ್ಯಾಲಯವಾಗಿದೆ. ಇವರು ಬೆಂಗಳೂರಿನ ರೇಣುಕಾಚಾರ್ಯ ಲಾ ಕಾಲೇಜಿನಲ್ಲಿ ಕಾನೂನು ವ್ಯಾಸಂಗ ಮಾಡಿರುವರು. 1977ರಲ್ಲಿ ಎಲ್‌ಎಲ್‌ಬಿ ಪದವೀಧರೆಯಾದ ಶ್ರೀಮತಿ ಮಂಜುಳಾರವರು ವಕೀಲರಾಗಿ ನೊಂದಾಯಿಸಿಕೊಳ್ಳುವ ಮೊದಲು ಯುರೋಪಿಯನ್ ರಾಷ್ಟ್ರಗಳಿಗೆ ಭೇಟಿ ನೀಡುವ ಸದವಕಾಶ ಪಡೆದರು. ಇವರು ಇಂಗ್ಲೆಂಡಿನಲ್ಲಿ ಒಂದು ವರ್ಷಕಾಲ ಇದ್ದು ಆ ಸಮಯದಲ್ಲಿ ಸಂಯುಕ್ತ ರಾಷ್ಟ್ರಗಳ ಡುರ್ಹಾಂ ನಗರ ಪ್ರದೇಶದಲ್ಲಿರುವ ಕ್ರೌನ ನ್ಯಾಯಾಲಯಕ್ಕೆ ಭೇಟಿ ನೀಡಿ ಅಲ್ಲಿನ ನ್ಯಾಯಪ್ರದಾನ ಪ್ರಕ್ರಿಯೆಯನ್ನೂ, ನ್ಯಾಯಾಲಯದ ವಿದ್ಯಮಾನಗಳನ್ನೂ ಅವಲೋಕಿಸುವುದರ ಮೂಲಕ ತಮ್ಮ ಜ್ಞಾನ ಅನುಭವಗಳನ್ನು ಶ್ರೀಮಂತಗೊಳಿಸಿಕೊಂಡರು. ನಂತರ ಭಾರತಕ್ಕೆ ಹಿಂತಿರುಗಿ ಬಳ್ಳಾರಿಯಲ್ಲಿ ತಂದೆಯ ಕಛೇರಿಯನ್ನು ಸೇರಿ ಅತೀ ಶೀಘ್ರದಲ್ಲಿ ತಮ್ಮ ಪ್ರೌಢಿಮೆಯಿಂದ ವೃತ್ತಿಯಲ್ಲಿ ಒಳ್ಳೆಯ ಹೆಸರು ಗಳಿಸಿದರು.

ಬಳ್ಳಾರಿಯಲ್ಲಿ ವಕೀಲ ವೃತ್ತಿ ಕೈಗೊಂಡ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಅವರದಾಗಿದೆ. ಶ್ರೀಮತಿ ಮಂಜುಳಾ ಅವರು ತಮ್ಮ ಬಿಚ್ಚು ಮಾತು, ನಿರ್ಭಿಡೆಯಿಂದ ಕೂಡಿದ ನಡೆನುಡಿಗಳಿಂದ, ಪರಿಶ್ರಮಯುತ ಕೆಲಸಗಾರಿಕೆಯಿಂದ, ಜ್ಞಾನಾರ್ಜನೆಯಲ್ಲಿದ್ದ ಆಸಕ್ತಿಯಿಂದ ಎಲ್ಲರ ವಿಶ್ವಾಸವನ್ನೂ ಗೆಲ್ಲುವುದರಲ್ಲಿ ಯಶಸ್ವಿಯಾದರು ಎಂದರೆ ಅತಿಶಯೋಕ್ತಿಯಲ್ಲ.

ಅವರು ತಮ್ಮ ವೃತ್ತಿಪರತೆ, ಪರಿಶ್ರಮ, ಪ್ರಾಮಾಣಿಕತೆ ಮೊದಲಾದವುಗಳಿಂದ ಹಲವಾರು ಪ್ರಮುಖ ಸಿವಿಲ್, ಕ್ರಿಮಿನಲ್ ದಾವೆಗಳನ್ನು ನಡೆಸುವ ಅವಕಾಶ ಪಡೆದರು. ಅದಲ್ಲದೇ ಬ್ಯಾಂಕುಗಳು, ಅಗ್ರೋ ಇಂಡಸ್ಟ್ರೀಸ್‌ನಂತಹ ಕಂಪನಿಗಳು, ರಾಜ್ಯ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೊದಲಾದ ಸಂಸ್ಥೆಗಳ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಿರುವರು. ಕಾನೂನು ಕರ್ತವ್ಯಗಳ ನಡುನಡುವೆ ಲಯನ್ಸ್, ರೋಟರಿ ಇನ್ನೂ ಮೊದಲಾದ ಸೇವಾ ಸಂಸ್ಥೆಗಳ ಮೂಲಕ ಸಮಾಜಸೇವೆಯಲ್ಲೂ ಸಹ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.



ಈ ಮಧ್ಯೆ ವಕೀಲರಾಗಿ ಎರಡು ವರ್ಷಗಳಾಗುವ ವೇಳೆಗೆ ಶ್ರೀಮತಿ ಮಂಜುಳಾರವರ ವಿವಾಹವು ಡಾ. ಸಿ.ಎನ್ ಗುಪ್ತಾರವರೊಂದಿಗೆ ನೆರವೇರಿತು. ಇವರ ಪುತ್ರಿ ಕು.ಕುಸುಮಾ ರಂಜಿತರವರು ಭರತನಾಟ್ಯ ಪ್ರವೀಣೆಯಾಗಿದ್ದು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈಗ ಅಮೇರಿಕೆಯಲ್ಲಿ ಪತಿಯೊಂದಿಗೆ ನೆಲೆಸಿದ್ದಾರೆ. ಪುತ್ರ ಶ್ರೀ ವಂಶಿಕೃಷ್ಣರವರು ಸಂಯುಕ್ತ ರಾಷ್ಟ್ರ ಇಂಗ್ಲೆಂಡಿನಲ್ಲಿ ಎಲ್.ಎಲ್.ಎಂ ಪದವಿ ಪಡೆದ ನಂತರ ವಕೀಲ ವೃತ್ತಿ ನಡೆಸುತ್ತಿದ್ದಾರೆ.

ವಕೀಲೆಯಾಗಿ ಹತ್ತು ವರ್ಷಗಳಲ್ಲಿ ಮಂಜುಳಾರವರ ಪ್ರೌಢಿಮೆಯನ್ನು ಗುರುತಿಸಿ 1988ರಲ್ಲಿ ವಕೀಲ ಸಮುದಾಯದಿಂದ ನೇರವಾಗಿ ಆಯ್ಕೆಮಾಡಿ ರಾಜ್ಯದ ಪ್ರಪ್ರಥಮ ಮಹಿಳಾ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರಾಗಿ ಆಯ್ಕೆಮಾಡಿ ನೇಮಕ ಮಾಡಲಾಯಿತು. ನ್ಯಾಯಾಧೀಶರಾಗಿಯೂ ಸಹ ಶ್ರೀಮತಿ ಮಂಜುಳಾರವರು ತಮ್ಮ ವೃತ್ತಿಯಲ್ಲಿನ ಪರಿಶ್ರಮ, ಪ್ರಾಮಾಣಿಕತೆ, ಕರ್ತವ್ಯಪರತೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಕೋಲಾರ ಮತ್ತು ಮೈಸೂರುಗಳಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸಿದ ನಂತರ ಬೆಂಗಳೂರಿನ ಲಘು ವ್ಯಾಜ್ಯಗಳ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾಗಿ ಅಧಿಕಾರವಹಿಸಿಕೊಂಡರು. ಆ ನಂತರದಲ್ಲಿ ಅವರು ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಗಳ ಪ್ರಧಾನ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡಾಗ ಅವರ ಕಟ್ಟುನಿಟ್ಟಿನ ನಿಲುವು, ನೊಂದ ಮಹಿಳಾ ಕಕ್ಷಿದಾರರಿಗೆ ಒಂದು ವರವಾಗಿಯೇ ಪರಿಣಮಿಸಿತೆನ್ನಬಹುದು.

ನ್ಯಾಯಮೂರ್ತಿ ಶ್ರೀಮತಿ ಮಂಜುಳಾ ಚೆಲ್ಲೂರ್‌ರವರ ಕಾರ್ಯದಕ್ಷತೆಯನ್ನು ಗುರುತಿಸಿದ ಸರ್ವೋಚ್ಚ ನ್ಯಾಯಾಲಯವು ಅವರನ್ನು ಇಂಗ್ಲೆಂಡಿನ ವಾರ್‌ವಿಕ್ ವಿಶ್ವವಿದ್ಯಾಲಯಕ್ಕೆ ಜೆಂಡರ್ ಮತ್ತು ಕಾನೂನು ಎಂಬ ವಿಷಯದ ಫೇಲೋಶಿಫ್ ಮೇಲೆ ಅಭ್ಯಸಿಸಲು 1997 ರಲ್ಲಿ ಕಳುಹಿಸಿತು. ತಮ್ಮ ಜ್ಞಾನವನ್ನು ಶ್ರೀಮಂತ ಗೊಳಿಸಿಕೊಂಡ ಶ್ರೀಮತಿ ಮಂಜುಳಾ ಚೆಲ್ಲೂರ್‌ರವರು 21.02.2000 ರಂದು ರಾಜ್ಯ ಹೈಕೋರ್ಟ್‌ನ ಪ್ರಪ್ರಥಮ ಮಹಿಳಾ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಕಾನೂನಿನ ಎಲ್ಲ ವಿಷಯಗಳಲ್ಲೂ ಅನುಭವವಿರುವ ಅವರಿಗೆ ಹೈಕೋರ್ಟಿನ ಕೆಲಸ ಭಾರವೆನಿಸಲಿಲ್ಲ ಹಾಗೂ ಆ ಸ್ಥಾನಕ್ಕೆ ನಿಷ್ಠುರರಾಗಿದ್ದರು.

ಶ್ರೀಮತಿ ಮಂಜುಳಾ ಚೆಲ್ಲೂರ್‌ರವರ ನ್ಯಾಯಾಂಗ ಸೇವೆ ಮತ್ತು ಪರಿಣಿತಿಯನ್ನು ಗುರುತಿಸಿ ಭಾರತ ಸರ್ಕಾರದ ಸರ್ವೋಚ್ಚ ನ್ಯಾಯಾಲಯವು ಅವರನ್ನು ಕೇರಳ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳನ್ನಾಗಿ 2012 ಸೆಪ್ಟಂಬರ್ 26 ರಂದು ನೇಮಿಸಿರುತ್ತದೆ.

***

**ಶ್ರೀಮತಿ ವಿ.ಎಸ್. ರಮಾದೇವಿ:** ಎಂ.ಎ ಎಲ್‌ಎಲ್‌ಬಿ ಪದವೀಧರರಾಗಿರುವ ಶ್ರೀಮತಿ ರಮಾದೇವಿ ಅವರು, ಆಂಧ್ರಪ್ರದೇಶದ ಚೆಬ್ರೋಲು ಎಂಬಲ್ಲಿ ಜನವರಿ 15, 1934 ರಲ್ಲಿ ಜನಿಸಿದರು. ಶ್ರೀಮತಿ ರಮಾದೇವಿ ಅವರ ತಂದೆ ಶ್ರೀ ವಿ.ವಿ ಸುಬ್ಬಯ್ಯ ಮತ್ತು ತಾಯಿ ಶ್ರೀಮತಿ ವಿ. ವೆಂಕಟರತ್ನಮ್ಮ. ಶ್ರೀಮತಿ ರಮಾದೇವಿ ಅವರು ಆಂಧ್ರಪ್ರದೇಶದ ಎಲೂರಿನಲ್ಲಿ ಆರಂಭಿಕ ಶಿಕ್ಷಣ ಹಾಗೂ ಹೈದ್ರಾಬಾದ್‌ಗಳಲ್ಲಿ ಉನ್ನತ ಶಿಕ್ಷಣ ಮುಗಿಸಿದರು.

ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ನ್ಯಾಯವಾದಿಯಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ನಂತರ ಗ್ರೂಪ್ ಎ ಅಧಿಕಾರಿಯಾಗಿ ಕೇಂದ್ರ ಸರ್ಕಾರದ ಸೇವೆಗೆ ಸೇರಿದರು. ಶಾಸನ ಇಲಾಖೆಯ ಭಾರತೀಯ ಕಾನೂನು ಸೇವೆಯ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವುದರ ಜೊತೆಗೆ ವಿಶೇಷ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ. ಕೇಂದ್ರ ಸರ್ಕಾರದ ಕಾನೂನು ಆಯೋಗದ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ನವೆಂಬರ್ 26, 1990 ರವರೆಗೆ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದ್ದು.

ರಾಷ್ಟ್ರೀಯ ಮಹಿಳಾ ಆಯೋಗದ ಗೌರವ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿರುವ ಶ್ರೀಮತಿ ರಮಾದೇವಿ ಅವರು, ರಾಜ್ಯ ಸಭೆಯ ಮಹಾ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅನಂತರ 26 ನೇ ಜುಲೈ 1997 ರಿಂದ 1 ನೇ ಡಿಸೆಂಬರ್ 1999 ರವರೆಗೆ ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಮತ್ತು 2 ನೆಯ ಡಿಸೆಂಬರ್ 1999 ರಿಂದ 2002 ರವರೆಗೆ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ.

ಸಮಾಜದ ಕೆಳವರ್ಗದ ಜನರು ಮತ್ತು ವಿಶೇಷವಾಗಿ ಮಹಿಳೆಯರಿಗೆ ಕಾನೂನು ಮತ್ತು ಚುನಾವಣಾ ಸಂಬಂಧಿ ಕಾನೂನುಗಳ ಬಗೆಗೆ ತಿಳುವಳಿಕೆ ಮೂಡಿಸಲು ಪ್ರಯತ್ನಗಳನ್ನು ಮಾಡಿದ್ದಾರೆ. ನ್ಯಾಯಾಧೀಶರು ಮತ್ತು ಪೋಲಿಸರ ಜತೆ ಅಪರಾಧ ನ್ಯಾಯವ್ಯವಸ್ಥೆ ಬಗೆಗೆ ನಿರಂತರವಾಗಿ ಸಂವಾದ ನಡೆಸುತ್ತಿದ್ದ ಇವರು ಕಾರ್ಯಾಗಾರ, ವಿಚಾರ ಸಂಕಿರಣ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುತ್ತ ಬಂದಿದ್ದಾರೆ. ಅಂಗವಿಕಲರ ಕ್ಷೇಮಾಭಿವೃದ್ಧಿಗೂ ಕೆಲಸ ಮಾಡುತ್ತ ಬಂದಿದ್ದಾರೆ. ಮಹಿಳೆ ಮತ್ತು ಕಾನೂನು, ಮಕ್ಕಳು ಮತ್ತು ಕಾನೂನು, ಅಂಗವಿಕಲರು ಮತ್ತು ಕಾನೂನು ವಿಷಯಗಳ ಕುರಿತು ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೀಮತಿ ರಮಾದೇವಿ ಅವರು 'ರಾಜ್ಯ ಸಭೆಯ ಕಾರ್ಯಗಳು' ಎಂಬ ಪುಸ್ತಕದ ಸಹಲೇಖಕರು ಕೂಡಾ. ತೆಲುಗು ಭಾಷೆಯಲ್ಲಿ ಹಲವು ಕಾದಂಬರಿ, ಕತೆಗಳು, ವಿಚಾರ ಲೇಖನಗಳನ್ನು ಮತ್ತು ನಾಟಕಗಳನ್ನು ಬರೆದಿದ್ದಾರೆ. ಸಮಕಾಲೀನ ವಿಷಯಗಳ ಕುರಿತು ಈಗಲೂ ತೆಲುಗು ದಿನಪತ್ರಿಕೆಗಳಲ್ಲಿ ಇವರು ಅಗ್ರ ಲೇಖನಗಳನ್ನು ಬರೆಯುತ್ತಾರೆ. ಇವರ ದೇಶದ ವಿವಿಧ ಕ್ಷೇತ್ರಗಳಲ್ಲಿ ಅತ್ಯದ್ಭುತ ಸಾಧನೆ ಮಾಡಿರುವ ಮಹಿಳಾ ಸಾಧಕಿಯಾಗಿದ್ದಾರೆ.

***



**ಡಾ.ಡಿ.ಪುರಂದೇಶ್ವರಿ** ಅವರು ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ದಿ.ಎನ್.ಟಿ.ರಾಮರಾವ್ ಮತ್ತು ಶ್ರೀಮತಿ.ಬಸವರಾಮ ತಾರಕಮ್ ದಂಪತಿಗಳ ಮಗಳಾಗಿ 22, ಏಪ್ರಿಲ್ 1959ರಂದು ಚೆನ್ನೈನಲ್ಲಿ ಜನಿಸಿದರು. ಚೆನ್ನೈನ ಸೇಕ್ರೆಡ್ ಹಾರ್ಟ್ ಹೈಸ್ಕೂಲ್ ಮತ್ತು ಯತಿರಾಜ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣ ಮುಗಿಸಿದರು. ನಂತರ ಸೌಥ್ ಇಂಡಿಯನ್ ಎಜುಕೇಶನ್‌ನ ಮಹಿಳಾ ಕಾಲೇಜಿನಿಂದ ಬಿಎ ಪದವಿ ಗಳಿಸಿದರು. ಆಮೇಲೆ ಮುಂಬೈನ ಜೆಮೊಲಾಜಿಕಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಡಿಪ್ಲೋಮಾ ಇನ್ ಜೆಮೊಲಾಜಿ ಪದವಿ ಗಳಿಸಿದ ಇವರು ತದನಂತರ ಹೈದರಾಬಾದ್‌ನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಜೆಮ್ ಆಂಡ್ ಜ್ಯುವೆಲರಿಯನ್ನು ಪ್ರಾರಂಭಿಸಿದರು. 1979, ಮೇ 9ರಂದು ಡಾ.ಡಿ.ವೆಂಕಟೇಶ್ವರರಾವ್ ಅವರನ್ನು ವಿವಾಹವಾದ ಶ್ರೀಮತಿ ಪುಂದೇಶ್ವರಿ ಅವರಿಗೆ ಇಬ್ಬರು ಮಕ್ಕಳಿದ್ದಾರೆ.

ಡಾ.ಪುರಂದೇಶ್ವರಿ ಅವರು ಇಂಗ್ಲೀಷ್, ತೆಲುಗು, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದಾರೆ. ಭಾರತೀಯ ನೃತ್ಯಶೈಲಿ 'ಕೂಚಿಪುಡಿಯಲ್ಲಿ' ಇವರು ಹೊಂದಿರುವ ಕುಶಲತೆ ಕೂಚಿಪುಡಿ ನೃತ್ಯಶೈಲಿಯ ಪ್ರತಿಪಾದಕ ಡಾ.ವೇಂಪತಿ ಚಿನ್ನ ಸತ್ಯಮ್, ಅವರ ಮಾರ್ಗದರ್ಶನದಲ್ಲಿ 13 ವರ್ಷಗಳ ನಿರಂತರ ಹಾಗೂ ಸಮರ್ಪಿತ ಅಭ್ಯಾಸವನ್ನು ಪ್ರತಿಬಿಂಬಿಸುತ್ತದೆ. ಸಧ್ಯ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ (ಉನ್ನತ ಶಿಕ್ಷಣ) ರಾಜ್ಯ ಸಚಿವರಾಗಿ ದೇಶದ ಉನ್ನತ ಶಿಕ್ಷಣದ ಪ್ರಗತಿಗಾಗಿ ಅಮೂಲ್ಯ ಕೊಡುಗೆಯನ್ನು ನೀಡುತ್ತಿದ್ದಾರೆ. 14ನೇ ಲೋಕಸಭೆಗೆ, ಆಂಧ್ರಪ್ರದೇಶದ ಬಾಪಟ್ಲಾ ಲೋಕಸಭಾ ಮತಕ್ಷೇತ್ರದಿಂದ, 2004ರಲ್ಲಿ ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾದ ಇವರು ತಮ್ಮ ಮೊದಲ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ. ನಂತರ 2009ರ ಸಾರ್ವಜನಿಕ ಚುನಾವಣೆಯಲ್ಲಿ ವಿಶಾಕಪಟ್ಟಣ ಮತಕ್ಷೇತ್ರದಿಂದ ಸ್ಪರ್ಧಿಸಿ, ಭಾರಿ ಮತಗಳ ಅಂತರದಿಂದ ಜಯಶಾಲಿಯಾಗಿರುತ್ತಾರೆ.

ಆಯ್ಕೆಯಾದ ಮೊದಲ ವರ್ಷದಿಂದಲೇ, ದೇಶವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಾದ ಕೃಷಿ, ಶಿಕ್ಷಣ, ಸಾರ್ವಜನಿಕ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ತಾಯಿ–ಮಗು ಕ್ಷೇಮಾಭಿವೃದ್ಧಿ, ಪ್ರಾಕೃತಿಕ ವಿಕೋಪಗಳು ಹಾಗೂ ನೇಕಾರರು ಮತ್ತು ಕುಶಲ ಕರ್ಮಚಾರಿಗಳ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಚರ್ಚಿಸುವ ಮೂಲಕ ಅತ್ಯುತ್ತಮ ಸಂಸದೀಯ ಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕೌಟುಂಬಿಕ ದೌರ್ಜನ್ಯ ಮಸೂದೆ, ಹಿಂದು ವಾರಸುದಾರತ್ವ (ತಿದ್ದುಪಡಿ) ಮಸೂದೆ, ಮಹಿಳಾ ವ್ಯಾಜ್ಯಗಳ ಪರಿಹಾರಕ್ಕಾಗಿ ವಿಶೇಷ ಮಹಿಳಾ ನ್ಯಾಯಾಲಯಗಳ ಸ್ಥಾಪನೆಯ ಮಸೂದೆ, ಮುಂತಾದ ಮಸೂದೆಗಳ ಮೇಲಿನ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ದೇಶದ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಅತ್ಯಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಸಂಸತ್ತಿನಲ್ಲಿಯ ಇವರ ಕಾರ್ಯವೈಖರಿಯನ್ನು ಗುರುತಿಸಿದ 'ಏಷಿಯನ್ ಏಜ್' ಪತ್ರಿಕೆ ಇವರನ್ನು 2004–05ರ ಅತ್ಯುತ್ತಮ ಸಂಸದೀಯ ಪಟು ಎಂದು ಗೌರವಿಸಿದೆ.

ಇತ್ತೀಚೆಗಷ್ಟೆ ಬಿಡುಗಡೆಯಾದ ತಮ್ಮ ಕೃತಿ 'ಇನ್ ಕೈಸ್ಸ ಆಫ್ ಯುಟೋಪಿಯಾ'ದಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ನೀಡಿದ 82 ಭಾಷಣಗಳನ್ನು ದಾಖಲಿಸಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ವಿವಿಧ ಸಮಿತಿಗಳ ಸದಸ್ಯೆಯಾಗಿ ಕಾರ್ಯನಿರ್ವಹಿಸಿರುವ ಅವರು ಮನುಕುಲದ ಅಭಿವೃದ್ಧಿಗಾಗಿ ಮಾಡಿರುವ ಹಲವಾರು ಶಿಫಾರಸುಗಳು ಜಾರಿಯಾಗಿವೆ.

ಆಶುಭಾಷಣ ವಾಗ್ಮಿಯಾಗಿ, ನವೀನತೆಯ ಜೀವನ ಶೈಲಿಯ ಹುಡುಕಾಟದ ಮಹಿಳೆಯಾಗಿ, ದೊಡ್ಡ ಕನಸುಗಾರರಾಗಿ, ಜಾಗತಿಕ ಮನ್ನಣೆ ಗಳಿಸಿರುವ ಇವರನ್ನು ಶ್ರೀಮತಿ ಲಾರಾ ಬುಷ್ ಅವರು ಆಹ್ವಾನಿಸಿ ಗೌರವಿಸಿದ್ದಾರೆ. ಅಷ್ಟೇ ಅಲ್ಲ, ಡಾ.ಪುರಂದೇಶ್ವರಿ ಅವರು ಶ್ವೇತಭವನದಲ್ಲಿ ಜರುಗಿದ ಚರ್ಚಾ ಗೋಷ್ಠಿಯಲ್ಲಿ ಜಾಗತಿಕ ಕಲಿಕಾ ಪ್ರಮಾಣ ಹೆಚ್ಚಿಸುವಿಕೆ ಕುರಿತು ಉಪನ್ಯಾಸವನ್ನೂ ನೀಡಿದ್ದಾರೆ. ಡಾ.ಪುರಂದೇಶ್ವರಿ ಅವರು ಬಹುಮುಖ ವ್ಯಕ್ತಿತ್ವ ಉಳ್ಳವರು. ಕುಶಾಗ್ರಮತಿ ಕೂಡಾ. ಇವರು ಕಲೆ, ಶಿಕ್ಷಣ ಹಾಗೂ ರಾಷ್ಟ್ರೀಯ ನಾಯಕಿಯಾಗಿ ಮಹಿಳಾ ಸಬಲೀಕರಣ ಹಾಗೂ ಸಂಸದೀಯ ವ್ಯವಹಾರಗಳಿಗೆ ನೀಡಿದ ಮಹತ್ತರ ಕೊಡುಗೆ ಅಪಾರ.

***



**ಡಾ. ಸರೋಜಿನಿ ಮಹಿಷಿ:** ಅವರದು ಸಾರ್ವಜನಿಕ ಜೀವನದಲ್ಲಿ ಮೇರು ವ್ಯಕ್ತಿತ್ವ. ವಿವಿಧ ಕ್ಷೇತ್ರಗಳಲ್ಲಿ ಅವರು ಮಾಡಿರುವ ಸಾಧನೆ ಅದ್ವಿತೀಯ. ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಎಂ.ಎ ಪದವಿಗಳನ್ನು ಪಡೆದ ಅವರು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕೂಡಾ ಡಾಕ್ಟರೇಟ್ ನೀಡಿ ಗೌರವಿಸಿದೆ. ತಮ್ಮ ವಿದ್ಯಾಭ್ಯಾಸದ ಉದ್ದಕ್ಕೂ ಪ್ರಥಮ ರ್‍ಯಾಂಕ್‌ನಲ್ಲಿಯೇ ಉತ್ತೀರ್ಣರಾಗುತ್ತಿದ್ದ ಸರೋಜಿನಿ ಅವರು ಬಾರ್ ಕೌನ್ಸಿಲ್ನಲ್ಲಿಯೂ ಮುಂಚೂಣಿಯಲ್ಲಿದ್ದರು.

ಮಹಾರಾಷ್ಟ್ರದ ವೆಲ್ಲಿಂಗ್ಟನ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಡಾ. ಸರೋಜಿನಿ ಮಹಿಷಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಧಾರವಾಡದಲ್ಲಿ ಪ್ರಾಥಮಿಕ, ಹೈಸ್ಕೂಲ್, ತರಬೇತಿ ಶಾಲೆ, ವನಿತಾ ಸೇವಾ ಸಮಾಜ ಸಂಸ್ಥೆಗಳನ್ನು ನಡೆಸಿದ್ದರು. ನವದೆಹಲಿಯ ಕರ್ನಾಟಕ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಡಾ.ಸರೋಜಿನಿ ಮಹಿಷಿ ಅವರೊಬ್ಬ ಶ್ರೇಷ್ಠ ಬರಹಗಾರರು. ಕನ್ನಡ, ಇಂಗ್ಲೀಷ, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿವಿಧ ವಿಷಯಗಳ ಕುರಿತು 40ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಈ ಪೈಕಿ ಹಲವಾರು ಪುಸ್ತಕಗಳು ಇತರ ಭಾಷೆಗಳಿಗೂ ಭಾಷಾಂತರಗೊಂಡಿವೆ. ಅಷ್ಟೇ ಅಲ್ಲ, ಕೆಲವು ಪುಸ್ತಕಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮತ್ತು ಡಿ.ವಿ. ಗುಂಡಪ್ಪ ಅವರ ಮಂಕುತಿಮ್ಮನ ಕಗ್ಗ ಪುಸ್ತಕಗಳನ್ನು ಕನ್ನಡದಿಂದ ಹಿಂದಿ ಭಾಷೆಗೆ ಅನುವಾದಿಸಿದ್ದಾರೆ. ಮಹಿಳೆ ಮತ್ತು ಮಕ್ಕಳ ಕುರಿತ ಮಾಸಪತ್ರಿಕೆಯನ್ನು ಇವರು ಸಂಪಾದಿಸಿ ಪ್ರಕಟಿಸಿದ್ದಾರೆ.

ಹಲವಾರು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಂಸ್ಥೆಗಳ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಡಾ. ಸರೋಜನಿ ಮಹಿಷಿ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸಮಾಜ ಕಲ್ಯಾಣ ಮಂಡಳಿಯ ಸದಸ್ಯರಾಗಿ, ಗೈಡ್ಸ್‌ನ ರಾಜ್ಯ ಆಯುಕ್ತರಾಗಿ, ಉತ್ತರ ಪ್ರದೇಶದ ಎಲ್ಲಾ ವಿಶ್ವವಿದ್ಯಾಲಯದ ಮತ್ತು ಸಂಸ್ಕೃತ ಸಂಸ್ಥೆಗಳಿಗೆ ರಾಜ್ಯಪಾಲರ ಪ್ರತಿನಿಧಿಯಾಗಿ, ಹಿಂದುಸ್ತಾನ್ ಸಮಚಾರ ಸುದ್ದಿ ಸಂಸ್ಥೆಯ ಅಧ್ಯಕ್ಷರಾಗಿ, ಭಾರತೀಯ ಮೂಲದ ವಿದೇಶಿಯರ ಸಹಕಾರ ಮಂಡಳಿಯ ಅಧ್ಯಕ್ಷರಾಗಿ, ಹೀಗೆ ಹತ್ತು ಹಲವು ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಎಂಬ ಶಿಫಾರಸ್ಸುಗಳನ್ನು ಒಳಗೊಂಡ ಅವರು ನೀಡಿದ್ದ ವರದಿ 'ಮಹಿಷಿ ವರದಿ' ಎಂದೇ ಪ್ರಖ್ಯಾತವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಡಾ. ಸರೋಜನಿ ಮಹಿಷಿ ಅವರು ಅಷ್ಟಭಾಷಾ ಪಂಡಿತರು. ಕನ್ನಡ, ತಮಿಳು, ತೆಲುಗು, ಕೊಂಕಣಿ, ಮರಾಠಿ, ಸಂಸ್ಕೃತ, ಹಿಂದಿ ಮತ್ತು ಇಂಗ್ಲೀಷ್ ಭಾಷಾ ಪ್ರೌಢಿಮೆ ಹೊಂದಿದವರಾಗಿದ್ದಾರೆ. ಈ ಭಾಷಾ ಕೌಶಲ್ಯವೇ ಅವರನ್ನು ರಾಷ್ಟ್ರಮಟ್ಟದ ಬುದ್ಧಿಜೀವಿ ನಾಯಕರಾಗಿ ರೂಪಗೊಳ್ಳುವಂತೆ ಮಾಡಿದೆ.

ಡಾ. ಸರೋಜನಿ ಮಹಿಷಿ ಅವರು 25 ವರ್ಷಗಳ ಕಾಲ ಸಂಸದೀಯ ಪಟುವಾಗಿದ್ದರು. 1962ರಿಂದ 1980 ರವರೆಗೆ ಲೋಕಸಭೆಯಲ್ಲಿ ಧಾರವಾಡ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 1983–84 ವರೆಗೆ ಮತ್ತು 1984–90ರವರೆಗೆ ರಾಜ್ಯಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. 1966–69 ವರೆಗೆ ಕೇಂದ್ರದ ಅಣುಶಕ್ತಿ, ಸಾಂಖಿಕ ಸಂಸ್ಥೆ ಮತ್ತು ಸಾರ್ವಜನಿಕ ಸಂಪರ್ಕ ಖಾತೆ ಸಚಿವರಾಗಿಯೂ ಕಾರ್ಯನಿರ್ವಹಿಸಿರುವ ಅವರು, 1969–74ರವರೆಗೆ ಪ್ರವಾಸೋದ್ಯಮ ಮತ್ತು ನಾಗರಿಕಯಾನ ಸಚಿವರಾಗಿ, 1974–76ರ ವರೆಗೆ ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಖಾತೆ ಸಚಿವರಾಗಿ ಲೋಕಸಭೆ ಹಾಗೂ ರಾಜ್ಯಸಭೆಯ ವಿವಿಧ ಸಮಿತಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಜಗತ್ತಿನ ಪಾಶ್ವಿಮಾತ್ಯ ರಾಷ್ಟ್ರಗಳೂ ಸೇರಿದಂತೆ ಹಲವಾರು ದೇಶಗಳಿಗೆ ಅಧಿಕೃತ ಭೇಟಿ ನೀಡಿರುವ ಡಾ. ಸರೋಜನಿ ಮಹಿಷಿ ಅವರು ವಿದೇಶಗಳಲ್ಲಿ ಭಾರತದ ಕೀರ್ತಿ ಪತಾಕೆ ಎತ್ತಿ ಹಿಡಿಯುವ ಕಾರ್ಯ ಮಾಡಿದ್ದಾರೆ

ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಬರುವ ಕಪಾರ್ಟ್‌ನ ಉಪಾಧ್ಯಕ್ಷರಾಗಿ, ರಾಷ್ಟ್ರೀಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಆಯೋಗದ ಸದಸ್ಯರಾಗಿ, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಉಪಾಧ್ಯಕ್ಷರಾಗಿ, ಜಲಸಂಪನ್ಮೂಲ ಸಚಿವಾಲಯದ ಸಲಹಾ ಮಂಡಳಿ ಸದಸ್ಯರಾಗಿ, ಅಖಿಲ ಭಾರತೀಯ ಹಿಂದಿ ಸಂಸ್ಥಾನ ಸಂಘದ ಉಪಾಧ್ಯಕ್ಷರಾಗಿಯೂ ಡಾ. ಸರೋಜನಿ ಮಹಿಷಿ ಅವರು ಬಹುಮುಖ ಸೇವೆ ಸಲ್ಲಿಸಿದ್ದಾರೆ.

***









ಒಂದನೆಯ ಘಟಿಕೋತ್ಸವದ ವಿಹಂಗಮ ನೋಟ






ಒಂದನೆಯ ಘಟಿಕೋತ್ಸವದಲ್ಲಿ ಶ್ರೀಮತಿ ಸರೋಜಿನಿ ಮಹಿಷಿ ಅವರ ಘಟಿಕೋತ್ಸವ ಭಾಷಣ





ಒಂದನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಗೀತಾ ಬಾಲಿಯವರ ಸ್ವಾಗತ ಭಾಷಣ






ಎರಡನೆಯ ಘಟಿಕೋತ್ಸವದ ಮುಖ್ಯ ವೇದಿಕೆ



ಎರಡನೆಯ ಘಟಿಕೋತ್ಸವದಲ್ಲಿ ಡಾ. ಡಿ. ಪುರಂದೇಶ್ವರಿ ಅವರ ಘಟಿಕೋತ್ಸವ ಭಾಷಣ






ಎರಡನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಗೀತಾ ಬಾಲಿಯವರ ಸ್ವಾಗತ ಭಾಷಣ




ಮೂರನೆಯ ಘಟಿಕೋತ್ಸವದ ಮುಖ್ಯ ವೇದಿಕೆಯ ಭವ್ಯ ನೋಟ




ಮೂರನೆಯ ಘಟಿಕೋತ್ಸವದ ಮುಖ್ಯ ಅತಿಥಿಗಳಾದ ಶ್ರೀಮತಿ ವಿ.ಎಸ್ ರಮಾದೇವಿ ಅವರ ಘಟಿಕೋತ್ಸವ ಭಾಷಣ




ನಾಲ್ಕನೆಯ ಘಟಿಕೋತ್ಸವದಲ್ಲಿ ಶ್ರೀಮತಿ ಮಂಜುಳಾ ಚೆಲ್ಲೂರ ಅವರ ಘಟಿಕೋತ್ಸವ ಭಾಷಣ






ನಾಲ್ಕನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಮೀನಾ ಚಂದಾವರಕರ ಅವರ ಸ್ವಾಗತ ಭಾಷಣ




ಐದನೆಯ ಘಟಿಕೋತ್ಸವದ ಮುಖ್ಯ ವೇದಿಕೆಯಲ್ಲಿ ವಿವಿಧ ಗಣ್ಯರು





ಐದನೆಯ ಘಟಿಕೋತ್ಸವದಲ್ಲಿ ಡಾ. ವಿಲ್ಲೂ ಮೋರಾವಾಲಾ ಪಟೇಲ್ ಅವರ ಘಟಿಕೋತ್ಸವ ಭಾಷಣ




ಆರನೆಯ ಘಟಿಕೋತ್ಸವದಲ್ಲಿ ಡಾ. ಮಂಜು ಶರ್ಮಾ ಅವರ ಘಟಿಕೋತ್ಸವ ಭಾಷಣ





ಆರನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಮೀನಾ ಚಂದಾವರಕರ ಅವರ ಸ್ವಾಗತ ಭಾಷಣ




ಏಳನೆಯ ಘಟಿಕೋತ್ಸವದ ವೇದಿಕೆಯ ವಿಹಂಗಮ ನೋಟ





ಏಳನೆಯ ಘಟಿಕೋತ್ಸವದ ಮುಖ್ಯ ಅತಿಥಿಗಳಾದ ಡಾ. ನಂದಿತಾ ಕೃಷ್ಣ ಅವರ ಘಟಿಕೋತ್ಸವ ಭಾಷಣ




ಏಳನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಮೀನಾ ಚಂದಾವರಕರ ಅವರ ಸ್ವಾಗತ ಭಾಷಣ






ಎಂಟನೆಯ ಘಟಿಕೋತ್ಸವದ ಭವ್ಯವಾದ ವೇದಿಕೆ




ಎಂಟನೆಯ ಘಟಿಕೋತ್ಸವದ ಮುಖ್ಯ ಅತಿಥಿಗಳಾದ ಪ್ರೊ. ಇಂದಿರಾ ಕರುಣಾಸಾಗರ ಅವರ ಘಟಿಕೋತ್ಸವ ಭಾಷಣ





ಎಂಟನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಸಬಿಹಾ ಭೂಮಿಗೌಡ ಅವರ ಸ್ವಾಗತ ಭಾಷಣ




ಒಂಬತ್ತನೆಯ ಘಟಿಕೋತ್ಸವದ ಮುಖ್ಯ ವೇದಿಕೆಯಲ್ಲಿ ಅತಿಥಿ ಗಣ್ಯರು





ಒಂಬತ್ತನೆಯ ಘಟಿಕೋತ್ಸವದ ಮುಖ್ಯ ಅತಿಥಿಗಳಾದ ಡಾ. ಶಶಿಕಲಾ ಗುರುಪುರ ಅವರ ಘಟಿಕೋತ್ಸವ ಭಾಷಣ



ಒಂಬತ್ತನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಸಬಿಹಾ ಭೂಮಿಗೌಡ ಅವರ ಸ್ವಾಗತ ಭಾಷಣ





ಹತ್ತನೆಯ ಘಟಿಕೊತ್ಸವ ಸಂಭ್ರಮದ ಮುಖ್ಯ ವೇದಿಕೆ



ಹತ್ತನೆಯ ಘಟಿಕೋತ್ಸವದ ಮುಖ್ಯ ಅತಿಥಿಗಳಾದ ಶ್ರೀಮತಿ ನೇಮಿಚಂದ್ರ ಅವರ ಘಟಿಕೋತ್ಸವ ಭಾಷಣ





ಹತ್ತನೆಯ ಘಟಿಕೋತ್ಸವದಲ್ಲಿ ಕುಲಪತಿಯವರಾದ ಪ್ರೊ. ಸಬಿಹಾ ಭೂಮಿಗೌಡ ಅವರ ಸ್ವಾಗತ ಭಾಷಣ



ಹತ್ತನೆಯ ಘಟಿಕೋತ್ಸವದ ಪಿಹೆಚ್.ಡಿ ಪದವಿ ಪುರಸ್ಕೃತರ ಸಂಭ್ರಮ

ISBN 938309066-9

9789383090662

ಪ್ರಸಾರಾಂಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ - ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಜ್ಞಾನಶಕ್ತಿ ಆವರಣ, ತೊರವಿ, ವಿಜಯಪುರ - 586108

ದೂರವಾಣಿ : 08352 - 229080